


ಡಾ. ಪಿ.ಕೆ. ರಾಜಶೇಖರ

ಸಂಗಮೇಶ ಎಸ್. ಗಣಿ



ಡಾ. ಪಿ.ಕೆ. ರಾಜಶೇಖರ

ಸಂಗಮೇಶ ಎಸ್. ಗಣಿ

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ – ೫೮೧ ೧೯೭

DR. P.K. RAJASHEKHARA

(BIOGRAPHY OF DR. P.K. RAJASEKHARA)

By
Sangamesh S. Gani
Project Assistant
Karnataka Janapada Univerisity, Gotagodi
Mob : 97431 71324

Published by
Prof. S.C. Ramesh
Director
Centre for Extension and Consultancy
Karantaka Janapada University
Gotagodi - 581 197
Shiggavi Taluk, Haveri Dist, Karnataka
Phone: 0836 - 2255180
Pages: xii + 136   Price: 120/-

www.janapadauni.in
First Impression : 2014
ISBN : 978-93-83149-16-2

© ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಬೆಲೆ : ೧೨೦/-
ಮುಖಪುಟ: ಕೆ.ಕೆ. ಮಕಾಳಿ
ಪುಟ ವಿನ್ಯಾಸ: ವಿಶ್ವ ಗುಜ್ಜರ್

ಪುಸ್ತಕ ದೊರೆಯುವ ಸ್ಥಳ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭,
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಕಟ್ಟಡ
ನಂ. ೨/೧೦೬, ೩ನೇ ಮಹಡಿ, ೧೭ನೇ ಅಡ್ಡರಸ್ತೆ,
ಮಾಗಡಿ ಕಾರ್ಡ್‌ರಸ್ತೆ, ವಿಜಯನಗರ, ಬೆಂಗಳೂರು – ೫೬೦ ೦೪೦

ಮುದ್ರಣ :
ರಾಜಾ ಪ್ರಿಂಟರ್ಸ್, ಬೆಂಗಳೂರು
ದೂರವಾಣಿ : 22234066

ದೇಶ ಸುತ್ತು ಕೋಶ ಓದು

ಕನ್ನಡನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದ ಮಟ್ಟಿಗೆ ಅಷ್ಟೇ ಅಲ್ಲ ದೇಶೀ ಸಂಸ್ಕೃತಿಯ ಮೂಲವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನ ಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ–ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿ ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ ಹಳೆಯದನ್ನು ಸಂಗ್ರಹಿಸುವುದು, ಮುಂದಿನ ವರ್ಗಕ್ಕೆ ಕೂಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ ಚೌಕಟ್ಟಿನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ ಅರ್ಥೈಸಿಕೊಳ್ಳಬೇಕಾದುದು ಇಂದಿನ ಅಗತ್ಯ ವಾಗಿದೆ. ಜಾನಪದವು ಭೂಮಿತೂಕದ್ದು, ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯ ವಾಕ್ಯವನ್ನು ತನ್ನ ಮೂಲಮಂತ್ರವಾಗಿಸಿಕೊಂಡು ವಿಶ್ವವಿದ್ಯಾಲಯು ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು–ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕವಾಗಿಯೂ, ಪ್ರಾಯೋಜಕವಾಗಿಯೂ, ದೃಢವಾಗಿಯೂ ರೂಢಿಸಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ –ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವುದು ಆವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ

ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾಯವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ ಸಂಪಾದನೆಗೆ ಅವೆರೆಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ ಅಧ್ಯಯನ, ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನ ಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾ ಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ಜಾಗತೀಕರಣ, ಆಧುನೀಕರಣಗಳ ಪ್ರಕ್ರಿಯೆ ಜಾನಪದಕ್ಕೆ ಅನೇಕ ರೀತಿಯ ಸವಾಲುಗಳನ್ನು ತಂದೊಡ್ಡಿದೆ. ಜೊತೆಗೆ ಅಪಾಯವನ್ನೂ ಉಂಟುಮಾಡಿದೆ. ಪಶ್ಚಿಮದ ಪ್ರಭಾವ ಎಲ್ಲವನ್ನೂ ತನ್ನ ತೆಕ್ಕೆಗೆ ಒಳಗು ಮಾಡಿಕೊಳ್ಳುತ್ತಿರುವ ಸಂದಿಗ್ಧತೆಯಲ್ಲಿ ನಮ್ಮತನದ ಅಸ್ಮಿತೆಯ ಕುರುಹುಗಳು ಕಣ್ಮರೆಯಾಗುತ್ತಿವೆ. ಅನ್ಯ ಸಂಸ್ಕೃತಿಗಳ ಧಾಳಿಯಿಂದ ತಪ್ಪಿಸಿಕೊಳ್ಳುವ ಉಪಾಯವಾಗಿಯೂ ದೇಸೀ ಇಲ್ಲವೆ ಜಾನಪದವೇ ನಮ್ಮ ಮುಂದಿರುವ ಬಹುದೊಡ್ಡ ಉಪಾಯ. ನಿರಕ್ಷರಿಗಳಿಂದ ಹುಟ್ಟು ಪಡೆದುಕೊಂಡು ವಾಕ್ಪರಂಪರೆಯಲ್ಲಿ ಸಾಗಿಬಂದಿರುವ ಸಾಹಿತ್ಯವನ್ನು

'ಜನಪದ ಸಾಹಿತ್ಯ' ಎಂದು ಪರಿಗಣಿಸಲಾಗಿದೆ. ಅದನ್ನು ಪಾರಂಪರಿಕವಾಗಿ ಉಳಿಸಿ–ಬೆಳೆಸಿಕೊಂಡು ಬರುತ್ತಿರುವವರಲ್ಲಿ ನಿರಕ್ಷರಿಗಳ ಪ್ರಮಾಣ ದೊಡ್ಡದಾಗಿದೆಯಾದರೂ, ಅಕ್ಷರಸ್ಥರದ್ದೂ ಪ್ರಮುಖ ಪಾತ್ರವಿದೆ ಎಂಬುದು ಗಮನಾರ್ಹ ಸಂಗತಿ. ಯಾವ ಪ್ರಭಾವ–ಪ್ರೇರಣೆಗಳಿಗೂ ಪಕ್ಕಾಗದೆ ಮೂಲ ಜನಪದ ಸಂಸ್ಕೃತಿಯನ್ನು ಯಥಾವತ್ತಾಗಿ ಉಳಿಸಿಕೊಳ್ಳುವ ಹಂಬಲದ ವಿರಳ ವ್ಯಕ್ತಿತ್ವಗಳಲ್ಲಿ ಡಾ. ಪಿ.ಕೆ. ರಾಜಶೇಖರ ಅವರದು ಪ್ರಮುಖವಾಗಿ ಕೇಳಿಬರುವ ಹೆಸರು. ವಿದ್ವತ್ತು ಮತ್ತು ವಿನಯಗಳ ಸಾಕಾರಮೂರ್ತಿಯಂತಿರುವ ರಾಜಶೇಖರರು ಜನಪದ ಸಾಹಿತ್ಯ ಸಂಗ್ರಹಕಾರರಾಗಿ, ಜಾನಪದ ವಿದ್ವಾಂಸರಾಗಿ, ನೆಲಮೂಲ ಸಂಸ್ಕೃತಿಯ ಪರಿಚಾರಕರಾಗಿ ಮಾಡಿರುವ ಸಾಧನೆ ಅದ್ವಿತೀಯವಾದುದು. ಅನನ್ಯವೂ ಅಪರೂಪವೂ ಆದ ಜನಪದ ಮಹಾಕಾವ್ಯಗಳನ್ನು ಸಂಗ್ರಹಿಸಿರುವುದಲ್ಲದೆ, ಜನಪದ ಹಾಡುಗಳನ್ನು ಮೂಲಮಟ್ಟುಗಳಲ್ಲಿಯೇ ಹಾಡುವ ಮೂಲಕ ಇಂದಿನ ಪೀಳಿಗೆಯವರಿಗೆ ಮೂಲಮಟ್ಟಿನಲ್ಲಿ ಹಾಡಲು ಪ್ರೇರಣೆ ಒದಗಿಸುತ್ತಿದ್ದಾರೆ. ಜಾನಪದಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿರಿಸಿಕೊಂಡಿರುವ ಪಿಕೆಆರ್ ಅವರ ಕಲಾ ಬದುಕಿನ ಯಶೋಗಾಥೆಯನ್ನು ಸಂಗಮೇಶ ಎಸ್. ಗಣಿ ಅವರು 'ಡಾ. ಪಿ.ಕೆ. ರಾಜಶೇಖರ' ಕೃತಿಯಲ್ಲಿ ಅತ್ಯಂತ ಸಮರ್ಥವಾಗಿ ಮತ್ತು ಸಾರ್ಥಕವಾಗಿ ಕಟ್ಟಿಕೊಟ್ಟಿದ್ದಾರೆ. ಜಾನಪದ ಕ್ಷೇತ್ರದ ಒಂದು ಕಾಲಘಟ್ಟದ ಅಧ್ಯಯನದ ಆಕರವಾಗಿಯೂ ಮತ್ತು ಪಿಕೆಆರ್ ಅವರ ಬದುಕಿನ ಬಹುಆಯಾಮಗಳನ್ನು ಅರಿಯುವಲ್ಲಿ ಈ ಕೃತಿ ಮುಖ್ಯ ಆಕರವಾಗಬಲ್ಲದು. ಇಂತಹ ಅಮೂಲ್ಯವಾದ ಕೃತಿಯನ್ನು ರಚಿಸಿಕೊಟ್ಟ ಶ್ರೀ ಸಂಗಮೇಶ ಎಸ್. ಗಣಿ ಅವರಿಗೆ ವಿಶ್ವವಿದ್ಯಾಲಯದ ಅಭಿನಂದನೆಗಳು ಸಲ್ಲುತ್ತವೆ.

ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತುವಲ್ಲಿ ತುಂಬ ಮುತುವರ್ಜಿ ವಹಿಸಿದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ, ಮೌಲ್ಯಮಾಪನ ಕುಲಸಚಿವರೂ ಆದ ಪ್ರೊ. ಸ.ಚಿ. ರಮೇಶ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂತ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯ ಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ' ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯನೂತನವಾದ ಜನಪದ ಸಂಸ್ಕೃತಿಯನ್ನು ಪುನರ್‌ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆದ ಇವೊತ್ತಿನ ಸಂದಿಗ್ಧತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನ ಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ-ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ

ಪ್ರಕಟಣೆಗೆ ಮುಂದಾಗಿದೆ. ನಾವು ಪ್ರಕಟಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ ಓದುಗರಿಗೆ ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ನಾಡಿನ ಜಾನಪದ ಕ್ಷೇತ್ರಕ್ಕೆ ಅತ್ಯಮೂಲ್ಯ ಕೊಡುಗೆ ನೀಡಿದ ವಿರಳ ವಿದ್ವಾಂಸರಲ್ಲಿ ಡಾ. ಪಿ.ಕೆ. ರಾಜಶೇಖರ ಅವರು ಅಗ್ರಗಣ್ಯರು. ವ್ಯಕ್ತಿಯೊಬ್ಬನಲ್ಲಿ ವಿದ್ವತ್ತಿನ ಜೊತೆಗೆ ಹಾಡುಗಾರಿಕೆಯ ಕಲೆ ಬೆರೆತಿರುವುದು ಅಪರೂಪ. ವಿದ್ವತ್ತು ಮತ್ತು ವಿನಯಗಳ ಸಾತ್ವಿಕ ವ್ಯಕ್ತಿತ್ವದ ರಾಜಶೇಖರ ಅವರಲ್ಲಿ ಎರಡೂ ಸಂಗತಿಗಳು ಮೇಳವಿಸಿರುವುದು ಅತ್ಯಂತ ವಿಶೇಷವಾದ ಸಂಗತಿಯಾಗಿದೆ. 'ಜಾನಪದ ಜೋಗಿ' ಎಂದೇ ನಾಡಿನ ವಿದ್ವತ್‌ವಲಯದಲ್ಲಿ ಗುರುತಿಸಲ್ಪಡುವ ರಾಜಶೇಖರರು ಕಾವ್ಯ, ಅನುವಾದ, ಸಂಗ್ರಹ, ಸಂಶೋಧನೆ, ಸಂಪಾದನೆ ಅದರಲ್ಲೂ ಮುಖ್ಯವಾಗಿ ಜಾನಪದ ಕ್ಷೇತ್ರಕಾರ್ಯದಲ್ಲಿ ಅನನ್ಯವಾದ ಸಾಧನೆ ಗೈದಿದ್ದಾರೆ. ಜನಪದ ಹಾಡುಗಳನ್ನು ಮೂಲ ಮಟ್ಟುಗಳಲ್ಲಿಯೇ ಹಾಡುವ ಮೂಲಕ ಶ್ರೋತೃಗಳ ಮನೋಮಂದಿರದಲ್ಲಿ ನೆಲೆನಿಂತು, ಪಾರಂಪರಿಕ ಕಲೆಯ ಪ್ರತಿನಿಧಿಯಾಗಿ ವರ್ತಮಾನಕ್ಕೂ ಸಲ್ಲುವವರಾಗಿದ್ದಾರೆ. ಈ ಮೂಲಕ ನೆಲಮೂಲ ಸಂಸ್ಕೃತಿಯ ಭಾಗವಾಗಿರುವ ಕಲೆಗಳನ್ನು ಸಮಕಾಲೀನಗೊಳಿಸುವ ಕಾರ್ಯದಲ್ಲಿ ಪ್ರಜ್ಞಾಪೂರ್ವಕವಾಗಿ ತೊಡಗಿಸಿಕೊಂಡಿದ್ದಾರೆ. ದೇಸೀ ಕಲಾಪರಂಪರೆಯು ಅವನತಿಯ ಹಾದಿ ಹಿಡಿಯುತ್ತಿದೆ ಎಂಬ ಹಳಹಳಿಕೆಯ ನಡುವೆಯೇ ರಾಜಶೇಖರ ಅವರು ಭರವಸೆಯ ಆಶಾಕಿರಣವಾಗಿ ತೋರುತ್ತಾರೆ. ಶ್ರೀಯುತರು ಜಾನಪದ ಕ್ಷೇತ್ರದಲ್ಲಿ ಮಾಡಿದ ಕೆಲಸ-ಕಾರ್ಯಗಳು ಮಾದರಿಯಾಗಿವೆ. ಅಷ್ಟೇ ಅಲ್ಲ; ಅನುಕರಣೀಯೂ ಆಗಿವೆ. ಜಾನಪದಕ್ಕಾಗಿಯೇ ತಮ್ಮ ಇಡೀ ಜೀವನವನ್ನು ಸಮರ್ಪಿಸಿಕೊಂಡಿರುವ ಅವರು, ಮೂಲ ಜನಪದ ಹಾಡುಗಳನ್ನು ಜನಮನಕ್ಕೆ ತಲುಪಿಸುವ ಮಹತ್ವಪೂರ್ಣ ಕಾರ್ಯದಲ್ಲಿ ನಿರತರಾಗಿದ್ದಾರೆ. ಇಂತಹ ಬಹುಮುಖೀ ವ್ಯಕ್ತಿತ್ವದ ಡಾ. ಪಿ.ಕೆ. ರಾಜಶೇಖರ ಅವರ ಕಲಾಬದುಕಿನ ಚಿತ್ರಣವನ್ನು ಅತ್ಯಂತ ಸಮರ್ಥವಾಗಿ ಮತ್ತು ಮನೋಜ್ಞವಾಗಿ ಕಟ್ಟಿಕೊಡುವಲ್ಲಿ ಸಂಗಮೇಶ ಎಸ್. ಗಣಿ ಅವರು ಯಶಸ್ವಿಯಾಗಿದ್ದಾರೆ. ಪಿಕೆಆರ್ ಅವರ ಯಶೋಗಾಥೆಯ ಜೊತೆಗೆ ನಾಡಿನ ಜಾನಪದ ಕ್ಷೇತ್ರದಲ್ಲಾದ ಬೆಳವಣಿಗೆಯ ಚಾರಿತ್ರಿಕ ಘಟನೆಗಳನ್ನು ಅನುಸಂಧಾನಗೊಳಿಸುವಲ್ಲೂ ಈ ಕೃತಿ ಮುಖ್ಯವೆನಿಸುತ್ತದೆ. ಇಂತಹ ಅಮೂಲ್ಯವಾದ ಕೃತಿಯನ್ನು ರಚಿಸಿಕೊಟ್ಟಿರುವ ಶ್ರೀ ಸಂಗಮೇಶ ಎಸ್. ಗಣಿ ಅವರು ವಿಶೇಷವಾಗಿ ಅಭಿನಂದನಾರ್ಹರು.

ಈ ಕೃತಿಯು ಅಚ್ಚುಕಟ್ಟಾಗಿ ಪ್ರಕಟಗೊಳ್ಳಲು ಸರ್ವ ರೀತಿಯಲ್ಲೂ ಸಹಕಾರ ನೀಡಿದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಯವರಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ, ಆಡಳಿತಾತ್ಮಕ ಬೆಂಬಲ ನೀಡಿದ ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ, ವಿಸ್ತರಣೆ ಕೇಂದ್ರದ ಎಲ್ಲ ಕೆಲಸಗಳಿಗೆ ಬೆಂಬಲವಾಗಿ ನಿಂತಿರುವ ಹಿರಿಯ ಸಂಶೋಧನಾ ಅಧಿಕಾರಿ ಡಾ. ಕೆ. ಪ್ರೇಮಕುಮಾರ, ವಿಶ್ವವಿದ್ಯಾಲಯದ ಡೀನ್‌ರಾದ ಪ್ರೊ. ಎಂ. ಚಂದ್ರ ಪೂಜಾರಿ, ಕರಡು ತಿದ್ದಲು ನೆರವಾದ ಶ್ರೀ ಸಂಗಮೇಶ ಎಸ್. ಗಣಿ, ಅಂದವಾದ ಮುಖಪುಟ ವಿನ್ಯಾಸ ಮಾಡಿಕೊಟ್ಟ ಶ್ರೀ ಕೆ.ಕೆ. ಮಕಾಳಿ, ಅಕ್ಷರ ಸಂಯೋಜನೆ ಮತ್ತು ಒಳಪುಟ ವಿನ್ಯಾಸ ಮಾಡಿಕೊಟ್ಟ ಶ್ರೀ ವಿಶ್ವ ಗುಜ್ಜರ್, ಕಚೇರಿ ಸಹಾಯಕ ಶ್ರೀ ಕೆ.ಎಲ್. ಲಕ್ಷ್ಮಣ ಅವರಿಗೆ ಹಾಗೂ ಪುಸ್ತಕ ಪ್ರಕಟಗೊಳ್ಳುವಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳು.

ಪ್ರೊ. ಸ.ಚಿ. ರಮೇಶ
ನಿರ್ದೇಶಕ

ಮನದ ಮಾತು

ಬರೆಹ ರೂಪುತಾಳುವ ಸ್ವರೂಪ ಹೀಗೇ ಎಂದು ಖಚಿತವಾಗಿ ಹೇಳಬರುವುದಿಲ್ಲ. ಅದಕ್ಕೆ ಒದಗುವ ಪ್ರೇರಣೆಗಳೇ ಅದನ್ನು ನಿರ್ಧರಿಸುವ ಮುಖ್ಯ ಮಾನದಂಡಗಳಾಗಿರುತ್ತವೆ. ಪ್ರಸ್ತುತ 'ಡಾ. ಪಿ.ಕೆ. ರಾಜಶೇಖರ' ಕೃತಿಯು ಬಾಹ್ಯಪ್ರೇರಣೆಯ ಪರಿಣಾಮದಿಂದಲೇ ಒಡಮೂಡಿದೆ. ಅಂತಹದ್ದೊಂದು ವಿಶ್ವಾಸಪೂರ್ವಕ ಒತ್ತಾಯ ಇಲ್ಲದಿದ್ದರೆ ಈ ಕೃತಿ ಪ್ರಕಟವಾಗುತ್ತಿದ್ದಿಲ್ಲ. ನನ್ನ ಮೇಲೆ ಈ ಬಗೆಯ ಒತ್ತಾಯ ಹಾಗೂ ವಿಶ್ವಾಸವನ್ನಿಟ್ಟು ಬರೆಹಕ್ಕೆ ಅಣಿಮಾಡಿದ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಸಚಿವರು(ಮೌಲ್ಯಮಾಪನ) ಮತ್ತು ವಿಸ್ತರಣೆ ಹಾಗೂ ಸಲಹಾ ಕೇಂದ್ರ ನಿರ್ದೇಶಕರೂ ಆದ ಪ್ರೊ. ಸ.ಚಿ. ರಮೇಶ ಅವರಿಗೆ ಗೌರವಪೂರ್ವಕ ಕೃತಜ್ಞತೆಗಳು. ನನ್ನ ವಿದ್ಯಾಗುರುಗಳೂ ಆಗಿರುವ ಅವರ ಅಂತಃಕರಣದ ಪ್ರೀತಿಗೆ ನಾನು ಎಂದಿಗೂ ಋಣಿ. ಓದು-ಬರೆಹ, ಸಂಶೋಧನೆ, ಅಧ್ಯಯನಗಳಲ್ಲಿ ತೊಡಗಿಕೊಳ್ಳುವ ಯುವಮನಸ್ಸುಗಳನ್ನು ಉತ್ತೇಜಿಸುವ ಪ್ರಾಂಜಲ ಮನಸ್ಸಿನ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಯವರಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ ಗೌರವಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ. ಜೊತೆಗೆ ಮಾನ್ಯ ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ ಅವರಿಗೆ ಗೌರವದ ನಮನಗಳು, 'ರಾಜಶೇಖರ ಪುಸ್ತಕದ ಕೆಲಸ ಎಲ್ಲಿಗೆ ಬಂತು' ಎಂದು ಮೇಲಿಂದ ಮೇಲೆ ಕೇಳುತ್ತಲೇ ಕೃತಿರಚನೆಗೆ ಪ್ರೋತ್ಸಾಹ ನೀಡಿದ ಹಿರಿಯ ಸಂಶೋಧನಾಧಿಕಾರಿಗಳಾದ ಡಾ. ಕೆ. ಪ್ರೇಮಕುಮಾರ ಅವರಿಗೆ, ವಿಶ್ವವಿದ್ಯಾಲಯದ ಡೀನ್‌ರಾದ ಪ್ರೊ. ಎಂ. ಚಂದ್ರ ಪೂಜಾರಿ ಅವರಿಗೆ ನನ್ನ ನೆನಕೆಗಳು. ಮುಖ್ಯವಾಗಿ ನಾನು ದೂರವಾಣಿಯಲ್ಲಿ ಮಾಹಿತಿಗಾಗಿ ಸಂಪರ್ಕಿಸಿದಾಗ ಅತ್ಯಂತ ಪ್ರೀತಿಯಿಂದ, ವಿಶ್ವಾಸದಿಂದ ಮಾಹಿತಿಗಳನ್ನು ನೀಡಿದ್ದಲ್ಲದೆ, ಅಗತ್ಯ ಸಹಕಾರವನ್ನು ಮತ್ತು ಮಾರ್ಗದರ್ಶನವನ್ನು ಮಾಡಿರುವ ಈ ಕೃತಿಯ ಕೇಂದ್ರಬಿಂದು ಡಾ. ಪಿ.ಕೆ. ರಾಜಶೇಖರ ಅವರಿಗೆ ಎಷ್ಟು ಕೃತಜ್ಞತೆಗಳನ್ನು ಸಲ್ಲಿಸಿದರೂ ಕಡಿಮೆಯೇ. ಅವರಿಗೆ ನಾನು ಯಾವತ್ತೂ ಚಿರಋಣಿ. ಹಸ್ತಪ್ರತಿಯನ್ನು ಪರಿಶೀಲಿಸಿ ಪ್ರೋತ್ಸಾಹಕ ಮಾತುಗಳನ್ನಾಡಿ, ವರದಿ ನೀಡಿರುವ ವಿದ್ವಾಂಸರಾದ ಡಾ. ಸುಬ್ಬಣ್ಣ ರೈ ಅವರಿಗೆ ವಿಶೇಷ ನಮಸ್ಕಾರಗಳು. ಪ್ರೀತಿಯಿಂದ ಮುಖಪುಟ ವಿನ್ಯಾಸ ಮಾಡಿಕೊಟ್ಟ

ಶ್ರೀ ಕೆ.ಕೆ. ಮಕಾಳಿ ಅವರಿಗೆ, ಪುಟವಿನ್ಯಾಸ ಮಾಡಿಕೊಟ್ಟ ಸಹೋದ್ಯೋಗಿ ಮಿತ್ರ ವಿಶ್ವ ಗುಜ್ಜರ್‌ನ ಸಹಕಾರಕ್ಕೆ ಹಾಗೂ ಕೃತಿರಚನೆಯಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಾಯ–ಸಹಕಾರ ನೀಡಿದ ವಿಶ್ವವಿದ್ಯಾಲಯದ ಎಲ್ಲ ಸ್ನೇಹಿತರಿಗೆ ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ವಿಶೇಷ ನಮನಗಳು.

ಸಂಗಮೇಶ ಎಸ್. ಗಣಿ

ಪರಿವಿಡಿ

ದೇಶ ಸುತ್ತು ಕೋಶ ಓದು iii

ನಿರ್ದೇಶಕರ ಮಾತು vii

ಮನದ ಮಾತು x

೧. ಪ್ರಸ್ತಾವನೆ ೧

೨. ಭೌತಿಕ ಭಿತ್ತಿ ೪

೩. ಹಾಡುಹಕ್ಕಿಯ ಜಾಡ ಹಿಡಿದು ೭

೪. ಕಾಯಕದ ಕಾರಣಿಕ ೧೯

೫. 'ಪಟ್ಬಾಂಗ'ದಲ್ಲಿ ಅನಾವರಣಗೊಂಡ ಪಿಕೆಆರ್ ೨೧

೬ ಹೊನ್ನಾರು ಹೊಂಬೆಳಕು ೫೪

೭ ಹೊನ್ನ ಹೊತ್ತಗೆಯ ಮೇಲೊಂದು ನೋಟ ೫೯

೮. ಸಾಧಕರ ಕಣ್ಣಲ್ಲಿ 'ಜಾನಪದ ಜೋಗಿ' ೭೫

೯. ಸಮಾರೋಪ ೮೦

ಅನುಬಂಧಗಳು

ಹಾಡು ಹಕ್ಕಿಯೊಂದಿಗೆ ದನಿಗೂಡಿ (ಸಂದರ್ಶನ) ೮೨

ಪ್ರಕಟಿತ ಲೇಖನಗಳು/ಪತ್ರಿಕಾ ವರದಿ ೯೪

ಪ್ರಕಟಿತ ಕೃತಿರಾಶಿ ೧೧೫

ದನಿಮಾಡಿದ ಧ್ವನಿಸುರಳಿಗಳು ೧೧೮

ಗಾಯಕನಿಗೊಲಿದ ಗೌರವ-ಪುರಸ್ಕಾರಗಳು ೧೧೯

ಜೀವನದ ಪ್ರಮುಖ ವಿವರ ೧೨೦

ಪರಾಮರ್ಶನ ಗ್ರಂಥಗಳು ೧೨೨

ಜೀವನ ಸಾಧನೆಗೆ ಸುವರ್ಣ ಚೌಕಟ್ಟು ೧೨೩

ಪ್ರಶಸ್ತಿ ಪತ್ರಗಳು ೧೩೧

ನಮ್ಮ ಪ್ರಕಟಣೆಗಳು ೧೩೬

ಪ್ರಸ್ತಾವನೆ

ನಮ್ಮ ಅಸ್ಮಿತೆಯ ಕುರುಹುಗಳು ನಮಗೆ ಗೋಚರಿಸದ ಹಾಗೆ, ನಮ್ಮತನವನ್ನು ನಾವು ಕಳೆದುಕೊಳ್ಳುವ ಭೀತಿಯನ್ನು ಎದುರಿಸುತ್ತಿದ್ದೇವೆ. ಇದಕ್ಕೆ ಬಾಹ್ಯಕಾರಣಗಳು ಒಂದೆಡೆಯಾದರೆ, ಆಂತರಿಕ ಕಾರಣಗಳು ಮತ್ತೊಂದೆಡೆ; ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಇತ್ಯಾದಿ 'ಕರಣ'ಗಳು ನಮ್ಮ ನೆಲಮೂಲ ಸಂಸ್ಕೃತಿ, ಕಲೆ, ಸಾಹಿತ್ಯ ಪರಂಪರೆಯ ಮೇಲೆ ಧಾಳಿ ಮಾಡುವ ಭೌತಿಕ ಸಂಗತಿಗಳು. ನಮ್ಮ ಹಿರಿಯ ತಲೆಮಾರನ್ನು ನೆನೆಯುವ, ಆದರಿಸುವ, ಅಭಿಮಾನಿಸುವ, ಗೌರವಪಡುವ, ಪ್ರೀತಿ ಬೆಳೆಸಿಕೊಳ್ಳುವ ಗುಣಗಳು ನಮ್ಮಲ್ಲಿ ಕಡಿಮೆಯಾಗುತ್ತಿರುವುದು ತೀವ್ರ ಕಳವಳಕ್ಕೆ ಈಡು ಮಾಡಿದ ಆಂತರಿಕ ಕಾರಣಗಳು.

ಕಾಲದ ಗತಿಗೆ ಹೊಂದಿಕೊಳ್ಳತ್ತ ಸಾಗುವುದು ಮನುಷ್ಯನ ಪ್ರಕೃತಿಸಹಜ ಗುಣ. ಈ ಹೊಂದಾಣಿಕೆ ನಮ್ಮಲ್ಲೊಂದು ಬಗೆಯ ಹೊಣೆಗಾರಿಕೆಯನ್ನು ಹೆಚ್ಚಿಸಬೇಕೆ ಹೊರತು, ಹೊಣೆಗೇಡಿಯನ್ನಾಗಿ ಮಾಡಬಾರದು. ಬದುಕಿನಲ್ಲಿ ಭೂತಕಾಲದ ಭಿತ್ತಿಯಿಲ್ಲದೇ ಭವಿಷ್ಯದ ಚಿತ್ರವನ್ನು ಬಿಡಿಸಲು ಸಾಧ್ಯವಿದೆಯಾದರೂ ಚಿತ್ರ ಮನಮೋಹಕವಾಗಿ ಮತ್ತು ಪರಿಣಾಮಕಾರಿಯಾಗಿ ರೂಪುಗೊಂಡು, ಕಾಲದ ಸೆಳೆತಕ್ಕೆ ಸಿಗದೇ ಶಾಶ್ವತವಾಗಿ ಉಳಿಯುವಂತೆ ಮಾಡಬೇಕಾದುದೂ ಅಗತ್ಯ.

ಜಾಗತೀಕರಣ ತಂದೊಡ್ಡಿದ ಯಾವೆಲ್ಲ ಬಗೆಯ ಗೊಂದಲಗಳಿಗೆ ದೇಸೀ ಇಲ್ಲವೆ ಜಾನಪದವೇ ನಮ್ಮ ಮುಂದಿರುವ ಬಹುದೊಡ್ಡ ಉಪಾಯ. ನಿರಕ್ಷರಿಗಳಿಂದ ಹುಟ್ಟುಪಡೆದುಕೊಂಡಿರುವ ಸಾಹಿತ್ಯವು 'ಜನಪದ ಸಾಹಿತ್ಯ" ಎಂದು ಕರೆಯಲ್ಪಡುತ್ತಿದೆ. ಅದನ್ನು ಪಾರಂಪರಿಕವಾಗಿ ಉಳಿಸಿಕೊಂಡು ಬರುತ್ತಿರುವವರಲ್ಲಿ ನಿರಕ್ಷರಿಗಳ ಪ್ರಮಾಣ ಹೆಚ್ಚಿದೆಯಾದರೂ, ಅಕ್ಷರಸ್ಥರದ್ದೂ ಪ್ರಮುಖ ಪಾತ್ರವಿದೆ ಎನ್ನುವುದನ್ನು ಅಲ್ಲಗಳೆಯಲಾಗದು. ಜನಪದ ಹಾಡು, ಕಲೆಗಳನ್ನು ಸಮಕಾಲೀನಗೊಳಿಸುವ ಪ್ರಜ್ಞೆ ನಿರಕ್ಷರಿಗಳಿಂದ ಸಾಧ್ಯವಿಲ್ಲ ಎಂಬುದು ಎಷ್ಟು ಸತ್ಯವೊ, ಅವರು ತಮ್ಮ ಕಲೆಯನ್ನು ವರ್ತಮಾನಕ್ಕೆ ತಕ್ಕಂತೆ ಹಾಡುಗಳ ಸಾಹಿತ್ಯ, ಪ್ರಸಂಗಗಳನ್ನು ಬದಲಿಸಿಕೊಳ್ಳುವ ಸೃಜನಶೀಲತೆ ಮತ್ತು ಕ್ರಿಯಾಶೀಲತೆಯನ್ನು ಹೊಂದಿರುತ್ತಾರೆ ಎಂಬುದು ಕೂಡ ಅಷ್ಟೇ ಗಮನಾರ್ಹ. ಆದರೆ ಸಂಗ್ರಹಿತ ಸಾಹಿತ್ಯವನ್ನು ವೈಜ್ಞಾನಿಕವಾಗಿ ವರ್ಗೀಕರಿಸಿ, ವಿಶ್ಲೇಷಿಸಿ ಅದರ ಬಹು ಆಯಾಮಗಳ ಕುರಿತು ಬೆಳಕು ಚೆಲ್ಲುವ ಕಾರ್ಯ ಮಾತ್ರ ಅಕ್ಷರಸ್ಥ ವಿದ್ವಾಂಸರಿಂದ ಮಾತ್ರ ನಡೆಯಬಲ್ಲದು ಎಂಬುದು ಇಲ್ಲಿ ಗಮನಿಸಬೇಕಾದ

ಸಂಗತಿ. ಈ ಹಿನ್ನೆಲೆಯಲ್ಲಿ ನೋಡಿದಾಗ ಮೂಲ ಮುಕ್ಕಾಗದಂತೆ ಪ್ರಜ್ಞಾಪೂರ್ವಕವಾಗಿ ಪಾರಂಪರಿಕ ಕಲೆಗಳನ್ನು ಉಳಿಸಿಕೊಳ್ಳುವ ಕಾರ್ಯ ವಿದ್ಯಾವಂತ ಮನಸ್ಸುಗಳಿಂದ ನಡೆಯುತ್ತಿರುವುದು ಅತ್ಯಂತ ಆಶಾದಾಯಕ ಬೆಳವಣಿಗೆ. ಇಲ್ಲಿಯೇ ಇನ್ನೊಂದು ಮುಖ್ಯವಾಗಿ ಗಮನಿಸಬೇಕಾದ ವಿಚಾರ ಎಂದರೆ, ಇದೇ ವಿದ್ಯಾವಂತರಿಂದ ನಕಲಿ ಜಾನಪದವು ಸೃಷ್ಟಿಯಾಗುತ್ತಿದೆ ಎಂಬುದು ಕೂಡ ತೀವ್ರ ಕಳವಳಕಾರಿಯಾದುದು. ಈ ನಡುವೆ ನೆಲಮೂಲಜ್ಞಾನ, ಕಲೆಗಳ ಅಸ್ತಿತ್ವಕ್ಕಾಗಿ ಶ್ರಮಿಸುತ್ತಿರುವ ಮೂಲಕಲಾವಿದರ ಕಲಾಸಂಪತ್ತನ್ನು ಯಥಾವತ್ತಾಗಿ ಮುಂದಿನ ಪೀಳಿಗೆಗೆ ದಾಟಿಸುವ ವಿದ್ಯಾಂವತರ ಮಹದುಪಕಾರ ಮಹತ್ವದ್ದೆನಿಸುತ್ತದೆ. ಜೊತೆಗೆ ಮೌಖಿಕ ಪರಂಪರೆಯ ವಾರಸುದಾರರಾಗಿ ಜಾನಪದವನ್ನು ಉಂಡುಟ್ಟು ಉಸಿರಾಡಿದ ನಾಡಿನ ಅನೇಕ ಜನ ವಿದ್ವಾಂಸರು, ಜನಪದ ಕಲಾವಿದರು, ಕಲಾರಾಧಕರು, ಕಲಾಪ್ರೇಮಿಗಳು ಅದನ್ನು ಉಳಿಸಿಕೊಳ್ಳುವ ಮಹತ್ವದ ಭಾಗವಾಗಿ ನಮಗೆ ತೋರುತ್ತಾರೆ. ಕಳೆದು ಹೋಗುತ್ತಿರುವ ನೆಲಮೂಲ ಸಂಸ್ಕೃತಿಯನ್ನು ಜತನದಿಂದ ಕಾಪಿಟ್ಟುಕೊಳ್ಳುವ, ಸಂರಕ್ಷಿಸುವ ಹಾಗೂ ಶ್ರೀಮಂತಗೊಳಿಸುವ ಕೈಂಕರ್ಯದಲ್ಲಿ ವಿರಳ ಕಲಾವಿದ್ವಾಂಸರು ತೊಡಗಿಕೊಂಡಿದ್ದಾರೆ. ಇವರೇ ನಮ್ಮ ಮುಂದಿರುವ ಆಶಾವಾದಿಗಳು; ಭವಿಷ್ಯಸೂಚಕ ಶಕ್ತಿಗಳು. ಅವರಲ್ಲಿ ಡಾ. ಪಿ.ಕೆ ರಾಜಶೇಖರ ಅವರದು ಅಗ್ರಗಣ್ಯ ಹೆಸರು. ಮೌಖಿಕ ಪರಂಪರೆಯ ವಕ್ತಾರರಾಗಿ, ವಿದ್ವಾಂಸರಾಗಿ ಹೆಸರು ಮಾಡಿರುವ ಪಿಕೆಆರ್ ಅವರ ವ್ಯಕ್ತಿತ್ವಕ್ಕೆ ಹಲವು ಆಯಾಮಗಳಿವೆ.

ಕರ್ನಾಟಕದಲ್ಲಿ ಜಾನಪದ ಒಂದು ವೈಜ್ಞಾನಿಕ ಶಿಸ್ತು ಆಗಿ ಅಧ್ಯಯನಕ್ಕೊಳಪಡುವ ಸಂದರ್ಭವೇ ಚಾರಿತ್ರಿಕವಾಗಿ ಮಹತ್ವದ ಸಂಗತಿ. ಹಾಗೇ ಜಾನಪದವು ಶೈಕ್ಷಣಿಕ ಶಿಸ್ತಿಗೆ ಒಳಪಟ್ಟು ಅಧ್ಯಯನ ವಿಷಯವಾಗಿ ಪರಿಗಣಿತವಾದ್ದರಿಂದ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ವ್ಯಾಪಕ ನೆಲೆಯಲ್ಲಿ ಅಧ್ಯಯನ, ಸಂಶೋಧನೆಗಳು ನಡೆಯಲು ಸಾಧ್ಯವಾಯಿತು. ಪಶ್ಚಿಮದ ಸಿದ್ಧಾಂತಗಳನ್ನು ಆಧಾರವಾಗಿಟ್ಟುಕೊಂಡು ನಮ್ಮ ನೆಲದಲ್ಲಿ ಜಾನಪದವನ್ನು ವಿಶೇಷವಾಗಿ ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನದಲ್ಲಿ ನಮ್ಮವೇ ಆದ ಮಾದರಿಗಳನ್ನು ಕಂಡುಕೊಳ್ಳುವ ಯತ್ನವೂ ನಡೆಯಿತು. ತನ್ನತನದ ಅಸ್ತಿತ್ವಕ್ಕಾಗಿ ಹೆಣಗುತ್ತಿರುವ ದೇಸೀಜ್ಞಾನ, ಕಲೆ, ಪರಂಪರೆಯ ಶೋಧ, ಮರುಶೋಧ ಮತ್ತು ಅವುಗಳನ್ನು ಸಶಕ್ತಗೊಳಿಸುವ ಪ್ರಯತ್ನಗಳು ಹೆಚ್ಚು ಕ್ರಿಯಾಶೀಲಗೊಳ್ಳಬೇಕಿರುವುದು ಅನಿವಾರ್ಯವಿದೆ. ಈ ನಡುವೆ ಬೆರಳೆಣಿಕೆಯಷ್ಟು ಜನ ಪಾರಂಪರಿಕ ಜ್ಞಾನ, ಕಲೆಗಳನ್ನು ಮುಂದುವರೆಸಿಕೊಂಡು ಬರುವ ಮೂಲಕ ಪಳಿಯುಳಿಕೆ ರೂಪದ ಜ್ಞಾನಸಂಪತ್ತನ್ನು ಸಂಗ್ರಹಿಸಿ, ಸಂರಕ್ಷಿಸಿ ಮುಂದಿನ ಪೀಳಿಗೆಗೆ ವರ್ಗಾಯಿಸುವ ಗುರುತರ ಜವಾಬ್ದಾರಿಯನ್ನು ನಿರ್ವಹಿಸುತ್ತ ಬಂದಿರುವುದು ಮತ್ತು ಬರುತ್ತಿರುವುದು ಸಹ ಗಮನಿಸಬಹುದಾದ ಸಂಗತಿ. ಈ ಬಗೆಯ ದಾರಿಯಲ್ಲಿ ಸಾಗಿದ ಪರಂಪರೆಯ

ಒಂದು ಕಾಲಘಟ್ಟದ ಕೊಂಡಿ ಮತ್ತು ಮೌಖಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಮತ್ತು ದಾಟಿಸುವ ಸಾಧನವಾಗಿಯೂ ಪಿಕೆಆರ್ ಅವರನ್ನು ಗ್ರಹಿಸಲು ಇಲ್ಲಿ ಸಾಧ್ಯವಿದೆ. ಪಿಕೆಆರ್ ಎಂದರೆ ಜಾನಪದ, ಜಾನಪದ ಎಂದರೆ ಪಿಕೆಆರ್ ಎನ್ನುವಷ್ಟರ ಮಟ್ಟಿಗೆ ಅವೆರೆಡರ ನಡುವೆ ಅವಿನಾಭಾವ ಸಂಬಂಧ ಏರ್ಪಟ್ಟಿದೆ. ಪಿಕೆಆರ್ ಜೀವನ ಚಿತ್ರಣ ಎಂದರೆ ಒಂದು ಕಾಲಘಟ್ಟದ ಜಾನಪದ ಅಧ್ಯಯನದ ಸಿಂಹಾವಲೋಕನ; ಜೊತೆಗೆ ಅದು ಪಡೆದುಕೊಂಡ ಸ್ವರೂಪಭಿನ್ನತೆಯನ್ನು ಗುರುತಿಸುವ ದಾಖಲಾತಿಯೂ ಆಗುತ್ತದೆ. ಈ ಹಿನ್ನೆಲೆಯಲ್ಲಿ ಭೂತಕಾಲ ಮತ್ತು ವರ್ತಮಾನದ ಜಾನಪದವನ್ನು ಒಟ್ಟಿಗೆ ನೋಡುವ ಪ್ರಾತಿನಿಧಿಕ ಸಂಗತಿಯೂ ಆಗಿ ತೋರುವ ಮೂಲಕ ಪಿಕೆಆರ್ ಬಗೆಗಿನ ಪ್ರಸ್ತುತ ಈ ಪರಿಚಯಾತ್ಮಕ ಬರವಣಿಗೆ ಹೆಚ್ಚು ಮಹತ್ವಪೂರ್ಣವಾದುದು ಎನಿಸುತ್ತದೆ. ಜಾನಪದ ಸಂಬಂಧಿ ಆಯಾಮಗಳ ಮೇಲೆ ಹೆಚ್ಚು ಕೇಂದ್ರೀಕರಣಗೊಂಡ ಇಲ್ಲಿನ ಬರವಣಿಗೆ ಅವರ ಒಟ್ಟು ಬದುಕನ್ನು ಪ್ರತಿಬಿಂಬಿಸಲಾರದು. ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಆಯೋಜನೆ ಮಾಡುವ ಪಟ್ಟಾಂಗ ಕಾರ್ಯಕ್ರಮದ ಆಶಯದ ಚೌಕಟ್ಟಿಗೆ ಸೀಮಿತಗೊಳಿಸಿ ಇಲ್ಲಿ ಡಾ.ಪಿಕೆಆರ್ ಅವರ ಕಲಾಬದುಕಿನ ಅಂಶಗಳನ್ನು ಚರ್ಚಿಸಲಾಗಿದೆ. ಹಾಗಾಗಿ ಪಿಕೆಆರ್ ಅವರ ಒಟ್ಟು ಬದುಕನ್ನು ಸಮಗ್ರವಾಗಿ ಕಟ್ಟಿಕೊಡುವ ಉದ್ದೇಶ ಇಲ್ಲಿ ಸಾಧಿತವಾಗಿಲ್ಲ. ಆದರೆ ಜಾನಪದ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಮತ್ತು ಮೂಲ ಜನಪದ ಸಾಹಿತ್ಯವನ್ನು ಮನೆ–ಮನಗಳಿಗೆ ತಲುಪಿಸಿದ ದೇಸೀ ಹಾಡುಗಾರರಾಗಿರುವ ಅವರ ಕಲಾಬದುಕಿನ ಯಶೋಗಾಥೆಯನ್ನು ಅಚ್ಚುಕಟ್ಟಾಗಿ ಸಂಕ್ಷಿಪ್ತವಾಗಿ, ಸಾಂದ್ರವಾಗಿ ದಾಖಲಿಸುವ ಪ್ರಯತ್ನ ಸಾಧಿತವಾಗಿದೆ ಎಂದು ಆತ್ಮವಿಶ್ವಾಸದಿಂದ ಹೇಳಬಹುದಾಗಿದೆ. ಆದರೂ ಜಾನಪದ ಕ್ಷೇತ್ರದ ಸೂರ್ಯನನ್ನು ಪರಿಚಯಿಸುವಾಗ, ಸಮಗ್ರತೆಯನ್ನು ದಾಖಲಿಸುವಾಗ ಕೆಲವು ವಿವರಗಳು ಬಿಟ್ಟು ಹೋಗುವ ಅಳುಕು ಈ ಬರವಣಿಗೆಯ ಸಂದರ್ಭದಲ್ಲಿ ನನ್ನನ್ನು ಕಾಡಿದೆ. ಆ ಬಗೆಯ ಅಳುಕಿನಿಂದಲೇ ಈ ಕೃತಿಯನ್ನು ಓದುಗರ ಒಡಲಿಗೆ ಹಾಕುತ್ತಿದ್ದೇನೆ.

ಭೌತಿಕ ಭಿತ್ತಿ

ಡಾ. ಪಿ.ಕೆ. ರಾಜಶೇಖರ ಅವರ ಜೀವನದಲ್ಲಿ ಬಹುಪಾಲು ಪ್ರಭಾವಿಸಿದ ಪರಿಸರ, ಸ್ಥಳಗಳು ಅವರ ಜೀವನದ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿರುತ್ತವೆ. ಈ ನಿಟ್ಟಿನಲ್ಲಿ ಅವರ ಸಮಗ್ರ ಬದುಕಿನ ಹಿನ್ನೆಲೆಯಾಗಿ ಒದಗಿದ ಈ ಬಗೆಯ ಪರಿಸರವನ್ನು ಒಟ್ಟು ಬದುಕಿನ ಭೌತಿಕ ಭಿತ್ತಿ ಎಂದೇ ಇಲ್ಲಿ ಗುರುತಿಸಬಹುದಾಗಿದೆ.

ಪಿರಿಯಾಪಟ್ಟಣದ ಹಿನ್ನೆಲೆ

ಮೈಸೂರು ಜಿಲ್ಲೆಯ ತಾಲ್ಲೂಕು ಕೇಂದ್ರ ಪಿರಿಯಾಪಟ್ಟಣ. ಮೈಸೂರು ಮಡಿಕೇರಿ ರಸ್ತೆಯಲ್ಲಿ, ಹುಣಸೂರು ಮತ್ತು ಕುಶಾಲನಗರಗಳ ನಡುವೆ ಇರುವ ಇದು, ಮೈಸೂರಿನಿಂದ ಪಶ್ಚಿಮಕ್ಕೆ ಸುಮಾರು ೭೦ ಕಿ.ಮೀ. ದೂರದಲ್ಲಿದೆ. ಸುತ್ತಲೂ ಬೆಟ್ಟ-ಗುಡ್ಡ, ಗಿರಿಶಿಖರ, ರುದ್ರರಮಣೀಯ ವನರಾಶಿ, ದಟ್ಟಾರಣ್ಯ, ನದನದಿಗಳು ಹೀಗೆ ಪ್ರಕೃತಿಮಾತೆ ತನ್ನ ಉದಾರವಾದ ಕರುಣೆದೋರಿದ್ದಾಳೆ ಎಂದು ಭಾಸವಾಗುವಂತೆ ಪಿರಿಯಾಪಟ್ಟಣ ಭೌಗೋಳಿಕವಾಗಿ ಅತ್ಯಂತ ಸುಂದರವಾಗಿ ಕಂಗೊಳಿಸುತ್ತದೆ. ಪೂರ್ವಕ್ಕೆ ಅಬ್ಬೂರು, ಪಶ್ಚಿಮಕ್ಕೆ ದೇವಗೌಡನಕೊಪ್ಪಲು, ಕೋಟೆ, ಉಪ್ಪಾರಗೇರಿ; ಉತ್ತರ ದಿಕ್ಕಿನಲ್ಲಿ ಹರವೆ ಮಲ್ಲರಾಜನ ಪಟ್ಟಣ ಹಾಗೂ ದಕ್ಷಿಣದಲ್ಲಿ ಅಂಕನಹಳ್ಳಿಗಳಿಂದ ಸುತ್ತುವರೆದಿದೆ. ಸುಮಾರು ೧೦ ಕಿ.ಮೀ.ನಷ್ಟು ಪ್ರದೇಶವನ್ನು ಹೊಂದಿದೆ. ಊರಿನ ಸುತ್ತ ಅರಸನಕೆರೆ, ದೊಡ್ಡಕೆರೆ, ಚಿಕ್ಕಕೆರೆ, ಚಾಮಿಕೆರೆ, ತಾವರೆಕೆರೆ ಇವೆ. ಹೀಗೆ ಪಿರಿಯಾಪಟ್ಟಣವು ಪ್ರಾಕೃತಿಕವಾಗಿ ನಾಡಿನ ಜನಮನ ಸೆಳೆಯುತ್ತದೆ.

ಪೌರಾಣಿಕ ಹಿನ್ನೆಲೆ

ಪಿರಿಯಾಪಟ್ಟಣವು ಪೌರಾಣಿಕ ಹಿನ್ನೆಲೆಯನ್ನು ಹೊಂದಿದೆ. ರಾಮಾಯಣ, ಮಹಾಭಾರತ ಮಹಾಕಾವ್ಯಗಳಲ್ಲಿ ಈ ಪ್ರದೇಶದ ಬಗೆಗೆ ಉಲ್ಲೇಖಗಳು ದೊರಕುತ್ತವೆ. ವೀರಜನನಿ ಕುಂತಿದೇವಿಯ ತಂದೆ ಕುಂತೀಭೋಜನ ಕುಂತಳ ರಾಜ್ಯ ಈ ಪ್ರದೇಶವೇ ಆಗಿತ್ತು ಎಂದು ಹೇಳಲಾಗುತ್ತದೆ. ಇದರಿಂದಾಗಿ ಈ ಪ್ರದೇಶದಲ್ಲಿ ಪ್ರತಿವರ್ಷದ ಕಾರ್ತೀಕ ಮಾಸ ಕುಂತೀಪೂಜೆ ಮಾಡುವ ಪದ್ಧತಿ ರೂಢಿಯಲ್ಲಿದೆ. ಕೇರಳದ ಅರಸು ಸುಧಾರ್ಮಿಕನ ಮಗ ಚಂದ್ರಹಾಸನನ್ನು

ಒಬ್ಬ ದಾಸಿಯು ಶತ್ರುರಾಜರಿಂದ ರಕ್ಷಿಸಿ ಕರೆತಂದು ಸಾಕಿದ ಕುಂತಲದೇಶವೇ ಈ ಪ್ರದೇಶ ಎಂಬ ದಂತಕತೆಗಳು ಇಲ್ಲಿ ಚಾಲ್ತಿಯಲ್ಲಿವೆ. ಶ್ರೀರಾಮನು ಸೀತೆ ಮತ್ತು ಲಕ್ಷ್ಮಣರೊಂದಿಗೆ ವನವಾಸದ ನಿಮಿತ್ತ ಈ ಪ್ರದೇಶಕ್ಕೆ ಬಂದು ಇಲ್ಲಿನ ಮಾಕಲ್ಲಯ್ಯನ ಬೆಟ್ಟ, ರಾಮನಾಥಪುರ, ಅತ್ತಿಗೋಡು, ರಾವಂದೂರು, ಚುಂಚನಕಟ್ಟೆ ಸ್ಥಳಗಳಲ್ಲಿ ಓಡಾಡಿದ ಬಗೆಗೆ ಅನೇಕ ಸ್ಥಳಗತೆಗಳನ್ನು ಹೇಳಲಾಗುತ್ತದೆ. ಈ ಎಲ್ಲ ಸ್ಥಳಗಳು ಒಂದೊಂದು ಸ್ಥಳಪುರಾಣವನ್ನು ಹೊಂದಿವೆ. ಅಗಸ್ತ್ಯಮುನಿಗಳು ಈ ಪ್ರದೇಶವನ್ನು ಸಂದರ್ಶಿಸಿದ್ದರೆಂಬ ಪ್ರತೀತಿಯೂ ಇದೆ. ಊರಿನ ಉತ್ತರ ದಿಕ್ಕಿನಲ್ಲಿ ಕಾವೇರಿ ನದಿ ಹರಿಯುತ್ತದೆ. ನದಿ ದಂಡೆಯ ಮೇಲೆ ರಾಮನಾಥಪುರ ಎಂಬ ಪ್ರಸಿದ್ಧ ಯಾತ್ರಾಸ್ಥಳವಿದೆ. ನದಿಯ ಮಧ್ಯದಲ್ಲಿ ಎದ್ದುಕಾಣುವ ಒಂದು ದೊಡ್ಡ ಬಂಡೆಯಿದೆ. ಈ ಬಂಡೆಯನ್ನು 'ಗಾಯತ್ರಿಶಿಲೆ' ಎಂದು ಕರೆಯಲಾಗುತ್ತದೆ. ಇಲ್ಲಿ ವಿಶ್ವಾಮಿತ್ರಋಷಿ ತಪಸ್ಸುಗೈದು ಗಾಯತ್ರೀದೇವಿಯನ್ನು ಸಾಕ್ಷಾತ್ಕರಿಸಿಕೊಂಡನೆಂಬ ಪೌರಾಣಿಕ ಕತೆಯೂ ಈ ಭಾಗದಲ್ಲಿ ಪ್ರಚಲಿತವಿದೆ. ವಿಶ್ವಾಮಿತ್ರ ಮೇನಕೆಯರ ಮಗಳು ಶಕುಂತಲೆಯನ್ನು ಸಾಕಿದ ಕಣ್ವರ್ಷಿಗಳ ತಪೋಭೂಮಿ ಈ ತಾಲ್ಲೂಕಿನಲ್ಲಿರುವ ಕಣಗಾಲು ಎಂಬ ನಂಬಿಕೆಯಿದೆ.

ಐತಿಹಾಸಿಕ ಹಿನ್ನೆಲೆ

ಚೋಳರು ಕಟ್ಟಿಸಿದ್ದು ಎಂದು ಹೇಳಲಾಗುವ ಅನೇಕ ದೇವಾಲಯಗಳು ಪಿರಿಯಾಪಟ್ಟಣದಲ್ಲಿ ಇವೆ. ಆದ್ದರಿಂದ ಪಿರಿಯಾಪಟ್ಟಣವು ಐತಿಹಾಸಿಕವಾಗಿಯೂ ಪ್ರಸಿದ್ಧಿಯನ್ನು ಪಡೆದಿದೆ. ಈಗಿನ 'ಪಂಚವಳ್ಳಿ' ಎಂಬ ಗ್ರಾಮವು ಚೋಳರ ಪಂಚವಾನ್ ಮಹಾದೇವನು ಬೀಡುಬಿಟ್ಟಿದ್ದ ಸ್ಥಳ ಎಂದು ಹೇಳಲಾಗುತ್ತದೆ. ಗ್ರಾಮದಲ್ಲಿ ಇರುವ ದೊಡ್ಡಕೆರೆ ಮತ್ತು ವೈದ್ಯೇಶ್ವರ ದೇವಾಲಯಗಳನ್ನು ಕರಿಕಾಲಚೋಳನು ಕಟ್ಟಿಸಿರುವನು. ವೈದ್ಯೇಶ್ವರ ದೇವಾಲಯ ಅತ್ಯಂತ ಆಕರ್ಷಕ ಶೈಲಿಯಲ್ಲಿ ನಿರ್ಮಾಣವಾಗಿದ್ದು, ದೇವಾಲಯದ ಭಿತ್ತಿಯ ಕಲ್ಲಿನ ಮೇಲೆ ಕೆತ್ತಿರುವ ಉಬ್ಬು ಶಿಲ್ಪಗಳು ಚೋಳರು ಮತ್ತು ಚೆಂಗಾಳ್ವರ ಸಂಬಂಧವನ್ನು ಕುರಿತು ತಿಳಿಸುತ್ತವೆ. ಚೋಳರ ಕಾಲದಲ್ಲಿ ಪಿರಿಯಾಪಟ್ಟಣ ಗ್ರಾಮವನ್ನು 'ಸಿಂಹಪಟ್ಟಣ'ವೆಂದು ಕರೆಯಲಾಗುತ್ತಿತ್ತು ಎಂಬುದು ಹಿಟ್ನೆಹೆಬ್ಬಾಗಿಲು ಗ್ರಾಮದಲ್ಲಿ ದೊರೆತ ತಾಮ್ರಶಾಸನವೊಂದರಿಂದ ತಿಳಿದು ಬರುತ್ತದೆ.

ಚೆಂಗಾಳ್ವರಸರ ಆಳ್ವಿಕೆಯ ಪರಿಣಾಮದಿಂದ ಪಿರಿಯಾಪಟ್ಟಣದ ಸುತ್ತಮುತ್ತ ಆ ರಾಜರ ಹೆಸರಿನಿಂದ ಕರೆಯಲ್ಪಡುವ ಅನೇಕ ಊರುಗಳು ಕಂಡುಬರುತ್ತವೆ. ಶ್ರೀಕಂಠರಾಜನ ಹೆಸರಿನ ಕಂಠಾಪುರ, ವೀರರಾಜನ ಹೆಸರಿನ ರಾಜಾಪುರ, ಮಲ್ಲರಾಜನ ಹೆಸರಿನ ಮೆಲ್ಲಹಳ್ಳಿ ಮುಂತಾದ ಹಳ್ಳಿಗಳನ್ನು

ಉದಾಹರಿಸಬಹುದು. ಮೂಲತಃ ಜೈನರಾಗಿದ್ದ ಚೆಂಗಾಳ್ವರಸರು ಮಲ್ಲಿನಾಥ ತೀರ್ಥಂಕರ ಹೆಸರಿನಲ್ಲಿ ತಮ್ಮ ರಾಜ್ಯದ ನಾಲ್ಕೂ ದಿಕ್ಕುಗಳಲ್ಲಿ ಒಂದೊಂದು ಮಲ್ಲಿನಾಥಪುರಗಳನ್ನು ನಿರ್ಮಿಸಿದ್ದನ್ನು ಕಾಣಲಾಗುವುದು.

ಒಟ್ಟಾರೆ ಪಿರಿಯಾಪಟ್ಟಣವು ಪೌರಾಣಿಕ, ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ ಅತ್ಯಂತ ಮಹತ್ವದ್ದಾಗಿದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಆದ್ದರಿಂದ ಈ ಪ್ರದೇಶವನ್ನು ಜನಪದ ಕಾವ್ಯಗಳಲ್ಲಿ ಅತ್ಯಂತ ವೈಭವದಿಂದ ವರ್ಣಿಸಲಾಗಿದೆ. ಅಲ್ಲದೇ ಈ ಸಂಬಂಧ ಮಹಾಕಾವ್ಯಗಳನ್ನು ಕಟ್ಟಿಹಾಡಲಾಗುತ್ತಿರುವುದು ಕೂಡ ಆ ಊರಿನ ಹಿರಿಮೆಯನ್ನು ಸಾರಿದಂತಾಗುತ್ತದೆ. ಹಳೆಯ ತಲೆಮಾರಿನ ಕೆಲವು ಕಲಾವಿದರು 'ಪಿರಿಯಾಪಟ್ಟಣದ ಕಾಳಗ'ವನ್ನು ಇಂದಿಗೂ ಹಾಡುವ, ವಿವರಿಸುವ ಮಹತ್ವದ ಕಾರ್ಯವನ್ನು ಮಾಡುತ್ತಿರುವುದನ್ನು ಕಾಣಬಹುದು.

ಹಾಡುಹಕ್ಕಿಯ ಜಾಡ ಹಿಡಿದು

ಜನನ

ನಾಡಿನ ಸಾಂಸ್ಕೃತಿಕ ರಾಜಧಾನಿ ಎಂದು ಹೆಮ್ಮೆಯಿಂದ ಕರೆಯುವ ಜಿಲ್ಲೆ ಮೈಸೂರು. ಜಿಲ್ಲೆಯ ಗಡಿಯಲ್ಲಿರುವ ತಾಲ್ಲೂಕು ಪಿರಿಯಾಪಟ್ಟಣ. ಇದು ಐತಿಹಾಸಿಕವಾಗಿ ಪ್ರಸಿದ್ಧಿ ಹೊಂದಿದಂತೆ ಸಾಂಸ್ಕೃತಿಕವಾಗಿಯೂ ಮನ್ನಣೆ ಪಡೆದುಕೊಂಡಿರುವ ತಾಲ್ಲೂಕು. ಈ ಊರಿನ ಮಣ್ಣಿನಲ್ಲಿ ಜಾನಪದದ ಮೂಲಬೀಜಗಳು ಮೊಳಕೆಯೊಡೆದು ಬೀಜ ಸಸಿಯಾಗಿ, ಕಾಯಿಯಾಗಿ, ಹೂವಾಗಿ, ಹಣ್ಣಾಗಿ ತನ್ನ ಕಂಪನ್ನು ನಾಡಿನೆಲ್ಲೆಡೆ ಪಸರಿಸಿದೆ. ಆ ಮಣ್ಣಿನಲ್ಲಿಯೇ ದೇಸೀ ಸತ್ವದ ಕೂಸುಗಳು ಜನ್ಮವೆತ್ತಿ ಬಂದು ನಾಡಿಗೆ ಕೀರ್ತಿಯನ್ನು ತಂದಿವೆ. ಅಂತಹ ಜನಪದ ಸಂಸ್ಕೃತಿಯ ಮೂಲನೆಲೆಯಾದ ಪಿರಿಯಾಪಟ್ಟಣದಲ್ಲಿ ಕೆಂಪೇಗೌಡ ಹಾಗೂ ಶ್ರೀಮತಿ ಪುಟ್ಟಮ್ಮ ಎಂಬ ರೈತದಂಪತಿಗಳ ಉದರದಲ್ಲಿ ೦೩ ಅಕ್ಟೋಬರ್ ೧೯೪೭ರಂದು ಜನಿಸಿದ ಸುಪುತ್ರನೇ ಶ್ರೀ ಪಿ.ಕೆ. ರಾಜಶೇಖರ. ಆದರೆ ಆಗ ಬಾಲಕ ರಾಜಶೇಖರ ಮುಂದೆ ಈ ನಾಡಿನ ಶ್ರೇಷ್ಠ ಜನಪದ ಗಾಯಕ, ಸಂಶೋಧಕ, ವಿದ್ವಾಂಸರಾಗುತ್ತಾರೆ ಎಂದು ಯಾರೂ ಎಣಿಸಿರಲಿಲ್ಲ. ಮನೆಯಲ್ಲಿ ಕೂಡುಕುಟುಂಬ. ತಂದೆ ಕೆಂಪೇಗೌಡ ಜನಪದ ವೈದ್ಯರಾಗಿದ್ದರು. ಅಲ್ಲದೆ ರಾಮಾಯಣ, ಮಹಾಭಾರತ ಕತೆಗಳನ್ನು ಓದಿ ಸಂಪೂರ್ಣವಾಗಿ ಅರಗಿಸಿಕೊಂಡಿದ್ದರು. ಮಗನಿಗೆ ಆ ಕತೆಗಳನ್ನು ಮನಮುಟ್ಟುವಂತೆ ಹೇಳುತ್ತಿದ್ದರು. ಇವುಗಳ ಜೊತೆಗೆ ಸಾಹಿತ್ಯಾಭಿಮಾನಿಯಾಗಿದ್ದ ಅವರು ಲಕ್ಷ್ಮೀಶನ ಜೈಮಿನಿ ಭಾರತ, ದೇವಿಮಹಾತ್ಮೆಯಂಥ ಕೃತಿಗಳನ್ನು ಪಾರಾಯಣ ಮಾಡುತ್ತಿದ್ದರು. ಇವುಗಳ ಪ್ರಭಾವದಿಂದ ಬಾಲಕ ರಾಜಶೇಖರನ ಮನಸ್ಸಿನಲ್ಲಿ ಕತೆಗಳ ಬಗೆಗೆ ತೀವ್ರ ಕುತೂಹಲ ಬೆಳೆಯಿತು. ತಾಯಿ ಪುಟ್ಟಮ್ಮ ಸಂಪ್ರದಾಯದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದಳು.

ಬಾಲ್ಯ

ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ತಾವು ಎಂದೂ ಮರೆಯಲಾರದ ಸ್ಥಳ, ಊರುಗಳು ಇದ್ದೇ ಇರುತ್ತವೆ. ಅವು ಆ ವ್ಯಕ್ತಿಯ ವ್ಯಕ್ತಿತ್ವರೂಪಣೆಯ ಹಿಂದಿನ ಪ್ರೇರಣಾಕೇಂದ್ರವಾಗಿರುತ್ತವೆ. ಇಡೀ ಬಾಲ್ಯದ ನೆನಪುಗಳನ್ನು ಮರುಕಳಿಸುವ ಆ ಊರು ವ್ಯಕ್ತಿಯ ಪಾಲಿಗೆ ಸದಾಸ್ಮರಣೀಯ. ಅಷ್ಟೇ ಅಲ್ಲ,

ಸಾಂಸ್ಕೃತಿಕವಾಗಿಯೂ ಮಹತ್ವದ್ದೆನಿಸುತ್ತದೆ. ಈ ಮಾತು ರಾಜಶೇಖರ ಅವರ ಜೀವನದಲ್ಲೂ ನೇರವಾಗಿ ಅನ್ವಯವಾಗುತ್ತದೆ.

'ಮನೆಯೆ ಮೊದಲ ಪಾಠಶಾಲೆ ಜನನಿ ತಾನೆ ಮೊದಲ ಗುರು' ಎಂಬ ಮಾತು ಪಿಕೆಆರ್ ಅವರ ಬದುಕಿನಲ್ಲಿ ಸತ್ಯವೆನಿಸಿದೆ.

'ವಿದ್ಯೆ ಕಲಿಸದ ತಂದೆ ಬುದ್ಧಿ ಹೇಳದ ಗುರುವು
ಬಿದ್ದರಲು ಬಂದು ನೋಡದ ತಾಯಿ – ಈ ಮೂವರು
ಶುದ್ಧ ವೈರಿಗಳು ಸರ್ವಜ್ಞ'

ಎನ್ನುವ ಸರ್ವಜ್ಞನ ಈ ನುಡಿ ಪಿಕೆಆರ್ ಬದುಕಿಗೆ ಅಪವಾದ. ಆಗಿನ ಕಾಲದಲ್ಲಿಯೇ ಎಸ್‌ಎಸ್‌ಎಲ್‌ಸಿ ಮುಗಿಸಿಕೊಂಡು ಮೇಷ್ಟ್ರಾಗಿ ಮತ್ತು ಅರಣ್ಯ ಕಾವಲುಗಾರರಾಗಿ ಕೆಲಸ ಮಾಡಿದ ತಂದೆ ಕೆಂಪೇಗೌಡರು ಮತ್ತು ಅವರ ತಾಯಿ ಪುಟ್ಟಮ್ಮ ಇಂಗ್ಲಿಷ್ ಮತ್ತು ಕನ್ನಡದ ಜ್ಞಾನವನ್ನು ಹೊಂದಿದ್ದರು. ಜೊತೆಗೆ ಸಂಜೆ ಪಾಠವನ್ನು ಹೇಳಿಕೊಡುತ್ತಿದ್ದು, ಪದ್ಯಗಳನ್ನು ಲಯಬದ್ಧವಾಗಿ ಹಾಡುತ್ತಿದ್ದರು. ಊರಿನ ಸಮಾನಮನಸ್ಕ ಹೆಣ್ಣುಮಕ್ಕಳೊಂದಿಗೆ ಕೂಡಿ ಹಬ್ಬ-ಹರಿದಿನ, ವಿಶೇಷ ಜಾತ್ರೆ ಮುಂತಾದ ಸಂದರ್ಭಗಳಲ್ಲಿ ಹಾಡಿನ ಕಾರ್ಯಕ್ರಮಗಳು ನಡೆಯುತ್ತಿದ್ದವು. ತಾಯಿ ಪುಟ್ಟಮ್ಮ ತಾನು ಹೋಗುವ ಕಡೆಗೆಲ್ಲ ಎಳೆಯ ಬಾಲಕ ರಾಜಶೇಖರನನ್ನು ಜೊತೆಗೇ ಕರೆದುಕೊಂಡು ಹೋಗುತ್ತಿದ್ದಳು. ಇದು ರಾಜಶೇಖರನ ಬದುಕಿನಲ್ಲಿ ಜನಪದ ಹಾಡುಗಳ ಬಗ್ಗೆ ಆಸಕ್ತಿ ಚಿಗುರಲು ಕಾರಣವಾಯಿತು. ಊರಿನಲ್ಲಿ ನಡೆಯುವ ವಿಶೇಷ ಜಾತ್ರೆ, ಪೂಜೆ-ಪುನಸ್ಕಾರ, ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳಲ್ಲಿ ಅವನು ಕ್ರಮೇಣ ಭಾಗವಹಿಸುತ್ತ ಬಂದ. ಮನೆಯಲ್ಲಿನ ವಾತಾವರಣ ಮತ್ತು ಊರಿನ ಪರಿಸರಗಳು ರಾಜಶೇಖರನ ಜೀವನದ ಮೇಲೆ ತೀವ್ರ ಪರಿಣಾಮವನ್ನುಂಟುಮಾಡಿದವು.

ಹುಣಸೆಕುಪ್ಪೆಯ ಹಸಿರು ಹಾದಿ

ರಾಜಶೇಖರ ಅವರ ಇಡೀ ಬಾಲ್ಯವನ್ನು ಬಹುವಾಗಿ ಪ್ರಭಾವಿಸಿದ ಮತ್ತು ರೂಪಿಸಿದ ಊರು ಅವರ ಅಜ್ಜಿಯ ತವರೂರಾದ ಹುಣಸೆಕುಪ್ಪೆ. ಬಾಲಕ ರಾಜಶೇಖರ ಅಜ್ಜಿ ಹುಣಸೆಕುಪ್ಪೆ ಸಣ್ಣಮ್ಮ ಹಾಡುತ್ತಿದ್ದ ಜನಪದ ತ್ರಿಪದಿಗಳಿಂದಲೂ ವಿಶೇಷ ಪ್ರಭಾವಕ್ಕೆ ಒಳಗಾಗಿದ್ದನು. ಹುಣಸೆಕುಪ್ಪೆಯಲ್ಲಿದ್ದ ಅವರ ಅಕ್ಕ ಲಕ್ಷ್ಮಕ್ಕಳು ತಾನು ಹೋದ ಕಡೆಗೆಲ್ಲ ಬಾಲಕ ರಾಜಶೇಖರರನ್ನು ಕರೆದುಕೊಂಡು ಹೋಗುತ್ತಿದ್ದಳು. ಮುತ್ತುಗಲ ಹಣ್ಣು, ಚೊಟ್ಟೆಹಣ್ಣು, ಕಲ್ಲತ್ತಿ ಹಣ್ಣು, ಕಾರೇಹಣ್ಣು,

ಗೇರುಹಣ್ಣು ಇತ್ಯಾದಿ ಹಣ್ಣುಗಳನ್ನು ತಿನ್ನಲು ಕೊಡುತ್ತಿದ್ದಳು. ಜೊತೆಗೆ ಅಪ್ಪಿಟ್ಟು, ನಾಮದ್ಹಲಗೆ, ಹಾಲೊಬ್ಬಟ್ಟು, ಗಟ್ಟಿಮೊಸರು, ಹಾಲುತುಪ್ಪ ಹೀಗೆ ಒಳ್ಳೊಳ್ಳೆ ರುಚಿಕಟ್ಟಾದ ಅಡುಗೆ ಮಾಡಿ ಉಣಿಸುತ್ತಿದ್ದಳು. ರಾಜಶೇಖರರ ಅಜ್ಜಿಯ ಸೋದರನಾದ ತಮ್ಮೇಗೌಡ ತೀರಿಕೊಂಡಾಗ ಆ ಸಂದರ್ಭದಲ್ಲಿ ವಿವಿಧ ಜನಪದ ಹಾಡುಗಾರರು ಬಂದಿದ್ದರು. ಅವರು ಹಾಡುತ್ತಿದ್ದ ಜನಪದ ಹಾಡುಗಳು ಬಾಲಕನ ಆಸಕ್ತಿ ಕೆರಳಿಸಿದವು. ಒಮ್ಮೆ ಊರಲ್ಲಿ ದಾಸನಾಯಕ ಎಂಬುವರ ನೇತೃತ್ವದಲ್ಲಿ ಕೋಲಾಟ ತಂಡವೊಂದು ಮಾರಿಗುಡಿ ಮುಂದೆ ಕೋಲಾಟ ಪ್ರದರ್ಶನ ಮಾಡಿತು. ಅದು ಬಾಲಕನ ಮನಸ್ಸಿನ ಮೇಲೆ ಅಚ್ಚಳಿಯದ ಪರಿಣಾಮ ಬೀರಿತು. ಊರಲ್ಲಿ ನಡೆಯುತ್ತಿದ್ದ ಮದುವೆ ಮುಂತಾದ ಶುಭ ಸಂದರ್ಭದಲ್ಲಿ ಹೆಣ್ಣುಮಕ್ಕಳು ಹಾಡುತ್ತಿದ್ದ ಸೋಬಾನೆ ಪದ, ಮಂಗಳಾರತಿ ಪದಗಳು ಇವರ ಮನಸ್ಸನ್ನು ಆಕರ್ಷಿಸಿದವು. ಇಂಥ ಸುಸಂಸ್ಕೃತ ವಾತಾವರಣದಲ್ಲಿ ಬೆಳೆದ ಬಾಲಕ ರಾಜಶೇಖರನ ಮನಸ್ಸಿನಲ್ಲಿ ಜನಪದ ಹಾಡುಗಳ ಬೀಜ ಅಂದು ನೆಲೆಯೂರಿದವು.

ಪಿರಿಯಾಪಟ್ಟಣದಲ್ಲಿ ಇದ್ದ ದೊಡ್ಡಮ್ಮ ರಾಜಶೇಖರರಿಗೆ ಅತ್ಯಂತ ಪ್ರಿಯಪಾತ್ರಳಾಗಿದ್ದಳು. ಅಕ್ಕ ದೊಡಮ್ಮಳ ಮನೆಯಲ್ಲಿಯೇ ಇರುತ್ತಿದ್ದಳು. ಅವರಿಬ್ಬರನ್ನೂ ನೋಡಿಕೊಂಡು ಬರುವ ಸಲುವಾಗಿ ಅವರು ಆಗಾಗ ದೊಡ್ಡಮ್ಮನ ಮನೆಗೆ ಹೋಗಿ ಬರುತ್ತಿದ್ದರು. ಬೆಂಗಳೂರಿನಲ್ಲಿ ಇರುತ್ತಿದ್ದ ಸರೋಜಕ್ಕ ಮನೆಗೆ ಬಂದರಂತೂ ಅವರಿಗೆ ಎಲ್ಲಿಲ್ಲದ ಆನಂದ. ಆಗೆಲ್ಲ ದೊಡ್ಡಮ್ಮನ ಮನೆಯಲ್ಲಿಯೇ ಇದ್ದುಬಿಡುತ್ತಿದ್ದರು. ಅಣ್ಣಂದಿರಾದ ಪಿ.ಕೆ. ಶಿವಪ್ಪ ಮತ್ತು ಪಿ.ಕೆ. ಚಂದ್ರಶೇಖರ ಅವರು ಆಗ ಮೈಸೂರಿನಲ್ಲಿ ಓದುತ್ತಿದ್ದರು. ಇವರನ್ನು ಚಂದ್ರಣ್ಣ ಮೈಸೂರಿಗೆ ಕರೆದುಕೊಂಡು ಹೋಗುತ್ತಿದ್ದರು. ಆಗ ತಾನೆ ಡಾ. ರಾಜಕುಮಾರ್ ಅವರು ಅಭಿನಯಿಸಿದ 'ಬೇಡರ ಕಣ್ಣಪ್ಪ' ಸಿನೇಮಾ ಬಿಡುಗಡೆಯಾಗಿತ್ತು. ಅದೇ ಅವರು ನೋಡಿದ ಮೊಟ್ಟಮೊದಲ ಚಲನಚಿತ್ರ. ಅಂತೆಯೆ ಹುಣಸೆಕುಪ್ಪೆ ಸಮೀಪವಿರುವ ಹರಿಲಾಪುರದ ಹೂದೋಟವು ಅವರ ಜೀವನದಲ್ಲಿ ಅಮಿತಾನಂದ ನೀಡಿದೆ. ಅಲ್ಲದೆ, ಅಜ್ಜಿಯ ನೆಂಟರಿಷ್ಟರೆಲ್ಲ ಇರುವ ಹಳೇಹೆಮ್ಮಿಗೆ, ಹಬ್ಬನಕುಪ್ಪೆ, ಪೂನಾಡಹಳ್ಳಿ, ಕೋಗಿಲವಾಡಿ, ಚೆಲ್ಕುಂದ, ಹಬಟೂರು ಮುಂತಾದ ಊರುಗಳು ರಾಜಶೇಖರರ ಜೀವನದಲ್ಲಿ ಮರೆಯಲಾರದ ಬಾಲ್ಯದ ಅನುಭವಗಳನ್ನು ಕೊಟ್ಟಿವೆ.

ಶಿಕ್ಷಣ

ರಾಜಶೇಖರ ಅವರು ತಮ್ಮ ಹುಟ್ಟೂರಾದ ಪಿರಿಯಾಪಟ್ಟಣದಲ್ಲಿಯೇ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣವನ್ನು ಪೂರೈಸಿದರು. ಪಿರಿಯಾಪಟ್ಟಣದಲ್ಲಿದ್ದ ಬೆಂಗಳೂರು ಸುಬ್ಬಣ್ಣನವರ ಹೆಸರಿನ ತಾಲ್ಲೂಕು ಬೋರ್ಡ್ ಆಡಳಿತಕ್ಕೆ ಒಳಪಟ್ಟ

ಪ್ರೌಢಶಾಲೆಗೆ ಸೇರಿದರು. ಶಾಲಾ ವಾತಾವರಣ ಇವರ ಆಸಕ್ತಿಗೆ ಹೇಳಿಮಾಡಿಸಿದಂತಿತ್ತು. ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಗೊರಹಳ್ಳಿಯ ಚೆಲುವಯ್ಯನವರಿಗೆ ರಾಜಶೇಖರರ ಹಾಡು ಅಂದ್ರೆ ಎಲ್ಲಿಲ್ಲದ ಪ್ರೀತಿ. ಶಾಲೆಯಲ್ಲಿ ಒಂದು ರೇಡಿಯೊ ಇತ್ತು. ಆ ಸಂದರ್ಭದಲ್ಲಿ ಬೆಂಗಳೂರು ಆಕಾಶವಾಣಿಯಿಂದ ಪ್ರಸಾರವಾಗುತ್ತಿದ್ದ 'ಶಾಲಾ ಪ್ರಸಾರ' ಕಾರ್ಯಕ್ರಮವನ್ನು ಎಲ್ಲ ವಿದ್ಯಾರ್ಥಿಗಳಿಗೆ ಕೇಳಿಸಲಾಗುತ್ತಿತ್ತು. ವಿದ್ಯಾರ್ಥಿಗಳು ಬರೆದ ಬರೆಹಗಳನ್ನು ಆಕಾಶವಾಣಿಗೆ ಕಳುಹಿಸಿಕೊಡುವಂತೆ ಹೇಳುತ್ತಿದ್ದರು. ಆವಾಗ ರಾಜಶೇಖರ ಅವರು 'ಕನ್ನಡ ತಾಯಿಯ ಪೂಜಿಸುವೆವು, ಕನ್ನಡ ಭಾಷೆಯ ಮೆರೆಸುವೆವು' ಎಂಬ ಹಾಡನ್ನು ಆಕಾಶವಾಣಿಗೆ ಬರೆದುಕೊಟ್ಟರು. ಅದನ್ನು ಶಾಲಾಪ್ರಸಾರ ಕಾರ್ಯಕ್ರಮದಲ್ಲಿ ಓದಿ ಹೇಳಿದರು. ಆವತ್ತಿನಿಂದ ಊರಲ್ಲಿ ಮತ್ತು ಶಾಲೆಯಲ್ಲಿ ರಾಜಶೇಖರ ವಿಶಿಷ್ಟವಾಗಿ ಗುರುತಿಸುವಂಥ ಬಾಲಕ ಎನಿಸಿದರು. ಶ್ರೀಮತಿ ಎಚ್.ಕೆ. ನಾಗಲಕ್ಷ್ಮಮ್ಮ ಎಂಬ ಕನ್ನಡ ಪಂಡಿತರು ಮಕ್ಕಳನ್ನು ತುಂಬ ಅಕ್ಕರೆಯಿಂದ ಕಾಣುತ್ತಿದ್ದರಲ್ಲದೆ, ವಿಶಿಷ್ಟ ಕಥೆ ಹೇಳುವುದು, ವಿದ್ಯಾರ್ಥಿಗಳಿಗೂ ಕಥೆ ಮತ್ತು ಕವನಗಳನ್ನು ಬರೆಯಲು ಪ್ರೋತ್ಸಾಹ ನೀಡುತ್ತಿದ್ದರು. ಆ ಸಂದರ್ಭದಲ್ಲಿ ಪಿಕೆಆರ್ 'ಸುಮಗಳಿರಾ ಅರಳುವಿರಾ' ಎಂಬ ಕವಿತೆಯನ್ನು ಬರೆದು ಗುರುಗಳ ಪ್ರೀತಿಗೆ ಪಾತ್ರರಾದರು. ಜೊತೆಗೆ ಇವರ ಹಾಡು ಎಲ್ಲರ ಬಾಯಿಂದ ಬಾಯಿಗೆ ಹರಿಯಿತು; ರಾಜಶೇಖರರ ಕೀರ್ತಿ ಊರ ತುಂಬೆಲ್ಲಾ ಹರಡಿತು. ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಮೇಸ್ಟ್ರಾಗಿದ್ದ ಶಿವನಂಜದೇವರು 'ಅಜ್ಜಯ್ಯನ ಆಸೆ' ಮತ್ತು 'ಹಳ್ಳಿಯ ಬದುಕು' ನಾಟಕಗಳಲ್ಲಿ ಪಿಕೆಆರ್ ಅವರಿಗೆ ಅಭಿನಯಿಸಲು ಅವಕಾಶ ಮಾಡಿಕೊಟ್ಟರಲ್ಲದೆ, ಅವರಿಂದ ಹಾಡುಗಳನ್ನು ಬರೆಸಿ ಹುರಿದುಂಬಿಸಿದರು. ಶಾಲೆಯಲ್ಲಿ ಆರಂಭಿಸಲಾಗಿದ್ದ 'ಪ್ರತಿಭಾ ಫಲಕ' ಗೋಡೆ ಪತ್ರಿಕೆಗೆ ರಾಜಶೇಖರ ಒಂದು ಕಥೆಯನ್ನು ಬರೆದು ಎಲ್ಲರಿಂದಲೂ ಸೈ ಎನಿಸಿಕೊಂಡರು. ಅಲ್ಲದೆ ಅವರ ಅಣ್ಣ ಪಿ.ಕೆ. ಶಿವಪ್ಪ ಅವರ ಉತ್ತೇಜನದ ಮಾತುಗಳಿಂದಾಗಿ ತಾನೊಬ್ಬ ಸಾಹಿತಿಯಾಗಬೇಕೆಂಬ ಆಸೆ ಪಿಕೆಆರ್ ಅವರ ಮನಸ್ಸಿನಲ್ಲಿ ಮೂಡಿತು. ಇದೇ ಅವಧಿಯಲ್ಲಿ ಹಿಟ್ನೇಬಾಗಿಲು ಪುಟ್ಟೇಗೌಡರ ಹೆಸರಿನಲ್ಲಿ ಹಾಸ್ಯ ಕವನವೊಂದನ್ನು ಬರೆದು ಶಾಲಾ ಕಾರ್ಯಕ್ರಮದಲ್ಲಿ ಹಾಡಿದರು. ಗೆಳೆಯರಾಗಿದ್ದ ಸನ್ಯಾಸಿಪುರದ ಸುಬ್ರಹ್ಮಣ್ಯ, ಪಿ.ಜಿ. ತಿಮ್ಮಪ್ಪಯ್ಯ, ಕೆ.ಬಿ.ರಾಮೇಗೌಡ, ಪೂನಾಡಹಳ್ಳಿ ವೆಂಕಟಗಿರಿಗೌಡ, ಕಿರನೆಲ್ಲಿ ಕಾಳಪ್ಪ, ಕಂಪಲಾಪುರದ ಸಿದ್ದಪ್ಪ ಮುಂತಾದವರೆಲ್ಲ ತುಂಬ ಮೆಚ್ಚಿಕೊಂಡರು. ರಾಷ್ಟ್ರಗೀತೆ ಕನ್ನಡದಲ್ಲಿರಬೇಕೆಂಬ ಇಚ್ಛೆಯಿಂದ ತಾವೇ 'ತನುಮನಧನಗಳನಿರಿಸು ತಾಯ್ನಾಡಿಗೆ ಮುಡಿಪಿರಿಸು' ಎಂಬ ಕವನವನ್ನು 'ಜನಗಣಮನಧಿನಾಯಕ ಜಯ ಹೇ' ಹಾಡಿನ ಶೈಲಿಯಲ್ಲಿಯೇ ಬರೆದು ಹಾಡಿದರು. ಕನ್ನಡ ಅಧ್ಯಾಪಕರಾಗಿದ್ದ ನಾಗಲಕ್ಷ್ಮೀ ಅವರ ಬದಲಿಗೆ

ವರ್ಗವಾಗಿ ಬಂದಿದ್ದ ಶ್ರೀ ವೀರರಾಘವಾಚಾರ್ ಅವರಿಂದ ಸಂಸ್ಕೃತ ಸಾಹಿತ್ಯ ಚರಿತ್ರೆಯನ್ನು ತಿಳಿದುಕೊಂಡರು. ಅಭಿಜ್ಞಾನ ಶಾಕುಂತಲಾ ನಾಟಕದ ಬಗೆಗೆ ಅವರು ನೀಡಿದ ಸುದೀರ್ಘ ಉಪನ್ಯಾಸ ರಾಜಶೇಖರ ಅವರನ್ನು ಮಂತ್ರಮುಗ್ಧರನ್ನಾಗಿಸಿತು. ಈ ಹಂತದಲ್ಲಿ ಅವರು ಶಾಲೆಯಲ್ಲಿ ನಡೆಯುತ್ತಿದ್ದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಆಸಕ್ತಿ ತೋರಿಸುತ್ತ ಅವಕಾಶಗಳನ್ನು ಪಡೆಯುತ್ತ ಬೆಳೆದರು. ಮನೆಯಲ್ಲಿನ ವಾತಾವರಣದಿಂದಾಗಿ ಜನಪದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದ ಬಾಲಕ ರಾಜಶೇಖರ ಮೇಷ್ಟ್ರುಗಳ ಪ್ರೀತಿಗೆ ಪಾತ್ರನಾದನು. ಊರಿನ ಮಗನಾಗಿ, ಜನಪದ ಗಾಯಕನಾಗಿ ಗುರುತಿಸಿಕೊಳ್ಳುತ್ತ ತನ್ನ ಹಾಡಿನ ಮೋಡಿಯನ್ನು ಉಂಟುಮಾಡುತ್ತಲೇ ನಡೆದನು.

ಪಿ.ಕೆ. ರಾಜಶೇಖರರ ಆಸಕ್ತಿ, ಜನಪದ ಗಾಯನ ಪ್ರತಿಭೆಯನ್ನು ಗುರುತಿಸಿದ ಆ ಎಲ್ಲ ಗುರುವರ್ಯರು ವಿಶೇಷವಾಗಿ ಇವರನ್ನು ಪ್ರೋತ್ಸಾಹಿಸಿ ವಿಫುಲ ಅವಕಾಶಗಳನ್ನು ಒದಗಿಸಿಕೊಡುತ್ತಿದ್ದರು. ಇದರಿಂದ ಸ್ಫೂರ್ತಿಪಡೆದ ರಾಜಶೇಖರ ಅವರು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲೂ ಸಮಾನ ಪ್ರತಿಭೆಯನ್ನು ತೋರುತ್ತ ಬೆಳೆದರು. ಮುಂದೆ ಇದು ರಾಜಶೇಖರ ಅವರಿಗೆ ಒಬ್ಬ ಶ್ರೇಷ್ಠ ಗಾಯಕನನ್ನಾಗಿ ರೂಪಿಸಿಕೊಳ್ಳಲು ಮೊದಲ ಮೈಲಿಗಲ್ಲುಗಳಾದವು.

ಮುಂದೆ ಪಿಯು ಶಿಕ್ಷಣವನ್ನು ಪಡೆಯಲು ರಾಜಶೇಖರರು ಬೆಂಗಳೂರಿಗೆ ಹೋದರು. ತಮ್ಮ ಭಾವ ಪ್ರೊ. ಕೆ.ಬಿ. ಶಿವರುದ್ರಪ್ಪ ಅವರ ಮನೆಯಲ್ಲಿದ್ದುಕೊಂಡು ಬಸವನಗುಡಿಯಲ್ಲಿರುವ ವಿಜಯಾ ಕಾಲೇಜಿನಲ್ಲಿ ಪಿಯುಸಿ ಶಿಕ್ಷಣವನ್ನು ಆರಂಭಿಸಿದರು. ಈ ಸಂದರ್ಭದಲ್ಲಿ ನಗರ ಜೀವನದ ಎಲ್ಲ ಅನುಭವಗಳು ಅವರಿಗೆ ದಕ್ಕಿದವು. ಎಷ್ಟೇ ಕಷ್ಟ ಬಂದರೂ ಅದರ ಬಾಧೆ ಎಳ್ಳಷ್ಟೂ ಆಗದಂತೆ ರಾಜಶೇಖರರನ್ನು ಅವರ ಭಾವನವರು ಅತ್ಯಂತ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಬೇಕೆಂದಾಗ ಪುಸ್ತಕಗಳನ್ನು ತಂದುಕೊಡುತ್ತಿದ್ದರು. ರಾಜಶೇಖರರೂ ಅಷ್ಟೇ, ಅತ್ಯಂತ ಶ್ರದ್ಧೆ–ನಿಷ್ಠೆಯಿಂದ ಅಭ್ಯಾಸ ಮಾಡುತ್ತಿದ್ದರು. ತಾವು ಕುಟುಂಬಸಮೇತ ಬೇರೆ ಊರಿಗೆ ಹೋಗುವ ಸಂದರ್ಭ ಬಂದಾಗ ಇವರ ಮೇಲೆಯೇ ಸಂಪೂರ್ಣ ನಂಬಿಕೆ ಇಟ್ಟು ಜವಾಬ್ದಾರಿಯನ್ನು ವಹಿಸಿ ಹೋಗುತ್ತಿದ್ದರು. ಒಂದರ್ಥದಲ್ಲಿ ರಾಜಶೇಖರ ಅವರನ್ನು ಮನೆಯ ಮಗನೆಂಬಂತೆ ನೋಡಿಕೊಳ್ಳುತ್ತಿದ್ದರು. ಈ ಎಲ್ಲ ಕಾರಣಗಳಿಂದಾಗಿ ರಾಜಶೇಖರರು ಒಳ್ಳೆಯ ಫಲಿತಾಂಶದೊಂದಿಗೆ ಪಿಯುಸಿ ಉತ್ತೀರ್ಣರಾದರು.

ಪದವಿ ಶಿಕ್ಷಣ

ಅನಂತರ ಪದವಿ ಶಿಕ್ಷಣ ಪಡೆಯುವ ಸಲುವಾಗಿ ಮೈಸೂರಿನ ಮಹಾರಾಜ ಕಾಲೇಜಿಗೆ ಪ್ರವೇಶ ಪಡೆದರು. ಈ ಸಂದರ್ಭದಲ್ಲಿ ಇಂಗ್ಲೀಷ್

ಪ್ರಭಾವ ತುಂಬ ಜೋರಾಗಿತ್ತು. ಹಳ್ಳಿಯಿಂದ ಹೋದ ರಾಜಶೇಖರ ಅವರಿಗೆ ಅದನ್ನು ಅರಗಿಸಿಕೊಳ್ಳಲು ಹೆಚ್ಚು ಕಾಲಾವಕಾಶ ಹಿಡಿಯಿತು. ಏನೋ ಆಸೆ-ಆಕಾಂಕ್ಷೆಗಳನ್ನು ಇರಿಸಿಕೊಂಡಿದ್ದ ಇವರಿಗೆ ಹೊಸ ಪರಿಸರ, ಹೊಸ ಗೆಳೆಯರು, ಹೊಸ ಪ್ರಾಧ್ಯಾಪಕರು ಎಲ್ಲವೂ ಹೊಸದೇ ಆಗಿತ್ತು. ಒಟ್ಟಾರೆ ಹೊಸ ಜಗತ್ತಿಗೆ ಕಾಲಿಟ್ಟ ಅನುಭವ ಅವರಿಗಾಯಿತು. ಕನ್ನಡ ಐಚ್ಛಿಕ ಮತ್ತು ಭಾಷಾ ವಿಷಯಗಳನ್ನು ಹೊರತುಪಡಿಸಿ ಎಲ್ಲ ತರಗತಿಗಳು ಇಂಗ್ಲಿಷ್‌ನಲ್ಲಿ ಮಾತ್ರ ಬೋಧಿಸಲ್ಪಡುತ್ತಿದ್ದವು. ರಾಜಶೇಖರರಿಗೆ ಸ್ವಲ್ಪಮಟ್ಟಿನ ಬೇಸರವೆನಿಸುತ್ತಿತ್ತು. ಐಚ್ಛಿಕ ವಿಷಯದಲ್ಲಿ ಓದುತ್ತಿದ್ದ ವಿದ್ಯಾರ್ಥಿ ಮಿತ್ರರ ಸ್ನೇಹ ಅವರಿಗೆ ಇಷ್ಟವೆನಿಸಿತು. ಮುಖ್ಯವಾಗಿ ಆ ಸಮಯದಲ್ಲಿ ಹಿರಿಯ ಮಿತ್ರರಾದ ರಾಮದಾಸ್ ಅದಾಗಲೇ ವೇದಿಕೆಗಳಲ್ಲಿ ಭಾಷಣ ಮಾಡುತ್ತಿದ್ದು, ಆಲನಹಳ್ಳಿ ಕೃಷ್ಣ ಅತ್ಯಂತ ಆಕರ್ಷಕವಾಗಿ ಕವಿತೆಗಳನ್ನು ವಾಚನ ಮಾಡುತ್ತಿದ್ದುದು, ಕಾಳೇಗೌಡ ನಾಗವಾರ ಅಪಾರ ಸಾಹಿತ್ಯಿಕ ಜ್ಞಾನವನ್ನು ಗಳಿಸಿಕೊಂಡಿದ್ದು ಅವರಲ್ಲಿ ಆಶ್ಚರ್ಯ ಉಂಟುಮಾಡಿತು. ತೀ.ನಂ. ಶಂಕರನಾರಾಯಣ, ಈಗಿನ ತರಳಬಾಳು ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ಸೇರಿದಂತೆ ಹರಳಹಳ್ಳಿ ರಾಜಶೇಖರ ಶೆಟ್ಟಿ, ಅಕ್ಕಿಹೆಬ್ಬಾಳಿನ ಶಂಕರೇಗೌಡ, ನಂಜನಗೂಡಿನ ಶಿವಕುಮಾರ್ ಮುಂತಾದವರ ಸ್ನೇಹ ರಾಜಶೇಖರರಿಗೆ ದೊರಕಿತು.

ಕಾಳೇಗೌಡ ನಾಗವಾರ ಮತ್ತು ಎಚ್.ಪಿ. ರಾಜಶೇಖರ ಶೆಟ್ಟಿ ಅವರು ಯಾವಾಗಲೂ ಇವರ ಜೊತೆಗೇ ಇರುತ್ತಿದ್ದುದು ರಾಜಶೇಖರರಲ್ಲಿ ಓದಿನ ಅಭಿರುಚಿ ಮೊಳೆಯಲು ಕಾರಣವಾಯಿತು. ಅ.ಬೊ. ಬಸವರಾಜು ಅವರಲ್ಲಿದ್ದ ಗ್ರಂಥರಾಶಿ ಮತ್ತು ಅವರ ಓದಿನ ರೀತಿಗೆ ಇವರು ಬೆರಗಾಗಿದ್ದರು. ಬಿ.ಕೆ. ನಾಗರಾಜು, ಕಡೇಮನುಗನಹಳ್ಳಿ ಬಾಲಕೃಷ್ಣ, ಕಲ್ಲಿಹುಚ್ಚಯ್ಯ, ಎಂ.ಸಿ. ವಸಂತಕುಮಾರ್ ಮುಂತಾದವರು ರಾಜಶೇಖರರ ಜೀವನದ ಕಷ್ಟ-ಸುಖಗಳಲ್ಲಿ ಭಾಗಿಯಾಗಿ ಅತ್ಯುತ್ತಮ ಸ್ನೇಹದ ಸಿಂಚನವನ್ನು ಹರಿಸಿದರು. ಕೆ.ಎಸ್. ಭಗವಾನ್, ಶಿವತೀರ್ಥನ್, ಜಯಚಂದ್ರ ಮುಂತಾದವರು ಹಿರಿಯ ವಿದ್ಯಾರ್ಥಿಗಳಾಗಿದ್ದು, ಇವರಿಗೆ ಮಾರ್ಗದರ್ಶಕರಂತೆ ಇದ್ದು, ವಿಶೇಷ ಪ್ರೇರಣೆಯನ್ನು ನೀಡುತ್ತಿದ್ದರು. ಈ ಸಂದರ್ಭದಲ್ಲಿ ಮಹಾರಾಜ ಕಾಲೇಜಿನಲ್ಲಿರುವ ಶ್ರೇಷ್ಠ ಅಧ್ಯಾಪಕರು ಇವರ ಪಾಲಿಗೆ ಮೇಷ್ಟ್ರಾಗಿ ದೊರಕಿದ್ದು ರಾಜಶೇಖರರ ಪೂರ್ವಜನ್ಮದ ಪುಣ್ಯದ ಫಲವೇ ಎಂದು ಹೇಳಬಹುದು. ಪ್ರೊ. ಸುಜನಾ, ಪ್ರೊ. ಜಿ. ವರದರಾಜರಾವ್, ಡಾ. ಎಚ್.ಜೆ. ಲಕ್ಕಪ್ಪಗೌಡ, ಪ್ರೊ. ಜಿ.ಎಸ್. ಶಿವರುದ್ರಪ್ಪ, ಡಾ. ಪ್ರಭುಶಂಕರ, ಡಾ. ಸಿ.ಪಿ. ಕೃಷ್ಣಕುಮಾರ, ಪ್ರೊ. ಎಚ್.ಎಂ. ಚೆನ್ನಯ್ಯ, ಪ್ರೊ. ಕರಿಮುದ್ದೀನ್, ಡಾ. ರಾಮೇಗೌಡ ಮುಂತಾದ ಪ್ರಾಧ್ಯಾಪಕ ಘನ ವಿದ್ವಾಂಸರು ಪಾಠ ಹೇಳುತ್ತಿದ್ದ ವೈಖರಿ ರಾಜಶೇಖರ ಅವರ ಮನಸ್ಸಿನ ಮೇಲೆ ತೀವ್ರ ಪರಿಣಾಮ ಬೀರಿತು.

ಸಾಹಿತ್ಯ, ವಿಮರ್ಶೆ ಇತ್ಯಾದಿ ವಿಷಯುಗಳ ಕಡೆಗೆ ಆಸಕ್ತಿ ಮೊಳೆಯಿತು. ಗಂಭೀರವಾದ ಓದು, ಅಧ್ಯಯನದಲ್ಲಿ ತೊಡಗಲು ಇವರೆಲ್ಲರ ಬೋಧನೆ ಕಾರಣವಾಯಿತು. 'ಸಜ್ಜನರ ಸಂಗ ಹಜ್ಜೇನು ಸವಿದಂತೆ' ಎಂಬ ಸರ್ವಜ್ಞನ ಮಾತಿನಂತೆ ರಾಜಶೇಖರ ಅವರಿಗೆ ಸೂಕ್ತ ಸ್ನೇಹಿತರ ಪಡೆ ದೊರಕಿತು. ಅವರೆಲ್ಲರ ಒಡನಾಟದಿಂದಾಗಿ ಜ್ಞಾನದ ಹಸಿವು ಇಂಗಲು ಅಲ್ಲಿದ್ದಂಥ ಅಧ್ಯಾಪಕರ ಅಧ್ಯಾಪನ, ಸಹಪಾಠಿಗಳಲ್ಲಿನ ಜ್ಞಾನದ ಹಸಿವು, ಅಧ್ಯಯನಕ್ಕೆ ಪೂರಕವಾದ ಕಾಲೇಜಿನ ವಾತಾವರಣ ಸಹಜವಾಗಿಯೇ ಕಾರಣವಾದವು. ಜೊತೆಗೆ ಅವರು ಜ್ಞಾನಾರ್ಜನೆಯಲ್ಲಿ ಗಂಭೀರವಾಗಿ ತೊಡಗುವಂತೆ ಮಾಡಿದವು. ಒಬ್ಬ ತಪಸ್ವಿಯಂತೆ ಓದು-ಬರಹ ಮಾಡಿದ ರಾಜಶೇಖರ ಅವರು ಉನ್ನತ ಶ್ರೇಣಿಯಲ್ಲಿ ಬಿಎ ಪದವಿ ಪಡೆದುಕೊಂಡರು. ಅದಾಗಲೇ ಕನ್ನಡ ಸಾಹಿತ್ಯದ ಬಗೆಗೆ ಅಪಾರ ಆಸಕ್ತಿ ಹೊಂದಿದ್ದ ರಾಜಶೇಖರರಿಗೆ ಓದು ಎಂದರೆ ಪಂಚಪ್ರಾಣವಾಗಿತ್ತು. ಪಂಪನ 'ವಿಕ್ರಮಾರ್ಜುನ ವಿಜಯ', ಕುವೆಂಪು ಅವರ 'ಶ್ರೀರಾಮಾಯಣ ಮಹಾದರ್ಶನಂ', 'ಪಕ್ಷಿಕಾಶಿ', ಬೇಂದ್ರೆಯವರ 'ನಾದಲೀಲೆ', ಕೆ.ಎಸ್. ನರಸಿಂಹಸ್ವಾಮಿಯವರ 'ಮೈಸೂರು ಮಲ್ಲಿಗೆ', ತರಾಸು ಕಾದಂಬರಿಗಳು, ಕೆ.ವಿ. ಅಯ್ಯರ್ ಅವರ 'ರೂಪದರ್ಶಿ' ಹಾಗೂ 'ಶಾಂತಲಾ' ಕಾದಂಬರಿಗಳು, ರಾಮಕೃಷ್ಣ ಪರಮಹಂಸರ 'ವಚನವೇದ', ಡಿವಿಜಿಯವರ 'ಮಂಕುತಿಮ್ಮನ ಕಗ್ಗ' ಕೃತಿಗಳನ್ನು ಓದುತ್ತಿದ್ದರು.

ಉನ್ನತ ಶಿಕ್ಷಣ

ಬಿ.ಎ. ಪದವಿ ಪಡೆದ ನಂತರ ಹಾಸನದ ಸಂತಜೋಸೆಫ್‌ರ ಪ್ರೌಢಶಾಲೆಯಲ್ಲಿ ಕೆಲ ಕಾಲ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಇದು ಅವರ ಜೀವನದ ಮಹತ್ವದ ಘಟ್ಟ ಎಂದರೂ ತಪ್ಪಿಲ್ಲ. ಅವರೊಳಗಿದ್ದ ಜನಪದ ಗಾಯಕ, ಸೃಜನಶೀಲ ಅಧ್ಯಾಪಕ, ಸಂವೇದನಾಶೀಲ ಪ್ರೇರಕ ಇತ್ಯಾದಿ ವ್ಯಕ್ತಿತ್ವದ ಪಿಕೆಆರ್ ಪೂರ್ಣಪ್ರಮಾಣದಲ್ಲಿ ಹೊರಜಗತ್ತಿಗೆ ಕಾಣಿಸಿಕೊಂಡುದು ಈ ಸಂದರ್ಭದಲ್ಲಿಯೇ. ಮಕ್ಕಳಿಗೆ ಪಾಠದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಅಭಿರುಚಿ ಬೆಳಸಿ ಹಾಡು, ಕುಣಿತ, ನಾಟಕ ಇತ್ಯಾದಿ ಸ್ಪರ್ಧೆ ಮತ್ತು ಕಾರ್ಯಕ್ರಮಗಳನ್ನು ಏರ್ಪಡಿಸಿ ಹೊಸ ಸಂಚಲನವನ್ನೇ ಉಂಟುಮಾಡಿದರು. ಶಾಲಾ ಮಕ್ಕಳನ್ನು ಅತ್ಯಂತ ಅಂತಃಕರಣದಿಂದ ಕಾಣುವ ರಾಜಶೇಖರ ಅವರು, ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಶಿಕ್ಷಕರಾಗಿದ್ದರು. ಶಾಲೆಯಲ್ಲಿ ಯಾವುದೇ ಕಾರ್ಯಕ್ರಮಗಳು ನಡೆದರೂ ಅವುಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಹೊಣೆಗಾರಿಕೆ ಇವರದಾಗಿತ್ತು. ವಿದ್ಯಾರ್ಥಿಗಳನ್ನು ಸಾಂಸ್ಕೃತಿಕವಾಗಿ ಬೆಳೆಸುವುದರ ಜೊತೆಗೆ ತಾವೂ ಬೆಳೆಯುತ್ತಿರುವುದನ್ನು ಕಂಡು ಶಾಲಾ ಆಡಳಿತ ಮಂಡಳಿ

ವಿಶೇಷವಾಗಿ ಇವರನ್ನು ಗೌರವದಿಂದ ಕಾಣುತ್ತಿತ್ತು. ಈ ಕಾರಣಕ್ಕಾಗಿ ಹೂ ತನ್ನಲ್ಲಿನ ಕಂಪನ್ನು ತನ್ನ ಸುತ್ತಣ ವಾತಾವರಣದ ತುಂಬ ಹರಡಿ, ತನ್ನ ಬದುಕನ್ನು ಸಾರ್ಥಕಪಡಿಸಿಕೊಳ್ಳುವಂತೆ ರಾಜಶೇಖರ ಅವರು ತಮ್ಮ ಜೀವನವನ್ನು ನಿಸ್ವಾರ್ಥ ಅಧ್ಯಾಪನದಿಂದ ಸಾರ್ಥಕಪಡಿಸಿಕೊಳ್ಳುತ್ತಿದ್ದರು.

ತದನಂತರ ರಾಜಶೇಖರರ ಭಾವನವರಾದ ಪ್ರೊ. ಶಿವರುದ್ರಪ್ಪನವರು ಪ್ರೊ. ದೇಜಗೌ ಅವರನ್ನು ಕಂಡು ಪಿಕೆಆರ್ ಅವರಿಗೆ ಸೀಟು ಕೊಡಿಸಲು ಪ್ರಯತ್ನಿಸಿದರು. ಫಲವಾಗಿ ಮೈಸೂರಿನ ಕನ್ನಡ ಎಂ.ಎ. ಸ್ನಾತಕೋತ್ತರ ಶಿಕ್ಷಣಕ್ಕೆ ಅವರು ಪ್ರವೇಶ ಪಡೆದರು. ಮುಂದೆ ಮೈಸೂರಿನಲ್ಲೇ ವಾಸ್ತವ್ಯ ಇರಲು ತೊಂದರೆ ಆದಾಗ ವಿದ್ಯಾರ್ಥಿ ನಿಲಯದಲ್ಲಿ ಅವರಿಗೆ ಅವಕಾಶವೂ ದೊರಕಿತು.

ಪ್ರೊ. ಎಂ.ಎಸ್. ವಿಶ್ವನಾಥಯ್ಯ, ಶ್ರೀ ಎ. ರಾಮಣ್ಣ, ಶ್ರೀ ಪಿ.ಎಂ. ಚಿಕ್ಕಬೋರಯ್ಯ ಅವರುಗಳ ಒತ್ತಾಸೆಯಿಂದ ವಿದ್ಯಾರ್ಥಿನಿಲಯದಲ್ಲಿ ಒಂದು ಬಗೆಯ ಸಾಂಸ್ಕೃತಿಕ ವಾತಾವರಣ ಸೃಷ್ಟಿಯಾಗಲು ಸಾಧ್ಯವಾಯಿತು. ಈ ಮಹತ್ವದ ಕಾರ್ಯದಲ್ಲಿ ರಾಜಶೇಖರರು ಕೂಡಿಕೊಂಡರು. ಮುಂದೆ ಅಪಾರ ಪ್ರಮಾಣದ ಗ್ರಂಥಗಳನ್ನು ಸಂಗ್ರಹಿಸಿ 'ಭಕ್ತನಾಥ ಸ್ವಾಮೀಜಿ' ಹೆಸರಿನಲ್ಲಿ ಒಂದು ಗ್ರಂಥಭಂಡಾರವನ್ನು ಪ್ರಾರಂಭಿಸಿದರು. ಇವರ ಗೆಳೆಯ ಎ.ಟಿ. ನಾಗರಾಜು ಅವರು ಕನ್ನಡ ಚಿತ್ರಗೀತೆ, ಜನಪದ ಗೀತೆ, ಶಾಸ್ತ್ರೀಯ ಸಂಗೀತ, ವೃಂದಗಾನ ಸ್ಪರ್ಧೆಗಳನ್ನು ಏರ್ಪಡಿಸಿ ಅದರಲ್ಲಿ ವಿಜೇತರಾದವರಿಗೆ ಶ್ರೀ ಚಂದ್ರಶೇಖರ ಸ್ವಾಮೀಜಿ ಅವರ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪಿಸಿ ತನ್ನ ತಂದೆಯವರ ಹೆಸರಿನಲ್ಲಿ ಶೀಲ್ಡ್ ಕೊಡುವುದಾಗಿಯೂ ಹೇಳಿದರು. ಈ ಕಾರ್ಯಕ್ರಮಗಳಲ್ಲಿ ರಾಜಶೇಖರರಿಗೂ ಬಾಗವಹಿಸುವ ಅವಕಾಶಗಳು ಸಿಗುತ್ತಿದ್ದವು. ಜನಪದ ಮೂಲ ಮಟ್ಟುಗಳನ್ನು ಹಾಡುವ ಮೂಲಕ ಗಾಯಕನೆಂದು ಗುರುತಿಸಿಕೊಳ್ಳಲು ಅವರಿಗೆ ಈ ಕಾರ್ಯಕ್ರಮ ಸಹಾಯಕವಾಯಿತು. ಸ್ನಾತಕೋತ್ತರ ವಿದ್ಯಾರ್ಥಿನಿಲಯದಲ್ಲಿ ಸಹೃದಯ ಮಿತ್ರರೊಂದಿಗೆ ಬೆರೆಯುತ್ತ ಪಿಕೆಆರ್ ಜಾನಪದದ ಝೇಂಕಾರವನ್ನೇ ಮೊಳಗಿಸಿದರು. ಆ ಸಂದರ್ಭದಲ್ಲಿ ಒಮ್ಮೆ ಪಡುವಾರಹಳ್ಳಿಯ ಬೀದಿಯಲ್ಲೊಬ್ಬ ದೇವರಗುಡ್ಡ ಕಂಸಾಳೆ ನುಡಿಸುತ್ತ ಕೋರಣ್ಯ ಸಾರುತ್ತಿದ್ದ ದೃಶ್ಯವನ್ನು ಕಂಡರು. ಇದರಿಂದ ವಿಶೇಷ ಕುತೂಹಲಿಯಾದ ಪಿಕೆಆರ್ ಆ ಕಲಾವಿದನನ್ನು ವಿದ್ಯಾರ್ಥಿನಿಲಯಕ್ಕೆ ಕರೆಯಿಸಿ, ಅವನಿಂದ ಹಲವು ಮೂಲ ಮಟ್ಟುಗಳನ್ನು ಹಾಡಿಸಿದರು. ಅವುಗಳಲ್ಲಿ 'ಬೆಟ್ಟದ ಚಾಮುಂಡಿ' ಕಾವ್ಯದ ಉತ್ತನಹಳ್ಳಿ ಮಾರಮ್ಮನ ಪ್ರಸಂಗ ಹೆಚ್ಚು ಮೆಚ್ಚುಗೆಯಾಗಿ ಪದೇ ಪದೇ ಹಾಡಿಸಿ ಅದನ್ನು ಬರೆದುಕೊಂಡರು. ಅನಂತರದ ದಿನಗಳಲ್ಲಿ ಮೂಲ ಜನಪದ ಗಾಯಕರನ್ನು ವಿದ್ಯಾರ್ಥಿನಿಲಯಕ್ಕೇ ಕರೆಯಿಸಿ ಹಾಡಿಸಿದ್ದುಂಟು. ಕಲಾವಿದರು ಹಾಡುವ ಹಾಡುಗಳನ್ನು ಗಮನವಿಟ್ಟು

ಕೇಳಿಸಿಕೊಳ್ಳುವುದರೊಂದಿಗೆ ರಾಜಶೇಖರ ಅವುಗಳನ್ನು ಯಥಾವತ್ತಾಗಿ ಹಾಡುವ ಮತ್ತು ಸಂಗ್ರಹಿಸುವ ಸವಾಲನ್ನು ಎದುರಿಸುವುದನ್ನು ನೋಡಿ ಸಹಪಾಠಿಗಳು ಎಷ್ಟೊ ಬಾರಿ ಬೆಕ್ಕಸ ಬೆರಗಾಗಿದ್ದಾರೆ. ಜನಪದ ಗಾಯಕರು ಹಾಡುತ್ತಿದ್ದ ಮೂಲ ಮಟ್ಟುಗಳನ್ನು ಬಿಟ್ಟುಬಿಡದೆ ಕಲಿತುಕೊಂಡರು ಮತ್ತು ಅನುಕರಿಸಿದರು. ಅನಂತರದ ದಿನಗಳಲ್ಲಿ ಅವರು ಮೂಲ ಮಟ್ಟುಗಳಲ್ಲಿಯೇ ಹಾಡಲು ಆರಂಭಿಸಿದರು. ಹೋದಕಡೆಗಳಲ್ಲೆಲ್ಲ ರಾಜಶೇಖರರಿಗೆ ಮೆಚ್ಚುಗೆ ಸಿಕ್ಕಿತು. ಬಹುಮಾನಗಳೂ ಬಂದವು. ವಿದ್ಯಾರ್ಥಿನಿಲಯಕ್ಕೆ ಬರುತ್ತಿದ್ದ ಮೂಲ ಗಾಯಕರನ್ನು ಪ್ರೀತಿ, ಆದರದಿಂದ ಕಾಣುತ್ತಿದ್ದ ಪಿಕೆಆರ್ ಅವರಿಗೆ ಎಲ್ಲ ರೀತಿಯ ಸಹಕಾರವನ್ನು ಅವರ ಸಹಪಾಠಿಗಳು ನೀಡಿದರು. ಇದರಿಂದಾಗಿ ಪಿಕೆಆರ್ ಸಹವಾಸಿಗಳಲ್ಲಿ ಜನಪದ ಹಾಡು, ಸಂಗೀತ ಇತ್ಯಾದಿ ಅಭಿರುಚಿಯೂ ಬೆಳೆಯಿತು. ಅಷ್ಟೇ ಅಲ್ಲ, ಬಿಡುವಿನ ವೇಳೆಯಲ್ಲಿ ಪಿಕೆಆರ್ ಅವರನ್ನು ಹಾಡುವಂತೆ ದುಂಬಾಲು ಬೀಳುತ್ತಿದ್ದರು. ಸ್ನೇಹಿತರ ಪ್ರೀತಿಯ ಒತ್ತಾಯಕ್ಕೆ ಮಣಿದು ಪಿ.ಕೆ. ರಾಜಶೇಖರ ಜನಪದ ಗೀತೆಗಳನ್ನು ಅದ್ಭುತವಾಗಿ ಹಾಡುತ್ತಿದ್ದರು. ಇವರ ಹಾಡು ಕೇಳಿದವರು ತಮ್ಮನ್ನೇ ತಾವು ಮರೆತುಬಿಡುತ್ತಿದ್ದರು. ಅಮೋಘವಾಗಿ ಹಾಡುತ್ತಿದ್ದ ಗೆಳೆಯ ಪಿಕೆಆರ್ ಅವರನ್ನು ಎಲ್ಲ ಗೆಳೆಯರು ಪ್ರೋತ್ಸಾಹಿಸಿ, ಬೆಂಬಲಿಸುತ್ತಿದ್ದರು.

ಸ್ನೇಹಿತರಿಂದ ದೊರೆತ ಪ್ರೋತ್ಸಾಹದಿಂದ ಇವರಿಗೆ ಹಾಡಲು ಹೆಚ್ಚು ಹುರುಪು, ಹುಮ್ಮಸ್ಸು ಬರುತ್ತಿತ್ತು. ಪರಿಣಾಮವಾಗಿ ಮಂಡ್ಯ, ಮೈಸೂರು, ಚಾಮರಾಜನಗರ, ತುಮಕೂರು, ಹಾಸನ, ಕೊಡಗು, ಚಿಕ್ಕಮಂಗಳೂರು ಮುಂತಾದ ಜಿಲ್ಲೆಗಳಲ್ಲಿ ಹಾಡುವ ಅವಕಾಶಗಳು ಇವರಿಗೆ ಒದಗಿಬರಲು ಶುರುವಾದವು. ಜೊತೆಗಿದ್ದ ಗೆಳೆಯರು, ಸ್ನೇಹಿತರುಗಳು ತಮ್ಮತಮ್ಮ ಊರುಗಳಿಗೆ ಇವರನ್ನು ಹಾಡಲು ವಿಶೇಷವಾಗಿ ಆಹ್ವಾನಿಸುತ್ತಿದ್ದರು. ಮುಂದೆ ಅವರ ಗೆಳೆಯರೆಲ್ಲ ತಾವು ಸೇವೆ ಸಲ್ಲಿಸುತ್ತಿದ್ದ ಶಾಲಾ-ಕಾಲೇಜುಗಳಿಗೆ ಇವರನ್ನು ಹಾಡಲು ಪ್ರೀತಿಯಿಂದ ಒತ್ತಾಯಮಾಡಿ ಕರೆದುಕೊಂಡು ಹೋಗುತ್ತಿದ್ದರು. ಆ ಪ್ರೀತಿಗೆ ಕಟ್ಟುಬಿದ್ದು ಕರೆದಲ್ಲೆಲ್ಲ ಹೋಗಿ ಮನದುಂಬಿ ಹಾಡಿ ಬರುತ್ತಿದ್ದರು. ಪಿಕೆಆರ್ ಮೂಲಮಟ್ಟುಗಳೊಂದಿಗೆ ಹಾಡುತ್ತಿದ್ದುದು ಕೇಳುಗರಿಗೆ ಹೆಚ್ಚು ಆಕರ್ಷಣೀಯವೆನಿಸಿತು. ಹಾಡುಗಾರಿಕೆಯನ್ನು ಒಂದು ವ್ರತವೆಂದು ಭಾವಿಸಿ ಹಾಡುತ್ತಿದ್ದುದು ಪಿಕೆಆರ್ ಅವರ ಅನನ್ಯ ಗುಣವಾಗಿತ್ತು. ಇದರಿಂದಾಗಿ ಶ್ರೇಷ್ಠ ಜನಪದ ಗಾಯಕ ಎಂದು ಗುರುತಿಸಿಕೊಳ್ಳಲು ಅವರಿಗೆ ಸಾಧ್ಯವಾಯಿತು.

ಪಿಕೆಆರ್ ಅವರು 'ದಕ್ಷಿಣ ಕರ್ನಾಟಕದ ಜನಪದ ಪುರಾಣಗಳು' ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಯುಜಿಸಿ ಸಂಶೋಧನಾ ವಿದ್ಯಾರ್ಥಿಯಾಗಿರುವಾಗ ಅವರು, ವಿದ್ಯಾರ್ಥಿ ನಿಲಯದಲ್ಲಿರುವಾಗಲೇ ಪ್ರೊ.

ಜೀಶಂಪ ಅವರ ಮಾತಿನ ಪ್ರೇರಣೆಯಿಂದ ಕ್ಷೇತ್ರಕಾರ್ಯದಲ್ಲಿ ತೊಡಗಿಕೊಳ್ಳುವ ಅವಕಾಶ ರಾಜಶೇಖರರಿಗೆ ದೊರಕಿತು. ೧೯೭೧ರಲ್ಲಿ ಅವರು ಸಂಶೋಧನಾ ವಿದ್ಯಾರ್ಥಿಯಾಗಿದ್ದಾಗ ಬೇರೆ ಬೇರೆ ಊರುಗಳಿಗೆ ಹೋಗಿ ಕ್ಷೇತ್ರಕಾರ್ಯ ಮಾಡುವ ವೇಳೆಯಲ್ಲಿ ಕಲಾವಿದರು/ಗಾಯಕರು ಹಾಡುತ್ತಿದ್ದ ಸಾಹಿತ್ಯವನ್ನು ಸಂಗ್ರಹಿಸುತ್ತಿದ್ದರು. ಕ್ಯಾಮೆರಾ, ಟೇಪ್‌ರೆಕಾರ್ಡರ್ ಇಲ್ಲದ ಕಾಲದಲ್ಲಿ ಹಾಡುಗಳನ್ನು ಸಂಗ್ರಹಿಸಿ ದಾಖಲಿಸುವುದು ಸವಾಲಿನ ಕೆಲಸವೇ ಆಗಿತ್ತು. ಆದರೂ ಹದಿನೈದು-ಇಪ್ಪತ್ತು ದಿನಗಳ ಕಾಲ ನಿರಂತರವಾಗಿ ವಕ್ತೃಗಳು ಹೇಳುತ್ತಿದ್ದ ಮಾಹಿತಿಯನ್ನು ಬರೆದು ಕೈ ಬಾವು ಬಂದು ವೈದ್ಯರ ಹತ್ತಿರ ಚಿಕಿತ್ಸೆಯನ್ನೂ ಪಡೆದ ಅನುಭವವೂ ಅವರಿಗಾಗಿದೆ.

ಅವರೇ ಹೇಳುವಂತೆ 'ಪಿಜಿ ಹಾಸ್ಟೆಲ್‌ನಲ್ಲಿದ್ದಾಗ, ಏನಾದರೂ ಬರೆಯೊದು-ಓದೋದು ಮಾಡಬೇಕೆನಿಸಿದಾಗ ಕನ್ನಡ ಅಧ್ಯಯನ ಸಂಸ್ಥೆಗೆ ಹೋಗಿಬಿಡುತ್ತಿದ್ದೆ; ಒಂದು ದಿನ ರಾತ್ರಿ ಹನ್ನೆರಡು ಗಂಟೆ ಆಗಿತ್ತು. ಒಂದು ವಿಷಯಕ್ಕೆ ಸಂಬಂಧಿಸಿದಂತೆ ನನ್ನಪಾಡಿಗೆ ನಾನು ಬರೆಯುತ್ತ ಕೂತಿದ್ದೆ, ಆ ರಾತ್ರಿ ಸಮಯದಲ್ಲಿ ಯಾರೊ ಬಾಗಿಲು ಬಡಿದ ಶಬ್ದ ಆದಂತಾಯಿತು. ಆ ಸಮಯದಲ್ಲಿ ದೇಜಗೌ ಕುಲಪತಿಯಾಗಿದ್ದರು. ಅವರೇ ನೇರವಾಗಿ ಒಳಗೆ ಬಂದ್ರು, ನಾನು ಬರೀತಾ ಕುಳಿತಿರೋದನ್ನು ನೋಡಿ 'ಯಾಕ್ರೀ ಇಲ್ಲಿದಿರಾ?' ಅಂತ ಕೇಳಿದ್ರು, ಆಗ ನಾನು 'ಇಲ್ಲ ಸರ್ ನನಗೆ ಹಾಸ್ಟೆಲ್‌ನಲ್ಲಿ ಕುಳಿತು ಅಭ್ಯಾಸ ಮಾಡೋದಾಗಲಿ, ಬರೆಯೋದಾಗಲಿ ಮಾಡೋದಕ್ಕೆ ಒಂದೊಂದ್ಸಲ ಆಗಲ್ಲ. ಆದ್ದರಿಂದ ಊಟ ಮುಗಿಸಿಕೊಂಡು ಬಂದು ೯ ಗಂಟೆಯಿಂದ ೧೨ ಇಲ್ಲವೆ ೧ ಗಂಟೆಯವರೆಗೆ ಬರೀತಾ ಕುಳಿತಿರ್ತೀನಿ' ಎಂದೆ. 'ನಿಮ್ಮಂಥವರೆಲ್ಲಾ ಇದ್ದೀರಿಲ್ಲ, ಕನ್ನಡ ಅಧ್ಯಯನ ಸಂಸ್ಥೆ ಕಟ್ಟಿದ್ದಕ್ಕೂ ಸಾರ್ಥಕವಾಯಿತು' ಎಂದು ದೇಜಗೌ ಅವರು ಹೇಳಿದ್ದನ್ನು ನೆನಪಿಸಿಕೊಂಡರು. ಈ ಘಟನೆಗಳಿಂದ ರಾಜಶೇಖರ ಅತ್ಯಂತ ಶ್ರಮವಹಿಸಿ, ಶ್ರದ್ಧೆಯಿಂದ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿದ್ದುದು ಗೊತ್ತಾಗುತ್ತದೆ. ಸತತ ಹತ್ತು ವರ್ಷಗಳ ಕಾಲ ಸಂಗ್ರಹಿಸಿದ ಸಾಹಿತ್ಯವೇ ಅವರ ಮೂಲ ಬಂಡವಾಳ. ಅದುವೇ ಅವರನ್ನು ಎತ್ತರಕ್ಕೇರಿಸಿದ ಪರ್ವತರೂಪಿ ಮಹತ್ಕಾರ್ಯ ಎಂಬುದು ಅವರನ್ನು ಬಲ್ಲ ಯಾರಿಗಾದರೂ ತಿಳಿದಿರುವ ಸಂಗತಿ.

ಮರೆಯಲಾರದ ಅನುಭವ

ಸಂಶೋಧನಾ ವಿದ್ಯಾರ್ಥಿಯಾಗಿದ್ದಾಗಲೇ ರಾಜಶೇಖರರ ಜೀವನದಲ್ಲಿ ಎಂದೂ ಮರೆಯಲಾರದ ಒಂದು ಘಟನೆ ನಡೆಯಿತು. ಕನ್ನಡದಲ್ಲಿ ಜನಪದ ಮಹಾಕಾವ್ಯದ ಪರಿಕಲ್ಪನೆಯಿಲ್ಲದ ಕಾಲವದು; ಆ ಸಂದರ್ಭದಲ್ಲಿ ಇವರು ಮಾಡಿದ

ಮಹತ್ವದ ಕಾರ್ಯವೆಂದರೆ, ಮಲೆಯ ಮಾದೇಶ್ವರ (೧೯೭೩) ಕೃತಿಯನ್ನು ಪ್ರಕಟಿಸಿದ್ದು. ಅದು ಸವಾಲಿನ ಮತ್ತು ಸಾಹಸದ ಕಾರ್ಯವೇ ಆಗಿದೆ. ಈ ಕಾರ್ಯವು ಅವರಿಗೆ ವಿಶೇಷ ಕೀರ್ತಿಯನ್ನು ತಂದುಕೊಟ್ಟಿತಷ್ಟೆ ಅಲ್ಲ; ಮರೆಯಲಾರದ ಅನುಭವವನ್ನೂ ನೀಡಿದೆ.

ಮಲೆಯ ಮಾದೇಶ್ವರ ಬೃಹತ್‌ಗಾತ್ರದ ಕೃತಿ ಪ್ರಕಟಿಸಲು ಹಣದ ಕೊರತೆ ಎದುರಾದುದು ಮತ್ತು ಮಲೆಯ ಮಾದೇಶ್ವರ ಮಾದಿಗ ಜನಾಂಗಕ್ಕೆ ಸೇರಿದವನು ಎಂದು ಸಂಶೋಧನೆಯ ಮೂಲಕ ಹೇಳಿದ್ದು ರಾಜಶೇಖರರಿಗೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದವು. ಈ ಸಂಶೋಧನಾತ್ಮಕ ಹೇಳಿಕೆಯಿಂದಾಗಿ ಮಾದೇಶ್ವರ ಲಿಂಗಾಯತರಿಗೆ ಸೇರಿದವನು ಎಂದುಕೊಂಡಿದ್ದ ಜನರ ಕಣ್ಣು ಕೆಂಪಾದವು. ಆಗ ಕೆಲವರು ಇವರ ವಿರುದ್ಧ ಸಮರವನ್ನೇ ಸಾರಿದರು. ಕೆಲವರು ಲಾಯರ್ ನೋಟಿಸ್ ಕಳುಹಿಸಿದರು. ಇನ್ನು ಕೆಲವರು ಕೃತಿಯನ್ನು ಬ್ಯಾನ್ ಮಾಡುವಂತೆ ಒತ್ತಾಯ ಹೇರಿದರು. ಒಟ್ಟಾರೆ ಇವರನ್ನು ತುಳಿಯುವ ಪ್ರಯತ್ನಗಳು ನಡೆದವು. ಆ ಸಂದರ್ಭದಲ್ಲಿ ಪ್ರೊ. ಹಾಮಾನಾ, ಶ್ರೀ ವಿ.ಎಚ್. ಗೌಡ ಮತ್ತು ಶ್ರೀ ರಾಗೌ ಅವರು ಪಿಕೆಆರ್ ಅವರ ಬೆನ್ನಿಗೆ ನಿಂತು ರಕ್ಷಣೆ ನೀಡಿದರಲ್ಲದೆ, ಕೃತಿ ಪ್ರಕಟಣೆಗೆ ನೈತಿಕ ಸ್ಥೈರ್ಯ ತುಂಬಿದರು. ಹೇಗೊ ಸಾಲ–ಸೋಲ ಮಾಡಿ, ಆರ್ಥಿಕ ತೊಂದರೆಯನ್ನು ಅನುಭವಿಸಿದರೂ, ಪಟ್ಟುಬಿಡದೆ ಛಲದಂಕಮಲ್ಲನಂತೆ ಸಮಸ್ಯೆಯನ್ನು ಎದುರಿಸಿ ಕೃತಿಯನ್ನು ಪ್ರಕಟಿಸಿದರು. ಆದರೆ ಇವರಿಗೆ ಇಂಥದೊಂದು ಕಾವ್ಯವನ್ನು ಪ್ರಕಟಿಸಲು ಪ್ರೇರಣೆ ದೊರೆತಿದುದು ಕನ್ನಡ ಎಂ.ಎ. ತರಗತಿಯಲ್ಲಿ ಓದುತ್ತಿದ್ದಾಗ; ಪ್ರೊ. ಸಿಪಿಕೆ ಅವರು "ಮಹಾಕಾವ್ಯದ ಲಕ್ಷಣಗಳು ಕುರಿತು ಪಾಠ ಮಾಡುತ್ತಿದ್ದರು. 'ಕಲೆವಲ' ಮಹಾಕಾವ್ಯದ ಬಗೆಗೆ ಪ್ರಸ್ತಾಪಿಸಿ, ಈ ಬಗೆಯ ಕಾವ್ಯಗಳು ಕನ್ನಡದಲ್ಲಿ ಇರಬಹುದು. ಅವನ್ನು ಬೆಳಕಿಗೆ ತರುವ ಪುಣ್ಯದ ಕೆಲಸವನ್ನು ಯಾರು ಮಾಡುತ್ತಾರೊ? ಕಾದು ನೋಡಬೇಕು" ಎಂದು ಹೇಳಿದ್ದು ರಾಜಶೇಖರರ ಮನಸ್ಸಿನಲ್ಲಿ ಸದಾ ಕೊರೆಯುತ್ತಿತ್ತು. ಈ ಬಗ್ಗೆ ಹೆಚ್ಚು ಕ್ರಿಯಾಶೀಲವಾಗಿ ತೊಡಗಿಸಿಕೊಂಡುದರ ಫಲವಾಗಿ 'ಮಲೆಯ ಮಾದೇಶ್ವರ' ಕಾವ್ಯ ಬೆಳಕು ಕಂಡಿತು. ಇದು ಕನ್ನಡ ಜಾನಪದಕ್ಕೆ ಅಷ್ಟೆ ಅಲ್ಲ, ಇಡೀ ಜಗತ್ತಿನ ಜಾನಪದಕ್ಕೆ ನೀಡಿದ ಅತಿವಿಶಿಷ್ಟ ಕೊಡುಗೆಯಾದದ್ದು ರಾಜಶೇಖರರ ಶ್ರಮದ ಸಾರ್ಥಕತೆಯ ಸಂಕೇತವಾಗಿದೆ.

ಈ ಸಮಾಜದಲ್ಲಿ ಎರಡು ತೆರನಾದ ವ್ಯಕ್ತಿಗಳು ಕಾಣಸಿಗುತ್ತಾರೆ. ತಾವು ವಾಸಿಸುವ ಸುತ್ತಮುತ್ತಲ ಸಮಾಜ ಹೇಗೇ ಇದ್ದರೂ ಅದರಿಂದ ಯಾವುದೇ ಪ್ರಭಾವಕ್ಕೆ ಒಳಗಾಗದಂತೆ ಬದುಕುವವರು ಒಂದೆಡೆಯಾದರೆ, ಇನ್ನೊಬ್ಬರು ತಮ್ಮ ಪ್ರತಿಭೆ, ಸಹೃದಯತೆ, ಹೊಂದಾಣಿಕೆ, ಸ್ನೇಹಶೀಲ ಗುಣಗಳಿಂದ ಸುತ್ತಣ ಸಮಾಜವನ್ನು

ಸ್ವತಃ ಪ್ರಭಾವಿಸಿ, ತಾವೂ ಸಮಾಜಕ್ಕೆ ಸಲ್ಲುವಂತವರು. ಈ ಎರಡನೇ ನಮೂನೆಯ ವ್ಯಕ್ತಿಗಳಿಂದ ಮಾತ್ರ ಸಮಾಜಕ್ಕೆ ಹೆಚ್ಚು ಲಾಭ. ಈ ಬಗೆಯ ಲಾಭ ಉಂಟುಮಾಡುವ ಗುಂಪಿನಲ್ಲಿ ಸೇರಿಕೊಳ್ಳುವ ಹೆಸರು ಪಿ.ಕೆ. ರಾಜಶೇಖರ ಅವರದು. ಕಲಿಯುವುದರ ಜೊತೆಗೆ ಕಲಿಸುವವರನ್ನು ತುಂಬ ಗೌರವಿಸುವ, ಆದರಿಸುವ, ಪೂಜಿಸುವ ವ್ಯಕ್ತಿತ್ವವನ್ನು ಹೊಂದಿದ ರಾಜಶೇಖರ ಎಲ್ಲರ ಪ್ರೀತಿಗೂ ಪಾತ್ರರು. ಅಧ್ಯಾಪಕ ಪಡೆಗಂತೂ ಅತ್ಯಂತ ಪ್ರೀತಿಯ ಶಿಷ್ಯರಾಗಿದ್ದರು. ಅಷ್ಟೇ ತಮ್ಮ ಹಾಸ್ಯಮಿಶ್ರಿತ ಮಾತುಗಳಿಂದ ಅಪಾರ ಸ್ನೇಹಿತರನ್ನು ಹೊಂದಿದ ಅವರು, ನಿಷ್ಪೃಹಿ ಸ್ನೇಹಸಂಪಾದಕ ಎನಿಸಿಕೊಂಡರು.

ಕಾಯಕದ ಕಾರಣಿಕ

ಉನ್ನತ ಶಿಕ್ಷಣ ಪೂರೈಸಿದ ನಂತರ ೧೯೭೪ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಆಯ್ಕೆಗೊಂಡು, ಸೇವೆಯನ್ನು ಆರಂಭಿಸಿದರು. ಅದಾಗಲೇ ಅಲ್ಲಿ ಕನ್ನಡದ ಮೇಧಾವಿ ಪಂಡಿತ ವಿದ್ವಾಂಸರೆನಿಸಿದ್ದ ಪ್ರೊ. ಸುಜನಾ, ಪ್ರೊ. ರಾಘವೇಂದ್ರರಾವ್, ಪ್ರೊ. ನಂಜುಂಡಯ್ಯ, ಪ್ರೊ. ಬಿ.ನಂ. ಚಂದ್ರಯ್ಯ, ಪ್ರೊ. ಚ. ಸರ್ವಮಂಗಳಾ, ಪ್ರೊ. ಕೆ. ರಾಮದಾಸ್ ಪ್ರಾಧ್ಯಾಪಕರಾಗಿದ್ದರು. ಪ್ರೊ. ಶಂಕರಲಿಂಗಯ್ಯನವರು ಪ್ರಾಂಶುಪಾಲರಾಗಿದ್ದು, ಅತ್ಯಂತ ಅಭಿಮಾನದಿಂದ ಇವರನ್ನು ಬರಮಾಡಿಕೊಂಡರು. ಆ ಸಂದರ್ಭದಲ್ಲಿ ಪ್ರೊ. ದೇಜಗೌ ಅವರು ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದರು. ವಿದ್ಯಾರ್ಥಿಗಳೂ ಅಷ್ಟೇ ಆಶ್ಚರ್ಯಕರ ರೀತಿಯಲ್ಲಿ ಇವರನ್ನು ಮುತ್ತಿಕೊಳ್ಳುತ್ತಿದ್ದರು. ಅವರ ಶ್ರದ್ಧೆ ಮತ್ತು ಕರ್ತವ್ಯನಿಷ್ಠೆ ಅನುಕರಣೀಯವಾದುದು. ಒಂದು ಪ್ರಸಂಗ ಹೀಗಿದೆ; 'ಒಮ್ಮೆ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು 'ಶಬ್ದಮಣಿದರ್ಪಣ'ವನ್ನು ಬೋಧಿಸಲು ಸತತ ಮೂರು ತಿಂಗಳ ಕಾಲ ಭಾನುವಾರದಂದೂ ವಿಶೇಷ ತರಗತಿಗಳನ್ನು ತೆಗೆದುಕೊಂಡು ಪಾಠ ಮಾಡಿದ್ದಾರೆ'.

ಇನ್ನೊಮ್ಮೆ, ಪಂಪಮಹಾಕವಿಯ 'ವಿಕ್ರಮಾರ್ಜುನ ವಿಜಯ'ದಿಂದ ಆಯ್ಕೆ ಮಾಡಿದ್ದ 'ಮೆಲ್ಪು ಬಲ್ಪನಱಿಗುಂ' ಕಾವ್ಯಭಾಗವನ್ನು ಪಾಠಮಾಡುತ್ತಿದ್ದಾಗ,

'ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾ
ಡುತ್ತಿರೆ ಲಂಬಣಂ.......'

ಎಂಬದರ ವಾಚನ, ಅರ್ಥ, ವ್ಯಾಖ್ಯಾನ, ಸಾಭಿನಯ ಪೂರ್ವಕ ನಾಟಕೀಯತೆ ಎಲ್ಲವನ್ನೂ ಹೇಳುತ್ತಿದ್ದುದನ್ನು ಕೇಳುತ್ತಿದ್ದರೆ ಅವರ ಆ ಕ್ಲಾಸ್, ಆ ಪೀರಿಯಡ್ ಮುಗಿಯದೇ ಇದ್ದರೆ ಎಷ್ಟು ಚೆಂದ' ಎಂದು ನೆನಪಿಸಿಕೊಳ್ಳುತ್ತಾರೆ ಅವರ ವಿದ್ಯಾರ್ಥಿ ಇಲ್ಯಾಸ್ ಅಹ್ಮದ್‌ಖಾನ್.

ಮುಂದೆ ಪಿಕೆಆರ್ ಅವರು ಲಲಿತಕಲೆಗಳ ಕಾಲೇಜಿಗೆ ವರ್ಗಾವಣೆಗೊಂಡರು. ಅಲ್ಲಿ ಎಂ.ವಿ. ರತ್ನ ರಾಜಮ್ಮ.ಸಿ.ಆರ್. ಗೌಡ, ಪದ್ಮಾಮೇಡಂ ಅವರುಗಳಿದ್ದು, ಅವರಿಂದ ಸಂಗೀತದ ಪ್ರಾಥಮಿಕ ಪಾಠಗಳನ್ನು ಕಲಿತುಕೊಂಡರು. ಜನಪದ ಸಂಗೀತ ಮತ್ತು ಶಿಷ್ಟ ಸಂಗೀತಗಳಿಗೆ ಮುಖಾಮುಖಿಯಾದ ರಾಜಶೇಖರರು ಶಿಷ್ಟದ ರುಚಿಯನ್ನು ಹತ್ತಿಸಿಕೊಂಡರೂ, ಮೂಲ ಜಾನಪದವನ್ನು ಮರೆಯಲಿಲ್ಲ. ಇದೇ ಸಂದರ್ಭದಲ್ಲಿ ರಾಜಶೇಖರರಿಗೆ ಮೈಸೂರು ಆಕಾಶವಾಣಿಯ

ಸಂಪರ್ಕವೇರ್ಪಟ್ಟಿತು. ಅಲ್ಲಿ 'ಬಿ' ದರ್ಜೆ ಕಲಾವಿದರಾಗಿ ಪದೋನ್ನತಿ ಹೊಂದಿದರು. ಅನಂತರದ ದಿನಗಳಲ್ಲಿ ಯುವರಾಜಾ ಕಾಲೇಜಿಗೆ ವರ್ಗವಾದರು. ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸಿದ ರಾಜಶೇಖರರು 'ನಾವು ಈ ಭೂಮಿಗೆ ಆಕಸ್ಮಿಕ ಕಣ್ರೋ. ಆದರೆ ಈ ಭೂಮಿಯ ಮೇಲೆ ಸುಖಿಸುವ, ಸಂತೋಷವನ್ನು ಅನುಭವಿಸುವ, ಸೌಂದರ್ಯವನ್ನು ಸವಿಯುವ ಪುಣ್ಯ ನಮಗಿದೆಯಲ್ಲ ಅಷ್ಟು ಸಾಕು; ಅದರ ಮುಂದೆ ನಮ್ಮ ಸಮಸ್ಯೆಗಳು ನೋವುಗಳು ತೃಣಕ್ಕೆ ಸಮಾನ" ಎಂದು ತಮ್ಮ ಅಸಂಖ್ಯಾತ ವಿದ್ಯಾರ್ಥಿಗಳಿಗೆ ಅನ್ನ, ಅರಿವು, ಆಶ್ರಯ ನೀಡಿ ಅವರ ಬಾಳಿಗೆ ಬೆಳಕು ತೋರಿದ್ದಾರೆ ಧೀಮಂತ ವ್ಯಕ್ತಿತ್ವದ ರಾಜಶೇಖರರು.

'ಪಟ್ಟಾಂಗ'ದಲ್ಲಿ ಅನಾವರಣಗೊಂಡ ಪಿಕೆಆರ್

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಆಯೋಜಿಸಿದ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಪ್ರತಿ ತಿಂಗಳು ಆಯೋಜನೆ ಮಾಡುವ ತಿಂಗಳ ಅತಿಥಿಯೊಂದಿಗೆ 'ಪಟ್ಟಾಂಗ' ಕಾರ್ಯಕ್ರಮವೂ ಒಂದು. ಇದು ಅತ್ಯಂತ ವಿಶಿಷ್ಟವಾದುದು ಮತ್ತು ವಿನೂತನವಾದುದು. ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಕಲಾವಿದರು ತಮ್ಮ ಕಲಾಬದುಕಿನ ಎಲ್ಲ ಸಂಗತಿಗಳನ್ನು ನೆನಪು ಮಾಡಿಕೊಳ್ಳುತ್ತ ಮತ್ತು ತಮ್ಮ ಕಲಾಜೀವನದ ಯಶೋಗಾಥೆಯನ್ನು ಕಲಾಭಿಮಾನಿಗಳೆದುರು ಬಿಚ್ಚಿಡುವರು. ಕಾರ್ಯಕ್ರಮವನ್ನು ಸಂಪೂರ್ಣ ಧ್ವನಿಮುದ್ರಣ ಮಾಡಿಕೊಳ್ಳುವುದು ಹಾಗೂ ಪುಸ್ತಕರೂಪದಲ್ಲಿ ದಾಖಲಿಸುವ ಸೈದ್ಧಾಂತಿಕ ಚೌಕಟ್ಟು 'ಪಟ್ಟಾಂಗ' ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ. ಇದು ಒಂದು ರೀತಿಯ ಸಾರ್ಥಕ ಕಾರ್ಯಕ್ರಮ. ಶ್ರೇಷ್ಠ ಕಲಾವಿದರನ್ನು ಪರಿಚಯಿಸುವ ಈ ಕಾರ್ಯಕ್ರಮದಲ್ಲಿ ಸ್ವತಃ ಡಾ. ಪಿ.ಕೆ ರಾಜಶೇಖರ ಅವರು ೨೦೧೩ರ ಮೇ ೨೫ರಂದು ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ತಮ್ಮ ಬದುಕಿನ ಏಳು-ಬೀಳು, ಸಾಧನೆ-ಸಿದ್ಧಿಗಳ ಬಗೆಗೆ ಮನಬಿಚ್ಚಿ ಮಾತನಾಡಿದ್ದಾರೆ. ನೆನಪುಗಳಿಗೆ ಮಾತು ಕೊಟ್ಟಿದ್ದಾರೆ. ಭಾವನೆಗಳಿಗೆ ಭಾಷೆಯ ಬಂಧ ತೊಡಿಸಿದ್ದಾರೆ. ಅವರ ಹೃದಯದ ಮಿಡಿತಕ್ಕೆ, ಧ್ವನಿಗೆ ಲಿಪಿಕೊಡುವ ಕಾರ್ಯವನ್ನಷ್ಟೇ ಇಲ್ಲಿ ಮಾಡಲಾಗಿದೆ. ಡಾ. ಪಿಕೆಆರ್ ಅವರ ವ್ಯಕ್ತಿತ್ವದ ಅನಾವರಣ ಅವರದೇ ಮಾತಿನಲ್ಲಿ ವ್ಯಕ್ತವಾಗಿದೆ.

"ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ರೈತಕುಟುಂಬದಲ್ಲಿ ನಾನು ಹುಟ್ಟಿದೆ. ನನ್ನ ಅಜ್ಜಿಯ ಮನೆ ಹುಣಸೆಕುಪ್ಪೆ. ಪಿರಿಯಾಪಟ್ಟಣದಿಂದ ಐದು ಕಿಮೀ ದೂರದಲ್ಲಿರುವ ಊರು ಅದು. ಅಜ್ಜಿ ಆಗಾಗ ತಾನು ತವರುಮನೆಗೆ ಹೋಗುವಾಗ ನನ್ನನ್ನು ಜೊತೆಗೇ ಕರೆದುಕೊಂಡು ಹೋಗುತ್ತಿದ್ದರು. ಅದು ಅಜ್ಜಿಯ ತಮ್ಮನ ಮನೆ. ನನಗೆ ಹುಣಸೆಕುಪ್ಪೆ ತುಂಬ ಅಪ್ಯಾಯಮಾನವಾದ ಊರು. ಆ ಊರಿನಲ್ಲಿ ನನ್ನನ್ನು ಹೆಚ್ಚು ಮುದ್ದು ಮಾಡುವ ಜನರು ಇದ್ದರು. ಭಕ್ಷ್ಯಭೋಜನಗಳನ್ನು ತಯಾರು ಮಾಡಿ, ಬಡಿಸಿ ಪ್ರೀತಿಯಿಂದ ನೋಡಿಕೊಳ್ಳುವ ಜನ ಅಲ್ಲಿದ್ದದ್ದರಿಂದ ಆ ಊರು ನನಗೆ ಹೆಚ್ಚು ಪ್ರಿಯವಾಗಿತ್ತು. ಆ ಊರಲ್ಲಿ ಕೂಲಿಮಠ ಎಂಬ ಒಂದು ಶಾಲೆಯಿತ್ತು. ಅಲ್ಲಿ ದಿನಂಪ್ರತಿ ಪಾಠ ಪ್ರವಚನ ನಡೆಯುತ್ತಿತ್ತು. ಮಠದಲ್ಲಿನ ಮೇಷ್ಟ್ರು ಶಿಷ್ಯ-ವಿದ್ಯಾರ್ಥಿಗಳಿಂದ ಮಗ್ಗಿ, ಪಾಠಗಳನ್ನು ಓದಿಸುತ್ತಿದ್ದರು. ಒಂದು ದಿನ; 'ಅದು ತಂಗಾಳಿ ಬೀಸುವ ಹೊತ್ತು. ಮುಂಗೋಳಿ

ಕೂಗುವ ಹೊತ್ತು. ಹೊಂಗದಿರ ಮೂಡಲಲ್ಲಿ ಕಣ್ತೆರೆಯುವ ಹೊತ್ತು ನಸುಕಿನ ಜಾವ. ಆ ಸಂದರ್ಭದಲ್ಲಿ ಯಾವುದೋ ಒಂದು ಮಧುರ ಧ್ವನಿ ಅಲೆಅಲೆಯಾಗಿ ತೇಲಿಬಂತು. ಅವಾಗ ನಾನಿನ್ನೂ ಮಲಗಿದ್ದೆ. ಆದರೂ ಆ ಸುಮಧುರ ಧ್ವನಿ ನನ್ನನ್ನು ಕಾಡಿತು ಮತ್ತು ತುಂಬ ಸೆಳೆಯಿತು. ಆ ಊರಿನ ಚಾಮಿ ಎನ್ನುವ ಹೆಂಗಸು ಬೀಸುಕಲ್ಲಿನಲ್ಲಿ ಬೀಸುತ್ತ, ಹಾಡು ಹೇಳುತ್ತಿರುವುದು ನನಗೆ ತಿಳಿಯಿತು. ಅದು ವಿಶೇಷವಾಗಿ ಆಕರ್ಷಿಸಿ, ನನ್ನನ್ನು ಮೋಡಿ ಮಾಡಿತು. ಈ ಪ್ರಸಂಗವು ನನಗೆ ಜೀವನದಲ್ಲಿ ಮೊಟ್ಟ ಮೊದಲ ಬಾರಿ ಜನಪದ ಹಾಡುಗಳ ಬಗ್ಗೆ ಆಸಕ್ತಿ ಮೂಡಲು ಕಾರಣವಾಯಿತು. ಜೊತೆಗೆ ಅಜ್ಜಿ ಮಕ್ಕಳನ್ನು ಮಲಗಿಸುವಾಗ ಹಾಡುವ ಜೋಗುಳದ ಪದ, ಬೀಸುವ ಹಾಡುಗಳನ್ನು ಹಾಡುತ್ತಿದ್ದುದನ್ನೂ ಕೇಳಿಸಿಕೊಳ್ಳುತ್ತಿದ್ದೆ. ಆದರೂ ಆ ಹೆಂಗಸು ಚಾಮಿ ಹಾಡುತ್ತಿದ್ದ ಹಾಡುಗಳ ಗೇಯತೆ, ಮಾಧುರ್ಯತೆ ಎಂದೂ ಮರೆಯಲಾರದ್ದು. ಅದು ಇನ್ನೂ ಕಿವಿಯಲ್ಲಿ ಗುಂಯ್‌ಗುಡುತ್ತಿದೆ.

> 'ಬೆಳಗಾಗ ನಾನೆದ್ದು ಯಾರ್‍ಯಾರ ನೆನೆಯಾಲಿ
> ಎಳ್ಳು ಜೀರೀಗೆ ಬೆಳೆಯೋಳ – ಭೂಮಿತಾಯ
> ಎದ್ದೊಂದು ಗಳಿಗೆ ನೆನದೇನು'

ಎಂಬ ಹಾಡು ಸೇರಿದಂತೆ ಹಲವಾರು ಹಾಡುಗಳನ್ನು ಮೂಲಮಟ್ಟುಗಳಲ್ಲಿ ಹಾಡುತ್ತಿದ್ದುದೇ ಹೆಚ್ಚು ಕುತೂಹಲ ಮೂಡಿಸಿತು. ಅದರಂತೆ ಮೂಲ ಜನಪದ ಹಾಡುಗಳನ್ನು ನಾನು ಯಾಕೆ ಹಾಡಬಾರದು ಎಂದು ನನ್ನಷ್ಟಕ್ಕೆ ನಾನೇ ನನ್ನನ್ನು ಕೇಳಿಕೊಂಡು ಹಾಡಲು ತೊಡಗಿದೆ" ಎಂದು ನೆನಪು ಮಾಡಿಕೊಂಡರು ಪಿ.ಕೆ. ರಾಜಶೇಖರ ಅವರು.

ಅನಂತರ ಮಾತು ಮುಂದುವರೆಸಿದ ಅವರು, "ಪಿರಿಯಾಪಟ್ಟಣದಲ್ಲಿ ಒಂದು ಬಸವನಗುಡಿ ಇತ್ತು. ಅಲ್ಲಿ ಊರಿನ ಜನ ಸೇರಿ ನಾಟಕ ಕಲಿಯುತ್ತ, ಹಾಡುಗಳನ್ನು ಹಾಡುತ್ತಿದ್ದರು. ಮಿಡ್ಲಸ್ಕೂಲ್ ಹಂತದಲ್ಲಿ ಓದುತ್ತಿರುವ ಸಂದರ್ಭವದು. ಆ ದೇವಸ್ಥಾನ ಇರುವ ಬೀದಿಯಲ್ಲಿ ಶಂಕರಪ್ಪ ಮೇಷ್ಟ್ರು ಎಂಬವರಿದ್ದರು. ಆ ಸಂದರ್ಭದಲ್ಲಿ ನನ್ನನ್ನು ಕರೆದು 'ಲೋ ರಾಜಶೇಖರ ಒಂದು ಹಾಡು ಹಾಡಲೋ' ಎಂದು ಹುರಿದುಂಬಿಸುತ್ತಿದ್ದರು. ಹಾಗಾಗಿ ನಾನು ಹಾಡು ಹೇಳಲು ಪ್ರಾರಂಭಿಸಿದೆ. ನನ್ನ ಸುದೈವವೆಂದರೆ, ಅಹಮ್ಮದ ಹಫೀಜ್ ಎಂಬುವರು ಕರೀಂಖಾನ್ ಅವರು ಹಾಡುತ್ತಿದ್ದ ಹಾಡುಗಳನ್ನು ಅವರದೇ ಶೈಲಿಯಲ್ಲಿ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಅದೇ ಶೈಲಿಯಲ್ಲಿ ಹಾಡುವುದನ್ನು ಅವರು ನನಗೆ ಕಲಿಸಿಕೊಟ್ಟರು. ಆದರೆ ನನ್ನಜ್ಜಿಯ ಊರಲ್ಲಿ ಕೇಳಿದ್ದ 'ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಲಿ....'ಎಂಬ ತ್ರಿಪದಿಯನ್ನು ಹಾಡುತ್ತಿದ್ದ ಚಾಮಿಯ ಕಂಠ ಆಕೆಯ ಹಾಡಿನ ಮೋಡಿಯನ್ನು ಇನ್ನೂ ಮರೆಯಲಾಗಿಲ್ಲ. ಆದರೆ ಇವೊತ್ತು ಅವಳಿಲ್ಲದಿದ್ದರೂ ಹಾಡಿನ ಮೂಲ

ಲಯ ಸ್ಮೃತಿ ನನ್ನಲ್ಲಿ ಅಚ್ಚಳಿಯದಂತೆ ಉಳಿದಿದೆ ಎಂದು ನೆನಪು ಮಾಡಿಕೊಂಡರು. ನಂತರ ಅಹ್ಮದ್ ಹಫೀಜ್ ಒಂದು ಹಾಡು ಹೇಳುತ್ತಿದ್ದರು. ಅದು;

'ಅತ್ತೆ ಮಾವರಿಗಂಜಿ, ಸುತ್ತೇಳು ನೆರೆಗಂಜಿ,
ಮತ್ತೆ ಆಳುವ ದೊರೆಗಂಜಿ – ಎಲೆ ಮಗಳೆ
ಅತ್ತೆ ಮನೆಯಾಗೆ ಬಾಳಮ್ಮ

ಅತ್ತೆಮಾವರ ಪಾದ ತಂದೆತಾಯರ ಪಾದ
ಮತ್ತೆ ಗಂಡಾನ ಸಿರಿಪಾದ – ನೆನೆದಾರೆ
ಬೆನ್ನಿಂಗೆ ಇಹುದು ಕೈಲಾಸ

ನೆರೆಮನೆಯ ಸಿರಿಗೌರಿ ನೀನಾಗಿ ಬಾಳಮ್ಮ
ಮನೆಯೊಳಗೆ ಭೇದ ಬಗಿಬ್ಯಾಡ – ಎಲೆ ಮಗಳೆ
ತಂಬಿದ ಮನೆಯ ಒಡಿಬ್ಯಾಡ

ಬಾಳುವೆ ಮಾಡಿದರೆ ಬಾರಮ್ಮ ಅಂದಾರು
ಬಾಳುವೆಗೆಟ್ಟು, ಮತಿಗೆಟ್ಟು – ಬಾಳಿದರೆ
ತೌರೂರ ಮನೆಗೆ ಎರವಾದೆ

ಕನ್ನಡಿಯು ಕೈತಪ್ಪಿ ಹನ್ನೆರಡು ಚೂರಾಗಿ
ಹೆಣ್ಣಿನ ಮನವು ಎರಡಾಗಿ – ದಾಳಿಂಬೆ
ಹಣ್ಣಾದರೇನು ಸುಖವಿಲ್ಲ

ಎಂಬ ಹಾಡು ನನ್ನ ಮೇಲೆ ತುಂಬಾ ಪ್ರಭಾವ ಬೀರಿತು. ಮುಂದೆ ಹೈಸ್ಕೂಲ್‌ಗೆ ಬಂದಾಗ ಗೊರಳ್ಳಿಯ ಚೆಲುವಯ್ಯ ಮೇಷ್ಟ್ರು ಎಂಬುವರು ಈ ಹಾಡನ್ನು ಬಹಳಷ್ಟು ಇಷ್ಟಪಡುತ್ತಿದ್ದರು. ಯಾವುದೇ ಕಾರ್ಯಕ್ರಮದಲ್ಲೂ ಈ ಹಾಡನ್ನು ನನ್ನಿಂದ ಹಾಡಿಸುತ್ತಿದ್ದರು. ಅವರು ತಮ್ಮ ಮನೆಗೆ ಕರೆದುಕೊಂಡು ಹೋಗಿ ಅವರ ಹೆಂಡತಿಯ ಮುಂದೆ ಒಮ್ಮೆ ಹಾಡಿಸಿದರು. ಮನೆಯಲ್ಲಿ ತಿಂಡಿ ಕಾಫಿ ಕೊಟ್ಟು ಪ್ರೋತ್ಸಾಹಿಸುತ್ತಿದ್ದರು. ಶಿವನಂಜಯ್ಯ ಮೇಷ್ಟ್ರು ಎಂಬವರಿದ್ದರು. ಅವರು 'ಎಲೋ ಮಗಾ ಒಂದು ಹಾಡೇಳು ಹಾಡೇಳು' ಎಂದು ಪ್ರೀತಿಯಿಂದ ಹಾಡು ಹೇಳಿಸುತ್ತಿದ್ದರು. ಹೀಗೆ ನನಗೆ ಶಾಸ್ತ್ರೀಯ ಸಂಗೀತ ಗೊತ್ತಿಲ್ಲದಿದ್ದರೂ ಹಾಡುಗಳನ್ನು ಹೇಳುವ ಕಲೆಯನ್ನು ರೂಢಿಸಿಕೊಳ್ಳಲು ಏನೇನು ಬೇಕೋ ಅದನ್ನೆಲ್ಲ ಪ್ರಾಥಮಿಕ ಹಂತದಲ್ಲಿ ಕಲಿತುಕೊಳ್ಳಲು ಸಾಧ್ಯವಾಯಿತು" ಎಂದು ನೆನಪಿಸಿಕೊಳ್ಳುತ್ತಾರೆ ಅವರು.

ಅವರ ನೆನಪಿನ ಬುತ್ತಿ ಇನ್ನೂ ಬಿಚ್ಚುತ್ತಾ ಹೋಗುತ್ತದೆ. ಮತ್ತೆ

ಮುಂದುವರೆದು; "ನಮ್ಮ ಮನೆಯ ಬೀದಿಯಲ್ಲಿ ಕುಂತಿಪೂಜೆ ಪ್ರತಿವರ್ಷ ನಡೆಯುತ್ತಿತ್ತು. ಅಲ್ಲೆಲ್ಲ ಪಡ್ಡೆ ಹುಡುಗರೂ ಸೇರಿ ಕೋಲಾಟ ಆಡುತ್ತಿದ್ದರು. ಆ ಕೋಲಾಟ ಆಡುವಾಗ ನಮ್ಮ ಪಕ್ಕದ ಹಳ್ಳಿಯವನೇ ಆದ ಮಂಟಗಯ್ಯ ಎಂಬುವನು ಕೋಲಾಟ ಹೇಳಿಕೊಡುತ್ತಿದ್ದ. ಅವನು ಹಾಡುತ್ತಿದ್ದ ಹಾಡು ಹೀಗಿದೆ ;

ಹಾರುವರ ಕೇರೀಯ ಗಾರೆಜಗುಲಿಯ ಮ್ಯಾಲೆ
ಲೋಲು ಕಿನ್ನುಡಿಯ ನುಡಿಸೋನೆ – ಗೆಣೆಕಾರ
ಮೊಗ್ಗಾಗಿ ಬಾರೊ ತುರುಬಿಗೆ

* * * * * * * *

ಕಿನ್ನುಡಿ ನುಡಿಸೋನ ದನಿ ಚೆಂದವೋ
ಕಿನ್ನುಡಿ ನುಡಿಸೋನ ಬೆರ‍್ಳು ಚಂದವೋ
ಕಿನ್ನುಡಿ ನುಡಿಸೋನ ಬೆರಳೀನ್ ಚಂದವ ಕಂಡು
ಚುಕ್ಕಿ ಉಂಗ್ರಕೆ ನಾರಿ ಮನಸೋತೊಳೋ
ಬೆಳ್ಳಿ ಉಂಗ್ರಕೆ ನಾರಿ ಮನಸೋತೊಳೋ / ಸೊಲ್ಲು /

"ಎಲ್ಲೋ ಜೋಗಪ್ಪ ನಿನ್ನರಮನೆ ?
ಎಲ್ಲೋ ಜೋಗಪ್ಪ ನಿನ್ನ ತಳಮನೆ ?" /
"ಅಲ್ಲಾದೆ ಕಾಣೆ ನನ್ನ ಅರಮನೆ
ಅಲ್ಲಾದೆ ಕಾಣೆ ನನ್ನ ತಳಮನೆ" /ನಡೆಸೊಲ್ಲು/

"ಘಟ್ಟಹತ್ತೋಗಬೇಕು ಘಟ್ಟ ಇಳ್ದೋಗಬೇಕು
ಅಲ್ಲಾದೆ ಕಾಣೆ ನನ್ನ ಅರಮನೆ
ಅಲ್ಲಾದೆ ಕಾಣೆ ನನ್ನ ತಳಮನೆ" / ಎಲ್ಲೊ/ ನಡೆಸೊಲ್ಲು/

"ಉದ್ದೀನ್ ಹೊಲವ ಬಿಟ್ಟು ಮುದ್ದೀನ್ ಗಂಡನ ಬಿಟ್ಟು
ಕದ್ದಾಟ್ದ ಜೋಗಿಕುಟ್ಟೆ ಬರಬಹುದೆ ?
ನಾನು – ಗುದ್ದಾಟ್ದ ಜೋಗಿ ಕುಟ್ಟೆ ಬರಬಹುದೆ ?" / ಎಲ್ಲೊ /

ಹುಳ್ಳೀ ಹೊಲವ ಬಿಟ್ಟು ಒಳ್ಳೆ ಗಂಡನ ಬಿಟ್ಟು
ಕಳ್ಳಾಟ್ದ ಜೋಗಿಕುಟ್ಟೆ ಬರಬಹುದೆ ?
ನಾನು– ತಳ್ಳಾಟ್ದ ಜೋಗಿಕುಟ್ಟೆ ಬರಬಹುದೆ ? /ಎಲ್ಲೊ/

ಆನೆ ಸಾಲು ನಮಗುಂಟು ಕುದ್ರೆ ಸಾಲು ನಮಗುಂಟು
ಜಾನಗಲ್ಲು ಜಾಣೆ ಬಾರೆ ಹಿಂದುಗುಂಟೆ
ನನ್ನ –ಜಾನಗಲ್ಲು ಜಾಣೆ ಬಾರೆ ಹಿಂದುಗೂಟೆ / ಎಲ್ಲೊ/

ಇದ್ದ ಬದ್ದ ಬಟ್ಟೆನೆಲ್ಲ ಗಂಟುಮೂಟೆ ಕಟ್ಟಿಕೊಂಡು
ಕದ್ದೋಡಿ ಬಂದೆನಲ್ಲ ನಿನ್ನ ಕೂಟೆ
ನಾನು – ಬಿದ್ದೋಡಿ ಬಂದೆನಲ್ಲ ನಿನ್ನ ಕೂಟೆ

ಕೊತ್ತುನ್ ಘಟ್ಟ ಕೋರಿ ಘಟ್ಟ ಹತ್ತಲಾರೆ ಇಳಿಯಲಾರೆ
ಹೊತ್ತುಕೊಳ್ಳೆ ನಾರಿ ನನ್ನ ಗಂಟು ಮೂಟೆಯ
ನೀನು – ಹೊತ್ತಕೊಳ್ಳೆ ನಾರಿ ನನ್ನ ಗಂಟು ಮೂಟೆಯ / ಎಲ್ಲೊ/

ಸುತ್ತಿ ಸುತ್ತಿ ಸುಣ್ಣವಾದೆ ಹೊತ್ತು ಹೊತ್ತು ಹೆಣವಾದೆ
ಎತ್ತ ಕಡೆಗೆ ಹೇಳೊ ಜೋಗಿ ನಿನ್ನ ಊರು
ಅಯ್ಯ – ಎತ್ತ ಕಡೆಗೆ ಹೇಳೊ ಜೋಗಿ ನಿನ್ನ ಊರು / ಎಲ್ಲೊ /

ಬೀಸೋ ತೋಳು ಬೆರಗಾದೊ ನಡೆದ ಕಾಲು ಹಪ್ಪಳಾದೊ
ಬಾಯ ತಂಬುಲವೆಲ್ಲ ಹುಡಿ ಹುಡಿ
ಅಯ್ಯೊ – ಬಾಯ ತಂಬುಲವೆಲ್ಲ ಹುಡಿ ಹುಡಿ / ಎಲ್ಲೊ /

ಎಲ್ಲೋ ಜೋಗಪ್ಪ ನಿನ್ನರಮನೆ
ಎಲ್ಲೋ ಜೋಗಪ್ಪ ನಿನ್ನ ತಳಮನೆ /

ಇದೇ ಕಾಣೆ ನನ್ನ ಅರಮನೆ
ಇದೇ ಕಾಣೆ ನನ್ನ ತಳಮನೆ /

ಎಂಬ ಈ ಮೂಲ ಕೋಲಾಟದ ಪದವನ್ನು ಅದ್ಭುತವಾಗಿ ಕೋಲಾಟದ ಶೈಲಿಯಲ್ಲಿಯೇ ಹೇಳಿಕೊಡುತ್ತಿದ್ದ ಮಂಟಗಯ್ಯ. ಈ ಹಾಡು ಕೇಳುತ್ತಿದ್ದಾಗ ಸ್ವತಃ ಉಯ್ಯಾಲೆ ಆಡಿದಂತಹ ಅನುಭವ ಆಗುತ್ತಿತ್ತು. ಆಗ ನನಗಾಗುತ್ತಿದ್ದ ಆನಂದ ಹೇಳತೀರದು. ಆದರೆ ಇಂದು ಮೂಲ ಮಟ್ಟುಗಳನ್ನು ಮರೆಮಾಚಿ ಹೊಸದಾದ ರಾಗದೊಂದಿಗೆ ಹಾಡುತ್ತಾರೆ; ಸಿನೇಮಾಗಳಲ್ಲೆಲ್ಲ ಈ ಹಾಡುಗಳನ್ನು

ಬಳಸಿಕೊಂಡಿದ್ದಾರೆ. ಆದರೆ ಅವುಗಳಿಗೆ ಕೋಲಾಟ ಆಡಲು ಬರುವುದಿಲ್ಲ. ಇದರಿಂದ ಎಷ್ಟೋ ಸಾರಿ ಹೊಸದಾದ ಹಾಡುಗಳೇ ಮರೆದಿವೆ, ಹಳೇಹಾಡುಗಳು ಮೂಲೆಗುಂಪಾಗುತ್ತವೆ. ಹೀಗಾಗಿ ಹೊಸದರ ಅಬ್ಬರದಲ್ಲಿ ಹಳೆಯದಲ್ಲೆವೂ ಗೊಬ್ಬರವಾಗುತ್ತದೆ" ಎಂದು ಬೇಸರ ವ್ಯಕ್ತಪಡಿಸಿದರು.

ಮತ್ತೆ ನೆನಪಿನ ಗಣಿಯಿಂದ ಹೆಕ್ಕಿ ತೆಗದು ಮಾತು ಮುಂದುವರೆಸುತ್ತ, 'ಮುಂದೆ ಮಂಟಗಯ್ಯ ಬರದೇ ಹೋದರೂ ನಾವೇ ಕೋಲಾಟವನ್ನು ಶಾಲಾ ಕಾರ್ಯಕ್ರಮ, ಊರಿನ ಕಾರ್ಯಕ್ರಮ ಇತ್ಯಾದಿ ಕಡೆಗಳಲ್ಲ ಆಡುತ್ತಿದ್ದೆವು. ಆದರೆ ಕೋಲಾಟ ಹೇಳಿಕೊಟ್ಟ ಅವನ ಮಟ್ಟುಗಳು ಇನ್ನೂ ಕೂಡ ಹಾಗೇ ಉಳಿದುಕೊಂಡಿವೆ. ಆದರೆ ನಾಗರಿಕರ ಹಾಡಿಗಿಂತ ಭಿನ್ನವಾಗಿದ್ದರೂ, ಅವೇ ನಿಜವಾದ ಮಟ್ಟುಗಳು ಎಂದು ಎಷ್ಟೋ ಸಲ ಅನಿಸಿದ್ದುಂಟು. ಆದರೆ ಮಂಟಗಯ್ಯನ ಮೂಲ ಮಟ್ಟುಗಳು ಸರಿಯಿಲ್ಲವೇನೂ ಎನ್ನುವ ಅನುಮಾನ ನನ್ನನ್ನು ಎಷ್ಟೋ ಸಲ ಕಾಡಿದ್ದೂ ಸುಳ್ಳಲ್ಲ". ರೇಡಿಯೋ ಅದೇ ತಾನೆ ಬಂದಿತ್ತು. ಒಂದೊಮ್ಮೆ ಅಕ್ಕ ಹೇಳುವಂತೆ, 'ರೇಡಿಯೋನಲ್ಲಿ ಕಾಳಿಂಗರಾಯರ ಹಾಡುಗಳು ಪ್ರಸಾರವಾಗುತ್ತಿದ್ದವು. ಅವನ್ನು ಕೇಳಿಸಿಕೊಳ್ಳೊ ಸಲುವಾಗಿ ರೇಡಿಯೋದ ಹತ್ತಿರ ಕುಳಿತುಕೊಂಡು ಕಾಯುತ್ತಿದ್ದೆ. ವಾರಕ್ಕೊಮ್ಮೆ ಅದರಲ್ಲೂ ಭಾನುವಾರ ಹದಿನೈದು ನಿಮಿಷ ಕಾಳಿಂಗರಾಯರ ಹಾಡು ಪ್ರಸಾರವಾಗುತ್ತಿತ್ತು. ಕಾಳಿಂಗರಾಯರು ಹಾಡುತ್ತಿದ್ದ ಹಾಡು;

ಮೂಡಲ್ ಕುಣಿಗಲ್ ಕೆರೆ ನೋಡೋರಗೊಂದ್ಯೆಭೋಗ
ಮೂಡಿಬರ್ತಾನೆ ಚಂದಿರಾಮ

....

"ಎಂಬ ಮಂಟಗಯ್ಯ ಹಾಡಿದ ಮಟ್ಟಿಗೂ, ಅದೇ ಹಾಡು ಹಾಡಿದ ಕಾಳಿಂಗರಾಯರು ಹಾಡಿದ ಧಾಟಿಗೂ ವ್ಯತ್ಯಾಸ ಇದೆ. ಆದರೂ ಕಾಳಿಂಗರಾಯರೇ ಹಾಡಿದ್ದು ಚೆನ್ನಾಗಿದೆ. ಮಂಟಗಯ್ಯ ಹಾಡಿದ ಮಟ್ಟು ಸರಿಯಿಲ್ಲ ಎಂದು ನಾನು ಆಗ ಅಂದುಕೊಳ್ಳುತ್ತಿದ್ದೆ".

"ಒಂದು ದಿನ ಮನೆಯವರೆಲ್ಲ ನನ್ನನ್ನು ಸಿನೆಮಾಕ್ಕೆ ಕರೆದುಕೊಂಡು ಹೋಗಿದ್ದರು. ಆವಾಗೆಲ್ಲ ಟೆಂಟ್ ಸಿನೆಮಾ. ಸಿನೆಮಾ ಬಿಟ್ಟ ನಂತರ ಟೆಂಟ್‌ನಿಂದ ಹೊರಗೆ ಬಂದು ನೋಡಿದಾಗ ಹಾಲಿನಂಥ ಬೆಳದಿಂಗಳು ಚೆಲ್ಲಿತ್ತು. ಅದನ್ನು ನೋಡಿದ ಕೂಡಲೇ ಕಾಳಿಂಗರಾಯರು ಹಾಡಿದ,

ಬಾರಯ್ಯ ಬೆಳದಿಂಗಳೆ – ನಮ್ಮೂರ
ಹಾಲಿನಂಥ ಬೆಳದಿಂಗಳೆ

ಹೊಂದೇ ರಕ್ಕಿ ಬಂದಾವಕ್ಕಾ
ಗರಗರನಾಡೀ ನಿಂದಾವಕ್ಕಾ । ಬಾರಯ್ಯ
ಕಾಮನೂರ ಹೊಳೆಯಿಂದಾ
ಕುಂತೂ ನಿಂತೂ ಬರುತ್ತಿದ್ದ । ಬಾರಯ್ಯ
ಕಾಮನ್ಯಾರೆ ತಡದೋರು
ಭೀಮನ್ಯಾರೆ ತಡದೋರು । ಬಾರಯ್ಯ
ತಿಂಗ್ಳು ತಿಂಗ್ಳಿಗೆ ತಿಂಗಳು ಮಾವನ ಪೂಜೆ
ಗರುಡನಾ ಪೂಜೆ ಘನಪೂಜೆ । ಕೋಲು ಮಲ್ಲಿಗೆ ಕೋಲು
ಗರುಡನಾ ಪೂಜೆ ಘನಪೂಜೆ ತಿಂಗಳು ಮಾವ
ನಿನ ಪೂಜೆ ಗಂಗೆ ದಡದಾಗೆ । ಕೋಲು ಮಲ್ಲಿಗೆ ಕೋಲು
ತಿಂಗಳು ಮಾವನ ತಂಗಿ ಸೂತಕವಾಗಿ
ತುಂಬೆಹೂವಿನ ಗುಡ್ಲಾಕಿ । ಕೋಲು ಮಲ್ಲಿಗೆ ಕೋಲು
ತುಂಬೆಹೂವಿನ ಗುಡ್ಲಾಕಿ ತಿಂಗಳು ಮಾವ
ಮೀಯಾನೆಂದರೆ ತಾವಿಲ್ಲ । ಕೋಲು ಮಲ್ಲಿಗೆ ಕೋಲು
ಮೀಯಾನೆಂದರೆ ತಾವಿಲ್ಲ ತಿಂಗಳು ಮಾವ
ಹೋಗಯ್ಯ ಮುಗಿಲ ಸೆರಗಿಗೆ । ಕೋಲು ಮಲ್ಲಿಗೆ ಕೋಲೆ

ಎಂಬ ಹಾಡು ಕೇಳಿದ ಕೂಡಲೇ ಹಾಲಿನಂತಹ ಸಮುದ್ರದಲ್ಲಿ ತೇಲಾಡುತ್ತಿರುವ ಅನುಭವೇ ಆಯಿತು. ಕಾಳಿಂಗರಾಯರ ಆ ಹಾಡಿನಲ್ಲಿ ಎಂತಹ ಮೋಡಿ ಇದೆ. ಆದ್ದರಿಂದ ಕಾಳಿಂಗರಾಯರಂತೆ ನಾನೂ ಹಾಡಬೇಕು ಎಂದು ಅಂದು ನನಗೆ ಅನಿಸಿತು.

ನಮ್ಮೂರಲ್ಲಿಯೇ ತಮ್ಮಯ್ಯ ಎನ್ನುವವರು ಇದ್ದರು. ಅವರು "ಜವರಾಯ ಬಂದರೆ ಬರಿಕೈಯಲ್ಲಿ ಬರಲಿಲ್ಲ" ಎಂಬ ಹಾಡು ಹೇಳುತ್ತಿದ್ದರು. ನಮ್ಮ ಬೀದಿಯಲ್ಲಿಯೇ ಕೆಂಪೇಗೌಡಯ್ಯ ಎಂಬುವರು ಇದ್ದರು. ಅವರ ಅಳಿಯ ಜವನಿಕುಪ್ಪೆಯ ಕುಳ್ಳಪ್ಪ ಎಂಬುವರು ಮಾವನ ಮನೆಯಲ್ಲಿಯೇ ಇದ್ದರು. ಕೊಂತಿಗುಡಿಯಲ್ಲಿ ಪೂಜೆ ಇತ್ಯಾದಿ ಶುಭಸಂದರ್ಭದಲ್ಲಿ ಕುಳ್ಳಪ್ಪನವರು ಜೋಗಿ ಹಾಡುಗಳನ್ನು ಹಾಡುತ್ತಿದ್ದರು. ಅವರು ಹಾಡುವ ಹಾಡುಗಳಿಗೆ ನಾವೆಲ್ಲ ಸೊಲ್ಲು ಕೊಡುತ್ತಿದ್ದೆವು. ಹಾಗೆಂದರೆ ಪಲ್ಲವಿಯನ್ನು ಮತ್ತೆ ಮತ್ತೆ ಹಾಡುವುದು ಎಂದು. ಇದರಿಂದ ಜೋಗಿ ಹಾಡು ಕಲಿಯುವ ಅವಕಾಶ ನನಗೆ ದೊರಕಿತು. ಮನೆಯ ಪಕ್ಕದಲ್ಲಿ ಪುಟ್ಟಮ್ಮಣ್ಣಿ ಎಂಬಾಕೆ ಸೋಬಾನೆ ಪದಗಳನ್ನು ತುಂಬಾ ಸೊಗಸಾಗಿ ಹಾಡುತ್ತಿದ್ದಳು. ಹೀಗೆ ಈ ಎಲ್ಲ ಸಂದರ್ಭಗಳು ಜನಪದ ಹಾಡುಗಳನ್ನು ಹಾಡಲು

ಮತ್ತು ಗಾಯಕನಾಗಿ ರೂಪುಗೊಳ್ಳಲು ನನಗೆ ಕಾರಣವಾದವು' ಎಂದು ಅವರು ನೆನಪಿಸಿಕೊಂಡರು.

ಮುಂದೆ ಪಿಕೆಆರ್ ಅವರು ಕಾಲೇಜು ದಿನಗಳನ್ನು ಮೆಲಕು ಹಾಕುತ್ತಾ, "ಬಿಎ ಪದವಿ ಓದಲು ಮಹಾರಾಜಾ ಕಾಲೇಜಿಗೆ ಸೇರಿಕೊಂಡೆ. ಆ ಸಂದರ್ಭದಲ್ಲಿ ಮಹಾರಾಜಾ ಕಾಲೇಜಿನ ವಾತಾವರಣ ಈಗಿನಂತೆ ಇರಲಿಲ್ಲ. ಕರ್ನಾಟಕದ ಎಲ್ಲಾ ಭಾಗಗಳಿಂದ ವಿದ್ಯೆ ಕಲಿಯಲು ಮಹಾರಾಜಾ ಕಾಲೇಜು ಸೇರುತ್ತಿದ್ದರು. ಅದು ವೈಭವದ ಸಂದರ್ಭ. ಅಲ್ಲಿ ಇಂಗ್ಲಿಷ್ ಮಾಧ್ಯಮದ ಶಿಕ್ಷಣ ಮತ್ತು ಇಂಗ್ಲಿಷ್‌ನ ಪ್ರಭಾವ ಹೆಚ್ಚಾಗಿದ್ದಂತಹ ಕಾಲವದು. ಆದರೆ ಹಳ್ಳಿಯಿಂದ ಹೋದ ನನಗೆ ಅಲ್ಲಿರುವ ವಾತಾವರಣದಿಂದಾಗಿ ದಂಗಾಗಿ ಹೋದೆನು. ಬಿಎ ಪದವಿ ಓದುವ ಸಂದರ್ಭದಲ್ಲಿ ವೇದಿಕೆಗಳನ್ನು ಬಳಸಿಕೊಳ್ಳಲು ನನ್ನಿಂದ ಸಾಧ್ಯವಾಗಲಿಲ್ಲ. ಬಿ.ಎ. ಪದವಿ ಪಡೆದ ನಂತರ ಹಾಸನದ ಸೇಂಟ್ ಜೋಸೇಫ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕನಾಗಿ ಸೇರಿಕೊಂಡೆ. ಆವಾಗ ಕಾಲೇಜಿನ ಪ್ರಿನ್ಸಿಪಾಲ್ ಆಗಿದ್ದಂತಹ ರೆವರೆಂಡಂಟ್ ಡಿಸೋಜಾ ಅವರು ಶ್ರೀಮತಿ ಭವಾನಿ, ಶ್ರೀಮತಿ ಸಾವಿತ್ರ ನನ್ನ ಹಾಡುವಿಕೆಗೆ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಪೂರಕವಾಗಿ ಸ್ಪಂದಿಸಿದರು. ಅಲ್ಲಿ ನನ್ನ ಪೂರ್ಣ ಪ್ರತಿಭೆಯನ್ನು ಪ್ರದರ್ಶನ ಮಾಡಿಕೊಳ್ಳಲು ಅವಕಾಶ ಸಿಕ್ಕಿತು. ಮುಂದೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವಿ ಓದುವ ಸಂದರ್ಭದಲ್ಲಿ ಕಲಾಪ್ರದರ್ಶನಕ್ಕೆ ಸಂಪೂರ್ಣ ವೇದಿಕೆಗಳು ಸಿಕ್ಕವು. ಅವಾಗ ರಾಜಶೇಖರ ಎಂದರೆ ಒಬ್ಬ ಜನಪದ ಗಾಯಕ ಎಂದು ಗುರುತಿಸಲು ಪ್ರಾರಂಭವಾಯಿತು. ಮುಂದೆ ಪ್ರೊ, ಜೀಶಂಪ ಅವರು ಪಾಠ ಮಾಡುವ ಸಂದರ್ಭದಲ್ಲಿ ಅವರು ಹೇಳುತ್ತಿದ್ದ 'ಕ್ಷೇತ್ರಕಾರ್ಯ ಮಾಡುವಾಗ ವಕ್ತೃಗಳು ಹೇಳುತ್ತಿದ್ದ ಯಾವುದೇ ಬಗೆಯ ಮಾಹಿತಿಯನ್ನು ಮೂಲ ಮುಕ್ಕಾಗದಂತೆ, ಚ್ಯುತಿ ಬರದಂತೆ ಸಂಗ್ರಹಿಸಬೇಕು ಮತ್ತು ಹಾಡುಗಳ ಭಾಷೆ, ಧ್ವನಿಗಳು ಇತ್ಯಾದಿ ಸಂಗತಿಗಳ ಮೂಲ ಮಟ್ಟುಗಳನ್ನು ಯಥಾವತ್ತಾಗಿ ದಾಖಲಿಸಬೇಕು' ಎನ್ನುವ ಅವರ ಮಾತು ನನ್ನನ್ನು ಹೆಚ್ಚು ಪ್ರಭಾವಿಸಿತು. ಇದರಂತೆ ಮೂಲವನ್ನು ಹೆಚ್ಚು ಉಳಿಸಿಕೊಳ್ಳುವ ಕಡೆಗೇ ನನ್ನ ಮನಸ್ಸು ವಾಲಿತು. ಅದು ಕ್ಷೇತ್ರಕಾರ್ಯವಾಗಲಿ, ಹಾಡುಗಳನ್ನು ಹೇಳುವ ಸಂದರ್ಭವಾಗಲಿ ಇತ್ಯಾದಿ ಸಂಗತಿಗಳನ್ನು ತುಂಬ ಗಂಭೀರವಾಗಿ ಪರಿಗಣಿಸಲು ಶುರುಮಾಡಿದೆ". ಅದೇ ಸಂದರ್ಭದಲ್ಲಿ ಮೂಲ ಮುಕ್ಕಾಗದಂತೆ ಸಂಗ್ರಹಿಸಬೇಕು ಎನ್ನುವ ಜೀಶಂಪ ಅವರ ಮಾತಿನ ಗುಂಗಿನಲ್ಲಿದ್ದ ನನಗೆ ಕ್ಯಾತನಹಳ್ಳಿ ಮಾಹದೇವಯ್ಯ ಎಂಬ ಕಲಾವಿದನಿಂದ ೧೯೭೦ರಲ್ಲಿ 'ಬೆಟ್ಟದ ಚಾಮುಂಡಿ' ಎನ್ನುವ ಕಾವ್ಯವನ್ನು ಸಂಗ್ರಹಿಸುವ ಅವಕಾಶ ದೊರಕಿತು. ಅದರಲ್ಲಿರುವ ಒಂದು ಹಾಡು ನನಗೆ ತುಂಬ ಇಷ್ಟವಾಯಿತು. ಆ ಹಾಡನ್ನು ಮೊಟ್ಟಮೊದಲಿಗೆ

ಗಂಗೋತ್ರಿಯಲ್ಲಿ ಮೂಲಮಟ್ಟಿನಲ್ಲಿ ಹಾಡಿದಾಗ ಎಲ್ಲರಿಗೂ ಆಶ್ಚರ್ಯ. ಕಾರಣ ಆವಾಗೆಲ್ಲ ಕಾಳಿಂಗರಾಯರಂತೆಯೊ ಇಲ್ಲ, ಕರೀಂಖಾನ್ ಅವರಂತೆಯೇ ಹಾಡುತ್ತಿದ್ದರೆ ಹೊರತು ಯಾರೂ ಮೂಲಧಾಟಿಯಲ್ಲಿ ಹಾಡುತ್ತಿರಲಿಲ್ಲ. ಆದರೆ ನಾನು ಹಾಡಿದ ಆ ಹಾಡು ಅಲ್ಲಿ ನೆರೆದಿದ್ದವರನ್ನು ಆಶ್ಚರ್ಯಚಕಿತಗೊಳಿಸಿತು. ವೃತ್ತಿಗಾಯಕರು ಹಾಡುತ್ತಿದ್ದ ಹಾಡುಗಳನ್ನು ಹಾಡುವುದು ಕಡಿಮೆಯಾಗಿದ್ದ ಆ ಕಾಲದಲ್ಲಿ ನಾನು ವೃತ್ತಿಗಾಯಕರಾದ ಕರಪಾಲದವರು, ದೊಂಬಿದಾಸರು, ನೀಲಗಾರರು, ಮಂಟೇಸ್ವಾಮಿ ಪರಂಪರೆಯವರು, ತೆಲಗು ಜಂಗಮರು, ಚೌಡಿಕೆಯುವರು ಮುಂತಾದವರು ಹಾಡುವ ಹಾಡುಗಳನ್ನು ಮೂಲಮಟ್ಟುಗಳಲ್ಲಿಯೇ ಅನುಸರಿಸಿ ಹಾಡಲು ಪ್ರಯತ್ನಪಟ್ಟೆ. ಆ ದಿನಗಳಲ್ಲಿ ಆ ರೀತಿಯಲ್ಲಿ ಯಾರೂ ಹಾಡುತ್ತಿರಲಿಲ್ಲ. ಕಾರಣ, ಹಾಡುಗಳನ್ನು ಸಂಗ್ರಹಿಸುತ್ತಿದ್ದರ ವಿದ್ವಾಂಸರನ್ನೂ ಕೂಡ ಕಾಡಿದ ವಿಷಯವಿತ್ತು. ಅದೆಂದರೆ, ಹಾಡಿನ ಮಧ್ಯೆ ಮಧ್ಯೆ ಬರುತ್ತಿದ್ದ ವಚನ ಯಾವ ಶೈಲಿಯಲ್ಲಿ ಈ ಹಾಡನ್ನು ಹಾಡಬೇಕು? ಹೇಗೆ ಹಾಡಬೇಕು ಎಂಬ ಯಾವುದೇ ತೆರನಾದ ಮಾದರಿಗಳು ಇರಲಿಲ್ಲ. ಆದ್ದರಿಂದ ನಾನು ಹಾಡುವ ಮೂಲಮಟ್ಟುಗಳು ಹಾಗೂ ಶೈಲಿ ಹೊಸ ಸಂಚಲನವನ್ನೇ ಮೂಡಿಸಿತು. ಆವಾಗ ಮೂಲ ಸಾಹಿತ್ಯ, ಮೂಲ ಮಟ್ಟುಗಳನ್ನು ಬಿಟ್ಟು ಎಂದೂ ಹಾಡಕೂಡದು ಎಂದು ನನಗೆ ನಾನೇ ವಿಧಿಸಿಕೊಂಡ ನಿಯಮವಾಗಿತ್ತು. ಇನ್ನೊಂದು ಧ್ವನಿಸುರುಳಿ ಮಾಡಿಕೊಡುವ ಸಂದರ್ಭವನ್ನು ಅವರು ನೆನಪಿಸಿಕೊಳ್ಳುವುದು ಹೀಗೆ ;

"ಕ್ಯಾಸೆಟ್ ಮಾಡಿಕೊಡುವ ಸಂದರ್ಭವೊಂದು ಒದಗಿ ಬಂದಾಗ ನಾನು ಸ್ವತಃ ಮೂಲ ಮಟ್ಟುಗಳಲ್ಲಿಯೇ ಹಾಡು ಹೇಳಿದೆ. ಆದರೆ ಈ ರೀತಿ ಹಾಡಿದರೆ ಕ್ಯಾಸೆಟ್ ಮಾರಾಟವಾಗುವುದಿಲ್ಲ ಎಂದು ತಿಳಿದು ಯುವರಾಜ್‌ರಂತಹ ಸಂಗೀತ ಸಂಯೋಜಕರು, ಹಾಡುಗಾರರು, ಮಾಲೀಕರು, ಮಾರುಕಟ್ಟೆಯ ದೃಷ್ಟಿಯಿಟ್ಟುಕೊಂಡು ಹೊಸದಾಗಿ ರಾಗಸಂಯೋಜನೆ ಮಾಡಿ ಕ್ಯಾಸೆಟ್ ಹೊರತಂದರು. ಈ ಸಂದರ್ಭದಲ್ಲಿ ಒಂದು ಹಾಡನ್ನು ನೆನಪಿಸಿಕೊಂಡರು. ಅದು :

ಹಾಲ್ಹರವಿ ಬಂದೊ ನೂರೊಂದಾಲ್ಹರವಿ ಬಂದೊ
ಹಾಲ್ಹರವಿ ಮ್ಯಾಲ್ಹೂವಿನ ದಂಡೆ ವಾಲಾಡಿ ಬಂದೊ ? ಸೊಲ್ಲು/
ಆಲಂಬಾಡಿಂದ ವಾಲುಗ ಮಾಡಿಕೊಂಡು
ವಾಲಾಡಿಕೊಂಡು ಏಳುಮಲೆಗೆ ಹಾಲ್ಹರವಿಬಂದೊ /
ಹಾಲುಳ್ಳ ತುಂಬಿ ಜಾಲಾದ ಕೊಳ ತುಂಬಿ
ಜೋಲುತ್ತಾ ವಾಲುತ್ತಾ ಏಳು ಮಲೆಗೆ ಹಾಲ್ಹರವಿ ಬಂದೊ/

ಸರಗೂರಿನಿಂದ ಸರಣಾರು ಬಂದಾರು
ಮಜ್ಜನದ್ಹೊತ್ತಿಗೇಳು ಮಲೆಗೆ ಹಾಲ್ಹರವಿ ಬಂದೊ /
ತಾಳುಬೆಟ್ಟದಲಿ ತಮಟೆಯ ಸದ್ದೇನೋ
ತಮಟೆಯ ಸದ್ದಲ್ಲಿ ಏಳು ಮಲೆಗೆ ಹಾಲ್ಹರವಿ ಬಂದೊ/
ಆನೆ ದಿಂಬದಲಿ ಆನಂದವೇನಮ್ಮ
ಆನಂದಕಾರನ ಏಳುಮಲೆಗೆ ಹಾಲ್ಹರವಿ ಬಂದೊ/
ಹಾಲ್ಹರವಿ ಬಂದೊ ನೂರೊಂದಾಲ್ಹರವಿ ಬಂದೋ
ಮಾದೇವ್ನ ಮಜ್ಜಣದೊತ್ತಿಗೇಳು ಮಲೆಗಾಲ್ಹರವಿ ಬಂದೋ /

ಎಂಬ ಹಾಡನ್ನು ಶಿವಮೊಗ್ಗದ ಹೆಸರಾಂತ ಸಂಗೀತ ನಿರ್ದೇಶಕ ವೇಣುಗೋಪಾಲ ಮತ್ತು ಕೆ. ಯುವರಾಜ್ ಮುಂತಾದವರೆಲ್ಲಾ ಸೇರಿಕೊಂಡು ಸ್ವಲ್ಪ ಗಿಮಿಕ್ ಮಾಡ್ತೀನಿ ಅಂತ ಹೇಳ್ಬಿಟ್ಟು ನಾನು ಹಾಡುವ ಮೂಲರಾಗಗಳನ್ನು ಹಾಳು ಮಾಡಿದರು. ಕ್ಯಾಸೆಟ್ ಮಾತ್ರ ಪ್ರಸಿದ್ಧವಾಯಿತು. ನಾವೆಲ್ಲ 'ಏನ್ರೀ ಯುವರಾಜ್ ಮಾರ್ಕೆಟ್‌ಗೋಸ್ಕರ ಮೂಲರಾಗಗಳನ್ನು ಹೀಗೆ ಹಾಳು ಮಾಡಬಾರದಿತ್ತು ಎಂದಾಗ. 'ಇಲ್ಲ ರಾಜಶೇಖರ ಅವರೇ ಇವೆಲ್ಲಾ ಮಾಡದೇ ಹೋದರೆ ಇಂದಿನ ಕಾಲದಲ್ಲಿ ಅವುಗಳಿಗೆ ಮಾರ್ಕೆಟ್ಟಿರೋದಿಲ್ಲ' ಎಂದು ಹೇಳಿದರು.

ಅಲ್ಲದೆ, 'ಹಾಲರವಿ....' ಎಂಬ ನನ್ನ ರಾಗಗಳನ್ನು ಬಹಳಷ್ಟು ಬದಲಿಸಿ ಹಾಡಿದರು. ಆ ಹಾಡುಗಳು ಮಲೆಮಾದೇಶ್ವರ ಕ್ಯಾಸೆಟ್ ಮೂಲಕ ಜನಪ್ರಿಯವೇನೋ ಆದವು. ಇದರಿಂದ ನನಗೆ ತೀವ್ರ ಬೇಸರವುಂಟಾಯಿತು.

ಮತ್ತೊಂದು ಸಂದರ್ಭದಲ್ಲಿ ಗಾಯಕಿ ಬಿ.ಕೆ. ಸುಮಿತ್ರಾ ಅವರು, "ನೋಡಿ ರಾಜಶೇಖರ, ಈ ಹಾಡುಗಳನ್ನು ಚೇಂಜ್ ಮಾಡಿ ಹಾಡಲಿಲ್ಲ ಅಂದ್ರೆ ಯಾರು ದುಡ್ಡು ಕೊಟ್ಟು ಕ್ಯಾಸೆಟ್ ಕೇಳ್ತಾರೆ" ಅಂದಾಗ, "ನಿಮ್ಮ ಲಾಭಕ್ಕೆ ಜನಪದ ಹಾಡುಗಳನ್ನು ಮೂಲ ರಾಗಗಳೊಂದಿಗೆ ಹಾಡುವ ಮೂಲ ಜನಪದ ಗಾಯಕರನ್ನು ಕೊಲೆ ಮಾಡಿದಂತಾಗುತ್ತದೆ. ಅವರ ಕತ್ತನ್ನು ಹಿಸುಕಿ ಹಾಕಿದಂಗಾಗುತ್ತೆ, ಅವರಿಗೆ ಅನ್ಯಾಯ ಮಾಡಿದಂತಾಗುತ್ತದೆ" ಎಂದು ಉತ್ತರ ಹೇಳಿದೆ. ಅದು ಅವರಿಗೆ ಹಿಡಿಸಲಿಲ್ಲ. ಸತ್ಯ ಹೇಳಿದರೆ ಕೆಲವರಿಗೆ ಸಹಿಸಲು ಆಗುವುದಿಲ್ಲ ಎಂದು ಹೇಳಿದೆ ಎಂದು ನೆನಪಿಸಿಕೊಂಡರು.

ಮತ್ತೊಮ್ಮೆ ಹಂಸಲೇಖ ಅವರು "ನೋಡಿ ರಾಜಶೇಖರ ನೀವು ಮೂಲ ಮೂಲ ಎಂದು ಹೇಳಿಕೊಳ್ಳುತ್ತೀರಿ, ಆದರೆ ನಾನು ಜಾನಪದ ಹಾಡುಗಳನ್ನು ಬೀದಿ ಬೀದಿಗಳಲ್ಲಿ ಚೆಲ್ಲಾಡಿ ಬಿಡತೀನಿ, ನೋಡ್ತಿರಿ" ಎಂದು ಹೇಳಿ 'ಸೇವಂತಿ' ಸಿನೆಮಾದಲ್ಲಿ ಜಾನಪದ ಹಾಡುಗಳನ್ನು ಹೇಗ ಬೇಕೋ

ಹಾಗೆ ಬಳಸಿಕೊಂಡರು. ಆದರೂ ಆ ಹಾಡುಗಳು ಸ್ವಲ್ಪೇ ದಿನ ಜನರ ಮನಸ್ಸಿನಿಂದ ಮರೆಯಾದವು. ಆದರೆ ೧೯೭೦ ರಿಂದ ಇಂದಿನವರೆಗೂ ನಾವು ಹಾಡುವ ಜನಪದ ಮೂಲ ಮಟ್ಟುಗಳು ಜನರ ಮನಸ್ಸಿನಲ್ಲಿ ಅಚ್ಚಳಿಯದಂತೆ ಉಳಿದುಕೊಂಡಿವೆ. ಹೀಗೆ ಹಾಡುತ್ತಿದ್ದರಿಂದಲೇ ಹೊನ್ನಾರು ಗಾಯನ ತಂಡಕ್ಕೆ ಎಲ್ಲಿಲ್ಲದ ಮಹತ್ವ ದೊರಿತಿದೆ. ಆದ್ದರಿಂದ ಜನಪದ ಗೀತೆಗಳು ಮತ್ತು ಶಾಸ್ತ್ರೀಯ ಸಂಗೀತ ಉಳಿದುಕೊಂಡು ಬಂದಂತೆ ಸಿನೇಮಾ ಸಂಗೀತ ಉಳಿಯಲಿಲ್ಲ ಎಂದು ಅಭಿಮಾನಪಟ್ಟು ಹೇಳಿಕೊಂಡರು. ಈವೆಲ್ಲವುಗಳ ನಡುವೆ ನಾನೊಬ್ಬ ಜನಪ್ರಿಯ ಗಾಯಕರಾಗಿ ನಾಡಿನಾದ್ಯಂತ ಪ್ರಸಿದ್ಧವಾದದ್ದು ಆವಾಗಲೇ" ಎಂದು ಸ್ಮರಿಸಿಕೊಂಡರು ಪಿಕೆಆರ್.

ಸುದೀರ್ಘ ಹಾಡಿನ ಗುಟ್ಟಿನ ಮೂಲ

"ನಮ್ಮ ಜನಪದರು ದೀರ್ಘ ಕಾವ್ಯಗಳನ್ನು ಹಾಡುತ್ತಿದ್ದರು. ಮಂಟೆಸ್ವಾಮಿ ಕಾವ್ಯ, ಮಲೆಮಹದೇಶ್ವರ ಕಾವ್ಯ ಮುಂತಾದವುಗಳನ್ನು ರಾತ್ರಿ ಹಾಡಲು ಶುರುಮಾಡಿ ಬೆಳಗಾಗೋ ತನಕ ಹಾಡುತ್ತಿದ್ದ ಜನಪದರಿಗೆ ಯಾವುದೇ ರೀತಿಯ ಆಯಾಸವಾಗಲಿ, ಮರೆವು ಆಗಲಿ ಇರುತ್ತಿರಲಿಲ್ಲ. ಅವರಿಗೆ ಹಾಗೆ ಸಾಧ್ಯವಾಗುತ್ತಿದ್ದುದು; ಪಲ್ಲವಿಗಳನ್ನು ಪುನರಾವರ್ತನೆ ಮಾಡುತ್ತ ಹಾಡುವುದು ಹಾಗೂ ಒಂದೇ ಮಟ್ಟದಲ್ಲಿ ಹಾಡುತ್ತಿದ್ದುದೇ ಕಾರಣ. ಜನಪದರು ಹಾಡುವ ಮೂಲ ಮಟ್ಟುಗಳು ಎಂದಿಗೂ ಜನರಿಗೆ ಬೇಸರ ಎನಿಸುವುದಿಲ್ಲ. ಮೂಲ ಮಟ್ಟುಗಳನ್ನು ಅನುಸರಿಸಿ ಹಾಡುವ ಹಾಡುಗಳನ್ನು ಇಂದಿಗೂ ಜನ ಇಷ್ಟಪಡುತ್ತಾರೆ. ಆದರೆ ಇಂದಿನ ಗಾಯಕರು, ಸಂಗೀತಗಾರರು ಮೂಲ ಮಟ್ಟುಗಳನ್ನು ಬದಲಿಸಿ ಹಾಡಬೇಕು ಎಂಬ ಲಾಭದ ದೃಷ್ಟಿ ಇಟ್ಟುಕೊಂಡು ಹಾಡುವುದರಿಂದ ಮೂಲ ಗಾಯಕರಿಗೆ ಮತ್ತು ಮಟ್ಟುಗಳಿಗೆ ಮೋಸ ಮಾಡಿದಂತಾಗುತ್ತದೆ. ಅಲ್ಲದೆ ಲಾಭಕ್ಕಾಗಿ ಅವರ ಕಲೆಯನ್ನು ಕೊಲೆ ಮಾಡಿದಂತಾಗುತ್ತದೆ" ಎಂದು ಅವರು ಬೇಸರಪಟ್ಟುಕೊಂಡರು.

ಅಮೆರಿಕಾದ ನೆನಪು

"ಅಮೆರಿಕಾದ ಅಕ್ಕ ಸಮ್ಮೇಳನದಲ್ಲಿ ನಾನು ಮತ್ತು ನನ್ನ ಸಹಗಾಯಕರು ಭಾಗವಹಿಸಿದಾಗ ವಿಶೇಷ ಮನ್ನಣೆ ಸಿಕ್ಕಿತು. ಮೂಲಮಟ್ಟುಗಳನ್ನು ಹಾಡುವುದರಿಂದಲೇ ನಮಗೆ ಹೆಚ್ಚು ಮಹತ್ವ ಬಂತು. ಅಕ್ಕ ಸಮ್ಮೇಳನದ ಸ್ಥಳಕ್ಕಿಂತ ಹತ್ತಿರದಲ್ಲಿರುವ ಕೆಲ ಅಭಿಮಾನಿಗಳು ತಮ್ಮ ತಮ್ಮ ಮನೆಗೆ ನಮ್ಮ ತಂಡವನ್ನು ಕರೆದುಕೊಂಡು ಹೋಗಿ ತಮಗೆ ಬೇಕಾದ ಹಾಡುಗಳನ್ನು ಹೇಳಿಸಿ ಸಂಭ್ರಮಪಟ್ಟರು. ಇದರಿಂದಾಗಿ ಅಮೇರಿಕಾದ ಕೆಲವು ಪ್ರದೇಶಗಳನ್ನು ನಾವು ಕಾಣುವ ಭಾಗ್ಯ

ಸಿಕ್ಕಿತು. ಅಲ್ಲಿದ್ದವರು ಕೇವಲ ಕಲಾಭಿಮಾನಿಗಳು ಮಾತ್ರ ಆಗಿರಲಿಲ್ಲ, ಮೇಲಾಗಿ ನಮ್ಮ ನಾಡಿನಿಂದ ಬಂದವರೆಂದು ತಿಳಿದು ತುಂಬ ಆದರಪೂರ್ವಕವಾಗಿ, ಗೌರವಪೂರ್ವಕವಾಗಿ ನೋಡಿಕೊಂಡರು. ನಮ್ಮಿಂದಾಗಿ ಅಲ್ಲಿದ್ದವರಿಗೆ ಕನ್ನಡವನ್ನು ಕೇಳುವ ಭಾಗ್ಯ ದೊರಕುತ್ತಿತ್ತು. ಅದಕ್ಕಾಗಿ ಅವರು ಸಂತಸಪಟ್ಟರು. ಅಲ್ಲಿಯವರ ಕಲಾಪ್ರೇಮ ಅನನ್ಯವಾದದು. ಅವರ ಉದಾರ ಅಂತಃಕರಣ ದೊಡ್ಡದು. ಕಲಾವಿದರನ್ನು ಹೇಗೆ ಗೌರವದಿಂದ ಕಾಣಬೇಕು ಎಂಬುದನ್ನು ನಾವು ಅವರಿಂದ ಕಲಿತುಕೊಳ್ಳಬೇಕು ಎಂದು ಎಷ್ಟೋ ಬಾರಿ ಅನಿಸಿದೆ" ಎಂಬುದಾಗಿ ಅಮೇರಿಕಾದ ಅನುಭವಗಳನ್ನು ನೆರದವರೆದುರು ತೆರೆದಿಟ್ಟರು.

ಅನಂತರ ಅವರು, ವೃತ್ತಿಗಾಯಕರು ಹಾಡುತ್ತಿದ್ದ ಹಾಡುಗಳನ್ನೂ ಅದರಲ್ಲೂ ದಕ್ಷಿಣ ಕರ್ನಾಟಕದಲ್ಲಿ ಹಾಡುತ್ತಿದ್ದ ಕೋಲಾಟದ ಪದವನ್ನು ಹಾಡಿದರು. ಅದು ಹೀಗಿದೆ :

ಶರಣು ಶರಣುವಯ್ಯ ಗಣನಾಯಕ
ನಮ್ಮ-ಕರುಣದಿಂದಲೀ ಕಾಯೋ ಗಣನಾಯಕ ॥ಸೊಲ್ಲು॥

ಯಳ್ಳುಂಡೆ ಜೇನು ತುಪ್ಪ ಗಣನಾಯಕ
ನಮ್ಗೆ ವಿದ್ಯಾವ ಕಲಿಸಯ್ಯ ಗಣನಾಯಕ
ಉದ್ದು ಹೋಳಿಗೆ ತುಪ್ಪ ಗಣನಾಯಕ
ನಿಂಗೆ ತಪ್ಪಾದೆ ಒಪ್ಪಿಸುವೆ ಗಣನಾಯಕ ॥ಸೊ॥

ಗೊನೆಮೇಗ್ಲ ಬಾಳೆ ಹಣ್ಣು ಗಣನಾಯಕ
ನಿಮಗೆ ಕಳಿಅಡ್ಕೆ ಚಿಗುರೆಲೆ ಗಣನಾಯಕ
ಕೊಂಬೆ ಮೇಗಳ ನಿಂಬೆ ಹಣ್ಣು ಗಣನಾಯಕ
ನಿಂಗೆ ಒಡುಗಾಯಿ ಈಡುಗಾಯಿ ಗಣನಾಯಕ ॥ಪ॥

ಕರ್ಪೂರ ಸಾಂಬ್ರಾಣಿ ಗಣನಾಯಕ
ಮರುಗು ಮಲ್ಲಿಗೆ ಜಾಜಿ ಗಣನಾಯಕ
ಹಸುರಂಗಿ ಕಾಲ್ಗಡಗ ಗಣನಾಯಕ
ನಿನ್ಗೆ ಕುಶಲದ ಮೆಲುಕಟ್ಟು ಗಣನಾಯಕ

ಮೂಷಿಕ ವಾಹನ ಗಣನಾಯಕ
ನಮ್ಮ – ಶಿವನ ಕುಮಾರನಯ್ಯ ಗಣನಾಯಕ

ನಿನ್ಗೆ – ಹೆಂಡ್ರಿಲ್ಲ ಮಕ್ಕಳಿಲ್ಲ ಗಣನಾಯಕ
ನೀನು– ಎದ್ದು ಬಾರಯ್ಯ ಸಿದ್ಧಿ ಗಣನಾಯಕ

ಬಿಲ್ಪತ್ರೆ ವನದಲ್ಲಿ ಗಣನಾಯಕ
ನಿನ್ನ – ಧ್ಯಾನಮಾಡಿ ನೆನೆದೆವಯ್ಯ ಗಣನಾಯಕ
ಕಂಟಕಹರ ನೀನು ಗಣನಾಯಕ
ನಮಗೆ ವರವನು ಪಾಲಿಸಯ್ಯ ಗಣನಾಯಕ

ಎಂದು ಸಂಗಡಿಗರೊಂದಿಗೆ ಪ್ರಸ್ತುತ ಪಡಿಸಿದರು. ಅಲ್ಲದೆ ಅವರು, ಪಿರಿಯಾಪಟ್ಟಣ ಕಾಳಗದ ಪ್ರಸಂಗವನ್ನು ಹೇಳುವ ಮೂಲಕ ಇಂದಿನ ಆಧುನಿಕ ಕಾಲಕ್ಕೆ ತಕ್ಕಂತೆ ಪಾರಂಪರಿಕ ಕಲೆಯ ಜೀವಂತಿಕೆಯನ್ನು ಆಕರ್ಷಕಗೊಳಿಸುವ ಕಲೆ ಅವರಿಗೆ ಕರಗತವಾಗಿದೆ. ಉದಾಹರಣೆಗೆ, ಅವರೇ ಹೇಳುವಂತೆ "ವೃತ್ತಿಗಾಯಕರಾದ ದೇವರಗುಡ್ಡರು, ನೀಲಗಾರರು, ದೊಂಬಿದಾಸರು ಮುಂತಾದವರು ಹಾಡುವ ಕಾವ್ಯಗಳನ್ನು ೧೯೭೦ರಲ್ಲಿ ಸಂಗ್ರಹಿಸುವುದಲ್ಲದೆ, ಅವುಗಳನ್ನು ಮೂಲ ಮಟ್ಟುಗಳೊಂದಿಗೆ ಹಾಡುವ ಪ್ರಯತ್ನ ಮಾಡಿದೆವು. ಅದರಲ್ಲಿ ಒಂದೊಂದು ಕಾವ್ಯಭಾಗದಲ್ಲಿ ಅತ್ಯಂತ ಆಕರ್ಷಕ ಕಥೆಗಳಿರುತ್ತವೆ; ಅವುಗಳಲ್ಲಿ ನೀಲಗಾರರು ಮತ್ತು ದೇವರಗುಡ್ಡರು ಹಾಡುವ ಕಾವ್ಯ 'ಬೆಟ್ಟದ ಚಾಮುಂಡಿ'. ಈ ಕಾವ್ಯದ ಆಕರ್ಷಕ ಕಥನಗೀತೆಯನ್ನು ಹಾಡಿದರು. ಅದು ಚಾಮುಂಡಿಯ ತಂಗಿ ಉತ್ತನಳ್ಳಿ ಮಾರಮ್ಮ ತನ್ನ ಭಾವನಾದ ನಂಜುಂಡೇಶ್ವರನನ್ನು ಕರೆತರಲು ಪ್ರಣಯ ರಾಯಭಾರಿಯಾಗಿ ಹೋಗುವ ಸನ್ನಿವೇಶದ ಆ ಕಥನಗೀತೆ ಹೀಗಿದೆ;

ತಂದನ್ನ ತಾನಾನಾ ತಂದನಾನಾ ತಾನಾನಾ
ತಂದನ್ನ ತಂದನ ತಾನಾ ತಂದನಾನಾ ತಾನಾನಾ /ಸೊಲ್ಲು/

ಕೇಳು ಕೇಳು ನನಕಂದ ಉತ್ತುನಳ್ಳಿ ಮಾರಮ್ಮ
ನಿನ್ನ ಭಾವನಾದ ನಂಜುಂಡೇಶ್ವರ
ಹೋಗಿ ಮೂರು ತಿಂಗಳಾಯಿತಲ್ಲವ್ವ
ಅವನು ಹೋದಾಗಿನಿಂದ ನನಕಂದ
ನನ್ನ ಜಲ್ಮಕ್ಕೆ ಅನ್ನ ನೀರು ನಿದ್ದೆಯೊಂದೂ ಸೇರಿಲ್ಲ
ನತ್ತೀಮ್ಯಾಲೆ ನರೇ ಬಂದಿರುವಂತಾ
ಮುದಿ ನನ್ನ ಸವ್ತೀರ್ಗೆ ಒಲುಕೊಂಡು ಕುಂತವುನಲ್ಲ–

ಅವುನ್ಗಾವಾದ್ರೂ ಕಚ್ಚಬಾರ್ದ
ಚೇಳಾದ್ರೂ ಚುಚ್ಚಬಾರ್ದ
ಹೊಟ್ಟೆಯ ನೋವು ಬಂದು
ಹಟ್ಟೀಗೆ ಹಿಡಿಯಬಾರ್ದ
ನಾಕಾರ ಜ್ವೊರ ಬಂದು
ನರಳಾಡಿ ಸಾಯಬಾರ್ದ
ಕಳ್ಳ ಅವುನಾಯ್ನ ತೊಡಿಯ
ಬರನಿಲ್ಲ ತಂಗ್ಯಮ್ಮ /ತಂದನ್ನ ತಾನಾನಾ/

ತಂಗಿ ಉತ್ನಳ್ಳಿ ಮಾರಿ
ನಂಜಾಲಗೂಡಿಗೆ ಹೋಗಿ
ಬಾವುಣ್ಸಿ ಕರ್ದು ಬಾರೆ
ಭಾವ ನಂಜಯ್ಯಾನ / ತಂದನ್ನ ತಾನಾನಾ/

ಅಕ್ಕ ಆಡಿದ ಮಾತ
ಚಿಕ್ಕ ತಂಗ್ಯಮ್ಮ ಕೇಳಿ
ಗಕ್ಕಾನೆ ತೇಜಿಯನೇರಿ
ಹೊಂಟಾಳು ಮಾರಮ್ಮ /ತಂದನ್ನ ತಾನಾನಾ/

ನಿಸ್ರಾತ್ರೆ ಜಾಮುವಂತೆ
ಕಲ್ಲೊ ನೀರು ಕರಗುವಂತ ವ್ಯಾಳ್ಯವಂತೆ
ಸಪ್ಪಟ್ಟು ಸರ್ರಾತ್ರೆಯಂತೆ
ಉತ್ನಳ್ಳಿ ಮಾರಮ್ಮನವರು
ಮುಳ್ಳೂರು ಗುಡ್ಡದ ಮ್ಯಾಲೆ
ಮತ್ತೊಂದು ಗುಡ್ಡ ಕುಂತಿರುವಂತೆ ಕುಂತಕೊಂಡು
ತನ್ನ ಭಾವುನಾದ ನಂಜುಂಡೇಶ್ವರನ್ನ
ಯಾವ್ರೀತಿ ಅತಿ ಪ್ರೀತಿಯಿಂದ ಕರೀತಿದ್ದಾಳೆ ಅಂದ್ರೆ–

ಭಾವ– ಮಾತನಾಡಯ್ಯ ಸಂಬು
ಮಾತೀಗೆ ಮರುಳಾದೆ
ಪ್ರೀತಿಯುಳ್ಳರಸೆ ಮಾತನ್ನಾಡೋ

ಸಂಬು– ಮಾತನ್ನಾಡೋ
ಎದ್ದು– ಬೀದಿಗೆ ಬಾರೋ
ಮುದ್ದುಳ್ಳ– ಮುಕುವ ತೋರೋ
ಅಂದಕೆ– ದನಿಯ ತೋರೋ
ಚಂದಕೆ– ಮಾತನ್ನಾಡೋ
ಚಂದ್ರಾಸೇಕರ ನಂಜುಂಡೇಸ
ಮನಾಸೆ ಇಲ್ಲವಯ್ಯೊ ನಿನ್ನ ಮಡದಿ ಮ್ಯಾಲೆ/

ಪಚ್ಚೆಯ ತೆನೆಗಳು ನೀವೆ
ಮೆಚ್ಚಿ ಮುಡಿಯೊಳು ನಾನೆ
ಎಚ್ಚಾಳುಗಾರ ಮಾತನ್ನಾಡೋ
ಹರನೆ– ಮಾತನ್ನಾಡೊ
ಗುರುವೆ – ಮಾತನ್ನಾಡೊ
ಶಿವನೆ – ಮಾತನ್ನಾಡೊ
ಶಂಕರ – ಮಾತನ್ನಾಡೊ
ದೊರೆಯೆ – ಮಾತನ್ನಾಡೊ
ಗಿರಿಗೆ – ಮಾತನ್ನಾಡೊ
ಹರಗ್ಹರ ಹರಗ್ಹರ ನಂಜುಂಡ ಲಿಂಗು
ಮನಾಸೆ ಇಲ್ಲವಯ್ಯೊ ನಿನ್ನ ಮಡದಿ ಮ್ಯಾಲೆ

ಕಪನೀಯ ಹೊಳೆಯ ಒಳುಗೆ
ಇಪರೀತವೇನಯ್ಯ
ಹಸುಗೊಂಡು ಇಸುವ ಧರಿಸಿದೋರೆ
ಹಸುಗೊಂಡು ಇಸವ ಧರಿಸೀದ ನಂಜುಂಡ ಲಿಂಗು
ಇಸವಾಸಕಾರ ಮಾತನ್ನಾಡೊ
ನಡುಗಾಡಿನಲ್ಲಿರೊ ನಂಜುಂಡ ಗುರುವೆ
ಮನಾಸೆ ಇಲ್ಲವಯ್ಯೊ ನಿನ್ನ ಮಡದಿ ಮ್ಯಾಲೆ/

ತಾಳೇಯ ಗರಿಗಳು ನೀವೆ
ಸೀಳಿ ಮುಡಿಯೋಳು ನಾನೆ
ಸೀಲುಗಾರ ನಂಜುಂಡ ಮಾತನ್ನಾಡೊ
ಭಾವ – ಮಾತನ್ನಾಡೊ

ಎದ್ದು- ಬೀದಿಗೆ ಬಾರೋ
ಮುದ್ದುಳ್ಳ- ಮುಕುವ ತೋರೋ
ಅಂದಕೆ- ದನಿಯ ತೋರೋ
ಚಂದಕೆ- ಮಾತನ್ನಾಡೋ
ಸೈ ಸೈ ಸೈ ಸೈ ನಂಜುಂಡ ಲಿಂಗು
ಮನಾಸೆ ಇಲ್ಲವಯ್ಯೊ ನಿನ್ನ ಮಡದಿ ಮ್ಯಾಲೆ/

ಉತ್ತುನಳ್ಳಿ ಮಾರಮ್ಮನವರು
ತನ್ನ ಭಾವನಾದ ನಂಜುಂಡೇಶ್ವರನ್ನ
ಕರಿಯೋದು ಮೂರು ಮಾತು ಕರುದು
ಕೂಗೋದು ಮೂರು ಮಾತು ಕೂಗಿ-
ಹಿಂದಿರುಗಿ ಬರುವಳಲ್ಲೊ
ರಂಭೆ ಉತುನಳ್ಳಿ ಮಾರಿ /ತಂದನ್ನ ತಾನಾನೊ/

ಎಂಬ ಈ ಪೌರಾಣಿಕ ಕಥನಗೀತೆಯನ್ನು ಅತ್ಯಂತ ಆಕರ್ಷಕವಾಗಿ ಹೇಳಿದರು. ಅಲ್ಲದೆ, ಗದ್ಯಗಂದಿ ಪದ್ಯ, ಪದ್ಯಗಂದಿ ಗದ್ಯದಲ್ಲಿರುವ ಈ ಹಾಡನ್ನು ಸಂಗ್ರಹಿಸಿ ಬರೆದುಕೊಳ್ಳುವುದು ಎಂದರೆ ಅಷ್ಟು ಸುಲಭದ ಕೆಲಸವಾಗಿರಲಿಲ್ಲ.

ಕರಾಕೃ ಅವರಿಗೆ ವೃತ್ತಿಗಾಯಕರನ್ನು ಟಚ್ ಮಾಡಲಿಕ್ಕೆ ಆಗಲಿಲ್ಲ. ಯಾಕಂದರೆ ಮಾತಿನ ರೂಪದಲ್ಲಿರುವ ಈ ಹಾಡನ್ನು ಹೇಗೆ ಬರೆದುಕೊಳ್ಳುವುದು ಎನ್ನುವ ಸಂದೇಹ ಕರಾಕೃ ಸೇರಿದಂತೆ ಆಗಿನ ಕಾಲದಲ್ಲಿ ಎಲ್ಲ ಸಂಗ್ರಾಹಕರನ್ನು ಕಾಡಿದ್ದಂತೂ ಸತ್ಯ. ಆದ್ದರಿಂದ ಕರಾಕೃ ಅವರು ದೊಂಬಿದಾಸರ ಹಾಡುಗಳನ್ನು ಮಾತ್ರ ಸಂಗ್ರಹಿಸಿದರು. ಆದರೆ ನೀಲಗಾರರು, ದೇವರಗುಡ್ಡರು ಹಾಡುವ ಕಾವ್ಯಗಳನ್ನು ಮುಟ್ಟಲಿಕ್ಕೆ ಅವರಿಂದ ಸಾಧ್ಯವಾಗಲಿಲ್ಲ. ಜೀಶಂಪ ಅವರು ಪ್ರಾರಂಭದಲ್ಲಿ ವೃತ್ತಿಗಾಯಕರ ಹಾಡುಗಳನ್ನು ಸಂಗ್ರಹಿಸುವ ಪ್ರಯತ್ನ ಮಾಡಿದರಾದರೂ, ಹಾಡುಗಳನ್ನು ಸಂಗ್ರಹಿಸುವಲ್ಲಿ ಗೊಂದಲುಗಳು ಇದ್ದೇ ಇದ್ದವು. ವೃತ್ತಿಗಾಯಕರನ್ನು ಗುರುತಿಸಿ ಅವರು ಹಾಡುವ ಕಾವ್ಯಗಳ ಕಲ್ಪನೆಯನ್ನು ಮೊಟ್ಟಮೊದಲಿಗೆ ಮೂಡಿಸಿದ ಕೀರ್ತಿ ಡಾ. ಪರಮಶಿವಯ್ಯ ಅವರಿಗೆ ಸಲ್ಲುತ್ತದೆ. ಉತ್ತರ ಕರ್ನಾಟಕ ಭಾಗದಲ್ಲಿ ಈ ಬಗೆಯ ಕೆಲಸಗಳನ್ನು ಮತ್ತು ತ್ರಿಪದಿಗಳನ್ನು ಸಂಗ್ರಹಿಸುವ ಕೆಲಸವನ್ನು ಡಾ. ಬಿ.ಎಸ್. ಗದ್ದಗಿಮಠರು ಮಾಡಿದರು.

ಹದಿನೆಂಟರ ವೈಶಿಷ್ಟ್ಯ

ಮಹಾಭಾರತದಲ್ಲಿ ೧೮ ಪರ್ವಗಳು ಹೇಗಾಯ್ತು ಎಂದು ಒಂದಸಾರೆ ನನಗೆ ಕುತೂಹಲವಾಗಿ, ೧೮ ಎನ್ನುವ ಸಂಖ್ಯೆ ಮಹಾಪುರಾಣಗಳಲ್ಲಿ ೧೮ ಉಪಪುರಾಣಗಳು, ಅವುಗಳಲ್ಲಿ ಮತ್ತೆ ಅನೇಕ ಉಪಪುರಾಣಗಳು ಇವೆ. ಭಗವದ್ಗೀತೆಗಳಲ್ಲಿ ೧೮ ಪರ್ವಗಳು ಇವೆ. ಹೀಗೆ ಹದಿನೆಂಟು ಹದಿನೆಂಟು. ಈ ಹದಿನೆಂಟರ ವೈಶಿಷ್ಟ್ಯ ಏನು? ಎಂದು ಹರಿಕಥೆ, ಕಾವ್ಯವಾಚನ ಮಾಡುವವರನ್ನೆಲ್ಲ ಕೇಳಿದೆ; ಏಳು-ಹನ್ನೊಂದು ಅಪಶಕುನದ ಸಂಖ್ಯೆಗಳು ಎಂಬುದು ನಮ್ಮಲ್ಲಿ ನಂಬಿಕೆ ಇದೆ. ಏಳು ಅಕ್ಷೋಹಿಣಿ ಪಾಂಡವರು, ಹನ್ನೊಂದು ಅಕ್ಷೋಹಿಣಿ ಕೌರವರು, ಏಳು ಪ್ಲಸ್ ಹನ್ನೊಂದು ಒಟ್ಟು ಹದಿನೆಂಟು, ಈ ಪ್ರಕಾರವಾಗಿ ಹದಿನೆಂಟು ಬಂತು" ಎಂದು ಹೇಳಿದರು. ಎಷ್ಟೋ ಸಂಸ್ಕೃತ ವಿದ್ವಾಂಸರನ್ನು ಕೇಳಿದರೂ ಸರಿಯಾಗಿ ಉತ್ತರ ಹೇಳಿಲ್ಲ. ಆದರೆ ನಾನು ಆ ಬಗ್ಗೆ ಬೆಟ್ಟದಬೀಡು ಸಿದ್ಧಶೆಟ್ಟರನ್ನು ಕೇಳಿದೆ. ಆವಾಗ, ಅದು ಹಾಗಲ್ಲ; ಅದಕ್ಕೆ ನಾನು ಉತ್ತರ ಹೇಳಿತೀನಿ ಎಂದು, "ಮಾರ್ಕಂಡೇಯನ ಕಥೆ" ಹೇಳಿದರು. ಮೃಕಂಡುವಿಗೆ ಶಿವ ಹೇಳಿದ, 'ನಿನಗೆ ಮಕ್ಕಳ ಫಲ ಇಲ್ಲ. ಆದ್ರೂವೆ ನಿನಗೆ ಹದಿನೆಂಟು ವರ್ಷದ ಸಾತ್ವಿಕ ಪುತ್ರ ಬೇಕಾ? ಅಥವಾ ನೂರು ವರ್ಷದ ದುಷ್ಟ ಪುತ್ರ ಬೇಕಾ ಎಂದು ಕೇಳಿದಾಗ, ಇಲ್ಲ ನನಗೆ ಹದಿನೆಂಟು ವರ್ಷದ ಹುಡಗನೇ ಸಾಕು' ಎಂದು ವರ ಕೇಳಿಕೊಂಡ. ಕೊನೆಗೆ ನಾರದನಿಂದ ಮಾರ್ಕಂಡೇಯ ಗೊತ್ತಾಯಿತು ತನಗೆ ವರ್ಷ ಹದಿನೆಂಟು ವರ್ಷ ಆಯಸ್ಸು ಅಂತ. ನಾರದ ಆವಾಗ 'ನೀನು ಈಶ್ವರನನ್ನು ಮೊರೆ ಹೋಗು. ಅವನು ಮೃತ್ಯುಂಜಯ. ಅವನು ನಿನ್ನನ್ನು ರಕ್ಷಿಸುತ್ತಾನೆ' ಎಂದ. ಆಗ ಇವನು ಈಶ್ವರ ಪೂಜೆಗೆ ಕುಳಿತುಕೊಂಡನು. ಆಗ 'ಯಮದೇವ ಹದಿನೆಂಟು ವರ್ಷ ಆಯಿತು, ಅವನನ್ನು ಕರೆದುಕೊಂಡು ಬಾ ಎಂದು ದೂತರನ್ನು ಕರೆಕಳುಹಿಸಿದ. ಆದರೆ ಅವನು ದೇವಾಲಯದಿಂದ ಹೊರಗಡೆಗೆ ಬರಲಿಲ್ಲ. ಇದನ್ನು ತಿಳಿದುಕೊಂಡ ಯಮ 'ಹಾಗಾ, ನಾನೇ ಹೋಯ್ತೀನಿ ತಾಳು' ಎಂದು ತಾನೇ ಕರೆದುಕೊಂಡು ಬರಲು ಹೋದ. ಆದರೂ ಅವನು ದೇವಾಲಯದಿಂದ ಹೊರಗಡೆಗೆ ಬರಲಿಲ್ಲ. ಆಗ ಯಮನಿಗೂ ಒಂದಿಷ್ಟು ಕಷ್ಟ ಆಯಿತು. ಕಾರಣ ಯಮನಿಗೂ ಅಷ್ಟು ಸಲೀಸಾಗಿ ದೇವಾಲಯದೊಳಗೆ ಹೋಗಲು ಸಾಧ್ಯವಿರಲಿಲ್ಲ. ಹಾಗಾಗಿ ಯಮನಿಗೆ ಸಿಟ್ಟು ಬಂದು 'ಏಯ್ ಹುಡುಗ ಬೇಗ ಬಾರಯ್ಯ ಬಾರಯ್ಯ' ಎಂದು ಎಷ್ಟು ಕರೆದರೂ ಅವನು ಬರದೇ 'ಓಂ ನಮಃ ಶಿವಾಯ ಓಂ ನಮಃ ಶಿವಾಯ' ಎಂದು ತಪ್ಪಸ್ಸು ಮಾಡುತ್ತಿದ್ದ. ಆವಾಗ ಯಮನಿಗೆ ಸಿಟ್ಟು ಬಂದು ತನ್ನ ಯಮಪಾಶವನ್ನು ಪ್ರಯೋಗಿಸಿದ. ಆಗ ಅದು, ಲಿಂಗ ಸೇರಿದಂತೆ ಅವನ ತಲೆಯನ್ನೂ ಸಹ ಎಳೆಯುತ್ತ ಹೋಯಿತು. ಆಗ ಈಶ್ವರನಿಗೆ ಅವನ ಕುತ್ತಿಗೆಯನ್ನೂ

ಎಳೆದಂತಾಯಿತು. ಶಿವನಿಗೆ ಸಿಟ್ಟು ತಡೆದುಕೊಳ್ಳಲಾಗದೇ ರೌದ್ರಾವಾತಾರ ತಾಳಿ ಪ್ರತ್ಯಕ್ಷನಾಗುತ್ತಾನೆ. ಅಲ್ಲಿದ್ದ ಯಮನನ್ನು ಸಾಯಿಸಿಬಿಡುತ್ತಾನೆ. ಯಮನು ಸತ್ತು ಬಿದ್ದಿರುವುದನ್ನು ಕಂಡು ದೇವಾನುದೇವತೆಗಳು ಭಯಭೀತರಾಗುತ್ತಾರೆ. ಯಮ ಅಷ್ಟ ದಿಕ್ಪಾಲಕರಲ್ಲೊಬ್ಬ, ಅಂಥವನನ್ನು ಈಶ್ವರ ಕೊಂದಬಿಟ್ಟ. ಇಂಥ ವೇಳೆಯಲ್ಲಿ ಅವನನ್ನು ಮಾತನಾಡಿಸಲು ಸಾಧ್ಯವೇ? ಎಲ್ಲರಿಗೂ ಭಯವಾಯಿತು. ತುಟಿ ಪಿಟಕ್ ಎನ್ನದೇ ಯಾರೂ ಏನೂ ಮಾತಾಡತಿಲ್ಲ, ಹದಿನೆಂಟು ದಿನದಿಂದ ಸೃಷ್ಟಿಕ್ರಿಯೆ ಆಗುತ್ತದೆ. ಆದರೆ ಯಮನಿಲ್ಲದುದರಿಂದ ಲಯ ಆಗುತ್ತಿಲ್ಲ. ಇತ್ತ ಯಮನ ಆ ಹೆಣ ಅಲ್ಲಿಯೇ ಬಿದ್ದಿತ್ತು. ಅಲ್ಲಿದ್ದ ದೇವಾನುದೇವತೆಗಳು ಈಶ್ವರನ ಹತ್ತಿರ ಹೋದರು. ಅಷ್ಟೊತ್ತಿಗಾಗಲೇ ಈಶ್ವರನ ಕೋಪ ಸ್ವಲ್ಪ ಕಡಿಮೆಯಾಗಿತ್ತು. 'ನೋಡಿ ಸ್ವಾಮಿ, ಹದಿನೆಂಟು ದಿನಗಳಿಂದ ಈ ಜಗತ್ತಿನಲ್ಲಿ ಒಂದೇ ಸಮನೆ ಸೃಷ್ಟಿಯಾಗುತ್ತಿದೆಯೇ ಹೊರತು ಲಯ ಆಗುತ್ತಿಲ್ಲ. ಆದ್ದರಿಂದ ಯಮನನ್ನು ಕೊಂದಬಿಟ್ಟರೆ ಸೃಷ್ಟಿ ಮತ್ತು ಲಯಗಳ ಸಮತೋಲನ ಆಗುವುದಿಲ್ಲ. ಆದ್ದರಿಂದ ಇದನ್ನು ಹೇಗೆ ಸರಿ ಮಾಡೋದು? ಯಮನನ್ನು ಬದುಕಿಸಿ' ಅಂತ ಕೇಳಿಕೊಂಡಾಗ, 'ಓಹೋ! ಕೋಪದಲ್ಲಿ ಈ ಒಂದು ಕೆಟ್ಟ ಕೆಲಸ ಆಗಿಬಿಡ್ತು. ಇಲ್ಲ ಯಮನನ್ನು ಬದುಕಿಸುತ್ತೇನೆ" ಎಂದು ಹೇಳಿ, ತಕ್ಷಣವೇ ಬಂದು ಯಮನಿಗೆ ಜೀವ ಕೊಟ್ಟ. ಆಮೇಲೆ ಯಮ ಎದ್ದ. ಏಳತಾ ಏಳತಾ 'ಅಬ್ಬಾ ! ಯಾವುದೇ ಕಾರಣಕ್ಕೂವೇ ಈ ಯಮನ ಪದವಿಯ ಸಹವಾಸವೇ ಬೇಡ' ಅಂತ ಹಟಹಿಡಿದ. ಯಮ ಎಂದರೆ ಕಂಟ್ರೋಲರ್. ಸಾವು ಮತ್ತು ಹುಟ್ಟುಗಳನ್ನು ಸಮತೋಲನ ಮಾಡುವುದು, ಆದ್ದರಿಂದ ನೀನೆ ಕಣಯ್ಯ ಹೆಚ್ಚಿನವ ಅಂತ ಎಲ್ಲರೂ ಹೇಳತಿದಾರೆ. ಆದರೆ ಯಮನಿಗೆ ಅದ್ಯಾವುದೂ ಬೇಡಾಗಿದೆ. ಆಮೇಲೆ ವಿಷ್ಣು ಬಂದು ಸಮಾಧಾನ ಮಾಡಿ, ನೋಡಪ್ಪ ಒಪ್ಪಿಕೊ ಮಾರಾಯ ಎಂತ ಹೇಳಿ ಕಷ್ಟಪಟ್ಟು ಒಪ್ಪಿಸಿದ ಮೇಲೆ 'ಒಪ್ಪಿಕೊಬಹುದು. ಆದರೆ, ಹದಿನೆಂಟು ದಿನದಿಂದ ಹದಿನೆಂಟು ಅಕ್ಷೋಹಿಣಿ ಜನಸಂಖ್ಯೆ ಹೆಚ್ಚಾಗಿದೆಯಲ್ಲ, ಅದನ್ನು ಸಮ ಮಾಡೋದಕ್ಕೆ ನನ್ನ ಕೈಯಿಂದ ಆಗೋದಿಲ್ಲ' ಎಂದ. ಆಗ ವಿಷ್ಣು 'ನೀನೇನೂ ಯೋಚನೆ ಮಾಡಬೇಡ, ದ್ವಾಪರಯುಗದಲ್ಲಿ ನಾನು ಹುಟ್ತೀನಿ. ಆಗ ಹದಿನೆಂಟು ದಿನಗಳ ಕೆಲಸವನ್ನು ನಾನು ವಹಿಸಿಕೊಳ್ಳುತ್ತೀನಿ. ಆಗ ನಾನು ಆ ಹದಿನೆಂಟು ಅಕ್ಷೋಹಿನಿಯನ್ನು ಲಯ ಮಾಡುತ್ತೇನೆ. ಈಗ ನಿನಗೆ ಸಮಾಧಾನವಾಯಿತೆ?' ಎಂದು ಹೇಳಿದ. ಅದಕ್ಕೋಸ್ಕರ ಹದಿನೆಂಟು ಅಕ್ಷೋಹಿಣಿ ಸೈನ್ಯ, ಹದಿನೆಂಟು ದಿನದ ಯುದ್ಧ, ಹದಿನೆಂಟು ಪರ್ವ ಆಯಿತು" ಎಂದು ನಮ್ಮ ಕಲಾವಿದರು ಹೇಳುತ್ತಾರೆ. ಇದು ಯಾವ ಶಿಷ್ಟ ಕಾವ್ಯದಲ್ಲೂ ಇಂಥ ಮಾಹಿತಿ ಸಿಗೋದಿಲ್ಲ. ಎಂದು ರಸವತ್ತಾಗಿ ಕಥೆಯನ್ನು ಹೇಳಿದರು ಪಿಕೆಆರ್.

ಅರ್ಜುನ ಜೋಗಿ ಕಥಾಪ್ರಸಂಗ

ಅರ್ಜುನ ಆಕಸ್ಮಿಕವಾಗಿ ತೀರ್ಥಯಾತ್ರೆಗೆ ಹೋಗಬೇಕಾಯಿತು. ಅವನು ತೀರ್ಥಯಾತ್ರೆ ಮುಗಿಸಿಕೊಂಡು ಮರ್ಯಾದೆಯಿಂದ ಮರಳಿ ಬರಬೇಕಾಗಿತ್ತು. ಆದರೆ ಇವುನು ಅಲ್ಲ್ಯಾರೋ ಉಲೂಚಿ, ಇನ್ಯಾರೊ ಚಿತ್ರಾಂಗದೆ ಅನ್ನುವವರನ್ನು ಪ್ರೀತಿಸಿಕೊಂಡು ಕುಳಿತಿದ್ದ. ಇದನ್ನು ತಿಳಿದ ಕೃಷ್ಣ 'ನನ್ನ ತಂಗಿ ಸುಭದ್ರೆಯ ಗತಿಯೇನು' ಅಂತ ಮಯಾಮೋಡಿಯಿಂದ ಅರ್ಜುನನನ್ನು ಬರಮಾಡಿಕೊಂಡು ಅವನೊಡನೆ ತನ್ನ ತಂಗಿ ಸುಭದ್ರೆಯನ್ನು ಕಳುಹಿಸಿಕೊಟ್ಟಬಿಟ್ಟ, ಇಷ್ಟೆಲ್ಲಾ ಆಯ್ತು. ಇಷ್ಟೆಲ್ಲಾ ಮುಗಿದ ಮೇಲೆ ಅರ್ಜುನನಿಗೆ ಮರೆವು ಕೊಟ್ಟಬಿಟ್ಟಿದ್ದಾನೆ ಕೃಷ್ಣ ಆದ್ದರಿಂದ ಅರ್ಜುನನಿಗೆ ಇಪ್ಪತ್ತೈದು ವರ್ಷಗಳಿಂದ ಉಲೂಚಿ, ಚಿತ್ರಾಂಗದೆ ಯಾರು ಎಂಬುದೇ ಮರೆತು ಹೋಗಿತ್ತು. ಪಾಪ ಅವರಿಬ್ಬರೂ ಒಂದೇ ಸಮನೆ ಅಳುತ್ತಾ ಕುಳಿತರು. ಅವರ ಶೋಕ ಕೈಲಾಸಕ್ಕೆ ಕೇಳಿಸಿತು. ಆಗ ಕೈಲಾಸದಲ್ಲಿ ಪಾರ್ವತಿ ಈಶ್ವರನಿಗೆ 'ಯಾರು ಈ ತರಹ ದುಃಖ ವ್ಯಕ್ತಪಡಿಸುತ್ತಿದ್ದಾರೆ' ಎಂದು ಕೇಳುತ್ತಾಳೆ. ಆಗ ಈಶ್ವರ 'ಪಾರ್ವತಿ ನೋಡು, ನಿನ್ನ ಶಿಷ್ಯ ಮಾಡಿರೊ ಕೆಲಸ ಇದು.' 'ಹೌದಾ! ಅಲ್ಲಾರಿ, ಅವನದಲ್ಲ ತಪ್ಪು, ಆ ಕೃಷ್ಣ ಇದಾನಲ್ಲ, ಅವನ ಕಪಟದಿಂದ ಈ ಕೆಲಸ ಆಗಿರೋದು' ಎಂದು ಪಾರ್ವತಿ ಹೇಳುತ್ತಾಳೆ. ಮರೆತಿರುವ ಅರ್ಜುನನಿಗೆ ನೆನಪು ಮರುಕಳಿಸುವಂತೆ ಮಾಡೆಂದು ಶಿವ ಹೇಳಿದಾಗ ತನ್ನ ಕುತ್ತಿಗೆಯಲ್ಲಿರುವ ಎರಡು ಮಣಿಗಳನ್ನು ತೆಗದು ನೆಲಕ್ಕಿಡುತ್ತಾಳೆ. ಆ ಎರಡು ಮಣಿಗಳು ಎರಡು ಅಪರಂಜಿ ಗಿಳಿಗಳಾಗುತ್ತವೆ. ನೋಡಿ ನೀವು ಹೋಗಿ ಅರ್ಜುನನಿಗೆ ಹಾಗೂ ಚಿತ್ರಾಂಗದೆ, ಉಲೂಚಿಯರಿಗೆ ವಿಷಯವನ್ನು ತಿಳಿಸಬೇಕು. ಅವರಿಬ್ಬರೂ ಸಮಾಗಮ ಆಗುವ ರೀತಿಯಲ್ಲಿ ಸಹಕರಿಸಬೇಕು ಎಂದು ಹೇಳಿ ಅವುಗಳನ್ನು ಪಾರ್ವತಿ ಕಳುಹಿಸಿಕೊಡುತ್ತಾಳೆ. ಅವು ಅರ್ಜುನನ ಹತ್ತಿರ ಬಂದು 'ಏನಯ್ಯ ಎಂಥ ಕೆಲಸ ಮಾಡಿದ್ದೀಯೆ? ಪಾಪ ಆ ಹೆಣ್ಣು ಮಕ್ಕಳು ಎಷ್ಟು ದುಃಖ ಪಡಿಸುತ್ತಿದ್ದಾರೆ. ನೀನು ಹೋಗಿ ದಯವಿಟ್ಟು ಅವರನ್ನು ಸಂತೈಸು' ಅಂತ ಹೇಳುತ್ತವೆ. ಅಲ್ಲಿಂದ ಆ ಪಕ್ಷಿಗಳು ಚಿತ್ರಾಂಗದೆ ಉಲೂಚಿಯರ ಬಳಿಗೆ ಬಂದು 'ನೋಡಿ ಅಮ್ಮ, ನೀವೇನೂ ಕೊರಗಬೇಡಿ. ನಿಮ್ಮ ಗಂಡ ಬಂದೇ ಬರುತ್ತಾನೆ. ನೀವು ಅವನನ್ನು ಆರಾಧಿಸುತ್ತಿರಿ. ತಕ್ಷಣವೇ ನಿಮ್ಮನ್ನು ಸಂಧಿಸುತ್ತಾನೆ' ಎಂದು ಹೇಳುತ್ತವೆ. ಆಗ ಅರ್ಜುನ 'ಹೌದಾ! ಯಾಕಾರೂ ಇಂಥ ಮರುವು ಬಂತು ನನಗೆ? ಛೆ ಛೇ, ಛೇ...... ಅಂತ ಹೇಳಿಕೊಂಡು ದುಃಖಿಸುತ್ತಾನೆ. ಆಗ ದ್ರೌಪದಿ ಬಂದು 'ಯಾಕ್ರೀ ಯೋಚನೆ ಮಾಡ್ತೀದಿರಲ್ಲ?" ಎಂದು ಕೇಳುತ್ತಾಳೆ. ಆಗ 'ನಾನೊಂದು ಅನ್ಯಾಯ ಮಾಡಬಿಟ್ಟಿದ್ದೀನಿ ಕಣೆ.' 'ಏನು?., 'ಅದೇ ಆ ಚಿತ್ರಾಂಗದೆ ಮತ್ತು ಉಲೂಚಿಯರಿಗೆ ಇಪ್ಪತ್ತೈದು ವರ್ಷದಿಂದ ಹೀಗೆ.......... ಅಂದಾಗ 'ಇಪ್ಪತ್ತೈದಾ....... ಇಪ್ಪತ್ತೈದು

ವರ್ಷದಿಂದ ಹೆಣ್ಮಕ್ಕಳನ್ನು ಹಾಗೇ ಬಿಟ್ಟಬಿಟ್ಟರೆ ಯಾವ ಹೆಣ್ಣು ತಾನೇ ಪತಿವ್ರತೆಯಾಗಿರುತ್ತಾಳೆ,' ಎಂದಾಗ 'ಹಾಗೆಲ್ಲಾ ಹೇಳಿಬೇಡ, ಅವರೆಲ್ಲ ನಾಗಕನ್ನಿಕೆಯರು, ಬಹಳ ಒಳ್ಳೇವರು. ಅವರನ್ನೆಲ್ಲಾ ನೋಡಬೇಕು" ಎಂದು ಹೇಳಿದಾಗ, 'ರೀ ಮರ್ಯಾದೆಯಿಂದ ಬನ್ನಿ, ಸಾಕು ಕೂತ್ಕೋರಿ ಕಂಡಿದೀನಿ,' ಎಂದು ಪಗಡೆ ಆಟಕ್ಕೆ ಎಳೆಯುತ್ತಾಳೆ. ಅರ್ಜುನನಿಗೆ ಆಟದಲ್ಲಿ ಆಸಕ್ತಿ ಇರಲಿಲ್ಲ, ಅವನ ಧ್ಯಾನ ಎಲ್ಲಾ ಅವರ ಕಡೆಗೇ. 'ಏನು? ಎಲ್ಲಾ ಆಟದಲ್ಲಿ ಸೋಲತಿದೀರಿ ಯಾಕೆ?' ದ್ರೌಪದಿ ಕೇಳಿದಾಗ, 'ಇಲ್ಲ ಕಣೆ ನನಗೆ ಆಡೋಕೆ ಮನಸ್ಸೇ ಬರ್ತಿಲ್ಲ, ನಾನು ಅವರನ್ನ ನೊಡಬೇಕು' ಅರ್ಜುನ ಹೇಳುತ್ತಾನೆ. ಆಗ 'ಮಹಾಪತಿವ್ರತೆಯರನ್ನು ನೋಡೋಕೆ ಹೋಗ್ತೀನಂತಿರಲ್ಲ, ಒಂದು ಬೆಟ್ಸ್ ಕಟ್ಟೋಣ; ಏನು? 'ಆಕಸ್ಮಿಕವಾಗಿ ಅವರನ್ನು ನೋಡೋಕೆ ಹೋಗೋದಾದ್ರೆ, ನೀವು ಯಾರಿಗೂ ಗೊತ್ತಾಗದಂತೆ ವೇಷ ಹಾಕಿಕೊಳ್ಳಿ. ಇಲ್ದಿದ್ರೆ, ಅವರೆಲ್ಲ ಬೇರೆಯವರನ್ನು ಗಿಲೀಟು ಮಾಡಿ, ಆ ಅರ್ಜುನ ಬಂದ ಇಂದಿನವರೆಗೂ ನಾವು ಪತಿವ್ರತೆಯರಾಗೇ ಇದ್ದೀವಿ ಎಂದು ತೋರಿಸಿಕೊಂಡು ಬಿಡ್ತಾರೆ. ಮಾರುವೇಷದಲ್ಲಿ ಹೋಗಿ ಆ ಹುಡುಗಿಯರನ್ನೆಲ್ಲ ಹೇಗೋ ಮರುಳು ಮಾಡಿ ಒಲಿಸಿಕೊಳ್ಳಲು ಪ್ರಯತ್ನಿಸಿ. ಆಗೇನಾದ್ರೂ ಅವರು ಒಲಿದಬಿಟ್ರೆ ಅವರು ಪರಮಪತಿವ್ರತೆಯರಲ್ಲ ನಿನಗೆ ಮೊದಲಿದ್ದಂಗೆ ಹಾಗೊಂದು ವೇಳೆ ಒಲಿಯದೇ ಹೋದರೆ ಅವರು ಪರಮಪತಿವ್ರತೆಯರು ಅಂದಂಗೆ' ಎಂದು ಪರೀಕ್ಷೆ ಇಟ್ಟಳು. ಆಗ ಅರ್ಜುನ 'ನೀನು......?', 'ನಾನೇದ್ರೂ ಸೋತಬಿಟ್ರೆ, ನಾನು ಅವರ ಮನಗೆ ಹೋಗಿ ಅವರ ಮನೆಯಲ್ಲಿ ಗೌಡಿಯಾಗಿ ಬಿದ್ದಿರ್ತೀನಿ' ಎಂದಳು ದ್ರೌಪದಿ ಆಯಿತು ಅಂತ ಹೇಳಿ ಆಟ ಆಡ್ತಾರೆ. ಆಟದಲ್ಲಿ ದ್ರೌಪದಿ ಸೋತಬಿಡುತ್ತಾಳೆ. ಆಗ ಇಬ್ಬರೂ ಸಣ್ಣ ಜಗಳ ಕಾಯ್ತಾರೆ. ಅನಂತರ 'ಅಣ್ಣಾ, ನಾನು ಸೋತಬಿಟ್ಟಿದೀನಿ, ನಾನೀಗ ಅವರ ಮನೆಯಲ್ಲಿ ಇರೋದು ಅಂದ್ರೇ ಹೇಗಣ್ಣ?' ಎಂದು ದ್ರೌಪದಿ ಕೂಗಿಕೊಳ್ಳುತಾಳೆ. ಆಗ ತಕ್ಷಣವೇ 'ಕೃಷ್ಣ ಬ್ರಾಹ್ಮಣ ವೇಷದಲ್ಲಿ ಪ್ರತ್ಯಕ್ಷನಾಗಿ ಬಂದು, 'ಏನು? ಇಬ್ರೂ ಗಂಡ ಹೆಂಡ್ತೀರು ಜಗಳ ಆಡ್ತೀರಿಲ್ಲ, ಇಬ್ರಿಗೂ ನ್ಯಾಯ ಬೇಕಂದ್ರೆ ನಾನು ಆಟ ಆಡಸ್ತೀನಿ. ಅದಕ್ಕೆ ನಾನೇ ಅಂಪೈರ್ ಆಗ್ತೀನಿ' ಎಂದು ಹೇಳಿ ಒಂದು ಆಟ ಹೂಡ್ತಾನೆ. ಅದರಲ್ಲಿ ಕಪಟದಿಂದಾಗಿ ಅರ್ಜುನ ಸೋಲುತ್ತಾನೆ. ಆವಾಗ ಅರ್ಜುನ ಜೋಗಿ ವೇಷ ಹಾಕಿಕೊಂಡು ಉರೂರು ಅಲೆದುಕೊಂಡು, ಮಣಿಪುರಕ್ಕೆ ಬಂದು ತನ್ನ ಹೆಂಡ್ತೀರನ್ನು ಪರೀಕ್ಷೆ ಮಾಡಬೇಕಾಯಿತು. ಅಂಥದೊಂದು ಸನ್ನಿವೇಶ ಅರ್ಜುನನ ಪಾಲಿಗೆ ಬಂತು; ಆತನಿಗೆ ಎಲ್ಲ ಕೇರಿಗೆ ಹೋಗುವ ಪರಿಸ್ಥಿತಿ ಬಂತು. ಆಗ:

ಹರಹರಾ ಹರನೇ ಜಯಾತೊ–ಹರಮೂರು
ಪುರವಾ ಗೆದ್ದವನೆ ಜಯತೋ

ಕರುಣಾಸಾಗರ ಜಯತೋ ಉರಗಭೂಷಣ ಜಯತೋ
ಗರಳಪುರಿವಾಸ ಜಯತೋ । ಸೊಲ್ಲು ।

ಅರ್ಜುನನು ಒಂದು ವಾರ್ತೆ ಕಿನ್ನುಡಿ ಬಾರ್ಸಿದಾಗ
ಅದು ಅರವತ್ತಾರು ಬಾಷೆಗಳ ಆಡ್ತಿದ್ರೆ
ಮೂವತ್ತೆರಡು ಲಾದುಗಳನ್ನು
ಮುತ್ತಿನ ಗೊಂಬೆಗಳು ಪಾಡುದುವಂತೆ
ಅಪರಂಜಿ ಗಿಣಿಗಳು ರಾಗರಚನೆ ಮಾಡಿದುವಂತೆ
ಇವನ ಕಿನ್ನುಡಿ ಗಾನವನ್ನು ಕೇಳಿ
ಕೇರಿಜನ ಎಲ್ಲಾ ಬಂದುದ್ದೆ ದಗ್ಗೇ ಕಟ್ಕೊಂಡು ನೋಡ್ತಿದ್ದಾರೆ–

ಜೋಗಿ ಬಂದಾನು ಎನುತ– ಮನೆಮನೆಯ
ಬಾಗಿಲನು ತೆರೆದುಬಿಟ್ಟು
ನಾಗವೇಣಿಯರಿವನ ರಾಗರಚನೆ ಕೇಳಿ
ಆಗ ಬೇಗದಿ ಬಂದರು– ಇವ್ನ ನೋಡಲಿಕೆ
ಆಗ ಬೇಗದಿ ಬಂದರು।

ಹಸಿದಾದ ಹುಲಿಯ ಚರ್ಮ– ನನ್ಹರ ನಿಮಗೆ
ವಿಷಕಂಠ ರುಂಡಮಾಲೆ
ಹಸನಾದ ಜೋಗಯ್ಯ ಹೊಸದಾಗಿ ಬಂದವುನೆ
ಹೆಸರ ಕೇಳುವ ಬನ್ನಿರೇ ।

ಕೇರಿಜನ ಎಲ್ಲಾ ದಗ್ಗೇ ಕಟ್ಕೊಂಡು ನೋಡ್ಕೋಡ್ಕೊಂಡೋಯ್ತಿದ್ದಾರೆ
ಈ ಜೋಗಪ್ಪ ಆನಂದವಾಗಿ ಹೋಗ್ವಂತ ಕಾಲದಲ್ಲಿ
ಅಡ್ಗೆ ಮಾಡ್ತಿದ್ವಂತ ಹೆಂಗಸರು
ಒಲೆ ಮೇಲೆ ಹಾಲು ಕಾಯಿಸುತಕ್ಕಂತವರು
ಹಸು ಮಕ್ಕಳ್ಗೆ ಎದೆಪಾಲು ಕೊಡುತಕ್ಕಂತವರು
ಈ ಜೋಗಪ್ಪನ ನೋಡ್ಬುಟ್ಟು
ಅವುರೆಲ್ಲ ತಮ್ಮ ತಮ್ಮ ಕೆಲ್ಸಗಳ ಬುಟ್ಟು
ಜೋಗಪ್ಪನ ಬೆನ್ಹತ್ಕೊಂಡು ಹೋಗ್ತಿದ್ದಾರೆ
ಆಗ ಜೋಗಪ್ಪನವರು–

ಮುತ್ತೈದೆ ತಾಯಿಗಳಿರಾ– ನಾ ನಿಮಗೆ
ಪುತ್ರನ ಸಮನಲ್ಲವೇ– ತಾಯಮ್ಮ
ಪುತ್ರನ ಸಮನಲ್ಲವೇ
ಪುತ್ರರು ಅಳುತಾರೆ ಎತ್ತಿಕೊಳ್ಳೀರಮ್ಮ
ಅತ್ತಾಲೆ ಹೋಗಿರಮ್ಮ– ನಿಮ ಮನೆಗಳಿಗೆ
ಅತ್ತಾಲೆ ಹೋಗಿರಮ್ಮ ।

ಅರ್ಜುನ ಸ್ವಾಮಿಯು ಹಾಗಂತ ಹೇಳಿ
ಬಾರಿ ಕಿನ್ನುಡಿ ನುಡಿಸುತ್ತ
ಸಾರ ಸ್ವರಗಳ ಹಾಡುತ್ತ
ಯಾವ ರೀತಿ ನರ್ತನ ಮಾಡ್ತಾ ಇದ್ದಾನೆಂದರೆ–

ತೋಂಗ ತಕ ತಕಿಟ ತಕಿಟ– ತೈಯ್ಯೆನುತ
ತೈತೈಯ್ಯ ತೈಯ್ಯಯೆನುತ
ತೋಂ ತೈಯ್ಯ ತೈ ತಕಿಟ ತಾತ್ತಣಗು ತಾಯೆನುತ
ತರಿ ತಕಿಟ ತಕಿಟಯೆನುತ– ಕುಣಿಯುತ್ತ
ತರಿ ತಕಿಟ ತಕಿಟಯೆನುತ

ಅರ್ಜುನಸ್ವಾಮಿ ನಾಂಟ್ಯಗಳನ್ನು ಆಡುತ್ತ
ಕ್ವಾಮ್ಪಿಗಳ ಬೀದಿಗೆ ಬಂದನಂತೆ
ಕ್ವಾಮ್ಪಿ ಸ್ತ್ರೀಯರು ಅರ್ಜುನ ಸ್ವಾಮಿಯ
ಅಂದ ಚಂದಗಳನ್ನು ನೊಡಿ
ರಾಗರಚನೆಗಳನ್ನು ಕೇಳಿ
ನಾಂಟ್ಯಗಳಿಗೆ ಮರುಳಾಗಿ
ತಮ್ಮ ಭಾಷೆಯೊಳಗೆ ಆ ಕ್ವಾಮ್ಪಿ ಸ್ತ್ರೀಯರು
ತಾವು ತಾವೇ ಯಾವ್ರೀತಿ ಮಾತಾಡ್ತಾ ಇದ್ದಾರಂದ್ರೆ

ರಾವಮ್ಮ ಮೋಹನಾಂಗಿ– ಜೋಗಿನಿ
ಭಾವಮುಲು ಚೂಡುರಾವೆ
ರಾಜೀವಲೋಚುನುಡೊ ರತಿವಲ್ಲಭುಡೊ ಇತಡು
ಸೋಜಗಮು ಚೂಡುರಾವೆ– ಅಮ್ಮಮ್ಮ
ಸೋಜಿಗಮು ಚೂಡುರಾವೆ ।

ಈ ಅಂದಮು ಈ ಚಂದಮು– ಲೋಕಮುಲು
ಸುಂದರಮು ಚೂಪುರಾವೆ
ಈ ಬಂಧುರಮು ಪೆಂಪು ಗೋವಿಂದುಡೊ ರಾಮುಡೊ
ಆನಂದ ಜೋಗಿಯಿತಡೊ– ಚೂಪುರಾ
ಆನಂದ ಜೋಗಿಯಿತಡೊ

ಇಂತಪ್ಪ ಸುಂದರನ– ನಾವು ಕೂಡಿ
ಸುಖವನ್ನು ಪಡಿಯಬೇಕು
ಇಂತಪ್ಪ ಸುಂದರನ ಕೂಡಿ ಇವನಂಥ
ಗಂಡ್ಮಗನ ಪಡೆಯಬೇಕು– ನಾವುಗಳು
ಗಂಡ್ಮಗನ ಪಡೆಯಬೇಕು।

ಕೋಮ್ಬಿ ಸ್ತ್ರೀಯರು
ಅರ್ಜುನಸ್ವಾಮಿಯನ್ನು ಕೊಂಡಾಡ್ತ ಬೆನ್ನತ್ತಿ ಬರ್ತಿರಬೇಕಾದ್ರೆ
ಅವರ ಮಾತ್ನೆಲ್ಲ ಕೇಳ್ಕೊಂಡು ಜೋಗಪ್ಪನವರು

ಬಾಲುಳ್ಳ ತಾಯಿಗಳಿರಾ– ನಾ ನಿಮ್ಮ
ಬಾಲನ ಸಮನಲ್ಲವೇ
ಬಾಲನ ಸಮನಾದ ಜೋಗಿಯ ಜೊತೆಯಲ್ಲಿ
ನಿಮಗೆಂಥ ಮಾತುರವ್ವ– ತಾಯ್ಗಳಿರಾ
ನಿಮ–ಮಗನೆಂದು ತಿಳಿಯಿರವ್ವ

ಹಾಗಂತ ಹೇಳಿ ಜೋಗಪ್ಪನವರು
ಮುಸಲ್ಮಾನ್ರ ಕೇರಿಗೆ ಬಂದರಂತೆ–

ಜೋಗೀಯ ಸಪ್ತ ಕೇಳಿ – ಆ ಬೂಬಿಯರು
ಕಿಟಕಿ ಬಾಕಲ ತಗುದು
ಮಿಣಿ ಮಿಣಿ ಸೆರಗ್ಹೊದ್ದು ಪಿಣಿಪಿಣಿ ಕಣ್‌ಬುಡುತ
ಇಣಿಕಿಣಕಿ ನೋಡುತಾರೆ– ಜೋಗಿಯನು
ಇಣಿಕಿಣಕಿ ನೋಡುತಾರೆ ।

ಮುಸುಲ್ಮಾನ್ರು ಸ್ತ್ರೀಯರು
ಜೋಗಿಯ ಅಂದಚಂದವನ್ನು ಕಂಡು
ಸಂತೋಷದಿಂದ ಮನೆ ಒಳಗಿದ್ದೋರ್ನ ಕೂಗಿ ಕರ್ದು ಹೇಳ್ತಿದ್ದಾರೆ-

ಸುಲ್ತಾನ್ ಬೀ ಜಲ್ದಿ ಆಕೋ-ಜೋಗೀಕೇ
ಐಷಾ ತಮಾಷ ದೇಖೋ
ಜೋಗಿ ಮೋತಿ ಕ ಹಾರ್ ಗಲ್ಲೇಮೆ ದಾಲ್ಲೇಕರ್
ಜೋಗೀಕ ನಾಚು ದೇಖೊ- ಸುಲ್ತಾನ್ ಬೀ
ಜೋಗೀಕ ನಾಚು ದೇಖೊ ।

ಹಾತ್ಮೆ ಕಿನ್ನಾರ್ ಬಜಾತೆ-ಜೋಗೀಕಾ
ಪಾವುಮೆ ಗುಂಗೂರ್ ಪುಕಾರ್ತೆ
ಆತೆ ಜಾತೆ ಹಸ್ತೆ ಜಾತೆ ಆತೆ ಹಸ್ತೆ
ದೇಕ್ತೆ ತಮಾಷ ದೇಖೊ- ಜೋಗಿಕಾ
ದೇಕ್ತೆ ತಮಾಷ ದೇಖೋ ।

ಮುಸುಲ್ಮಾನ್ರ ಸ್ತ್ರೀಯರು
ಅರ್ಜುನ ಸ್ವಾಮಿಯ ರಾಗಗಳನ್ನು ಕೇಳಿ
ನಾಂಟ್ಯಗಳನ್ನು ನೋಡಿ ಅಚ್ಚಾ ಹೈ ಅಚ್ಚಾ ಹೈ ಅಂತ ಹೇಳಿ
ದ್ರಾಕ್ಷಿ ಗೋಡಂಬಿ ಬಾದಾಮಿ ಕಲ್ಲುಸಕ್ರೆ ಕೊಬ್ರಿ
ಅಂಜೂರ ಕಜ್ಜೂರ ಹಾಲು ತುಪ್ಪ ಹಣ್ಣುಗಳ ತಂದು
ಜೋಗಪ್ಪುಂಗೆ ಅಕ್ರಿಯಿಂದ ಕೊಟ್ಟು ಶರಣು ಮಾಡುದ್ರು
ಇದನ್ನು ಕಂಡು ಅರ್ಜುನ ಸ್ವಾಮಿ ಸಂತೋಷದಿಂದ
ಅವುರ್ಗೆ ಯಾವ ರೀತಿ ಆಸುರ್ವಾದ ಮಾಡ್ತಾ ಇದ್ದಾನಂದ್ರೆ-

ಬಿಸಲಿಗೆ ಮೊಕ ತೋರದೆ- ತಾಯಿಗಳೆ
ಮುಸುಕು ನಿಮಗಾಗಲಮ್ಮ
ಬುರುಕಿಯ ಬೂಬಿಯರು ಅನುವಂತ ಹೆಸರುಗಳು
ನಿಮ್ಮ ಪಾಲಿಗಾಗಲಮ್ಮ – ತಾಯಿಗಳೆ
ನಿಮ್ಮ ಪಾಲಿಗಾಗಲಮ್ಮ ।

ಹಾಗಂತ ಮುಸುಲ್ಮಾನ್ರ ಸ್ತ್ರೀಯರಿಗೆ
ಅರ್ಜುನ ಸ್ವಾಮಿ ಆಸುರ್ವಾದಗಳ ಮಾಡಿ–

ಗೆಜ್ಜೆಗಳು ಗಲಿರೆನ್ನುತ – ಅರ್ಜುನನು
ಹುಬ್ಬೆರಡು ನಲಿದಾಡುತ
ತಕಧಿಮಿ ಥೈಯನುತ ತದಿಗಿಣ ತೋಂ ಎನುತ
ಅರ್ಥದಲಿ ಸೊರವ ಕೊಡುತ – ಅರ್ಜುನರಾಯ
ಚಿಗುಳರ ಬೀದಿಗೆ ಬಂದ ।

ಚಿಗುಳರ ಹೆಂಗಸ್ರು ಓಡೋಡಿ ಬಂದ್ರು
ಅರ್ಜುನ ಜೋಗಿಯನ್ನು ಬೆರಗಿನಿಂದ ನೋಡಿ
ಆನಂದಪಟ್ಟು ಏನಂತ ಹೇಳ್ತಿದ್ದಾರೆ ಅಂದ್ರೆ–

ವಾಂಗೊ ವಾಂಗೊ ಜೋಗಿ – ನೀಂಗಳೆನ್ನ
ವೀಟುಕ್ಕು ವಾಂಗೊ ಜೋಗಿ
ಫಳಮುಂ ಚಾಪಿಟ್ಟು ಪಾಲುಮುಂ ಕುಡಿಚಿಟ್ಟು
ತೂಂಗಿಟ್ಟು ಪೋಂಗೊ ಜೋಗಿ– ಎನ್‌ಕೂಡೆ
ತೂಂಗಿಟ್ಟು ಪೋಂಗೊ ಜೋಗಿ ।

ಮೀನಾಚ್ಚಿ ಶೀಕ್ರಂ ವಾಡಿ – ಪೊಣ್ಣುಮಣಿ
ಕಾಮಾಚ್ಚಿ ಶೀಕ್ರಂ ವಾಡಿ
ಎವಳೊ ಅಳಗಾನ ಜೋಗಿ ವಂದಿರಕ್ಕಾನು
ಲಚ್ಚುಮಿ ಶೀಕ್ರಂ ವಾಡಿ – ಪಾರ್ಕಲಾಂ
ಜಾನಕೀ ಶೀಕ್ರಂ ವಾಡಿ ।

ಅಲ್ಲದೆ ಮತ್ತೊಬ್ಬ ಸ್ತ್ರೀಯಳು ಜೋಗಿಯನ್ನು ಅಡ್ಡ ಹಾಕೊಂಡು

ವಿಡಮಾಟ್ಟೈ ಉನ್ನೈ ಜೋಗಿ– ನೀಂಗಳೆನ್ನ
ಕಾದಲಿಟ್ಟು ಪೋಂಗೊ ಜೋಗಿ
ಉನ್ನೈ ಪೋಲೆ ಒರು ಕುಳಂದ್ಯೆ ನಾ ಪಡೆಯವೇಂಡು
ದಯ್ಯೆಸ್ಯೆದಿ ವಾಂಗೊ ಜೋಗಿ – ಎನ್‌ವೀಟುಕ್ಕು
ದಯ್ಯೆಸ್ಯೆದಿ ವಾಂಗೊ ಜೋಗಿ ।

ಚಿಗುಳರ ಹೆಂಗಸ್ರುಗೆ ಅರ್ಜುನ ಸ್ವಾಮಿ ಹೇಳ್ತಿದ್ದಾರೆ

ಬಾಲುಳ್ಳ ತಾಯಿಗಳಿರಾ – ನಾನಿಮ್ಮ
ಬಾಲನ ಸಮನಲ್ಲವಾ
ಬಾಲನ ಸಮನಾದ ಜೋಗಿಯ ಜೊತೆಯಲ್ಲಿ
ನಿಮಗೆಂಥ ಮಾತುರವ್ವ –ತಾಯಿಗಳೆ
ನಿಮಗೆಂಥ ಮಾತುರವ್ವ

ಅರ್ಜುನ ಸ್ವಾಮಿ ಚಿಗುಳ್ರು ಹೆಂಗಸ್ರುಗೆ ಏನ್ಹೇಳ್ತಿದ್ದಾರಪ್ಪ ಅಂದ್ರೆ
ಅಮ್ಮಾ ಚಿಗುಳ್ರೆ
ನೀವು ದ್ರೋಪತಿ ಕರಗ ಪೂಜೋ ಕುಲುದೋರು
ನಿಮ್ಮ ಕುಲ ಬೇಳೀಲಿ
ಚಿಗುಳ್ರು ಹೆಂಗುಸ್ರು ಅಂದ್ರೆ
ಚಿನ್ನದ ಹೆಂಗುಸ್ರು ಅನ್ನೋ ಹೆಸರಾಗ್ಲಿ ಅಂತ್ಹೇಳಿ
ಅರ್ಜುನಸ್ವಾಮಿ–

ಭಕ್ತಿಯಲಿ ನೋಡುತಿರುವ– ಚಿಗುಳರಿಗೆ
ಬೆಂಬಲದ ಮಾತಾಡಿದ
ಚಿನ್ನದಂಥ ಮನಸು ಚಿಗುಳರೆಂಗಸರದು
ಎನ್ನುತ್ತ ಮುಂದೆ ನಡೆದ– ಅರ್ಜುನರಾಯ
ಬೆಡಗಿನಾ ಮಾತಾಡಿದ ।

ಹೀಗೆ ಅರ್ಜುನ ಊರಿನ ಎಲ್ಲ ಕೇರಿಗಳಿಗೆ ಹೋಗಬೇಕಾಯಿತು. ಇಂಥ ಅಪರೂಪದ ಕಥನಕಾವ್ಯವನ್ನು ಅದ್ಭುತವಾಗಿ ಹೇಳಿದರು.

ಪಿರಿಯಾಪಟ್ಟಣದ ಕಾಳಗ

ಪಿರಿಯಾಪಟ್ಟಣದ ಕಾಳಗ ಸುದೀರ್ಘವಾದುದು. ಎಲ್ಲವನ್ನೂ ಇಲ್ಲಿ ಹೇಳುವುದು ಕಷ್ಟ ಅಷ್ಟು ಸಮಯವೂ ಇಲ್ಲಿಲ್ಲ. ಅದನ್ನು ಕುಳಿತು ಕೇಳಿಸಿಕೊಳ್ಳುವ ತಾಳ್ಮೆಯು ಇಂದಿನ ಜನರಿಗಿಲ್ಲ. ಆದರೂ ಪಿರಿಯಾಪಟ್ಟಣ ಕಾಳಗದ ಹಲವು ಪ್ರಸಂಗಗಳಲ್ಲಿ ಚಾಮಾಯಿ ಪ್ರಸಂಗವನ್ನು ಅವರು ವಿವರಿಸಿದರು. ಅದು;

ಚಾಮಾಯಿ ಕಥಾಪ್ರಸಂಗ

ಪಿರಿಯಾಪಟ್ಟಣದ ವೀರರಾಜನಿಗೆ ಪಟ್ಟದ ಮಲ್ಲಮ್ಮ, ಕೆಂಪಗೌರಮ್ಮ ಹಾಗೂ ಚನ್ನಮಲ್ಲಮ್ಮ ಎಂಬ ಮೂವರು ಹೆಂಡತಿಯರು. ಅದರಲ್ಲಿ ಪಟ್ಟದ ಮಲ್ಲಮ್ಮ ಮೈಸೂರಿಗೆ ಹೋಗಿದ್ದಳು. ಆಕೆಯ ಅಣ್ಣನಿಗೆ ಮಗುವಾಗಿತ್ತು. ನಾಮಕರಣದ ಸಲುವಾಗಿ ಈಕೆಯನ್ನು ಕರೆದಿದ್ದ. ತೊಟ್ಟಿಲಲ್ಲಿ ಮಲಗಿದ್ದ ಮಗುವನ್ನು ಪ್ರಿತಿಯಿಂದ ಎತ್ತಿಕೊಳ್ಳಲು ಹೋದಾಗ, ಮಗುವಿನ ತಾಯಿ ನಿಂಗ್ರಾಜಮ್ಮ ಬಂದು 'ಹೇ.......ಹೇ....... ನೀನು ಮಗುವನ್ನು ಮುಟ್ಟುಬೇಡ' ಎನ್ನುತ್ತಾಳೆ. ಆಗ ಮಲ್ಲಮ್ಮ 'ಯಾಕೆ?' ಎಂದು ಕೇಳಿದಾಗ, ಅವಳು 'ನೀನು ಬಂಜೆ. ಅದಕ್ಕೆ ಮುಗುವನ್ನು ಮುಟ್ಟಬೇಡ, ಮುಂದೆ ನನ್ನ ಮಕ್ಕಳು ಬಂಜೆಯಾಗಿಬಿಡ್ತವೆ. ಅದರಿಂದ ನೀನು ಮಗುವನ್ನು ಮುಟ್ಟಕೂಡದು' ಎಂದು ಹಿಯಾಳಿಸಿ ನುಡಿಯುತ್ತಾಳೆ. ಇದರಿಂದ ಬಹಳಾನೇ ನೊಂದುಕೊಂಡ ಮಲ್ಲಮ್ಮ, ಅಣ್ಣನ ಮೇಲೆ ಬೇಸರಮಾಡಿಕೊಂಡು ಒಂದು ಕ್ಷಣವೂ ಅಲ್ಲಿ ನಿಲ್ಲಲಾರದೆ, ಚಾಮುಂಡಿ ಬೆಟ್ಟಕ್ಕೆ ಹೋಗಿ ದೇವಿಯಲ್ಲಿ ವರ ಬೇಡಿಕೊಂಡಳು; ದೇವಿಯಲ್ಲಿ ಮಕ್ಕಳನ್ನು ಕರುಣಿಸು ಎಂದು ಕೇಳಿಕೊಂಡಾಗ ಚಾಮುಂಡಿ 'ಬೇಡಮ್ಮ ಮಕ್ಕಳನ್ನು ಕೊಟ್ಟರೆ ನಿನಗೆ ಒಳ್ಳೆಯದಾಗೊಲ್ಲ' ಎನ್ನುತ್ತಾಳೆ. ಆಗ ಮಲ್ಲಮ್ಮ 'ಕುರುಡಾಗಲಿ, ಕುಂಟಾಗಲಿ; ಎಂಥದಾದರೂ ಒಂದು ಮಗು ಕೊಡು' ಎಂದು ಕೇಳಿಕೊಳ್ಳುತ್ತಾಳೆ. 'ಸರಿ ನಿನಗೆ ಗಂಡುಮಕ್ಕಳ ಫಲವಿಲ್ಲ ಆದ್ರೂ, ನಿನಗೆ ಹೆಣ್ಣುಮಗುವನ್ನು ಕೊಡುತ್ತೇನೆ' ಎಂದು ವರ ಕೊಡುವಳು. ಆ ಮೇಲೆ ಮಗು ಹುಟ್ಟಿತು. ಆದರೆ ಹುಟ್ಟಿದ ನಂತರ ಕೆಲವೇ ಕ್ಷಣದಲ್ಲಿ ಜೋಯಿಸರು ಬಂದು ಆ ಮಗುವನ್ನು ನೋಡಿದ್ರು. ಅವರು 'ಕೆಟ್ಟ ಗಳಿಗೆಯಲ್ಲಿ ಈ ಮಗು ಹುಟ್ಟಿದ್ದರಿಂದ ರಾಜ್ಯಕ್ಕೆ ನಷ್ಟವಾಗುತ್ತದೆ. ಆದ್ದರಿಂದ ಈ ಮಗುವನ್ನು ಕಾಡಿಗೆ ಒಯ್ದು ಕತ್ತರಿಸಿ ಹಾಕಿ ಬನ್ನಿ' ಎಂದು ಹೇಳಿದರು. ರಾಜ ಮಂತ್ರಿಯನ್ನು ಕರೆಸಿ ಮಗುವನ್ನು ತೆಗದುಕೊಂಡು ಹೋಗಲು ಹೇಳಿದ. ಮಲ್ಲಮ್ಮನ ಹೆತ್ತಕರಳು ಮಗುವನ್ನು ಹೇಗಾದರೂ ಮಾಡಿ ಬದುಕಿಸಿಕೊಳ್ಳಬೇಕೆಂದು ಮಂತ್ರಿಯನ್ನು ಏಕಾಂತದಲ್ಲಿ ಕರೆದು, 'ನನ್ನ ಮಗುವನ್ನು ಕೊಲ್ಲಬೇಡಿ, ಬದುಕಿಸಿಕೊಡಿ' ಎಂದು ಕೇಳಿಕೊಳ್ಳುತ್ತಾಳೆ. ಆಗ ಮಂತ್ರಿ ರಹಸ್ಯವಾಗಿ ಯಾವುದೋ ಹಳ್ಳಿಯಲ್ಲಿ ಆ ಮಗುವನ್ನು ಬಿಟ್ಟು ಬರುತ್ತಾನೆ. ಅವಳು ಆ ಮಗುವನ್ನು ಬೆಳೆಸಿದಳು. ಆ ಮಗು ಬೆಳೆಯಿತು. ರಾಜನು ಎಲ್ಲ ದೇವರನ್ನು ಪೂಜೆ ಮಾಡುತ್ತಿದ್ದನು. ಆದರೆ ಶನಿದೇವರನ್ನು ಮರೆತುಬಿಡ್ತಾನೆ. ಆಗ ಶನಿದೇವನಿಗೆ ಕೋಪ ಬಂದುಬಿಡುತ್ತೆ. 'ನನ್ನನ್ನು ಈ ರಾಜ ಮರೆತಿದಾನೆ; ಇವನ ಅಹಂಕಾರವನ್ನು ಹೇಗಾದರೂ ಮಟ್ಟಹಾಕ್ತೀನಿ, ಧೂಳಿಪಟ ಮಾಡ್ತೀನಿ ಎಂದು ಮಾಯದಲ್ಲಿ ಒಂದು ಕುದುರೆ ಸೃಷ್ಟಿಸಿ ಅದರ ಮೇಲೆ ಸವಾರಿ ಮಾಡುತ್ತ ಬಂದು ರಾಜನ ಮುಂದೆ ನಿಂತುಕೊಂಡ. ಕುದುರೆಯನ್ನು

ಕಂಡು ಆಕರ್ಷಿತನಾದ ರಾಜ ಕುದುರೆ ಸವಾರಿ ಮಾಡಬೇಕೆಂದು ಬಯಸಿ, ಕುದುರೆ ಹತ್ತಿ ಹೊರಟ. ಕುದುರೆ ವೇಗವಾಗಿ ಓಡುತ್ತ ಒಂದು ದೊಡ್ಡ ಅರಣ್ಯದಲ್ಲಿ ಎತ್ತಿಹಾಕಿತು. ಪ್ರಜ್ಞೆತಪ್ಪಿ ಬಿದ್ದ ರಾಜನ ಮುಖದ ಮೇಲೆ ಶನಿದೇವರು ಹಂಸಪಕ್ಷಿರೂಪದಲ್ಲಿ ಬಂದು ಶ್ರೀಮಂತರು ತೊಡುವಂಥ ಒಂದು ರವಿಕೆಯನ್ನು ಹಾಕಿದನು. ರವಿಕೆ ಮುಖದ ಮೇಲೆ ಬಿದ್ದ ತಕ್ಷಣ ರಾಜನಿಗೆ ಎಚ್ಚರವಾಯಿತು. ಆಗ ರಾಜ 'ಅಹಾ! ಎಂಥ ಪರಿಮಳ. ಯಾರು ಈ ರವಿಕೆಯನ್ನು ಉಡುವವರು? ಇಂತಹ ರವಿಕೆಯನ್ನು ಉಡುವಂಥವಳನ್ನೇ ನಾನು ಮದುವೆಯಾಗಬೇಕು ಅಂತ ಆಸೆಪಟ್ಟ, ಆ ಮೇಲೆ ಅರಮನೆಗೆ ಬಂದ. ಪಟ್ಟದ ಮಲ್ಲಮ್ಮನನ್ನು ಕರೆದು, ನೋಡು ಈ ರವಿಕೆಯನ್ನು ತೊಡುವವಳನ್ನು ನನಗೆ ಮದುವೆ ಮಾಡಿಕೊಡು' ಎಂದು ಕೇಳಿದ. ಆಗ ಆಕೆ 'ನಿಮಗೇನು ಬಂದಿರೋದು, ಇದು ನಿಮ್ಮ ಮಗಳದು' ಎಂದಾಗ, ಅವನು 'ನನಗೆಲ್ಲವಳೆ ಮಗಳು? ಇಲ್ಲ ಇಲ್ಲ; ಅವಳು ಮಂಚಕ್ಕೆ ಬರಬೇಕು' ಎಂದು ಹಠ ಮಾಡಿಬಿಟ್ಟ. ಇದಕ್ಕೆ ಒಪ್ಪದ ಮಲ್ಲಮ್ಮ, ಎಲ್ಲರನ್ನೂ ಕರೆದು ನ್ಯಾಯ ಮಾಡೋಣ ಎಂದಳು. ನ್ಯಾಯದಲ್ಲಿ ಹನಗೋಡಿನ ಹಂಪೆ ಅರಸು ಬುದ್ಧಿವಾದ ಹೇಳುತ್ತಾನೆ. ಆಗ ರಾಜ ಕುಪಿತಗೊಳ್ಳುತ್ತಾನೆ. ಹೀಗೆ ಕತೆ ಮುಂದುವರೆಯುತ್ತದೆ. ಈ ಪ್ರಸಂಗವನ್ನು ಮತ್ತು ಪಿರಿಯಾಪಟ್ಟಣದ ಕಾಳಗದ ಕತೆಯನ್ನು ನಾಲಕ್ಕೈದು ಮಟ್ಟುಗಳಲ್ಲಿ ಹಾಡಲಾಗುತ್ತದೆ. ದೇವರಗುಡ್ಡರು ಬೀಸುಕಂಸಾಳೆಗೆ ಬಳಸಿಕೊಳ್ಳುವ ಹಾಡಿನ ಶೈಲಿಯಲ್ಲಿ ಇಲ್ಲಿ ಹಾಡಲಾಗುತ್ತಿದೆ. ಅದು ಹೀಗಿದೆ;

ತಂದನಾನು ತಂದಾನ ತಾನನ – ತಂದೇನಾನೂ
ತಂದನಾನು ತಂದನ್ನ ತಾನನಾ । ಸೊಲ್ಲು ।

ಕೊಡಗು ಮಲೆಯಾಳದ ರಾಜ್ಯಕೆ– ಗಡಿಯಾವುದೆಂದರೆ
ಬೆಡಗಿನಂಥ ಪಿರಿಯಾಪಟ್ಟಣ ।

ಬೆಡಗಿನಂಥ ಪಿರಿಯಾಪಟ್ಟಣಕೆ –ದೊರೆ ಯಾರು ಅಂದ್ರೆ
ಹೆಚ್ಚಿನ ಭೂಪ ಈರಾಜ ದೊರೆಯಲ್ಲೊ ।
ಬೆಡಗಿನಂಥ ಪಿರಿಯಾಪಟ್ಟಣದ ಹೆಸರ ಹೇಳಿದ್ರೆ –ದಿಳ್ಳೀಮದ್ರಂಗ
ಗಡಾಗಡನೆ ನಡುಗುತಾದಲ್ಲೊ ।

ಗಂಡು ಭೂಮಿಯ ಗಂಡ ಈರಾಜ– ಬಲುಪ್ರೀತಿಪಟ್ಟು
ಪಿರಿಯಾಪಟ್ಟಣ ಕಟ್ಟಿಸಿದ ।

ರಾಗಿ ಕೊಟ್ಟು ರಾಜ್ಯ ಕಟ್ಟಿಸಿದ –ಈರಾಜಭೂಪ
ಅಕ್ಕಿ ಕೊಟ್ಟು ಲೆಕ್ಕ ಬರಿಸಿದ ।

ರಕ್ತ ಸುರಿದು ಕಿತ್ತೂರು ಕಟ್ಟಿಸಿದ – ಈರಾಜಭೂಪ
ಮುತ್ತ ಸುರುದು ಮುತ್ತೂರು ಕಟ್ಟುಸವ್ನೆ ।

ಅಂದಕೊಂದು ಅರ್ಕಲಗೂಡಂತೆ – ಈರಾಜದೊರೆಗೆ
ಚೆಂದಕೆ ಈ ಪಿರಿಯಾಪಟ್ಟಣ ।

ಅವುನ್ಗೆ–ಬೆಡಗಿಗೊಂದು ಬೆಟ್ಟದಪುರವಂತೆ– ಈರಾಜದೊರೆಗೆ
ಕುಸೀಗೆ ಕುಸಾಲುನಗರಾವು ।

ಚೆಲ್ವುಗೊಂದು ಊರು ಚೆಲ್ಕುಂದ – ಈರಾಜುದೊರೆಗೆ
ಹೆಮ್ಮೆಗೊಂದು ಊರು ಹಮ್ಮೀಗೆ ।

....

ಪಿರಿಯಾಪಟ್ಟಣಕೆ ।

ಎಂದು ಕಥಾಭಾಗವನ್ನು ಸುಶ್ರಾವ್ಯವಾಗಿ ಹಾಡಿದರು.

ಅವರು ಎಲ್ಲೆ ಕಾರ್ಯಕ್ರಮವನ್ನು ಕೊಟ್ಟರೂ ಆ ಕಾರ್ಯಕ್ರಮದ ಕೊನೆಯಲ್ಲಿ ಮಾದೇಶ್ವರನ ಕುರಿತ 'ಮಂಗಳಾರತಿಯ ಬೆಳಗಿರೋ' ಪದವನ್ನು ಹಾಡುವುದು ರೂಢಿ. ಅಂತೆಯೆ ಅವರು 'ಪಟ್ಪಾಂಗ' ಕಾರ್ಯಕ್ರಮವನ್ನೂ ಸಹ ಆ ಪದವನ್ನು ಹಾಡಿಯೇ ಮುಕ್ತಾಯಗೊಳಿಸಿದರು. ಅದು ಹೀಗಿದೆ;

ಮಂಗಳಾರತಿಯ ಬೆಳಗಿರೋ– ಮಾದೇವನಿಗೆ
ಹೂವ ಚೆಲ್ಲಾಡಿ ಬನ್ನಿರೊ ।ಸೊಲ್ಲು।

ಮಾದೇವ ನೀನೆ ಗತಿಯು
ಮಾದೇವ ನೀನೆ ಮತಿಯು
ನಂಬೀದ ಭಕ್ತರ ಮಲ್ಲಿ
ಇಂಬಾಗ್ವಾಲಾಡೊ ಗುರುವೆ ।

ಹುಟುದಾದೆ ಉತ್ತುರ ದೇಸ
ಬೆಳುದಾದೆ ಕತ್ತಲ ರಾಜ್ಯ
ಕುಂತೂರ ಮಠವ ಸೇರಿ
ಏಳು ಮಲೆಯಲ್ಲೋರಗಿದೆ ಗುರುವೆ ।

ನೆನೆದವರ ಮನದೊಳಗಿದ್ದು
ಮರೆತವರ ಮನೆಯ ಮುರುದು
ನೆಂಬಿದೋರ ಮನೆಯಲಿ ಗುರುವೆ
ತುಂಬಿ ತುಳುಕಾಡುವೋನೆ ।

ಹುಟುವಾಗ ಹುಲಿಯ ವರುಣ
ಬೆಳಿವಾಗ್ ರವರತ್ನದ ಪುಡಿಯು
ಲೋಕಕೆ ದೊಡ್ಡೋರು ಗುರುವೆ
ಪರಮಾತ್ಮ ಪರಂಜ್ಯೋತಿ ।

ಎಂದು ರಾಜಶೇಖರರೊಂದಿಗೆ ಡಾ. ಮೈಸೂರು ಉಮೇಶ್, ಚಿಕ್ಕಮಳಲಿ ಆರ್. ಮಹದೇವ, ಗೋಪಾಲ ಕಂಪ್ಲಾಪುರ ಮತ್ತು ರಿವಿಕೊಳ್ಳ ಘಟ್ಟ ಈ ಸಹಕಲಾವಿದರು ಧ್ವನಿಗೂಡಿಸಿದರು.

ಕುಲಪತಿಯವರು ಕಂಡಂತೆ ಪಿ.ಕೆ. ರಾಜಶೇಖರ

ಪಟ್ಟಾಂಗ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದಂತಹ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿ ಪ್ರೊ. ಅಂಬಳಿಕೆ ಹಿರಿಯಣ್ಣ ಅವರು, ಡಾ. ಪಿ.ಕೆ. ರಾಜಶೇಖರ ಅವರ ಚುಂಬಕ ವ್ಯಕ್ತಿತ್ವದ ಬಗೆಗೆ ಅವರದೇ ಮಾತುಗಳಲ್ಲಿ ಬಣ್ಣಿಸಿದ್ದಾರೆ. ಅವರ ಮಾತಿನ ಸಾರಾಂಶ ಹೀಗಿದೆ : "ರಾಜಶೇಖರ ಅವರು ನನಗಿಂತ ವಯಸ್ಸಿನಲ್ಲಿ ಆರೇಳು ವರ್ಷ ಹಿರಿಯರು. ಸಹಜವಾಗಿ ಅವರೇ ನಮಗೆ ಆದರ್ಶ. ಕೆಲವೊಂದು ವಿಷಯಗಳಲ್ಲೂ. ಸುಮಾರು ೧೯೭೩–೭೪ನೆಯ ಸಾಲಿನಲ್ಲಿ ಮೈಸೂರಿಗೆ ಕಲಿಕೆಗೆಂದು ಹೋದಾಗ, ಮೊಟ್ಟಮೊದಲ ಬಾರಿಗೆ ಪುರುಷರ ವಿದ್ಯಾರ್ಥಿ ನಿಲಯದಲ್ಲಿ ಅವರನ್ನು ನೋಡಿದೆ. ಅಪಾರವಾದ ಕ್ಷೇತ್ರಕಾರ್ಯ ಮಾಡಿ ಜನಪದ ಸಂಗ್ರಹದ ಕೆಲಸದಲ್ಲಿ ತಮ್ಮನ್ನು ತಾವು ಆ ಕಾಲದಲ್ಲಿಯೇ ತೊಡಗಿಸಿಕೊಂಡಿದ್ದರು. ಈ ಕಾರಣಕ್ಕಾಗಿಯೇ ಡಾ. ಹಾ.ಮಾ. ನಾಯಕರು ರಾಜಶೇಖರ ಅವರನ್ನು ತುಂಬ ಅಭಿಮಾನದಿಂದ ಕಾಣುತ್ತಿದ್ದರು. ಅವರಿದ್ದಂತಹ ಹಾಸ್ಟೆಲ್‌ನಲ್ಲಿಯೇ ನಾವು ಇರುತ್ತಿದ್ದೆವು. ಅವರಿಗೆ ನನ್ನ ಮೇಲೆ

ಅದೇನೊ ವಿಶೇಷ ಪ್ರೀತಿ. ಮರಿದೇವರೆ, ಮರಿದೇವರೆ ಎಂದು ಸಂಬೋಧಿಸುತ್ತಿದ್ದರು. ಅಷ್ಟು ಅಕ್ಕರೆ ನನ್ನ ಮೇಲೆ ಅವರಿಗೆ. ಅವರನ್ನು ಮೆಚ್ಚಿಕೊಳ್ಳಲು ಇರುವ ಸಂಗತಿ ಎಂದರೆ, ತೀರ ಕಷ್ಟಪಟ್ಟು ಕೆಲಸ ಮಾಡುವ ಅವರ ಪ್ರವೃತ್ತಿ ಇಷ್ಟವಾಗುವಂತಹ ಗುಣ. ಅದು ನನ್ನ ಮೇಲೆ ವಿಶೇಷ ಪ್ರಭಾವ ಬೀರಿತು. ಅದರಿಂದ ನಾನೂ ಕೂಡ ಆ ಪ್ರವೃತ್ತಿಯನ್ನು ರೂಢಿಸಿಕೊಳ್ಳಲು ಪ್ರಯತ್ನಿಸಿದೆ. ಅವರಂತೆಯೆ ನಾನೂ ಸಹ ಜಾನಪದ ಕ್ಷೇತ್ರದಲ್ಲಿ ಏನಾದರೂ ಸಾಧನೆ ಮಾಡಬೇಕು ಎಂದು ತಿಳಿದು ಕೆಲಸ ಮಾಡಲು ತೊಡಗಿಕೊಂಡೆ. ಇದು ಸಾಧ್ಯವಾದುದು ಅವರನ್ನು ನೋಡಿಯೇ ಎಂದು ಸಂತೋಷದಿಂದ ಹೇಳಿಕೊಳ್ಳುತ್ತೇನೆ. ರಾಜಶೇಖರ ಅವರ ಜಾನಪದ ಸಂಗ್ರಹದ ಕಾರ್ಯ ಅನಂತವಾದುದು. ಸರಿಸುಮಾರು ಐವತ್ತು ವರ್ಷಗಳ ಕಾಲ ಕ್ಷೇತ್ರಕಾರ್ಯದ ಕಾಯಕದಲ್ಲಿ ತೊಡಗಿಕೊಂಡು ಐವತ್ತಕ್ಕೂ ಹೆಚ್ಚು ಶೀರ್ಷಿಕೆಗಳನ್ನು ಪ್ರಕಟಿಸಿದ್ದಾರೆ. ಜನಪದ ಸಾಹಿತ್ಯವನ್ನು ಸಂಗ್ರಹಿಸಿ ದಾಖಲೆಯನ್ನು ಸೃಷ್ಟಿಸಿದ ಕೀರ್ತಿ ಡಾ. ಪಿ.ಕೆ. ರಾಜಶೇಖರ ಅವರಿಗೆ ಸಲ್ಲುತ್ತದೆ. ಅಲ್ಲದೆ, ಅಲಕ್ಷಿತ ಸಮುದಾಯಗಳ ಸಾಹಿತ್ಯವನ್ನು ಸಂಗ್ರಹಿಸಿ, ಸಂಪಾದಿಸಿ ಹಲವು ಪ್ರಥಮಗಳನ್ನು ದಾಖಲಿಸಿ, ನಾಡಿನ ಸಾಂಸ್ಕೃತಿಕ ವಲಯಕ್ಕೆ ನೀಡಿದ ಗೌರವಕ್ಕೂ ಅವರು ಭಾಜನರಾಗಿದ್ದಾರೆ. ಒಟ್ಟಾರೆ ದಕ್ಷಿಣ ಕರ್ನಾಟಕ ಭಾಗದಲ್ಲಿ ಜಾನಪದ ಸಾಹಿತ್ಯ ಏನಾದರೂ ಉಳಿದಿದ್ದರೆ ಮತ್ತು ಜನಪದ ಗೀತೆಗಳು ಜನಪ್ರಿಯವಾಗಿದ್ದರೆ ಅದು ಶ್ರೀ ಪಿ.ಕೆ. ರಾಜಶೇಖರ ಅವರಿಂದ ಎನ್ನುವುದನ್ನು ಅಭಿಮಾನದಿಂದ ಹಾಗೂ ಹೆಮ್ಮೆಯಿಂದ ಹೇಳುತ್ತೇನೆ. ಅವರು ಸಾಹಿತ್ಯವನ್ನು ಸಂಗ್ರಹಿಸಿ, ತಮ್ಮದೆಯಾದ ರೀತಿಯಲ್ಲಿ ಗ್ರಹಿಸಿ, ವಿಶ್ಲೇಷಿಸಿ, ದಾಖಲಿಸುವ ಮೂಲಕ ಕನ್ನಡ ಜಾನಪದ ಕ್ಷೇತ್ರಕ್ಕೆ ಅತ್ಯುತ್ತಮ ಕೊಡುಗೆ ನೀಡುವ ಪ್ರಯತ್ನವನ್ನು ಪ್ರಮಾಣಿಕವಾಗಿ ಮಾಡಿದ್ದಾರೆ. ಸಂಶೋಧನಾ ಕ್ಷೇತ್ರದಲ್ಲಿ ಸಾಧನೆ ಮಾಡಹೊರಡುವವರಿಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ ಮತ್ತು ಆದರ್ಶವನ್ನು ತೋರಿದ್ದಾರೆ. ಇದಕ್ಕೆ ಕಲಶಪ್ರಾಯವಾಗಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ವಿಶೇಷವಾಗಿ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಸೂಕ್ತ ಸಲಹೆ ಮತ್ತು ಸೂಚನೆಗಳನ್ನು ನೀಡುತ್ತಿರುವುದು ತುಂಬ ಸಂತೋಷಪಡುವ ಸಂಗತಿಯಾಗಿದೆ" ಎಂದು ಮನದುಂಬಿ ಹೊಗಳಿದ್ದಾರೆ.

ಕ್ಷೇತ್ರಕಾರ್ಯದ ಹಾದಿಯಲ್ಲಿ

ಕ್ಷೇತ್ರಕಾರ್ಯದ ಅನುಭವಗಳನ್ನು ಹೇಳಿಕೊಂಡ ಅವರು, "ಮಲೆಯ ಮಾದೇಶ್ವರ ಮಹಾಕಾವ್ಯವನ್ನು ಸಂಗ್ರಹಿಸುವ ಮೂಲಕ ಕನ್ನಡ ಜಾನಪದ ಕ್ಷೇತ್ರದಲ್ಲಿ ಇಂಥ ಮಹಾಕಾವ್ಯಗಳು ಇವೆ ಎಂಬ ಪರಿಕಲ್ಪನೆ ಮೂಡಲು

ಸಾಧ್ಯವಾಗಿದ್ದು ಈ ಮಹಾಕಾವ್ಯವನ್ನು ಸಂಗ್ರಹಿಸಿದ ನಂತರವೇ. ಅನಂತರದಲ್ಲಿ ಮತ್ತೊಂದು ಮಹಾಕಾವ್ಯ ನನ್ನ ಕಿವಿಗೆ ಬಿತ್ತು. ಅದೇ ಜನಪದ ಮಹಾಭಾರತ. ಅದೊಂದು ಅದ್ಭುತವಾದ ಕಥಾವಸ್ತು. ಬೆಟ್ಟದಬೀಡು ಸಿದ್ದಸೆಟ್ಟರು ಎಂಬೋರು ಹಾಡುತ್ತಿದ್ದ ಕಥಾಭಾಗವದು. ಅವರು ವಾರಗಟ್ಟಲೇ ನಮ್ಮ ಮನೆಯಲ್ಲಿಯೇ ಇದ್ದು ಕಾವ್ಯವನ್ನು ಹಾಡುತ್ತಿದ್ದರು. ಭಾನುವಾರ ಇಲ್ಲವೇ ಬೇರೆ ಯಾವುದೋ ವಾರವೋ ಬಂದು ಒಂದೊಂದು ಕಥಾಭಾಗವನ್ನು ಹಾಡುತ್ತಿದ್ದರು. ಯಾವುದೇ ಉಪರಕಣಗಳು ಇದ್ದಿರಲಿಲ್ಲ. ಅಂಥ ಸಂದರ್ಭದಲ್ಲಿ ಕೈನೋವಾಗುವಂತೆ ಬರೆದುಕೊಂಡಿದ್ದೇನೆ. 'ಹೇಳುವ ಮಾಹಿತಿ ತಪ್ಪಿಹೋಗಬಾರದು" ಎಂದು ತುಂಬ ಎಚ್ಚರಿಕೆಯಿಂದ ಕೇಳಿ, ಬರೆದುಕೊಳ್ಳುತ್ತಿದ್ದೆ ಎಂದು ನೆನಪಿಸಿಕೊಂಡರು.

ಇದೇ ಸಂದರ್ಭದಲ್ಲಿ ಕ್ಷೇತ್ರಕಾರ್ಯದಲ್ಲಿ ತೊಡುಗುವ ಮತ್ತು ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಬೇಕು ಎಂಬುವವರಿಗೆ ಕೆಲವೊಂದು ಮಾತುಗಳನ್ನು ಹೇಳಿದರು; ಜಾನಪದ ಬಗೆಗೆ ಅಧ್ಯಯನ ಮಾಡೋದಕ್ಕೆ ಬಂದವರಿಗೆ ಜಾನಪದದ ಸ್ಪಷ್ಟ ಸ್ವರೂಪವನ್ನು ಕುರಿತು ಹೇಳಬೇಕಿದೆ; ಜಾನಪದ ಎಂದರೆ ಒಂದು ಕಾಲದಲ್ಲಿ ಕೇವಲ ಜನಪದ ಗೀತೆಗಳು ಎಂದಾಗಿತ್ತು, ಅವುಗಳನ್ನು ಸಂಗ್ರಹಿಸುವುದು ಎನ್ನುವ ಕಲ್ಪನೆ ಮಾತ್ರ ಇತ್ತು. ಆದರೆ ಇಂದು ಅದರ ವ್ಯಾಖ್ಯಾನ ಬದಲಾಗಿದೆ. ಅದರ ವ್ಯಾಪಕತೆ ವಿಸ್ತರಿಸಿದೆ. ಜಾನಪದ ಎಂದರೆ ಅನಕ್ಷರಸ್ಥ ಸಮುದಾಯದ ಸಮಗ್ರ ಜೀವನ ವಿಧಾನವೇ ಜಾನಪದ ಎಂಬ ತಿಳಿವಳಿಕೆ ಮೂಡಿದೆ. ಕಮ್ಮಾರಿಕೆ, ಚಮ್ಮಾರಿಕೆ, ಕುಂಬಾರಿಕೆ, ವ್ಯವಸಾಯ ಇರಬಹುದು. ಯಾವುದು ಜಾನಪದ ಅಲ್ಲ? ಅಡುಗೆ, ಉಡುಗೆ, ತೊಡುಗೆ, ಪ್ರತಿಯೊಂದು ಹಾಡು, ಹಸೆ, ಕತೆ, ಗಾದೆ, ಒಗಟು ಎಲ್ಲವೂ ಜಾನಪದವೇ ಆಗಿದೆ. ಆದ್ದರಿಂದ ಜಾನಪದ ಎನ್ನುವುದರ ಕುರಿತು ಸ್ಪಷ್ಟ ಅರಿವು ಮೂಡಿಸುವುದರ ಜೊತೆಗೆ ಇಂಥ ಜಾನಪದ ಅಂಶಗಳು ಊರಿನಲ್ಲಿ ಇವೆಯೇ, ಇದ್ದರೆ ಅವುಗಳನ್ನು ಸಂಗ್ರಹಿಸುವುದರ ಕುರಿತು ಆಸಕ್ತರಿಗೆ ಹೇಳಿಕೊಡಬೇಕಿದೆ. ಅವುಗಳನ್ನು ಪ್ರಚಾರ, ಪ್ರಸಾರ ಮಾಡುವುದನ್ನು ತಿಳಿಸಿಕೊಡಬೇಕಿದೆ. ಆಗ ಮಾತ್ರ ಜಾನಪದವನ್ನು ಕಲಿಯಲು ಬಂದವರೆಲ್ಲ ಜಾನಪದಕ್ಕೆ ಏನಾದರೂ ಕೊಡುಗೆಯನ್ನು ಸಲ್ಲಿಸಲು ಸಾಧ್ಯವಾಗುತ್ತದೆ. ಅಲ್ಲದೇ ಜಾನಪದ ಸಂಪತ್ತನ್ನು ಸಂಗ್ರಹಿಸಿದವರೆಲ್ಲರನ್ನು ವಿದ್ವಾಂಸರು ಎಂದು ಕರೆಯಲಾಗದು ಎಂದು ಹೇಳುವುದು ಸರಿಯಲ್ಲ. ಕ್ಷೇತ್ರಸಂಶೋಧನೆ ಎಂಬುದಿದೆಯಲ್ಲ ಅದು ಜಾನಪದದಲ್ಲಿ ಕೆಲಸ ಮಾಡೋದಕ್ಕೆ ಮೂಲ ಆಕರವಾಗುತ್ತದೆ. ಕ್ಷೇತ್ರಕರ್ತೃಗಳು ಏನೇನೆಲ್ಲಾ ಸಂಗ್ರಹಿಸಿ ಕೊಟ್ಟಿದ್ದಾರೊ ಅದೆಲ್ಲ ಮುಂದಿನ ಅಧ್ಯಯನಕಾರರಿಗೆ ಮಹತ್ವದ ಉಪಕಾರ ಮಾಡಿದಂತಾಗುತ್ತದೆ. ಹಿಂದಿನವರು ಸಂಗ್ರಹಿಸದೇ ಹೋಗಿದ್ದಲ್ಲಿ ಮುಂದಿನ ಕಾರ್ಯಗಳನ್ನು ಕೈಗೊಳ್ಳಲು

ಎಲ್ಲಿಂದ ಸಾಧ್ಯವಾಗುತ್ತಿತ್ತು?. ಸಂಗ್ರಹಕಾರರನ್ನು ಸಹ ಗೌರವದಿಂದ ಕಾಣುವ ಪರಿಸ್ಥಿತಿ ನಿರ್ಮಾಣವಾಗಬೇಕು. ಮಾಹಿತಿ ಸಂಗ್ರಹಕಾರ ಯಾವುದನ್ನೂ ನಿರ್ಲಕ್ಷಿಸಬಾರದು. ವಕ್ತೃಗಳು ಹೇಳುವ ಎಲ್ಲವನ್ನೂ ಟಿಪ್ಪಣಿ ಮಾಡಿಕೊಳ್ಳಬೇಕು. ಆಮೇಲೆ ಅವುಗಳನ್ನು ಸರಿಯಾದ ರೀತಿಯಲ್ಲಿ ವರ್ಗೀಕರಣ ಮಾಡಿಕೊಳ್ಳಬೇಕು. ಹೀಗೆ ಅನೇಕ ಸಲಹೆಗಳನ್ನು ಪಿಕೆಆರ್ ತಮ್ಮ ಮಾತುಗಳಲ್ಲಿ ನೀಡಿದರು.

"ಮೂಲತಃ ಕವಿಪ್ರತಿಭೆಯನ್ನು ಹೊಂದಿದ ರಾಜಶೇಖರರು ಜಾನಪದ ಕ್ಷೇತ್ರದಲ್ಲಿ ಅದ್ವಿತೀಯವಾದ ಸಾಧನೆ ಮಾಡಿದ್ದಾರೆ. ಯಾವುದೇ ವಿಷಯದ ಬಗೆಗೆ ಮಾಹಿತಿ ಸಂಗ್ರಹಿಸುವುದಾಗಲಿ, ಒಂದು ಸಣ್ಣ ಬರೆಹ ಮಾಡುವುದಾಗಲಿ, ಅಧ್ಯಯನ, ಸಂಶೋಧನೆಯಂಥ ಗಂಭೀರ ಕೆಲಸಗಳನ್ನು ಅತ್ಯಂತ ಶ್ರದ್ಧೆ ಮತ್ತು ನಿಷ್ಠೆಯಿಂದ ಮಾಡುತ್ತಿದ್ದರೆಂಬುದಕ್ಕೆ ಒಂದು ಉದಾಹರಣೆ; ಗೆಳೆಯ ನಂ. ನಾರಾಯಣಗೌಡರ 'ಚೌಡಿಕೆ ಕಾವ್ಯಗಳು' ಪುಸ್ತಕದ ಮುನ್ನುಡಿ ಬರೆಯಬೇಕಾದಾಗ, ಸ್ವತಃ ಅವರು ಬೆಳಗಾವಿ ಜಿಲ್ಲೆಯ ಸವದತ್ತಿಗೆ ಭೇಟಿಕೊಟ್ಟು ಕ್ಷೇತ್ರಕಾರ್ಯ ಮಾಡಿ ಸೂಕ್ತ ಮಾಹಿತಿ ಸಂಗ್ರಹಿಸಿದ ಅನಂತರವೇ ಅಧ್ಯಯನಪೂರ್ಣ ಮುನ್ನುಡಿಯನ್ನು ಬರೆದರು. ಜಾನಪದಕ್ಕೆ ಎಲ್ಲವನ್ನೂ ಒಳಗೊಳ್ಳುವ ಶಕ್ತಿ ಇದೆ. ತಾವು ಮಾಡುವ ಪ್ರತಿಯೊಂದು ಕೆಲಸದಲ್ಲೂ ತನ್ಮಯತೆ, ತಲ್ಲೀನತೆ, ತಾದ್ಯಾತ್ಮತೆಯಿಂದ ತೊಡಗಿಸಿಕೊಳ್ಳುತ್ತಿದ್ದ ರಾಜಶೇಖರರು, ಮೂಲ ಜನಪದ ಕಲಾವಿದರು ಇರುವಲ್ಲಿಗೇ ಹೋಗಿ ತಮಗೆ ಬೇಕಾದ ಮಾಹಿತಿಯನ್ನು ಪಡೆದುಕೊಳ್ಳುತ್ತಿದ್ದರು. ಜೊತೆಗೆ ಅವರನ್ನು ಅತ್ಯಂತ ಗೌರವ, ಆದರದಿಂದ ಕಾಣುತ್ತಿದ್ದರು. "ನಾವು ಒಂದು ವಸ್ತುವನ್ನು ಪಡೆದುಕೊಳ್ಳಬೇಕಾದರೆ ಅದು ಇದ್ದಲ್ಲಿಗೆ ಹೋಗಬೇಕು. ಆಗ ವ್ಯಕ್ತಿಗೂ ಗೌರವ, ವಸ್ತುವಿಗೂ ಬೆಲೆ ಬರುತ್ತದೆ" ಎಂಬ ನನ್ನ ಮಾತು ಪಿ.ಕೆ.ರಾಜಶೇಖರರ ವ್ಯಕ್ತಿತ್ವಕ್ಕೆ ಅಕ್ಷರಶಃ ಅನ್ವಯಿಸುತ್ತದೆ. ಅವರ ಕರ್ತೃತ್ವಶಕ್ತಿಗೆ, ಪ್ರಯೋಗಶೀಲತೆಗೆ ಅವರು ಕಟ್ಟಿಬೆಳೆಸಿದ ಹೊನ್ನಾರು ತಂಡವೇ ಸಾಕ್ಷಿ. ವ್ಯಾಪಕ ಕ್ಷೇತ್ರಕಾರ್ಯದ ಮೂಲಕ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿದ ಅವರಂಥ ದೈತ್ಯ ಮತ್ತೊಬ್ಬರಿಲ್ಲ" ಎಂದು ಹಿರಿಯ ವಿದ್ವಾಂಸರಾದ ಕ್ಯಾತನಹಳ್ಳಿ ರಾಮಣ್ಣ ಅವರು ಪಿಕೆಆರ್ ಬಗೆಗೆ ತುಂಬ ಅಭಿಮಾನದಿಂದ ಹೇಳುತ್ತಾರೆ.

'ಹೊನ್ನಾರು' ಹೊಂಬೆಳಕು

ಪಿಕೆಆರ್ ಅವರ ಸಾಧನೆಯ ಮತ್ತೊಂದು ಮಹತ್ವದ ಮೈಲಿಗಲ್ಲು ಎಂದರೆ ಅವರೇ ಕಟ್ಟಿ ಬೆಳೆಸಿದ 'ಹೊನ್ನಾರು ಜನಪದ ಗಾಯನ ವೃಂದ'. ಮೂಲತಃ ಜನಪದ ಗೀತೆಗಳನ್ನು ಹುಟ್ಟಿನಿಂದಲೇ ಕೇಳಿ ಬೆಳೆದ ರಾಜಶೇಖರ ಅವರಲ್ಲಿ ಜನಪದ ಗೀತೆಗಳ ಮೂಲವನ್ನು ಮುಕ್ಕಾಗದಂತೆ ಉಳಿಸಿ–ಬೆಳೆಸಬೇಕೆಂಬ ಅದಮ್ಯ ಹಂಬಲದ ಕೂಸಾಗಿ ಅವರು ಈ ಗಾಯನ ವೃಂದವನ್ನು ಸ್ಥಾಪಿಸಿದರು. ಹೊನ್ನಾರು ತಂಡದ ಹೊಂಬೆಳಕಾಗಿ ಹೊಮ್ಮಿದರು.

ಹೊಂಬೇರು

ಮೈಸೂರು ಯುವರಾಜಾ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಅದೊಂದು ಸಂದರ್ಭ. ಮೂಲ ಜನಪದ ಹಾಡುಗಳನ್ನು ಮೂಲಮಟ್ಟುಗಳೊಂದಿಗೆ ಹಾಡುವ ಮೂಲಕ ಪಿಕೆಆರ್ ಹೆಸರು ಅದಾಗಲೇ ಚಿರಪರಿಚಿತವಾಗಿತ್ತು. ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಪ್ರೊ. ಚಾಮಯ್ಯನವರಿಗೆ ಜನಪದ ಗೀತೆಗಳನ್ನು ಕೇಳುವದೆಂದರೆ ಎಲ್ಲಿಲ್ಲದ ಪ್ರೀತಿ. ಜಾನಪದದ ಬಗ್ಗೆ ಅಪಾರ ಅಭಿಮಾನ, ಕಾಳಜಿ ಹೊಂದಿದ್ದ ಅವರು ಸಹದ್ಯೋಗಿ ಪಿ.ಕೆ. ರಾಜಶೇಖರ ಅವರನ್ನು ತಮ್ಮಲ್ಲಿಗೆ ಕರೆದು ಜನಪದ ಗೀತೆಗಳನ್ನು ಹಾಡುವ ಕಾರ್ಯಕ್ರಮವನ್ನು ಗೊತ್ತುಮಾಡಿದರು. ರಾಜಶೇಖರ ಅವರ ಗಾಯನ, ಹಾಡುಗಾರಿಕೆ ಎಂದರೆ ಸಾಕು ಎಲ್ಲರಲ್ಲೂ ಅದೇನೋ ಉತ್ಸಾಹ. ದಿನಂಪ್ರತಿ ಅದೇ ಕ್ಲಾಸು, ಬೋಧನೆ ಇತ್ಯಾದಿ ಸಂಗತಿಗಳಲ್ಲೇ ಕಳೆದುಹೋಗುತ್ತಿದ್ದ ಅಲ್ಲಿನ ಅಧ್ಯಾಪಕ ವೃಂದಕ್ಕೆ ಪಿಕೆಆರ್‌ರ ಕಾರ್ಯಕ್ರಮ ಹೊಸ ಉತ್ಸಾಹಕ್ಕೆ ಕಾರಣವಾಯಿತು. ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನಡೆಯಿತು. ರಾಜಶೇಖರ ಅವರ ಗಾಯನದ ಮೋಡಿಗೆ ಒಳಗಾದ ಇಡೀ ಕಾಲೇಜು ಕುಣಿದು, ಆನಂದಿಸಿತು. ಮಂಡ್ಯ ಜಿಲ್ಲೆಯ ಕೀಲಾರದ ಪ್ರೊ. ಕೆ.ಎಂ. ವೀರಪ್ಪ ಅವರು ಅಂದಿನ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಪಿಕೆಆರ್ ಗಾಯನವನ್ನು ವಿಶೇಷವಾಗಿ ಕೇಳಿ ಖುಷಿಪಟ್ಟಿದ್ದರು. ಇದರಿಂದ ಪ್ರೇರೇಪಿತರಾದ ಪ್ರೊ. ವೀರಪ್ಪನವರು ರಾಜಶೇಖರ ಅವರ ಗಾಯನವನ್ನು ಕೀಲಾರ ಗ್ರಾಮದಲ್ಲೂ ಆಯೋಜನೆ ಮಾಡಬೇಕು ಎಂದು ಬಯಸಿದು, ಅಲ್ಲಿಯೂ ಕಾರ್ಯಕ್ರಮ ಏರ್ಪಾಟು ಮಾಡಿದರು. ಇವರ ಗಾಯನವನ್ನು ಕೇಳಿದ ಕೀಲಾರ ಗ್ರಾಮಸ್ಥರು

ರೋಮಾಂಚಿತಗೊಂಡರು. ಇವರ ಹಾಡುವ ಶೈಲಿಗೆ ಎಲ್ಲರೂ ದಂಗಾದರು. ಅಲ್ಲಿ ನೆರೆದ ಜನ ಒನ್ಸ್‌ಮೋರ್ ಎನ್ನುತ್ತ ಮತ್ತೆ ಮತ್ತೆ ಹಾಡುವಂತೆ ಪ್ರೀತಿಯಿಂದ ಒತ್ತಾಯಿಸಿದರು. ರಾಜಶೇಖರ ಅವರ ಅಮೋಘ ಕಂಠಸಿರಿಯಿಂದ ಹೊಮ್ಮಿದ ಗಾನಹೊನಲು ಅಂದು ಎಲ್ಲರನ್ನು ಪುಳಕಿತಗೊಳಿಸಿತು. ಮತ್ತೊಮ್ಮೆ ಪಿಕೆಆರ್ ಅವರನ್ನು ನಮ್ಮ ಊರಿಗೆ ಕರೆತರಬೇಕು ಎಂದು ಅಲ್ಲಿ ನೆರೆದಿದ್ದ ಎಲ್ಲರು ಒತ್ತಾಯ ಮಾಡಿದರು. ಜನರ ಕಲಾಪ್ರೇಮವನ್ನು ಕಂಡ ರಾಜಶೇಖರ ಅವರಿಗೆ ಜೀವನದಲ್ಲಿ ಎಂದೂ ಮರೆಯಲಾರದ ಶುಭದಿನ ಅದು. ಅಷ್ಟೇ ಅಲ್ಲ, ಅದು ಅವರ ಪಾಲಿಗೆ ಅತ್ಯಂತ ಆನಂದದಾಯಕ ಕ್ಷಣ. ಪ್ರೊ. ವೀರಪ್ಪನವರಿಗೆ ಸಾರ್ಥಕ ಭಾವ. ಅಂದುಕೊಂಡಂತೆ ಕೆಲವೇ ತಿಂಗಳಲ್ಲಿ ಮತ್ತೆ ಎರಡನೇ ಬಾರಿ ಕೀಲಾರ ಗ್ರಾಮದಲ್ಲಿ ಪಿಕೆಆರ್ ಅವರ ಗಾಯನ ಕಾರ್ಯಕ್ರಮ ಏರ್ಪಾಡಾಯಿತು. ಆಗ ರಾಜಶೇಖರ ಅವರು ತಮ್ಮ ಕೆಲವು ವಿದ್ಯಾರ್ಥಿಗಳನ್ನು ಗಾಯನಕ್ಕೆ ಸಜ್ಜುಗೊಳಿಸಿ, ಅಹೋರಾತ್ರಿ ಜನಪದ ಹಾಡುಗಳನ್ನು ಮನದುಂಬಿ ಹಾಡಿದರು. ಎಷ್ಟು ಹಾಡಿದರೂ ಅಲ್ಲಿನ ಜನಕ್ಕೆ ರಾಜಶೇಖರರ ಗಾಯನ ಬೇಸರವೆನಿಸಲಿಲ್ಲ. ಇನ್ನಷ್ಟು ಕೇಳಬೇಕೆಂಬ ಹಾಡಿನ ಪ್ರೇಮ ಅಷ್ಟಿತ್ತು ಅಲ್ಲಿನವರಲ್ಲಿ. ಕೀಲಾರದ ಸಮಸ್ತ ಜನ ಇವರ ಗಾಯನವನ್ನು ಕೇಳಿ ಸಂಪ್ರೀತಗೊಂಡರು.

ಒಟ್ಟಾರೆ ಆ ಕಾರ್ಯಕ್ರಮ ರಸದೌತಣವನ್ನೇ ಕೀಲಾರದ ಜನಕ್ಕೆ ನೀಡಿತು. ಜನತೆಯ ಕಲಾಭಿಮಾನ, ಕಲಾಪ್ರೇಮ ಎಂದೂ ಮರೆಯಲಾರದ್ದು. ಇದರಿಂದ ಪ್ರೇರೇಪಿತಗೊಂಡ ಪಿಕೆಆರ್ ಮುಂದೆ ಹೊನ್ನಾರು ಗಾಯನ ವೃಂದವನ್ನು ಕಟ್ಟಲು ಮನಸ್ಸು ಮಾಡಿದರು. ಅದು ನಾಡಿನ ಶ್ರೇಷ್ಠ ಕಲಾತಂಡವಾಗುತ್ತೆ, ಜಾನಪದ ಸಿರಿಯನ್ನು ಮನೆಮನಕ್ಕೂ ತಲುಪಿಸುವ ಮೂಲಕ ಕೀರ್ತಿ ಪಡೆಯುತ್ತೆ ಎಂಬುದನ್ನೂ ಯಾರೂ ಊಹಿಸಿರಲಿಲ್ಲ, ಈ ಬಗೆಗೆ ಅವರೂ ಸಹ ಕನಸು ಕಂಡಿರಲಿಲ್ಲ. ಆದರೆ ಮುಂದೆ ನಡೆದುದೆಲ್ಲ ನನಸೇ. ಅದು ಇಂದಿಗೂ ಜೀವಂತ; ಜಾನಪದದಂತೆ.

'ಜನಪದ ಹೊನ್ನಸಿರಿ'

ನಾಡಿನ ಅದರಲ್ಲೂ ದಕ್ಷಿಣ ಕರ್ನಾಟಕ ಭಾಗದಲ್ಲಿ ಅತ್ಯಂತ ವಿಶಿಷ್ಟವಾಗಿ ಗುರುತಿಸಿಕೊಂಡಿರುವ ಹೊನ್ನಾರು ಜನಪದ ಗಾಯನ ವೃಂದಕ್ಕೆ ಈಗ ನಲವತ್ತನಾಲ್ಕು ವರ್ಷದ ಪ್ರಾಯ. ಅದು ಒಂದು ಬಗೆಯ ಸಂದಿಗ್ಧತೆಯ ಕಾಲ. ಜನಪದ ಗೀತೆಗಳು ಮೂಲ ಸೊಗಡನ್ನು ಉಳಿಸಿಕೊಳ್ಳಲು ಪರದಾಡುತ್ತಿದ್ದ ಕಾಲವೆಂದರೂ ತಪ್ಪಿಲ್ಲ. ಸಾರ್ವಜನಿಕ ವೇದಿಕೆಗಳಲ್ಲಿ ಹಾಡುಗಳು ಕೇಳುತ್ತಿದ್ದುದು ಮೂಲಮರೆಮಾಚು ರೂಪದಲ್ಲಿ. ಹಾಡುಗಳಲ್ಲಿ ರೂಪಬೇಧವಾಗಲೂ ಕೆಲವೊಂದು ಕಾರಣ ಇವೆ; ಆ ಕಾಲದಲ್ಲಿ ಜನಪದ ಗೀತೆಗಳನ್ನು ಹಾಡುತ್ತಿದ್ದ ಪ್ರಸಿದ್ಧ

ಕಲಾತಂಡಗಳಲ್ಲಿ ಶಿಷ್ಟವರ್ಗದ ಹಾಡುಗಾರರು ಇರುತ್ತಿದ್ದರಿಂದ ಹಾಡುವಿಕೆಯಲ್ಲಿ ಕೃತಕತೆ ಸಹಜವಾಗಿ ನುಸುಳುತ್ತಿತ್ತು. ಇದು ಜನಸಾಮಾನ್ಯರಿಗೆ ಗೊತ್ತಾಗದ ಸಂಗತಿಯೇನಾಗಿರಲಿಲ್ಲ. ಆದರೂ ಕೆಲತಂಡಗಳು ಕೆಲವು ಹಾಡುಗಳನ್ನು ಮೂಲಕ್ಕೆ ಧಕ್ಕೆಯಾಗದಂತೆ ಹಾಡಿದರೂ, ಆಧುನಿಕ ಕೇಳುಗ ವರ್ಗವನ್ನು ದೃಷ್ಟಿಯಲ್ಲಿಟ್ಟುಕೊಂಡು ರೂಪಾಂತರಗೊಳಿಸಿ, ಧಾಟಿ ಬದಲಿಸಿ ಹಾಡುತ್ತಿದ್ದುದು ಸಾಮಾನ್ಯವಾಗಿ ಕಂಡುಬರುತ್ತಿತ್ತು. ಇಂತಹ ಸಂದರ್ಭದಲ್ಲಿ ಜನಸಾಮಾನ್ಯರಿಗೆ ಮೂಲ ಜನಪದ ಹಾಡುಗಳನ್ನು ಅದರ ಸಾಹಿತ್ಯ, ಲಯ, ಧಾಟಿ, ವಾದ್ಯಗಳೊಂದಿಗೆ ಕೇಳುವ ತುಡಿತ ಉಂಟಾಗಿತ್ತು. 'ನಮ್ಮ ನೆಲಮೂಲ ಜನಪದ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಅಗತ್ಯತೆ ಮತ್ತು ಅನಿವಾರ್ಯತೆಗೆ ತುಡಿಯುವ ಮತ್ತು ದುಡಿಯುವ ಮನಸ್ಸುಗಳ ಹುಡುಕಾಟದ ಸಂದರ್ಭದಲ್ಲಿ ಯಾರದೋ ಅಥವಾ ಯಾವುದೋ ರೂಪದಲ್ಲಿ ಅದು ಹುಟ್ಟಿಬರುವುದು' ಎನ್ನುವಂತೆ ಪಿಕೆಆರ್ ಅವರ ಕನಸಿನ ಕೂಸು 'ಹೊನ್ನಾರು ಜನಪದ ಗಾಯನ ವೃಂದ' ಜನ್ಮತಾಳಿತು. ಪಿಕೆಆರ್ ಅವರ ಮೂಲ ಜಾನಪದ ಮನಸ್ಸು ಕನಸಿದಂತೆ ಜನಪದ ಗೀತೆಗಳನ್ನು ಅವುಗಳ ಮೂಲವನ್ನು ಉಳಿಸಿಕೊಂಡೇ ಹಾಡುವ ಕಾರಣಕ್ಕಾಗಿ ಈ ತಂಡ ಜನಮಾನಸದಲ್ಲಿ ಭದ್ರವಾಗಿ ನೆಲೆಯೂರಲು ಸಾಧ್ಯವಾಯಿತು. ಅದು ಪಿಕೆಆರ್ ಅನನ್ಯತೆಗೆ ಸಾಕ್ಷಿ. ಜನಪದರು ಬಳಸುವ ಕಂಸಾಳೆ, ಕೋಲು, ತಾಳ, ಗೆಜ್ಜೆ, ದಮಡಿಗಳನ್ನು ಉಪಯೋಗಿಸಿಕೊಂಡು ಸಾಹಿತ್ಯವನ್ನು ಸುಶ್ರಾವ್ಯವಾಗಿ ಹಾಡುವ ಮೂಲಕ ಜನರನ್ನು ಮಂತ್ರಮುಗ್ಧಗೊಳಿಸುವ ಹೊನ್ನಾರು ಗಾಯನ ವೃಂದವು ಸಹಜವಾಗೇ ಆ ಕಾಲದ ಜನಪ್ರೀತಿಗೆ ಪಾತ್ರವಾಯಿತು. ಪ್ರಸ್ತುತ ಸಂದರ್ಭದಲ್ಲಂತೂ ಆ ತಂಡದ ಸಾಧನೆ ಅನನ್ಯ, ವೈಶಿಷ್ಟ್ಯಪೂರ್ಣವಾದುದು.

ಪಿಕೆಆರ್ ನೇತೃತ್ವದಲ್ಲಿ ಸ್ಥಾಪನೆಗೊಂಡ ಹೊನ್ನಾರು ಗಾಯನವೃಂದದಲ್ಲಿ ಪ್ರತಿಭಾವಂತರಾದ ಸ್ನೇಹಿತರೂ, ಆತ್ಮೀಯರೂ ಆದ ಶ್ರೀ ಪಡುವಾರಹಳ್ಳಿ ಚಿಕ್ಕಣ್ಣದಾಸ, ಅ.ಕೆ. ಪ್ರಕಾಶ್, ಕೆ.ಎಂ. ಕೃಷ್ಣೇಗೌಡ, ಡಿ.ಎಚ್. ವೆಂಕಟೇಶ್, ಕೆ. ನೀಲಕಂಠ, ಸಿ.ಎಚ್. ಪುಟ್ಟರಾಜು ಮೊದಲಾದವರು ಸೇರಿಕೊಂಡರು. ಆರಂಭದಲ್ಲಿ ವೃಂದದಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡು ಅಹರ್ನಿಶಿ ದುಡಿದರು. ತಂಡಕ್ಕೆ ಮೊದಲ ದಿನಗಳಲ್ಲೇ ವಿಶೇಷ ಮೆರಗು ತಂದುಕೊಟ್ಟರು. ರಾಜಶೇಖರ ಅವರಲ್ಲಿದ್ದ ಜಾನಪದ ಪ್ರೇಮ ಮತ್ತು ಅಪಾರ ವಿದ್ಯಾರ್ಥಿಗಳ ಮೇಲಿನ ಅಂತಃಕರಣದಿಂದಾಗಿ ಅವರ ಹೊನ್ನಾರು ತಂಡವನ್ನು ಸೇರ್ಪಡೆಗೊಳ್ಳುವವರ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಲೇ ಹೋಯಿತು. ಕಾಲಾನಂತರದಲ್ಲಿ ಗುಡ್ಡೇನಹಳ್ಳಿ ಪುಟ್ಟೇಗೌಡ, ನಂ. ನಾರಾಯಣಗೌಡ, ಕಾಸರವಾಡಿ ಪಾಪಣ್ಣ, ಸಣ್ಣನಂಜೇಗೌಡ, ಬೆಳ್ಳಾಳೆ ಬೆಟ್ಟೇಗೌಡ, ಮೈಸೂರು ಕೃಷ್ಣಮೂರ್ತಿ,

ಸಿ.ಡಿ. ವೆಂಕಟೇಶ್, ಬೆಳ್ಳಾಳೆರಾಜು, ಸಿ.ಎಚ್. ಕೃಷ್ಣಪ್ಪ, ಎಸ್. ನಾಗಣ್ಣ, ಜಿ. ಆನಂದನ್, ವೆಂಕಟೇಶ ಇಂದ್ವಾಡಿ, ಮಧುಗಿರಿ ಮಂಜುನಾಥ, ಹುಣಸೆಕುಪ್ಪೆ ಶಿವರಾಜ್, ಸಿ.ಕೆ. ಶಶಿಕಲಾ, ಪಿ. ರಶ್ಮಿ, ಮೈಸೂರು ಉಮೇಶ, ಎನ್.ಆರ್. ಪ್ರಭಾಕರ, ಎಂ. ಶ್ರೀನಿವಾಸ ಮುಂತಾದವರು ಹಲವು ನದಿಗಳು ಸಾಗರ ಸೇರಿದಂತೆ ಹೊನ್ನಾರು ವೃಂದವೆಂಬ ಸಾಗರವನ್ನು ಸೇರಿದರು. ತಂತಮ್ಮ ಸೇವೆಯನ್ನು ಸಲ್ಲಿಸಿದವರು. ಕಲಾಸೇವೆಯನ್ನು ಗೈದವರು. ಹೊನ್ನಾರು ತಂಡದ ಹೊಳಪು ಎಂದೂ ಮಾಸಿಲ್ಲ. ಅದು ಮಾಸಲಾರದ ಹೊನ್ನಕುಡಿಕೆ.

ಬತ್ತದ ಉತ್ಸಾಹ, ಶ್ರಮ, ಶ್ರದ್ಧೆ, ಕ್ರಿಯಾಶೀಲತೆ ಮೇಲಾಗಿ ಸಹೃದಯ ಸಂಪನ್ನರೆನಿಸಿರುವ ಪಿಕೆಆರ್ ಅವರ ಮನಸ್ಸು ಎಲ್ಲರನ್ನೂ ಕರೆತರುವ, ಮುನ್ನಡೆಸುವ ಗುಣವನ್ನು ಹೊಂದಿರುವುದೇ ಇದಕ್ಕೆ ಸಾಕ್ಷಿಯಾಗಿದೆ.

ಹೊನ್ನಾರು ಗಾಯನ ವೃಂದವು ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ, ಕೊಡಗು, ತುಮಕೂರು ಮುಂತಾದ ಜಿಲ್ಲೆಗಳಲ್ಲಿ ಹೆಚ್ಚಿನ ಗಾಯನ ಕಾರ್ಯಕ್ರಮಗಳನ್ನು ನೀಡಿದೆ. ಆ ಭಾಗದಲ್ಲಿ ಸುಪ್ರಸಿದ್ಧವಾಗಿದೆ. ಇಂದಿನ ದಿನಮಾನಗಳಲ್ಲಿ ಜಾನಪದ ವಿಷಯವು ವೈಜ್ಞಾನಿಕ ನೆಲೆಗಟ್ಟಿನಲ್ಲಿ ಅಧ್ಯಯನಕ್ಕೆ ಒಳಪಡುತ್ತಿರುವ ಈ ಹೊತ್ತಿನಲ್ಲಿ ಜಾನಪದವನ್ನು ಆಂಶಿಕರೂಪದಲ್ಲಿ ಜನರಿಗೆ ತಿಳಿಸಿಕೊಡುವ ಮಹತ್ವದ ಕಾರ್ಯವನ್ನು ವೃಂದವು ಅತ್ಯಂತ ಶ್ರದ್ಧೆಯಿಂದ ಮಾಡುತ್ತಿದೆ. ಹಾಗಾಗಿ ಕೇವಲ ಮನೋರಂಜನೆಯ ಜೊತೆಗೆ ಜನಪದ ವಿಷಯದ ಆಸಕ್ತಿಯನ್ನು ಇಂದಿನ ಪೀಳಿಗೆಯವರಲ್ಲಿ ಒಡಮೂಡಿಸುತ್ತಿದೆ. ಆದ್ದರಿಂದ ಹೊನ್ನಾರು ತಂಡದ ಕಾರ್ಯ ಸಾಂಸ್ಕೃತಿಕವಾಗಿ ಮಹತ್ವದ್ದಾಗಿದೆ. ಅಷ್ಟೇ ಅಲ್ಲ ಗ್ರಾಮೀಣ ಪ್ರದೇಶಗಳ ವೇದಿಕೆಯಲ್ಲಿ ಮಾತ್ರ ಗಾಯನ ಕಾರ್ಯಕ್ರಮ ನೀಡಿಲ್ಲ; ಬದಲಾಗಿ ಸ್ಟಾರ್ ಹೊಟೇಲ್ ಸೇರಿದಂತೆ ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳು ಹಾಗೂ ಪ್ರತಿಷ್ಠಿತ ನಗರ ಪ್ರದೇಶಗಳಲ್ಲಿ ಕಾರ್ಯಕ್ರಮಗಳನ್ನು ನೀಡಿ ಸೈ ಎನಿಸಿಕೊಂಡಿದೆ.

ತಂಡದ ಕಲಾವಿದರು ಮೈಸೂರು ಆಕಾಶವಾಣಿ, ಬೆಂಗಳೂರು ದೂರದರ್ಶನ, ಮೈಸೂರು ದಸರಾ ಉತ್ಸವ ಮುಂತಾದ ಪ್ರಮುಖ ವೇದಿಕೆಗಳಲ್ಲಿ ಜನಪದ ಗೀತೆಗಳ ಗಾಯನದ ಹೊನಲು ಹರಿಸಿದ್ದಾರೆ. ಅಲ್ಲದೇ ಎಚ್.ಎಲ್. ನಾಗೇಗೌಡರು ನಿರ್ಮಿಸಿದ 'ಜಾನಪದ ಲೋಕ', ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗಳು ಏರ್ಪಡಿಸುವ ವಿವಿಧ ಗೀತಗಾಯನ ತರಬೇತಿ ಶಿಬಿರಗಳಲ್ಲಿ ಹೊನ್ನಾರು ತಂಡದ ಸದಸ್ಯರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಮೂಲ ಮಟ್ಟುಗಳನ್ನು ಹೇಳಿಕೊಟ್ಟು ನಾಡಿನ ತುಂಬ ಜನಪದ ಗೀತೆಗಳನ್ನು ಪ್ರಚಾರ ಮಡಿದ್ದಾರೆ. ಅಲ್ಲದೇ ಹೊನ್ನಾರು ಗಾಯನ

ವೃಂದವು ಜನಪದ ಗೀತೆಗಳ ಧ್ವನಿಸುರುಳಿಗಳ ಕ್ಯಾಸೆಟ್‌ನ್ನು ಬಿಡುಗಡೆಗೊಳಿಸಿ ಕ್ಯಾಸೆಟ್ ಲೋಕದಲ್ಲೂ ಯಶಸ್ಸು ಗಳಿಸಿದ್ದಾರೆ. ಇವರ ಧ್ವನಿಸುರುಳಿಗಳಲ್ಲಿ ನಾಡಿನ ಹೆಸರಾಂತ ಗಾಯಕರಾದ ಪುತ್ತೂರು ನರಸಿಂಹ ನಾಯಕ್, ಶಂಕರ ಶಾನಭೋಗ್, ರತ್ನಮಾಲಾ ಪ್ರಕಾಶ, ಮೈಸೂರು ಗಾಯತ್ರಿ, ಮಂಜುಳ ಗುರುರಾಜ್ ಮುಂತಾದವರು ಧ್ವನಿ ನೀಡಿದ್ದಾರೆ. ತಂಡದ ಯಶಸ್ಸಿನಲ್ಲಿ ಕೈಜೋಡಿಸಿದ್ದಾರೆ. ವೃಂದವು ತನ್ನ ಬೆಳ್ಳಿಹಬ್ಬವನ್ನು ಅತ್ಯಂತ ಸಂಭ್ರಮದಿಂದ ಆಚರಿಸಿಕೊಂಡಿದೆ.

ಹೊನ್ನಾರು ಗಾಯನ ತಂಡ ಹುಟ್ಟಿಕೊಂಡು ನಾಲ್ಕು ದಶಕಗಳು ಸಂದರೂ ಇಂದಿಗೂ ಅದೇ ಲವಲವಿಕೆಯನ್ನು, ಉತ್ಸಾಹವನ್ನು ಉಳಿಸಿಕೊಂಡಿದೆ. ಜನಪದ ಗೀತೆಗಳ ಪ್ರಚಾರದ ಕಾರ್ಯ ನಿರಂತರವಾಗಿ ಸಾಗಿದೆ. ಜಾನಪದ ಅವಿನಾಶಿಯಾದುದು. ಈ ಮಾತು ತಂಡದ ಕರ್ತೃತ್ವಶಕ್ತಿಗೂ ಅನ್ವಯಿಸುತ್ತದೆ. ಇದೆಲ್ಲವೂ ಸಾಧ್ಯವಾದದ್ದು ಪಿಕೆಆರ್ ಎಂಬ ಸರಳ ಸಾತ್ವಿಕ ವ್ಯಕ್ತಿತ್ವವೊಂದು ಪೂರ್ಣಪ್ರಮಾಣದ ತೊಡಗಿಕೊಳ್ಳುವಿಕೆ ಮತ್ತು ಇತರರನ್ನು ತೊಡಗಿಸಿಕೊಳ್ಳುವಿಕೆಯಿಂದ ಸಾಧ್ಯವಾಗುತ್ತಿದೆ ಎಂಬುದು ಸತ್ಯಸ್ಯ ಸತ್ಯವಾದ ಮಾತು.

ಹೊನ್ನ ಹೊತ್ತಗೆಯ ಮೇಲೊಂದು ನೋಟ

ಮೂಲತಃ ಜನಪದ ಮನಸ್ಸನ್ನು ಹೊಂದಿದ ಡಾ. ಪಿ.ಕೆ. ರಾಜಶೇಖರರು ತಮ್ಮ ಅಭಿವ್ಯಕ್ತಿಗೆ ಆರಂಭದಲ್ಲಿ ಆಯ್ಕೆ ಮಾಡಿಕೊಂಡ ಮಾರ್ಗ ಕಾವ್ಯ. ಕಾವ್ಯದೊಂದಿಗೆ ಬರೆಹವನ್ನು ಶುರುಮಾಡಿದ ಅವರು, ಆರಂಭದಲ್ಲಿ ಕವನ ಸಂಕಲನಗಳನ್ನು ಹೊರತಂದರು. ಮುಂದೆ ತಮ್ಮನ್ನು ತಾವು ಸಂಶೋಧನೆ, ಸಂಪಾದನೆಯಂತಹ ಗಂಭೀರ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡರು. ಇದು ಒಂದು ರೀತಿಯಲ್ಲಿ ಕನ್ನಡ ಜಾನಪದ ಲೋಕಕ್ಕೆ ಒಳ್ಳೆಯದೇ ಆಯಿತು. ಅಳಿದುಳಿದ ಜನಪದ ಸಂಪತ್ತಿನ ಗಣಿಯನ್ನು ಹೆಕ್ಕಿ ತೆಗದು, ಅಮೂಲ್ಯವಾದ ಜನಪದ ಸಾಹಿತ್ಯವನ್ನು ಸಂಗ್ರಹಿಸಿದರು. ಇದಲ್ಲದೇ ಮಕ್ಕಳ ಸಾಹಿತ್ಯ, ಭಾಷಾಶಾಸ್ತ್ರ ಕ್ಷೇತ್ರಗಳಲ್ಲೂ ಅವರದು ಗುರುತಿಸಬಹುದಾದ ಕಾರ್ಯ. ಆದಾಗ್ಯೂ ಅವರ ಪ್ರತಿಭೆ ಪೂರ್ಣಪ್ರಮಾಣದಲ್ಲಿ ಹರಿದಾಡಿದ್ದು, ಜಾನಪದದಲ್ಲಿಯೇ ಎಂಬುದು ಸರ್ವವಿದಿತ.

ಕನ್ನಡ ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪಿಕೆಆರ್ ಅವರ ಕೊಡುಗೆ ಬೃಹತ್ತಾದುದು ಮತ್ತು ಮಹತ್ತಾದುದು. ಅವರ ವಿಪುಲ ಸಾಹಿತ್ಯ ಕ್ಷೇತ್ರದ ಕೃಷಿಯನ್ನೊಮ್ಮೆ ಅವಲೋಕಿಸುವ ಮೂಲಕವೇ ಅವರ ಸಾಹಿತ್ಯಕ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಅರಿಯಲು ಸಾಧ್ಯ. ಕಾಲಾನಂತರದಲ್ಲಿ ಜಾನಪದ ಕ್ಷೇತ್ರದಲ್ಲಿ ತೋರಿದ ಅಪಾರ ಶ್ರಮ, ಶ್ರದ್ಧಾಪೂರ್ವಕವಾದ ಕ್ಷೇತ್ರಕಾರ್ಯದ ಮೂಲಕವೇ ಅವರು ನಾಡಿನ ವಿದ್ವತ್‌ವಲಯಕ್ಕೆ ಪರಿಚಿತರಾದರು. ಅವರ ವಿದ್ವತ್‌ಗೆ ಅವರ ಕೃತಿರತ್ನಗಳೇ ಸಾಕ್ಷಿಯಾಗಿವೆ. ಸೃಜನ ಮತ್ತು ಸೃಜನೇತರ ಎರಡು ವಿಭಾಗಗಳಲ್ಲೂ ಪಿಕೆಆರ್ ಹೆಸರು ಚಿರಂತನ, ಚಿರನೂತನ. ಆದರೆ ಇಲ್ಲಿ ಅವರ ಜಾನಪದ ಕ್ಷೇತ್ರಸಂಬಂಧಿ ಕೆಲವು ಕೃತಿಗಳನ್ನು ಮಾತ್ರ ಅವಲೋಕಿಸಿ, ದಾಖಲಿಸುವ ಪ್ರಯತ್ನ ಮಾಡಲಾಗಿದೆ. ಪಿ.ಕೆ. ರಾಜಶೇಖರ ಅವರು ನೀಡಿದ ಅಮೂಲ್ಯ ಕೃತಿಗಳ ಕುರಿತು ತಿಳಿಯಲು ಒಂದು ಬಗೆಯಲ್ಲಿ ಮಾರ್ಗಸೂಚಿಯನ್ನು ನೀಡುವ ಮತ್ತು ಜಾನಪದ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಯನ್ನು ಸಂಕ್ಷಿಪ್ತವಾಗಿ ಪರಿಚಯಿಸುವ ಉದ್ದೇಶ ಈ ಪ್ರಯತ್ನದ ಮೂಲಕ ಸಾಧ್ಯವಾಗುತ್ತದೆ ಎಂಬುದು ನನ್ನ ನಂಬಿಕೆ.

೧. ಬೆಟ್ಟದ ಚಾಮುಂಡಿ

ಶಿಷ್ಟ ಪುರಾಣಗಳಿಗಿಂತ ಅತ್ಯಂತ ವಿಶಿಷ್ಟವಾಗಿರುವ ಜನಪದ ಕಥನ 'ಬೆಟ್ಟದ ಚಾಮುಂಡಿ'. ದೇವರಗುಡ್ಡರ ಸಂಪ್ರದಾಯದ ಕ್ಯಾತಮಾರನಹಳ್ಳಿ ಮಹದೇವಯ್ಯ ಹಾಡಿರುವ ಈ ಕಾವ್ಯವು ಮೂಲತಃ ಪ್ರಣಯಕಾವ್ಯ. ೧೦ ಶೀರ್ಷಿಕೆಗಳಲ್ಲಿ ಹರಡಿಕೊಂಡಿರುವ ಈ ಕಾವ್ಯ ನಂಜುಂಡ, ಚಾಮುಂಡಿ, ದೇವೀರಿ, ಸೋಮಾಜಿ, ಉತ್ತನಹಳ್ಳಿ ಮಾರಮ್ಮ ಮುಂತಾದ ಪುರಾಣ ಪಾತ್ರಗಳು, ಆಧುನಿಕ ಬದುಕಿನಲ್ಲಿ ಕಾಣುವ ಪ್ರೇಮದಾಟ, ಗಂಡ ಹೆಂಡಿರ ನಡುವೆ ಸವತಿಯರ ಕಾಟ, ಪ್ರೇಮವನ್ನು ಉಳಿಸಿಕೊಳ್ಳಲು ಬಳಸುವ ತಂತ್ರ ಇತ್ಯಾದಿ ಸಂಗತಿಗಳಿಗೆ ಸಾಮ್ಯತೆ ಕಾಣಿಸುತ್ತದೆ. ಹೀಗಾಗಿ ಈ ಕಾವ್ಯ ಪುರಾಣದ ಮೂಲಕ ಆಧುನಿಕ ಬದುಕನ್ನು ಅರ್ಥೈಸುವ ಮಹತ್ವದ ಕಾವ್ಯವಾಗಿಯೂ ತೋರುತ್ತದೆ. ಆದ್ದರಿಂದ ಜನಪದ ಕಾವ್ಯಗಳು ನೆಲದ ಮಣ್ಣಿನ ಸೊಗಡನ್ನು ಮೈಗೂಡಿಸಿಕೊಂಡೇ ಇರುತ್ತವೆ ಎನ್ನುವುದಕ್ಕೆ ಬೆಟ್ಟದ ಚಾಮುಂಡಿ ಜನಪದ ಕಾವ್ಯ ಉತ್ತಮ ನಿದರ್ಶನ. ಉತ್ತರ ದೇಶದಿಂದ ಮೈಸೂರಿಗೆ ಬಂದ ಚಾಮುಂಡಿ ಮಹಿಷಾಸುರನನ್ನು ಕೊಂದು ಮೈಸೂರಿನ ಬೆಟ್ಟದ ಮೇಲೆ ನೆಲೆಗೊಳ್ಳುತ್ತಾಳೆ. ಒಮ್ಮೆ ಕಪನೀ ಕಾವೇರಿಯಲ್ಲಿ ಸ್ನಾನಕ್ಕೆಂದು ಹೋದಾಗ ಆಕಸ್ಮಿಕವಾಗಿ ಅಲ್ಲಿಗೆ ಬಂದ ನಂಜುಂಡೇಶ್ವರನನ್ನು ವರಿಸುತ್ತಾಳೆ. ಈ ಮೊದಲೇ ನಂಜುಂಡೇಶ್ವರನಿಗೆ ದೇವೀರಿ ಮತ್ತು ಸೋಮಾಜಿ ಎಂಬ ಹೆಂಡತಿಯರು ಇರುತ್ತಾರೆ. ಚಾಮುಂಡಿಯನ್ನು ವರಿಸಿದ ಸಂಗತಿಯನ್ನು ತಿಳಿದ ಅವರು ನಂಜುಂಡೇಶ್ವರನನ್ನು ಕತ್ತಲಕೋಣೆಯಲ್ಲಿ ಬಂಧಿಸುತ್ತಾರೆ. ಇದರಿಂದ ಪಾರಾಗಬೇಕೆಂಬ ಕಾರಣಕ್ಕೆ ನಂಜುಂಡ ಸತ್ತಂತೆ ನಟಿಸುತ್ತಾನೆ. ಸತ್ತು ಹೋಗಿರುವ ನಂಜುಂಡನನ್ನು ಬದುಕಿಸುವ ನಾಟಕವಾಡುವ ಚಾಮುಂಡಿ, ಕೊರವಂಜಿ ವೇಷ ಧರಿಸಿ ಬಂದು ಚಾಮುಂಡಿಬೆಟ್ಟಕ್ಕೆ ನಿಮ್ಮ ಗಂಡನನ್ನು ಕಳುಹಿಸಿಕೊಡುವುದಾದಲ್ಲಿ ಮತ್ತೆ ಜೀವಪಡೆಯುತ್ತಾನೆ ಎಂದು ಹೇಳುವ ಮೂಲಕ ನಂಜುಂಡನನ್ನು ಬೆಟ್ಟಕ್ಕೆ ಕರೆಯಿಸಿಕೊಳ್ಳುವುದು ಬೆಟ್ಟದ ಚಾಮುಂಡಿ ಕೃತಿಯ ಕಥಾವಸ್ತು. ಈ ಕೃತಿಯನ್ನು ಅತ್ಯಂತ ವೈಜ್ಞಾನಿಕವಾಗಿ ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸಿದ್ದಾರೆ ಪಿಕೆಆರ್.

ಮುಂದೆ ಪಿ.ಕೆ. ರಾಜಶೇಖರರು ಈ ಕೃತಿಯನ್ನು ನಾಟಕ ರೂಪಕ್ಕೆ ಅಳವಡಿಸಿದರು. ಡಾ. ಎಂ.ಎಸ್. ವಿಜಯಹರನ್ ಅವರ ನಿರ್ದೇಶನದಲ್ಲಿ ಮೈಸೂರು ಆಕಾಶವಾಣಿಯಲ್ಲಿ ೧೯೯೧ನೆಯ ವರ್ಷದ ದಸರಾ ಮಹೋತ್ಸವ ಸಂದರ್ಭದಲ್ಲಿ ಪ್ರಸಾರಗೊಂಡಿತು. ನಾಟಕವನ್ನು ಕೇಳಿದ ಶ್ರೋತೃಗಳು ಪ್ರಶಂಸೆಯ ಸುರಿಮಳೆಯನ್ನೇ ಸುರಿಸಿದರು. ಜನಪದ ಕಾವ್ಯಕ್ಕೆ ಇರುವ ಬೇರೆ ಬೇರೆ ಸಾಧ್ಯತೆಗಳನ್ನು ಈ ಕೃತಿ ಹೊಂದಿದೆ ಎಂಬುದು ದೃಢವಾಯಿತು.

೨. ಜನಪದ ರಾಮಾಯಣ

ಜನಪದ ರಾಮಾಯಣ ಡಾ. ಪಿಕೆಆರ್ ಅವರು ಸಂಗ್ರಹಿಸಿ, ಸಂಪಾದಿಸಿದ ಮಹತ್ವದ ಕೃತಿರತ್ನ. ಒಟ್ಟು ನಾಲ್ಕು ಭಾಗಗಳಲ್ಲಿ ಹರಡಿಕೊಂಡಿರುವ ಪ್ರಸ್ತುತ ಕಾವ್ಯವು ಅತ್ಯಂತ ವಿಶಿಷ್ಟವಾದುದಾಗಿದೆ. ಇದು ಕನ್ನಡ ಜನಪದ ವ್ಯಾಪ್ತಿಯನ್ನು ಹಿಗ್ಗಲಿಸಿದ ಕೃತಿ ಎಂಬುದಾಗಿ ವಿದ್ವಾಂಸರ ಮೆಚ್ಚುಗೆಗೆ ಪಾತ್ರವಾಗಿದ್ದು, ಜನಪದರ ಕಾವ್ಯಕೊಡುಗೆಯನ್ನು ತಿಳಿಯಲು ಅಧ್ಯಯನ ಆಕರವಾಗಿದೆ. ಜನಪದ ರಾಮಾಯಣ ಭಾಗ–೧ರಲ್ಲಿ ಪ್ರೊ. ರಾಗೌ ಅವರು ಸಂಗ್ರಹಿಸಿರುವ ಸೀತೆಯ ಜನನ, ಸೀತಾಸ್ವಯಂವರ, ಸೀತಾಪರೀಕ್ಷೆ ಎಂಬ ಶೀರ್ಷಿಕೆಗಳ ಇರುವ ಕಾವ್ಯಭಾಗವನ್ನು ಮೈಸೂರು ಜಿಲ್ಲೆ ಕೆ.ಆರ್. ನಗರ ತಾಲ್ಲೂಕಿನ ಅಂಕನಹಳ್ಳಿಯ ಹೊನ್ನಾಜಮ್ಮ ಹಾಡಿರುವುದಾಗಿದೆ. ಸೀತಾಸ್ವಯಂವರ ಭಾಗ ಶಿಷ್ಟವನ್ನೇ ಹೋಲುತ್ತದೆ. ಉಳಿದೆರಡು ವಿಷಯಗಳು ಜಾನಪದ ಆಶಯಕ್ಕೆ ಪೂರಕವಾಗಿದ್ದು, ನೂತನ ಕಥನ ಮಾದರಿಯನ್ನೇ ಹೊಂದಿವೆ.

ರಾಮಾಯಣ ಭಾಗ–೨ರಲ್ಲಿ ಪಿಕೆಆರ್ ಸಂಗ್ರಹಿಸಿದ ಕೊಡಗು ಜಿಲ್ಲೆಯ ಕೊಡ್ಲಿಪೇಟೆಯ ಸಾವಿತ್ರಮ್ಮ ಹಾಡಿದ ಕಾವ್ಯವಿದೆ. ಇದರಲ್ಲಿ ಸಣ್ಣುಮಾರನ ಕಥೆ ಎಂಬ ಕಥನಗೀತೆ ಇದೆ. ಏಕಘಟನೆಯೊಂದನ್ನು ಕೇಂದ್ರೀಕರಿಸಿ ಹಾಡಲಾದ ಈ ಭಾಗವು ಶಂಭುಕನ ಪ್ರಸಂಗ ಕುರಿತು ವಿವರಿಸುತ್ತದೆ. ಪಿಕೆಆರ್ ಅವರದೇ ಸಂಗ್ರಹವಾದ ರಾಮಾಯಣ ಭಾಗ–೩ರಲ್ಲಿ ಮಲೆಮಹದೇಶ್ವರನ ಅಸೀಮ ಭಕ್ತರಾಗಿರುವ ಕಂಸಾಳೆಯವರು, ದೇವರಗುಡ್ಡರು ಎಂದು ಕರೆಸಿಕೊಳ್ಳುವ ಕಥೋಪಜೀವಗಳಾದ ಕಂಸಾಳೆ ಮಹಾದೇವಯ್ಯನವರು ಹಾಡಿದ ಕಾವ್ಯಭಾಗವಾಗಿದೆ. ವಾಲ್ಮೀಕಿ ರಾಮಾಯಣವನ್ನೇ ಹೋಲುವ 'ಲವಕುಶರ ಕಾಳಗ' ಕಥಾ ಪ್ರಸಂಗವನ್ನು ಇಲ್ಲಿ ವಿವರಿಸಲಾಗಿದೆ. ಬಿ.ಎಸ್. ತಲ್ವಾಡಿಯವರು ಸಂಗ್ರಹಿಸಿದ ರಾಮಾಯಣ ಭಾಗ–೪ರಲ್ಲಿ ತಂಬೂರಿ ಸಂಪ್ರದಾಯದ ಗಾಯಕ ಚನ್ನಯ್ಯನ ಉರುಫ್ ಜಿಲ್ಪ ಹಾಡಿರುವ 'ಸಂಪೂರ್ಣರಾಮಾಯಣ' ಎಂಬ ಕಾವ್ಯಭಾಗ ವಿಶಿಷ್ಟವಾದುದಾಗಿದೆ. ಈ ಭಾಗವು ವಾಲ್ಮೀಕಿ ರಾಮಾಯಣದ ಪ್ರಭಾವದಿಂದ ಸಂಪೂರ್ಣ ಬಿಡಿಸಿಕೊಂಡಿದೆ ಎಂಬುದಕ್ಕೆ ಅನೇಕ ಉದಾಹರಣೆಗಳು ಇಲ್ಲಿ ಸಿಗುತ್ತವೆ.

ಪ್ರೊ. ರಾಗೌ ಅವರು ಅಧ್ಯಯನಪೂರ್ಣ ಸುದೀರ್ಘ ಪ್ರಸ್ತಾವನೆಯಲ್ಲಿ "ಶಿಷ್ಟ ರಾಮಾಯಣದ ಪ್ರಭಾವ ಮತ್ತು ಪ್ರೇರಣೆಗಳನ್ನು ಗುರುತಿಸುತ್ತಲೇ, ಜನಪದ ಕಾವ್ಯ ಪರಂಪರೆಯಲ್ಲಿ ವಾಲ್ಮೀಕಿ ರಾಮಾಯಣ ಸಂಪ್ರದಾಯವೊಂದು ತೆರೆಯುವಷ್ಟರಮಟ್ಟಿಗೆ ಹೋಗಿರಲಾರದೆಂಬುದು ತೀರಾ ಖಚಿತವಿರುವ ವಿಷಯ. ಈ ಕಾವ್ಯವನ್ನು ಶಿಷ್ಟಕಾವ್ಯದ ದೃಷ್ಟಿಯಿಂದ ನೋಡಲಾಗದು; ಜನಪದ ಕಾವ್ಯಕ್ಕೆ

ಅದರದೇ ಆದ ಅಳತೆಯ ಮೌಲ್ಯಗಳಿವೆಯೆಂದು ನನಗನ್ನಿಸುತ್ತದೆ. ಇದಕ್ಕೆ ತನ್ನದೆಯಾದ ಪರಿಮಿತಿ ಹಾಗೆಯೇ ವೈಶಿಷ್ಟ್ಯವೂ ಉಂಟು. ಇದನ್ನು ಹುಟ್ಟು, ವಿಕಾಸ, ವಸ್ತು ಮೊದಲಾದ ಜಾನಪದ ಜಾಯಮಾನಗಳ ಅರಿವಿನ ಬೆಳಕಿನಲ್ಲಿ ಅಧ್ಯಯನ ನಡೆಸಬೇಕಾಗುತ್ತದೆ. ಈ ದೃಷ್ಟಿಯಲ್ಲಿ ನೋಡಿದಾಗ, 'ಜನಪದ ರಾಮಾಯಣ'ವು ಕಾವ್ಯವಾಗಿಯೂ ತನ್ನತನವನ್ನು ಕಾಪಾಡಿಕೊಳ್ಳುತ್ತದೆ" ಎಂದು ಅಭಿಪ್ರಾಯ ಪಟ್ಟಿರುತ್ತಾರೆ.

ಸ್ವತಃ ಡಾ. ರಾಗೌ, ಡಾ. ಪಿಕೆ.ಆರ್. ಹಾಗೂ ಡಾ. ಬಿ.ಎಸ್. ತಲ್ವಾಡಿಯವರು ಸಂಪಾದಿಸಿದ ಈ ಕೃತಿಗೆ 'ತ್ರಿಮೂರ್ತಿಗಳ ರಾಮಾಯಣ' ಎಂಬ ಪ್ರಖ್ಯಾತಿಯೂ ಇದೆ.

೩. ಜನಪದ ಮಹಾಭಾರತ

ಜಗತ್ತಿನ ಜಾನಪದ ಕ್ಷೇತ್ರದಲ್ಲಿ ಇದ್ದ ಮಹಾಕಾವ್ಯ ಪರಿಕಲ್ಪನೆಯು ಕನ್ನಡ ಜಾನಪದದಲ್ಲೂ ಇದೆ ಎಂಬುದನ್ನು ತೋರಿಸಿಕೊಟ್ಟ ಕೀರ್ತಿ ಜನಪದ ಮಹಾಭಾರತ ಕೃತಿಗೆ ಸಲ್ಲುತ್ತದೆ. ಪಿಕೆಆರ್ ಅವರ ಶ್ರಮ, ಶ್ರದ್ಧೆ ಎಂತಹದು ಎಂಬುದಕ್ಕೆ ಈ ಮಹಾಕಾವ್ಯ ಸಂಗ್ರಹವೇ ಸಾಕ್ಷಿಯಾಗಿದೆ. ಶಿಷ್ಟ ಭಾಷೆಯ ಮಹಾಭಾರತಕ್ಕೆ ಪ್ರತಿಕ್ರಿಯೆ ರೂಪದಲ್ಲಿ ದೇಸೀ ಭಾಷೆಯಲ್ಲಿಯೂ ಸಹ ಘನವಾದ ಮತ್ತು ಗುರುತರವಾದ ಮಹಾಕಾವ್ಯ ಇದೆ ಎಂಬುದನ್ನು ಹುಡುಕಿ, ದೊರಕಿಸಿಕೊಟ್ಟವರು ಪಿಕೆಆರ್ ಅವರು. ಮೈಸೂರು ಜಿಲ್ಲೆ ಹೆಚ್‌ಡಿ ಕೋಟೆ ತಾಲ್ಲೂಕಿನ ಬೆಟ್ಟದಬೀಡು ಗ್ರಾಮದ ಸಿದ್ದಶೆಟ್ಟಿಯವರು ಹಾಡಿರುವ ಈ ಮಹತ್ಕೃತಿಯನ್ನು ಅಚ್ಚುಕಟ್ಟಾಗಿ ಸಂಗ್ರಹಿಸಿದ್ದಾರೆ. ವ್ಯಾಸಭಾರತಕ್ಕಿಂತ ಭಿನ್ನವಾಗಿರುವ ಇಲ್ಲಿನ ಪಾತ್ರಗಳು, ಕಥನ ಶೈಲಿ, ಕಲ್ಪನಾಶಕ್ತಿ ಇತ್ಯಾದಿ ಸಂಗತಿಗಳಿಂದಾಗಿ ಈ ಮಹಾಕಾವ್ಯವು ಶಿಷ್ಟ ಪರಂಪರೆಗೆ ದೇಸೀ ಪರಂಪರೆ ಮುಖಾಮುಖಿಯಾಗುವ ಹಾಗೂ ಸಮನ್ವಯ ಸಾಧಿಸುವುದಕ್ಕೆ ಅತ್ಯುತ್ತಮ ಉದಾಹರಣೆ ಎಂದು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಇದು ನೆಲಮೂಲ ಸಂಸ್ಕೃತಿಯ ಪ್ರಾತನಿಧಿಕ ಕಾವ್ಯವೂ ಆಗಿದೆ. ಇಲ್ಲಿ ಪುರಾಣಮೂಲ ಪಾತ್ರಗಳ ಮೂಲಕ ನೆಲಮೂಲ ಚಿಂತನೆಯನ್ನೇ, ಅದರಲ್ಲೂ ಮಾನವೀಯ ಮೌಲ್ಯಗಳನ್ನು ಸಾರುವ ಉದ್ದೇಶ ಇಲ್ಲಿ ಪ್ರಮುಖವಾಗಿದೆ. ೧೬೦ ಪರ್ವಗಳನ್ನು ಹೊಂದಿದ ಪ್ರಸ್ತುತ ಕೃತಿಯಲ್ಲಿ ೪೩ ಸಾವಿರ ಪಾದಗಳು ಇವೆ. ಜನಪದರ ಲೋಕದೃಷ್ಟಿಯನ್ನು ತಿಳಿಯಪಡಿಸುವ ಈ ಮಹಾಕಾವ್ಯ ಜನಪದ ಮಹಾಕವಿಯೊಬ್ಬನ ಸೋಪಜ್ಞತೆಗೆ ಸಾಕ್ಷಿಯಾಗಿದೆ. ಈ ವಿಶಿಷ್ಟ ಕೃತಿಯ ಬಗ್ಗೆ ಪ್ರೊ. ದೇಜಗೌ, ಪ್ರೊ. ರಾಮೇಗೌಡ (ರಾಗೌ), ಪ್ರೊ. ಹಂಪ ನಾಗರಾಜಯ್ಯ, ಪ್ರೊ. ಸಿ.ಪಿ.ಕೆ., ಪ್ರೊ. ಶಿವರಾಮ

ಕಾಡನಕುಪ್ಪೆ, ಪ್ರೊ. ಲಿಂಗದೇವರು ಹಳೆಮನೆ, ಪ್ರೊ. ಎಚ್.ಎಸ್. ಶಿವಪ್ರಕಾಶ, ಪ್ರೊ. ಶಿವರಾಮಯ್ಯ ಇನ್ನೂ ಮುಂತಾದ ವಿದ್ವಾಂಸರು ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ. ಪಿಕೆಆರ್ ಸಾಧನೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ೧೫೦೦ ಪುಟದ 'ಜನಪದ ಮಹಾಭಾರತ' ಕೃತಿ, ಕೃತಿಯನ್ನು ಸಂಗ್ರಹಿಸಿ ಅಮೂಲ್ಯವಾದ ಕಾಣಿಕೆಗಳನ್ನು ನಾಡಿನ ವಿದ್ವತ್‌ಲೋಕಕ್ಕೆ ನೀಡಿದ್ದಾರೆ. ಒಟ್ಟಾರೆ ಈ ಮಹಾಕಾವ್ಯ ಕನ್ನಡ ಜಾನಪದ ಕ್ಷೇತ್ರ ವ್ಯಾಪ್ತಿಯನ್ನು ವಿಸ್ತರಿಸಿದ ವಿಶಿಷ್ಟ ಮತ್ತು ಅಮೂಲ್ಯ ಕೃತಿ ಎಂಬುದನ್ನು ನಿಸ್ಸಂಕೋಚವಾಗಿ ಹೇಳಬಹುದು.

೪. ಮಲೆಯ ಮಾದೇಶ್ವರ

ನಾಡಿನ ಜಾನಪದ ಕ್ಷೇತ್ರವು ಅಚ್ಚರಿ ಮತ್ತು ಸೋಜಿಗಪಡುವಂತಹ ಮತ್ತೊಂದು ಮಹತ್ವದ ಕೃತಿ ಮಲೆಯ ಮಾದೇಶ್ವರ. ಡಾ. ಪಿಕೆಆರ್ ಅವರ ಅಪಾರ ಶ್ರದ್ಧೆ, ಶ್ರಮ, ಉತ್ಸಾಹಗಳ ಪ್ರತೀಕವಾಗಿ ಈ ಕೃತಿಬೆಳಕು ತನ್ನ ಉಜ್ವಲತೆಯನ್ನು ಹೊರಸೂಸಿದೆ. ೧೯೭೩ರಲ್ಲಿ ಬೆಳಕು ಕಂಡ ಇದು, ೧೫೦೦ ಪುಟಗಳನ್ನು ಹೊಂದಿ, ಬೃಹತ್‌ಗಾತ್ರದ ಎರಡು ಸಂಪುಟಗಳಲ್ಲಿ ಪ್ರಕಟಣೆ ಆಯಿತು. ಮೊದಲ ಸಂಪುಟದಲ್ಲಿ ಆದಿಶಕ್ತಿ ಮಾದಪ್ಪನ ಸಾಲು, ಹುಟ್ಟಿ ಬೆಳೆದ ಸಾಲು, ಬೇಡರ ಕಣ್ಣಯ್ಯನ ಸಾಲು, ಶ್ರವಣದೊರೆ ಸಾಲು, ಇಕ್ಕೇರಿ ದೇವಮ್ಮನ ಸಾಲು ಎಂಬ ಐದು ದೀರ್ಘ ಕಾವ್ಯಭಾಗಗಳಿವೆ. ಸಂಪುಟ ಎರಡರಲ್ಲಿ ಆಲಂಬಾಡಿ ಜುಂಜೇಗೌಡನ ಸಾಲು, ಸಂಕಮ್ಮನ ಸಾಲು, ದುಂಡಮ್ಮನ ಸಾಲು, ಬೇವಿನ್ನಟ್ಟಿ ಕಾಳಮ್ಮನ ಸಾಲು, ಸರಗೂರಯ್ಯನ ಸಾಲು, ಪಂಚಲಿಂಗ ಮಾದಪ್ಪನ ಸಾಲು, ಕಾರಯ್ಯ ಬಿಲ್ಲಯ್ಯರ ಸಾಲು, ನಾಗಮಲೆಯಲ್ಲಿ ನೆಲೆಗೊಂಡ ಸಾಲು, ದುರ್ಗದ ಮಲ್ಲಮ್ಮನ ಸಾಲು ಎಂಬ ಒಂಭತ್ತು ಕಥಾಭಾಗಗಳು ಇವೆ. ಮಂಗಳಾರತಿ ಮಾದೇವನಿಗೆ ಎಂಬ ಭಾಗದಲ್ಲಿ ೪೧೯ ತ್ರಿಪದಿಗಳು ಇವೆ. ಒಟ್ಟು ೧೪ ಕಥಾಭಾಗಗಳ ಈ ಎರಡು ಸಂಪುಟಗಳನ್ನು ಸೇರಿಸಿ ಸಂಯುಕ್ತ ಸಂಪುಟ ಬೆಳಕು ಕಂಡಿದೆ.

ಪುರಾಣ ಮತ್ತು ಐತಿಹ್ಯಗಳನ್ನು ಹೊಂದಿರುವ ಜನಪದ ಕಾವ್ಯ ಇದು. ಇಲ್ಲಿನ ಕಾವ್ಯನಾಯಕ ಮಾದೇಶ್ವರ ಶಿವನ ಅವತಾರಿ, ಶ್ರವಣ ಎಂಬ ದುಷ್ಟ ವ್ಯಕ್ತಿಯ ಸಂಹಾರಕ್ಕೆ ಜನ್ಮವೆತ್ತಿ ಬಂದಿರುವನೆಂಬ ಪೌರಾಣಿಕ ಅಂಶವನ್ನೇ ತಿಳಿಸುವ ರೀತಿಯಲ್ಲಿ ಕಾವ್ಯ ವ್ಯಕ್ತಗೊಂಡಿದೆ. ಇಡೀ ಕಾವ್ಯದಲ್ಲಿ ಆರಂಭದಿಂದ ಕೊನೆಯತನಕ ಮಾದೇಶ್ವರನ ವಿವಿಧ ಪವಾಡಗಳು, ಅತಿಮಾನುಷ ವರ್ತನೆಗಳು ಪುರಾಣದ ರೀತಿಯಲ್ಲಿಯೇ ಪ್ರತಿಪಾದಿತಗೊಂಡಿವೆ. ಕನ್ನಡ ಜಾನಪದ ಇತಿಹಾಸದಲ್ಲಿ ಎಂದೂ ಉಳಿಯಬಹುದಾದ ಬೃಹತ್‌ಗ್ರಂಥ ಇದಾಗಿದೆ. ಕೃತಿಗಳ ಗಾತ್ರ ಮುಖ್ಯವಲ್ಲ.

ಸಂಶೋಧಕನಿಗೆ ಅಗತ್ಯವಿರುವ ಎಲ್ಲವನ್ನು ಸಂಗ್ರಾಹಕ ಒದಗಿಸಿಕೊಡುವ ಮಹದುಪಕಾರ ಮಾಡಬೇಕು. ಅಪಾರ ಪ್ರಮಾಣದ ಸಂಗ್ರಹವಿದ್ದಾಗಲೇ ಹೆಚ್ಚಿನ ಅಧ್ಯಯನ, ಸಂಶೋಧನೆ ಕೈಗೊಳ್ಳಲು ಸಾಧ್ಯ ಎನ್ನುವ ಬಲವಾದ ನಂಬಿಕೆ ರಾಜಶೇಖರ ಅವರದು ಎಂಬುದಕ್ಕೆ ಈ ಮಹದ್ಗ್ರಂಥ ಸಾಕ್ಷಿಯಾಗಿದೆ. ಒಟ್ಟು ಮೂರು ಮುದ್ರಣಗಳನ್ನು ಕಂಡಿರುವ ಈ ಐತಿಹಾಸಿಕ ಮಲೆಯಮಾದೇಶ್ವರ ಕಾವ್ಯದ ಮೊದಲ ಸಂಪುಟದಲ್ಲಿ ಅಧ್ಯಯನಪೂರ್ಣವಾದ ಅಧ್ಯಯನಯೋಗ್ಯವಾದ ದೀರ್ಘ ಪ್ರಸ್ತಾವನೆ ಇದೆ. ಡಾ. ಎಸ್.ವಿ. ರಂಗಣ್ಣ, ಡಾ. ಹಾ.ಮಾ.ನಾ., ಪ್ರೊ. ರಾಗೌ, ಡಾ. ಎಚ್. ತಿಪ್ಪೇರುದ್ರಸ್ವಾಮಿ, ಡಾ. ಸಿ.ಪಿ.ಕೆ., ಡಾ. ಎಲ್.ಆರ್. ಹೆಗಡೆ ಮುಂತಾದ ವಿದ್ವದ್‌ಮಣಿಗಳು ಈ ಕೃತಿಯ ಬಗೆಗೆ 'ಫಿನ್ಲೆಂಡ್‌ನ ಕಲೇವಾಲಕ್ಕಿಂತ ದೊಡ್ಡದು', 'ಇದೊಂದು ವಿಸ್ಮಯ' ಹೀಗೆ ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ. ಮೇಲಾಗಿ, ಪಿಕೆಆರ್ ಅವರ 'ಸಾತ್ವಿಕ ಶ್ರಮದ ಫಲ' ಎಂಬ ಅಭಿಧಾನವೂ ಈ ಮಲೆಯ ಮಾದೇಶ್ವರ ಕಾವ್ಯಕ್ಕಿದೆ.

೫. ಜನಪದ ವೀರಕಾವ್ಯ ಪಿರಿಯಾಪಟ್ಟಣದ ಕಾಳಗ

ಸಾಹಿತ್ಯ ಹಾಗೂ ಇತಿಹಾಸಗಳನ್ನು ಒಟ್ಟಿಗೆ ಗ್ರಹಿಸುವಂತೆ ಒತ್ತಾಯಿಸುವ ಮಹತ್ವದ ಬಹೂಪಯೋಗಿ ಕೃತಿ ಇದಾಗಿದೆ. ಚೆಂಗಾಳ್ವರ ಆಳ್ವಿಕೆಯ ಕಾಲಘಟ್ಟವನ್ನು ಚಿತ್ರಿಸುತ್ತಲೇ ಪ್ರಾದೇಶಿಕ ಚರಿತ್ರೆಯನ್ನು ದಾಖಲಿಸುವ ಪ್ರಕೃತ ಗ್ರಂಥದಲ್ಲಿ ೩೦ ಶೀರ್ಷಿಕೆಗಳಡಿ ವಿಷಯವಸ್ತು ಹರಡಿಕೊಂಡಿದೆ. ಸುದೀರ್ಘ ಪ್ರಸ್ತಾವನೆಯನ್ನು ಹೊಂದಿರುವ ಕೃತಿಯಲ್ಲಿ ಗಣನಾಯಕನ ನೆನೆವಾರ್ತೆ, ಗಂಡುಭೂಮಿಯ ಗಂಡ ಈರಾಜು, ಒಡುಟ್ಟ ನಾನು ಯಾಕೆ ಬಿಡಿಸಾಲಿ, ಪಾಪುಗೇಡಿಗೆ ಮಕ್ಕಳು ಇಲ್ಲ ಕಾಣೆ, ಬಂಜೆ ಅನುವ ಕುಲವ ತಪ್ಪವ್ವ, ಈ ಮಗುವ ಕೊಂಡೋಗಿ ಜಲಧಿಗೆಸೆಯಿರಿ, ಅಕ್ಕನ ಮಗಳ ಲಗುನವಾಗುತಾನೆ ಮುಂತಾದ ೩೦ ಅಧ್ಯಾಯಗಳನ್ನು ಒಳಗೊಂಡಿದೆ. ಇದಲ್ಲದೆ, ಕೊಡಗುಭಾಷೆಯಲ್ಲಿ ಪಿರಿಯಾಪಟ್ಟಣದ ಕಾಳಗ: 'ಪೆರಿಯಪಡೆ' ಭಾಗ ಕನ್ನಡಾನುವಾದ ಸಹಿತ ಇರುವುದು ಅತ್ಯಂತ ಮಹತ್ವ ಸಂಗತಿ. ತುರಾಲಾವಣಿಯಲ್ಲಿ 'ಪೆರಿಯಪಟ್ಣದ ಜಗಳ' ಎಂಬ ಲಾವಣಿಯನ್ನು ಇಲ್ಲಿ ಕೊಡಲಾಗಿದೆ. ಹೀಗಾಗಿ ಪಿರಿಯಾಪಟ್ಟಣದ ಚರಿತ್ರೆಯು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ದಾಖಲಾಗಿರುವುದನ್ನು ಮನಗಾಣಿಸುವ ಮಹತ್ವದ ಮೇರುಕೃತಿ ಇದಾಗಿದೆ. ಸ್ಥಳೀಯ ಐತಿಹ್ಯಗಳ ಮೂಲಕ ಚರಿತ್ರೆಯನ್ನು ಕಟ್ಟಿಕೊಳ್ಳಲು ಇರುವ ಮಾರ್ಗರೂಪಿ ಆಕರ ಗ್ರಂಥ ಎಂದರೂ ಅತಿಶಯೋಕ್ತಿ ಆಗಲಾರದು.

೬. ಮಾಗಡಿ ಕೆಂಪೇಗೌಡ

ಗುಡ್ಡೇನಹಳ್ಳಿ ಪುಟ್ಟೇಗೌಡ ಮತ್ತು ಗುಡ್ಡೇನಹಳ್ಳಿ ನಂಜಪ್ಪನವರ ಜೊತೆಗೂಡಿ ಸಂಪಾದಿಸಿದ ಕೃತಿ ಇದು. 'ಯಲಹಂಕ ನಾಡಪ್ರಭುಗಳ' ಕುರಿತಾದ ಚಾರಿತ್ರಿಕ ಕಾವ್ಯ ಇದಾಗಿದೆ. ಒಟ್ಟು ಹತ್ತು ಅಧ್ಯಾಯಗಳಲ್ಲಿ ಹರಡಿಕೊಂಡಿರುವ ಈ ಕಾವ್ಯದಲ್ಲಿ ೩೬೭೬. ಸಾಲುಗಳು ಇವೆ. ಎಂಟು ಜನ ಗಾಯಕರಿಂದ ಈ ಸುದೀರ್ಘ ಕಾವ್ಯವನ್ನು ಸಂಗ್ರಹಿಸಲಾಗಿದೆ. ತುಮಕೂರು ಜಿಲ್ಲೆಯ ದೊಂಬಿದಾಸ ಕಲಾವಿದ ವೆಂಕಟಪ್ಪ, ಹಾಸನ ಜಿಲ್ಲೆಯ ಗಿರಿಯಪ್ಪ, ತಿಪಟೂರು ತಾಲ್ಲೂಕಿನ ನಂಜಪ್ಪ ಮತ್ತು ಶಂಕರಯ್ಯ, ತುರುವೆಕೆರೆ ತಾಲ್ಲೂಕಿನ ಮೂಡಲಪ್ಪ ಮತ್ತು ಬೋಜಣ್ಣ ಶೆಟ್ಟಿ, ಮೈಸೂರು ಜಿಲ್ಲೆಯ ವೆಂಕಟಯ್ಯ ಅವರು ಹಾಡಿದ ಈ ಕೃತಿಯಲ್ಲಿ ಸುದೀರ್ಘ ಪ್ರಸ್ತಾವನೆ ಇದೆ. ಒಕ್ಕಲಿಗರು, ಆವತಿ ನಾಡಪ್ರಭುಗಳು, ಯಲಹಂಕ ಭೂಪಾಲರ ವಂಶಾವಳಿ ಇತ್ಯಾದಿ ಅಂಶಗಳು ಇಲ್ಲಿ ಪ್ರಸ್ತಾಪಿತಗೊಂಡಿವೆ. ಅನುಬಂಧದಲ್ಲಿ ಸ್ವರಪ್ರಸ್ತಾರ ಮತ್ತು ಅರ್ಥಕೋಶಗಳು ಇವೆ. ಒಟ್ಟಾರೆ ಯಲಹಂಕ ನಾಡಪ್ರಭುಗಳ ಚರಿತ್ರೆಯನ್ನು ಪುನರ್‌ರೂಪಿಸಲು ಹೆಚ್ಚಿನ ಮಾಹಿತಿಯನ್ನು ಒದಗಿಸುವ ಮೂಲಕ ಅಧ್ಯಯನಯೋಗ್ಯ ಕೃತಿಯಾಗಿದೆ.

೭. ಜನಪದ ಬಸವ ಪುರಾಣ

ಇದೊಂದು ಸಂಪಾದಿತ ಕೃತಿ. ಹತ್ತು ಶೀರ್ಷಿಕೆಗಳಲ್ಲಿ ಹರಡಿಕೊಂಡಿರುವ ಈ ಕೃತಿಯಲ್ಲಿ ಬಸವೇಶ್ವರನನ್ನು ಇತರ ಕೆಲವು ಶರಣರನ್ನು ಕುರಿತು ವಿವರಗಳು ಇವೆ. ಆದಿಬಸವೇಶ್ವರ, ಕಲ್ಯಾಣದ ಬಸವಣ್ಣ, ಉಳ್ವೆಯ ಶರಣರು, ಘನಶರಣ ಹರಳಯ್ಯ, ತುರುಕರ ಪೀರಣ್ಣ, ನುಲುಗೆ ಚೆನ್ನಯ್ಯ, ಸತ್ಯಶರಣೆ ಶಿವನಾಗಮ್ಮ, ಮಡಿವಾಳ ಮಾಚಪ್ಪ, ಗಟ್ಟಿವಾಳಯ್ಯ, ಚೆನ್ನಬಸವಣ್ಣ ಹೀಗೆ ಈ ವಿಭಾಗಗಳಲ್ಲಿ ಕಾಣದ ಶಿವನಿಗಿಂತಲೂ ತಮ್ಮ ನಡುವೆಯೇ ಬಾಳಿ ಬದುಕಿದ ಬಸವಣ್ಣ ಸೇರಿದಂತೆ ಶಿವಶರಣರನ್ನು ಹಾಡಿ ಹೊಗಳಿದ್ದಾರೆ. ಲೋಕದ ಉದ್ಧಾರಕ್ಕಾಗಿ ಜನ್ಮವೆತ್ತಿ ಬಂದಿರುವ ಈ ಶರಣ ಮಹಿಮಾಪುರುಷರು ಸಕಲ ಜೀವಿಗಳ ಲೇಸನ್ನೆ ಬಯಸಿದವರು ಎಂಬುದನ್ನು ಅರಿತ ಜನಪದರ ದೃಷ್ಟಿ ಇಲ್ಲಿ ಸುವ್ಯಕ್ತವಾಗಿದೆ. ಅಂಥ ಘನಶರಣರನ್ನು ಆರಾಧಿಸುವ, ಸ್ತುತಿಸುವ ಮೂಲಕ ಪೌರಾಣಿಕ ಕಥನಗಳನ್ನು ಕಟ್ಟಿಕೊಂಡಿರುವುದರ ಜೊತೆಗೆ ಐತಿಹಾಸಿಕ ಹೊಳಹುಗಳು ಇರುವುದನ್ನು ಸಹ ಗುರುತಿಸಬಹುದಾಗಿದೆ. 'ಆದಿಬಸವೇಶ್ವರ' ಎಂಬ ಕಾವ್ಯಭಾಗ ಚಿಕ್ಕಮಗಳೂರು ಜಿಲ್ಲೆಯ ತಂಬೂರಿ ಸಂಪ್ರದಾಯಕ್ಕೆ ಸೇರಿದೆ. ಉಳಿದೆಲ್ಲವೂ ಮೈಸೂರು ಜಿಲ್ಲೆಯ ನೀಲಗಾರ ಹಾಗೂ ದೇವರಗುಡ್ಡರ ಸಂಪ್ರದಾಯದ ಕಾವ್ಯಭಾಗಗಳಾಗಿವೆ.

ಸುದೀರ್ಘ ಅಧ್ಯಯನಪೂರ್ಣ ಪ್ರಸ್ತಾವನೆಯಲ್ಲಿ "ಈ ಸಂಗ್ರಹದ ಎಲ್ಲ ಕಾವ್ಯಗಳಲ್ಲೂ ಬಸವಣ್ಣನವರ ಪಾತ್ರವಿದ್ದರೂ ಒಂದೊಂದು ಕಥಾನಕವೂ ಒಬ್ಬೊಬ್ಬ ವ್ಯಕ್ತಿಗೆ ಪ್ರಾಧಾನ್ಯವನ್ನು ಕೊಟ್ಟಿದೆ. ಅಲ್ಲದೆ ಇದೆಲ್ಲವನ್ನು ಒಗ್ಗೂಡಿಸಿಕೊಂಡು ಓದಿದಾಗ ಒಂದೇ ಕಾವ್ಯದಂತೆ ಕಂಡರೂ ಹತ್ತೂ ಕಾವ್ಯಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಓದಿದಾಗ ಅವುಗಳೆಲ್ಲವೂ ತಮತಮಗೆ ಸ್ವತಂತ್ರ ಕಾವ್ಯಗಳಾಗಿವೆ' ಎಂದು ಪಿಕೆಆರ್ ತಿಳಿಸಿದ್ದಾರೆ. ಪ್ರೊ. ಹಂ.ಪ. ನಾಗರಾಜಯ್ಯ ಅವರ ಮುನ್ನುಡಿ ಇದೆ.

೮. ಜಾನಪದ ವೀರಭದ್ರ

ಪಿ.ಕೆ. ರಾಜಶೇಖರ ಅವರ ಅಧ್ಯಯನ ಪೂರ್ಣಕೃತಿಗಳಲ್ಲಿ ಇದೂ ಒಂದು. ನಾಲ್ಕು ಅಧ್ಯಾಯಗಳಲ್ಲಿ ಹರಡಿಕೊಂಡಿರುವ ಇಲ್ಲಿನ ವಸ್ತು ವೀರಭದ್ರ ದೇವರ ಸುತ್ತ ಇರುವ ಪೌರಾಣಿಕ ಮತ್ತು ಜಾನಪದ ಹಿನ್ನೆಲೆಯನ್ನು ತಿಳಿಸುವ ಉದ್ದೇಶದಿಂದ ರಚಿತಗೊಂಡಿದೆ. ಅಧ್ಯಾಯ ಒಂದರಲ್ಲಿ ವೀರಭದ್ರ ಸಂಸ್ಕೃತಿಯ ಹುಟ್ಟು ಮತ್ತು ಬೆಳವಣಿಗೆ ಎಂಬ ಶೀರ್ಷಿಕಯಲ್ಲಿ ಋಗ್ವೇದದಿಂದ ರಾಚೋಟಿಯವರಿಗೆ, ವೀರಭದ್ರ ವೀರಶೈವ ಧರ್ಮದ ಸಂಸ್ಥಾಪಕನೆ?, ಜನಪದರು ಕಂಡುಕೊಂಡ ವೀರಭದ್ರ ಮತ್ತು ವೀರಶೈವ ಎಂಬ ವಿಷಯಗಳನ್ನು ವಿವರಿಸಲಾಗಿದೆ. ಶಿಷ್ಟಪುರಾಣ ಕಾವ್ಯಗಳಲ್ಲಿ ವೀರಭದ್ರ ಎಂಬ ಎರಡನೆಯ ಅಧ್ಯಾಯದಲ್ಲಿ ಅಳಿಯ-ಅಂದರೆ ಶಿಷ್ಯನಂತಲ್ಲವೇ?, ಶಿವನಿಲ್ಲದೆ ಅಧ್ವರವೇ ದಕ್ಷ ಹೀಗೆ ಒಟ್ಟು ಐದು ಉಪಶೀರ್ಷಿಕಗಳಡಿ ವೀರಭದ್ರನ ಬಗೆಗೆ ವಿವರಿಸಲಾಗಿದೆ. ಅಧ್ಯಾಯ ಮೂರರಲ್ಲಿ ವೀರಭದ್ರ ಸಂಬಂಧಿ ಜನಪದ ಕುಣಿತ ಪ್ರಕಾರಗಳ ಎಂಬ ಶೀರ್ಷಿಕೆಯಡಿ ನಂದೀಧ್ವಜ, ವೀರಭದ್ರನ ಕುಣಿತ, ವೀರಗಾಸೆ ಇತ್ಯಾದಿ ಕಲಾಪ್ರಕಾರಗಳನ್ನು ವಿಶ್ಲೇಷಣೆಗೊಳಪಡಿಸಲಾಗಿದೆ. ನಾಲ್ಕನೆಯ ಅಧ್ಯಾಯ ಶ್ರೀ ವೀರಭದ್ರದೇವರ ಒಡಬುಗಳು ಶೀರ್ಷಿಕಯಲ್ಲಿ ೧೬ ಪ್ರಕಾರದ ವೀರಭದ್ರ ಸಂಬಂಧಿ ಒಡಬುಗಳನ್ನು ಚರ್ಚಿಸಲಾಗಿದೆ. ಒಟ್ಟಾರೆ ವೀರಭದ್ರನ ಜಾನಪದೀಯತೆಯನ್ನು ಮತ್ತು ಆರಾಧನಾ ಕಲಾ ಪ್ರಕಾರವನ್ನು ಆಯಾಯ ಪ್ರಾಂತ್ಯದಲ್ಲಿ ಅಸ್ತಿತ್ವದಲ್ಲಿರುವ ಕುರಿತು ಬೆಳಕು ಚೆಲ್ಲುತ್ತದೆ. ವೀರಭದ್ರ ದೇವರು ಮತ್ತು ಕಲಾಪ್ರಕಾರಕ್ಕೆ ಸಂಬಂಧಿಸಿದಂತೆ ಅಗತ್ಯ ಛಾಯಾಚಿತ್ರಗಳನ್ನು ಹೊಂದಿರುವುದು ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ.

೯. ಪುರುಷನ ಪುಣ್ಯ ನಾರೀಭಾಗ್ಯ

ಗಾದೆ ಸಂಬಂಧೀ ಕಥೆಗಳನ್ನು ಒಳಗೊಂಡ ಅಮೂಲ್ಯ ಗ್ರಂಥವಿದು. ಜನಪದರ ಜೀವನಾನುಭವದ ಪಾಕವು ಎರಕ ಹೊಯ್ದದಂತಿರುವ ಗಾದೆಗಳು

ಮತ್ತು ಅವುಗಳ ಜೊತೆಯಲ್ಲೇ ಹುಟ್ಟಿಕೊಂಡ ಕತೆಗಳನ್ನು ಸ್ವಾರಸ್ಯಪೂರ್ಣವಾಗಿ ದಾಖಲಿಸುವ ಕಾರ್ಯ ಇಲ್ಲಿ ಗಮನಾರ್ಹ. ಅಪಾರ ಕ್ಷೇತ್ರಕಾರ್ಯದ ಫಲವಾಗಿ ಮೂಡಿಬಂದ ಪ್ರಸ್ತುತ ಕೃತಿಯಲ್ಲಿ ೧೪೦ ಗಾದೆಕತೆಗಳು ಸಂಗ್ರಹವಾಗಿವೆ. ಮೊದಲಿಗೆ ಗಾದೆಗಳ ಹಿನ್ನೆಲೆಯ ಅಪೂರ್ವ ಕಥೆಗಳ ಬಗ್ಗೆ ವಿವರಿಸಲಾಗಿದೆ. ಅಧ್ಯಾಯ ಎರಡರಲ್ಲಿ ಮೊದಲ ಸೊಲ್ಲಲ್ಲಿ ಮಹನೀಯರ ನೆನದೇನು ಶೀರ್ಷಿಕೆಯಡಿ ಅಕ್ಕಸಾಲಿಯಂಥ ಕಳ್ಳಿಲ್ಲ ಮಕ್ಕಿಗದ್ದೆಯಂಥ ಬೆಳಿಲ್ಲ, ಅಂಗೃದಲ್ಲಿರೋರೆಲ್ಲ ಲಿಂಗುವಂತ್ರೆ ಆಗಿ ಕೋಳಿಪಿಳ್ಳೆ ಕದ್ಯೋರ್‍ಯಾರೂಂತ, ಅತಿಯಾಸೆ ಗತಿಗೇಡು–೧ ಮತ್ತು ೨, ಅತ್ತೆ ಅಮುನಾತಿ ಸೊಸೆ ಸುಮುನಾತಿ, ಅತ್ತೆ ಇಲ್ದೋಳು ಅತ್ತೆ ಗೊಂಬೆ ಮಾಡ್ಕೊಂಡು ಅಳ್ತೆ ಒಪ್ಪಿಸ್ತಿದ್ಲಂತೆ, ಅತ್ತೆಗೊಂದು ಕಾಲ ಸೊಸೆಗೊಂದು ಕಾಲ, ಅತ್ತೆ ಸಾಲು ಸೊಸೆ ಚಿತ್ತೆ ಸಾಲು ಬೆಳೆ, ಅದೃಷ್ಟ ಆಟ ಆಡುಸ್ತದೆ ಪ್ರಯತ್ನ ಪಾಠ ಕಲುಸ್ತದೆ ಮುಂತಾದ ಗಾದೆ ಕತೆಗಳು ಇವೆ. ಪುರಾಣ ಕಥೆಗಳು, ರಮ್ಯಕಥೆಗಳು, ಐತಿಹ್ಯಗಳು, ನೀತಿಕಥೆಗಳು, ಪ್ರಾಣಿಕಥೆಗಳು, ಹಾಸ್ಯಕಥೆಗಳು ಹೀಗೆ ಎಲ್ಲಾ ವರ್ಗದ ಕಥೆಗಳನ್ನು ಒಳಗೊಂಡ ಕಥಾಗುಚ್ಛ ಇದಾಗಿದೆ. ಅನುಬಂಧದಲ್ಲಿ ಕಥಾವರ್ಗ, ಗಾದೆಯ ಕಥೆಗಳನ್ನು ಹೇಳಿದ ವಕ್ತೃಗಳು ಹಾಗೂ ಅರ್ಥಕೋಶಗಳು ಇದ್ದು ಅಧ್ಯಯನಕ್ಕೆ ಅನುಕೂಲವಾಗಿವೆ. ಪ್ರಕಟವಾದ ಆರು ವರ್ಷಗಳಲ್ಲಿ ಐದು ಬಾರಿ ಮುದ್ರಣ ಕಂಡಿದೆ. ಮನುಷ್ಯ ಬದುಕಿನ ಎಲ್ಲ ಸಂವೇದನೆಗಳನ್ನು ಒಳಗೊಂಡಿರುವ ಇಲ್ಲಿನ ಕಥೆಗಳು, ಮನೋರಂಜನೆ ನೀಡುವುದಲ್ಲದೆ ಬದುಕಿನ ಬಗೆಗೆ ಎಚ್ಚರಿಕೆಯನ್ನು ಮೂಡಿಸುತ್ತವೆ. ಅಂತೆಯೇ ಇದು ಸಾಂಸ್ಕೃತಿಕವಾಗಿ ಮಹತ್ವದ ಗ್ರಂಥವೆನಿಸಿದೆ. ಕನ್ನಡ ಜಾನಪದ ಕ್ಷೇತ್ರಕ್ಕೆ ಸಂದ ಅಪರೂಪದ ಗ್ರಂಥ ಇದಾಗಿದ್ದು, ಜನಸಾಮಾನ್ಯರ ಹಾಗೂ ವಿದ್ವಾಂಸರ ಪ್ರಸಂಶೆಗೆ ಪಾತ್ರವಾಗಿದೆ.

೧೦. ಪಿರಿಯಾಪಟ್ಟಣದ ಶ್ರೀ ಮಸಣಿಕಮ್ಮ

ಏಳು ಅಧ್ಯಾಯಗಳು ಇರುವ ಈ ಕೃತಿಯಲ್ಲಿ ಶ್ರೀ ಮಸಣಿಕಮ್ಮ ದೇವಿಯ ಚರಿತ್ರೆಯು ಜನಪದರ ಬದುಕಿನೊಂದಿಗೆ ಹೇಗೆ ತಳಕು ಹಾಕಿಕೊಂಡಿದೆ ಎಂಬುದನ್ನು ಸೋದಾಹರಣವಾಗಿ ದಾಖಲಿಸಲಾಗಿದೆ.

ಪುನ್ನಾಟ (ಪುಂರಾಷ್ಟ್ರ=ಗಂಡುಭೂಮಿ) ಪಿರಿಯಾಪಟ್ಟಣ ಎಂಬ ಮೊದಲ ಅಧ್ಯಾಯದಲ್ಲಿ ಪಿರಿಯಾಪಟ್ಟಣದ ಐತಿಹಾಸಿಕ ಮತ್ತು ಜನಪದೀಯ ಅಂಶಗಳನ್ನು ವಿವರಿಸಲಾಗಿದೆ. ಅಧ್ಯಾಯ ಎರಡರಲ್ಲಿ ಪಿರಿಯಾಪಟ್ಟಣದಮ್ಮನ ಪುರಾಣೇತಿಹಾಸ ಶೀರ್ಷಿಕೆಯಡಿ ನಾಡದೇವತೆ ಶ್ರೀ ಮಸಣಿಕಮ್ಮ, ಸಿಂಹಪಟ್ಟಣದ ಅಧಿದೇವತೆ ಮಸಣಿಕಮ್ಮ, ಚಂಗಾಳ್ವರಿಗೆ ಒಲಿದ ಹಿರಿದೇವತೆ ಪಿರಿಯಾಪಟ್ಟಣದಮ್ಮ, ಮಸಣಿಕಮ್ಮ ಜೈನಯಕ್ಷಿಯೆ? ಮುಂತಾದ ವಿಷಯಗಳ

ಕುರಿತು ವಿವರಿಸಲಾಗಿದೆ. ಅಧ್ಯಾಯ ಮೂರರಲ್ಲಿ ದೇವಾಲಯದ ಒಳಹೊರಗು ಶೀರ್ಷಿಕೆಯಡಿ ದೇವಾಲಯದ ಸಮಗ್ರ ಪರಿಚಯ, ದೇವಾಲಯದೊಳಗಿರುವ ದೇವತಾಮೂರ್ತಿಗಳು ಮತ್ತು ಅರ್ಚಕರ ಬಗೆಗೆ ಪರಿಚಯಿಸಲಾಗಿದೆ. ಆರಾಧನೆಗಳು ಮತ್ತು ಉತ್ಸವಗಳು ಎಂಬ ಶೀರ್ಷಿಕೆಯ ನಾಲ್ಕನೆಯ ಅಧ್ಯಾಯದಲ್ಲಿ ಅಲ್ಲಿ ನಡೆಯುವ ಪೂಜಾಕಾರ್ಯಕ್ರಮಗಳು, ಧಾರ್ಮಿಕ ವಿಧಿ-ವಿಧಾನಗಳ ಕುರಿತು ತಿಳಿಸಿಕೊಡಲಾಗಿದೆ. ಅಧ್ಯಾಯ ಐದರಲ್ಲಿ ಜಾತ್ರೆ ಕುರಿತು ವಿವರಿಸಲಾಗಿದೆ. ಆರನೆಯ ಅಧ್ಯಾಯದಲ್ಲಿ ವಿಶಿಷ್ಟ ಆಚರಣೆಗಳ ಬಗೆಗೆ ದಾಖಲಿಸಲಾಗಿದೆ. ಏಳನೆಯ ಅಧ್ಯಾಯದಲ್ಲಿ ದೇವಿಯ ಸಾಂಸ್ಕೃತಿಕ ಮಹತ್ವವನ್ನು ತಿಳಿಸಲಾಗಿದೆ. ಅನುಬಂಧದಲ್ಲಿ ದೇವಿ ಕುರಿತು ಇರುವ ಜನಪದ ಗೀತೆಗಳನ್ನು ನೀಡಲಾಗಿದೆ. ಒಟ್ಟಾರೆ ಪಿರಿಯಾಪಟ್ಟಣದಮ್ಮನ ಸಾಂಸ್ಕೃತಿಕ ಮಹತ್ವವನ್ನು ತಿಳಿದುಕೊಳ್ಳಲು ಇರುವ ಆಕರ ಗ್ರಂಥ ಜೊತೆಗೆ ಕ್ಷೇತ್ರವೊಂದರ ದೇವಿಯ ಕುರಿತು ಅಧ್ಯಯನ ಕೈಗೊಳ್ಳಲು ಇರುವ ಮಾದರಿ ಕೃತಿಯಾಗಿದೆ. ಅಗತ್ಯ ಛಾಯಾಚಿತ್ರಗಳನ್ನು ಒಳಗೊಂಡಿರುವುದು ಗ್ರಂಥದ ಮೌಲ್ಯವನ್ನು ಹೆಚ್ಚಿಸಿದೆ.

೧೧. ಆದ್ಯ ಜಾನಪದ ವಿದ್ವಾಂಸ ಪಿ.ಸಿ. ವೀರಯ್ಯನವರ 'ಪಿರಿಯಾಪಟ್ಟಣದ ಕದನ' ಮತ್ತು ಇತರ ಕೃತಿಗಳು

ಜಾನಪದ ಕ್ಷೇತ್ರ ಅದರಲ್ಲೂ ಪಿರಿಯಾಪಟ್ಟಣದ ಐತಿಹಾಸಿಕ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಮಹತ್ವದ ಕೃತಿಗಳಲ್ಲಿ ಪಿ.ಸಿ. ವೀರಯ್ಯ ಅವರು ಸಂಗ್ರಹಿಸಿದ 'ಪಿರಿಯಾಪಟ್ಟಣದ ಕದನ' ಕಾವ್ಯ ಅತ್ಯಂತ ಮಹತ್ವದ್ದಾಗಿದೆ. ವೃತ್ತಿಗಾಯಕರಾದ ನೀಲಗಾರರು ಹಾಡಿದ ಈ ಕಾವ್ಯವನ್ನು ಪಿ.ಸಿ. ವೀರಯ್ಯನವರು ಅತ್ಯಂತ ವೈಜ್ಞಾನಿಕವಾಗಿ ಸಂಗ್ರಹಿಸಿದ್ದು, ಗಮನಿಸತಕ್ಕ ಸಂಗತಿ. ಪ್ರಸ್ತುತ ಕೃತಿಯು ವೀರಯ್ಯನವರ ಜೀವನ ಮತ್ತು ಸಾಧನೆ ಹಾಗೂ ಅವರ ಹಲವು ಮಹತ್ವದ ಕೃತಿಗಳ ಕುರಿತು ಮಾಹಿತಿ ನೀಡುವ ಅಮೂಲ್ಯ ಕೃತಿ. ಪಿರಿಯಾಪಟ್ಟಣ ಕದನ ಶೀರ್ಷಿಕೆಯಡಿ ಒಟ್ಟು ೧೯ ಅಧ್ಯಾಯಗಳು ಇವೆ. ಪೂರ್ವವೃತ್ತಾಂತ, ಕಪ್ಪಕಾಣಿಕೆ ಕೊಟ್ಟುಕೊಂಡು ಬರುವುದು, ನಿಮಗೆ ಪಿರಿಯಾಪಟ್ಟಣದ ತಂಟೆ ಬೇಡ, ನಾನು ಕಾಣುವ ಮಾರ್ಗಗಳಿಲ್ಲ, ಇಂದಿನ ಯುದ್ಧ ನಾಳೆ ಆಗಲಿ, ಗೆದ್ದು ಶೂರನಾಗಿ ಬರಬೇಕು, ಮುಳ್ಳು ಪಂಜರದೊಳಗೆ ಬಂದು ಮಾಡಿದರು ಹೀಗೆ ಅಧ್ಯಾಯಗಳಲ್ಲಿ ಹರಡಿಕೊಂಡಿರುವ ಕಾವ್ಯದ ವಸ್ತು ಅಧ್ಯಯನಯೋಗ್ಯವಾದುದಾಗಿದೆ. ಸೂಕ್ತ ಛಾಯಾಚಿತ್ರ ಹಾಗೂ ರೇಖಾಚಿತ್ರಗಳಿರುವುದು ಕೃತಿಯ ಮೆರಗು ಹೆಚ್ಚಿಸಿದೆ. ಅಲ್ಲದೇ ಕನ್ನಂಬಾಡಿ ಅಮ್ಮನವರ ಸಂಕ್ಷಿಪ್ತ ಚರಿತ್ರೆಯನ್ನು ಒಳಗೊಂಡಿದೆ. ಜೊತೆಗೆ ಕಾವೇರಿ ಕಥೆ ಎಂಬ ಒಂದು ಜನಪದ ಕಥೆ ಇದ್ದು, ಅತ್ಯಂತ ಸ್ವಾರಸ್ಯಕರವಾಗಿದೆ. ಅನುಬಂಧದಲ್ಲಿ ಕೊಡಲಾಗಿರುವ ಕೃಷ್ಣರಾಜ ಒಡೆಯರ್ ಅವರ ರಾಜಶಾಸನ

ಪತ್ರಿಕೆ (೦೬.೧೧.೧೯೩೯), ವೈದ್ಯೇಶ್ವರಸ್ವಾಮಿ ಕೊ-ಆಪರೇಟಿವ್ ಬ್ಯಾಂಕ್ ಸದಸ್ಯರು ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್ ಅವರಿಗೆ ಬರೆದ ಅರಿಕೆ ಪತ್ರ (೨೫.೦೨.೧೯೩೪), ಪಿರಿಯಾಪಟ್ಟಣದ ಮುನಿಸಿಪಲ್ ಸದಸ್ಯರು ಸರ್ ಮಿರ್ಜಾ ಇಸ್ಮಾಯಿಲ್ ಅವರಿಗೆ ಬರೆದ ವಿಜ್ಞಾಪನಾ ಪತ್ರ (೨೨.೦೨.೧೯೩೮), ಹೀಗೆ ಅಮೂಲ್ಯವಾದ ದಾಖಲೆಗಳನ್ನು ಈ ಕೃತಿಯಲ್ಲಿ ಒದಗಿಸಲಾಗಿದೆ. ಡಾ.ಪಿ.ಕೆ.ಆರ್ ಅವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟವಾದ ಈ ಕೃತಿಯನ್ನು ಶ್ರೀಮತಿ ಪಾರ್ವತಮ್ಮ ದೇವಲಿಂಗಯ್ಯ ಅವರು ಸಂಪಾದಿಸಿಕೊಟ್ಟಿದ್ದಾರೆ.

೧೨. ಭೂಮಿತೂಕದ ಮಾತು

ಇದು ಗಾದೆಗಳ ಸಂಕಲನ. ೧೫೦೧ ಗ್ರಾಮೀಣ ಗಾದೆಗಳನ್ನು ಒಳಗೊಂಡ ಈ ಕೃತಿ ಅಪಾರ ಪ್ರಮಾಣದ ಕ್ಷೇತ್ರಕಾರ್ಯದ ಫಲವಾಗಿ ಮೂಡಿಬಂದಿದೆ. ಕೊಡಗು, ಕೋಲಾರ, ಮಂಡ್ಯ, ಮೈಸೂರು, ಹಾಸನ, ಚಿಕ್ಕಮಂಗಳೂರು ಜಿಲ್ಲೆಗಳಲ್ಲಿ ಸಂಗ್ರಹಿಸಿದ ಗಾದೆಮಾತುಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಶೀಲ ಮತ್ತು ಅಶ್ಲೀಲಗಳು ಶಬ್ದಗಳಲ್ಲಿ ಇಲ್ಲ; ಅದು ಗ್ರಹಿಸುವ ಮನಸ್ಸುಗಳಲ್ಲಿ ಇರುತ್ತದೆ ಎಂಬ ಮಾತಿದೆ. ಅಂತೆಯೇ ಶೀಲದ ಪರಿಕಲ್ಪನೆಯನ್ನು ತೊಡೆದು ಅದೊಂದು ಸಹಜ ಅಭಿವ್ಯಕ್ತಿ ಎನ್ನುವ ಜನಪದರ ಅನುಭವಜನ್ಯ ದೃಷ್ಟಿ ಈ ಗಾದೆಗಳಲ್ಲಿ ವ್ಯಕ್ತವಾಗಿದೆ. ರಾಜಶೇಖರರು ವಕ್ತೃಗಳೊಂದಿಗೆ ಸಾಧಿಸಿಕೊಂಡ ಆತ್ಮೀಯತೆಯ ಕಾರಣಕ್ಕೆ ಈವರೆಗೂ ದಾಖಲಾಗದೆ ಉಳಿದ ಗಾದೆಮಾತುಗಳು ಇಲ್ಲಿ ದಾಖಲುಗೊಂಡಿವೆ. ಮಡಿವಂತಿಕೆಯನ್ನು ಬದಿಗಿಟ್ಟು ಬದುಕಿನ ಸಹಜತೆಯನ್ನು ಗರ್ಭೀಕರಿಸಿಕೊಂಡ ಗಾದೆಮಾತುಗಳು ಶಿಷ್ಟ ಸಂಸ್ಕೃತಿಗೆ ಪಥ್ಯವಾಗುವುದಿಲ್ಲ. ಆದರೂ ಅವು ಜನಪದರ ಸ್ವಚ್ಛಂದ ಜೀವನದ ಪಾಕವನ್ನೇ ನಮಗೆ ಉಣಬಡಿಸುವುದರಿಂದ ಅವು ಬೇರೊಂದು ಲೋಕವನ್ನು ದರ್ಶಿಸಿಕೊಡಬಲ್ಲವು ಎಂಬ ನೆಲೆಯಿಂದಲೇ ಇವು ಮುಖ್ಯವೆನಿಸುತ್ತವೆ. ವೈಜ್ಞಾನಿಕ ಕ್ರಮದಲ್ಲಿ ಸಂಪಾದಿಸಲಾದ ಈ ಕೃತಿಗೆ ಅಧಿಕೃತತೆ ದೊರಕಿದೆ. ಸಂಪಾದನಾ ಕಾರ್ಯದಲ್ಲಿ ನರಸಿಂಹೇಗೌಡ ಅವರು ಜೊತೆಗೂಡಿದ್ದಾರೆ. ಪ್ರೊ. ಶಿವರಾಮು ಕಾಡನಕುಪ್ಪೆ ಅವರು ಗಾದೆಗಳ ಲೋಕದ ವಿವಿಧ ಆಯಾಮಗಳನ್ನು ಕಾಣಿಸುವ ಅತ್ಯಂತ ಉಪಯುಕ್ತ ಮುನ್ನುಡಿಯನ್ನು ಬರೆದಿದ್ದಾರೆ. ಸಾಮಾಜಿಕ ಸಂರಚನೆಯ ಜೊತಗೆ ಭಾಷಿಕ ಅಂಶಗಳು ಹೇಗೆ ಬೆಸೆದುಕೊಂಡಿರುತ್ತವೆ ಎಂಬ ಅಂಶಗಳನ್ನು ತಿಳಿಯಲು ಆಕರದಂತಿರುವ ಇದು, ಸಮಾಜೋಭಾಷಿಕ ನೆಲೆಯ ಅಧ್ಯಯನದ ಸಾಧ್ಯತೆಗಳನ್ನು ಒಳಗೊಂಡ ಕಾರಣಕ್ಕೆ ಮುಖ್ಯವೆನಿಸುತ್ತದೆ.

೧೩. ನಮ್ಮ ಜನಪದ ವಾದ್ಯಗಳು

ಜನಪದ ವಾದ್ಯಗಳಿಗೆ ಸಂಬಂಧಿಸಿದ ಮೊದಲ ಕೃತಿ ಇದೆನ್ನಬಹುದಾಗಿದೆ. ಕಲೆಯ ಜೊತೆಗೆ ಕಲಾಪರಿಕರಗಳು ಅತ್ಯವಶ್ಯ. ವಾದ್ಯಗಳ ಮೂಲ ಪರಿಕಲ್ಪನೆ ಮೂಡಿರುವುದನ್ನು ಹಾಗೂ ಕಾಲಾನಂತರದಲ್ಲಿ ಅದು ಪಡೆದುಕೊಂಡಿರುವ ಮೂರ್ತಸ್ವರೂಪ ಇತ್ಯಾದಿ ಅಂಶಗಳ ಕುರಿತು ವಿಶ್ಲೇಷಿಸಿದ್ದಾರೆ. ಚರ್ಮವಾದ್ಯಗಳು, ತಂತಿವಾದ್ಯಗಳು, ಸುಷಿರ ವಾದ್ಯಗಳು ಹಾಗೂ ಘನವಾದ್ಯಗಳು ಎಂದು ಸ್ಥೂಲವಾಗಿ ವಿಂಗಡಿಸಿ ಅಧ್ಯಯನ ಮಾಡಿದ್ದಾರೆ. ೧೫೦ಕ್ಕೂ ಹೆಚ್ಚಿನ ವಾದ್ಯವಿಶೇಷಗಳನ್ನು ಇಲ್ಲಿ ಪರಿಚಯಿಸಲಾಗಿದೆ. ಕಲೆ, ಸಂಗೀತ ಹಾಗೂ ವಾದ್ಯಗಳ ನಡುವಿನ ಸಂಬಂಧದ ಬಗ್ಗೆ ಅತ್ಯಂತ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಡೊಳ್ಳು, ಬುಡಬುಡಿಕೆ, ಚೌಡಿಕೆ ವಾದ್ಯಗಳ ಸೃಷ್ಟಿಗೆ ಕಾರಣವಾದ ಪೌರಾಣಿಕ ಹಿನ್ನೆಲೆಯನ್ನು ಬೇಧಿಸುವ ಮೂಲಕ ಧಾರ್ಮಿಕ ಭಾವನೆಗಳು ಹೇಗೆ ಮೇಳವಿಸಿವೆ ಎಂಬದನ್ನು ವಿಶ್ಲೇಷಣೆಗೊಳಪಡಿಸಿದ್ದಾರೆ. ವಾದ್ಯಗಳು ಮತ್ತು ಜನಪದ ಸಂಸ್ಕೃತಿ ನಡುವಿನ ಅವಿನಾಭಾವ ಸಂಬಂಧ ಹಾಗೂ ವಾದ್ಯಗಳ ಮೇಲಿನ ಜನಪದರ ಗೌರವಾದರಗಳ ಬಗೆಗೆ ಸವಿವರವಾಗಿ ಇಲ್ಲಿ ದಾಖಲಿಸಲಾಗಿದ್ದು ಡಾ. ಪಿ.ಕೆ. ರಾಜಶೇಖರ ಅವರ ವಿಶ್ಲೇಷಣಾ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಂತಿದೆ.

೧೪. ಸ್ವಾತಿಮುತ್ತುಗಳು

ಇದು ಸಂಸ್ಕೃತದ ೧೦೧ ಸುಭಾಷಿತಗಳ ಕನ್ನಡಾನುವಾದ. ಹನ್ನೆರಡು ಶೀರ್ಷಿಕೆಗಳಲ್ಲಿ ಹರಡಿಕೊಂಡಿರುವ ಇಲ್ಲಿಯ ವಿಷಯವಸ್ತು ಕನ್ನಡ ಕಾವ್ಯಕ್ಷೇತ್ರಕ್ಕೆ ಹೊಸತು ಎನ್ನುವಷ್ಟು ಹೊಸತಾಗಿದೆ. ಭಾಷಾ ಕೊಡು-ಕೊಳೆ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿರುತ್ತದೆ. ಕನ್ನಡ ಭಾಷೆ ಅನ್ಯ ಭಾಷೆಗಳ ಸತ್ವವನ್ನು ಹೀರಿಕೊಂಡೇ ತನ್ನ ಅಸ್ಮಿತೆಯನ್ನು ಉಳಿಸಿಕೊಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಸಂಸ್ಕೃತದ ಶುಭಾಷಿತಗಳು ಕನ್ನಡಕ್ಕೆ ಅನುವಾದಗೊಳ್ಳುವ ಮೂಲಕ ಕನ್ನಡಿಗರ ಓದುಗ ಪ್ರಪಂಚವನ್ನು ವಿಸ್ತರಿಸುವ ಪ್ರಯತ್ನ ಇಲ್ಲಿ ನಡೆದಿದೆ ಎಂದೇ ಭಾವಿಸಬಹುದು.

ವಾಗ್ಭೂಷಣ ಅದೇ ನಿಜಭೂಷಣ, ಸನ್ಮಿತ್ರರ ಸನ್ನಡತೆಗಳು, ಇವರು ಮಾನವರಲ್ಲ ದೇವತೆಗಳು, ವಿಷಮಯವೋ ಅಮೃತಮಯವೋ, ವಿದ್ಯೆ ಗಳಿಕೆಯೊಂದೆ ಅನುಪಮ, ಹೆಣ್ಣಿಳ ಮಾತುಗಳಾಹಾ ಜೇನು, ಹಣವನೆ ಹೀಗಾಶ್ರಯಿಸಿವೆ ಗುಣಗಳು, ಯಾತಕು ಬೇಡದ ನಿಷ್ಪ್ರಯೋಜಕರು, ಹದಿನಾಲ್ಕು ಲೋಕಗಳೂ ಸಾಕಾಗವಲ್ಲ!, ಅಲ್ಪವಾವುದು ಜಗದಲಿ?, ಅರಿಯರೇ ಬಲ್ಲವರು ! ಹಾಗೂ ಅಮೃತ ಸ್ವರ್ಗಕೋಡಿತು ಎನ್ನುವ ಶೀರ್ಷಿಕೆಗಳಲ್ಲಿ ಚಾಣಕ್ಯ, ಸುಂದರ

ಪಾಂಡ್ಯ, ಭರ್ತೃಹರಿ, ಮನುಸ್ಮೃತಿ ಮುಂತಾದವರ ವಾಣಿಗಳು ಕನ್ನಡೀಕರಣಗೊಂಡಿವೆ. ಪ್ರೊ. ಕೆ. ಅನಂತರಾಮು ಅವರ ಮುನ್ನಡಿ ಇದೆ.

೧೫. ಜನಪದ ಶರಣ ಕಾವ್ಯಗಳು

ಮುಖ್ಯವಾಗಿ ಮೂರು ಭಾಗಗಳನ್ನು ಹೊಂದಿರುವ ಈ ಮಹದ್ಗ್ರಂಥದಲ್ಲಿ ಶರಣರನ್ನು ಕುರಿತ ೨೮ ಜನಪದ ಕಾವ್ಯಗಳಿವೆ. ಆದಿಬಸವೇಶ್ವರ, ಕಲ್ಯಾಣದಣ್ಣ ಬಸವಣ್ಣ, ಊಳ್ವೆಯ ಶರಣರು, ಘನಶರಣ ಹರಳಯ್ಯ, ತುರುಕರ ಪೀರಣ್ಣ, ನುಲುಗೆ ಚೆಂದಯ್ಯ, ಸತ್ಯಶಿವಶರಣೆ ಶಿವನಾಗಮ್ಮ, ಗಟ್ಟಿವಾಳಯ್ಯ, ಅಕ್ಕನಾಗಮ್ಮ, ಮಡಿವಾಳ ಮಾಚಪ್ಪ, ಹೊಲೇರ ಹೊನ್ನಯ್ಯ–೧ ಮತ್ತು ೨, ಕಗ್ಗುಂಡಿ ಪರಂಜ್ಯೋತಿ ಹರಳಯ್ಯ ಹೀಗೆ ೨೧ ಶರಣರ ಕುರಿತು ಕಥಾಭಾಗಗಳು ಇವೆ. ಭಾಗ ಎರಡರಲ್ಲಿ ಕರಪಾಲ ಬಸವಪುರಾಣ ಕಾವ್ಯ ಇದೆ. ಮೈದಾಳ ರಾಮಣ್ಣ, ಬ್ರಹ್ಮಗುಂಡಯ್ಯ, ಹೇಮರೆಡ್ಡಿ ಮಲ್ಲಮ್ಮ, ಮಾದಾರ ಚನ್ನಯ್ಯ, ಬಲ್ಲಾಳರಾಯ, ಜಗಜ್ಯೋತಿ ಬಸವೇಶ್ವರರ ಕುರಿತು ಕಥೆಗಳು ಭಾಗ ಮೂರರಲ್ಲಿ ಇವೆ. ಶಿಷ್ಟ ಸಂಸ್ಕೃತಿಗೆ ಜನಪದ ಸಂಸ್ಕೃತಿ ಪ್ರತಿರೋಧವನ್ನು ಒಡ್ಡುತ್ತಲೇ ಬಂದಿದೆ ಎಂಬುದಕ್ಕೆ ಈ ಕಾವ್ಯಭಾಗಗಳಲ್ಲಿ ಪುರಾವೆಗಳು ಸಿಗುತ್ತವೆ. ವಚನ ಯುಗ ಜಾಗತಿಕ ಮಟ್ಟದಲ್ಲಿ ಚಾರಿತ್ರಿಕವಾಗಿ ಮಹತ್ವದ ಕಾಲಘಟ್ಟ, ಪ್ರತಿಸಂಸ್ಕೃತಿಯ ಧಾರೆಯು ಇಲ್ಲಿಯೇ ರೂಪುಪಡೆದಿರುವುದಕ್ಕೂ ಜ್ವಲಂತ ಉದಾಹರಣೆಗಳು ಸಿಕ್ಕುತ್ತವೆ. ಇದು ಶ್ರಮಿಕವರ್ಗದ ಶರಣರ ಕಥಾನಕಗಳನ್ನು ಆಧಾರವಾಗಿಟ್ಟುಕೊಂಡು ನೋಡಲು ಒತ್ತಾಯಿಸುವ ನಿಟ್ಟಿನಲ್ಲಿ ಸೃಷ್ಟಿಯಾದ ಕೃತಿ ಎಂದರೂ ಅತಿಶಯೋಕ್ತಿಯಾಗಲಾರದು. ಜಾಗತೀಕರಣ ಮತ್ತು ಉದಾರೀಕರಣದ ಫಲವಾಗಿ ಮನುಷ್ಯ ಬದುಕು ಎದುರಿಸುವ ತಲ್ಲಣ, ಅದು ತಂದೊಡ್ಡಿರುವ ಬಿಕ್ಕಟ್ಟುಗಳಿಂದ ಪಾರಾಗಲು ಅನುಸರಿಸುವ ಮಾರ್ಗೋಪಾಯಗಳು ದೇಸೀಯತೆಯಲ್ಲಿಯೇ ಕಾಣಸಿಗುತ್ತವೆ ಎಂಬುದನ್ನು ಇಲ್ಲಿ ಶರಣಕಾವ್ಯ ಭಾಗಗಳು ದಾಖಲಿಸುತ್ತವೆ. ಇಲ್ಲಿ ಕಥೆಗಳನ್ನು ಹಾಡಿದ ೨೨ ಜನ ಗಾಯಕರ ಪಟ್ಟಿ ಮತ್ತು ಅರ್ಥಕೋಶ ಕೊಟ್ಟಿರುವುದು ಗಮನಿಸಬಹುದಾಗಿದೆ.

೧೬. ಜನಪದ ಸಿಂಗಾರ ಸಾಧನಗಳು

ಅನಾದಿಕಾಲದಿಂದಲೂ ಜನಪದರಲ್ಲಿರುವ ಅಲಂಕಾರ ಪ್ರಜ್ಞೆ ಮತ್ತು ಅದು ಕಾಲಾನಂತರದಲ್ಲಿ ಪಡೆದುಕೊಂಡ ವೈವಿಧ್ಯಮಯವಾದ ಆಯಾಮಗಳ ಮೇಲೆ ಬೆಳಕು ಚೆಲ್ಲುವ ಕೃತಿ ಇದು. ಒಟ್ಟು ಎಂಟು ಅಧ್ಯಾಯಗಳಲ್ಲಿ ಹರಡಿಕೊಂಡಿರುವ ಇಲ್ಲಿನ ವಿಚಾರಗಳು ಓದುಗರನ್ನು ಆಕರ್ಷಿಸುತ್ತವೆ. ಅನಾದಿ ಕಾಲದಿಂದ ಆಧುನಿಕ ಕಾಲದವರೆಗೆ, ಅಂಗರಾಗಗಳು, ಕೇಶಾಲಂಕಾರ,

ವದನಾಲಂಕಾರ, ಪೂಸಕ ಪರಿಮಳಗಳು, ಶರೀರಾಲಂಕಾರ, ಪಾದರಕ್ಷೆಗಳು, ಆಧುನಿಕರಲ್ಲಿ ಅಂಗರಾಗಗಳು ಎಂದು ಎಂಟು ಅಧ್ಯಾಯಗಳು ಜೊತೆಗೆ ಅನುಬಂಧ ಮತ್ತು ವಕ್ತೃ ವಿವರಗಳನ್ನು ಒಳಗೊಂಡಿದೆ. ಮಾನವನಲ್ಲಿ ಸೌಂದರ್ಯಪ್ರಜ್ಞೆ ಮೂಡಿದ್ದು ಮತ್ತು ಅವಕ್ಕೆ ಪೂರಕವಾಗಿ ಶೃಂಗಾರ ಸಾಧನಗಳನ್ನು ಕಂಡುಕೊಂಡಿದ್ದು, ಅವುಗಳ ಬಳಕೆಯ ವಿಧಾನ ಇತ್ಯಾದಿ ಅಂಶಗಳನ್ನು ಅತ್ಯಂತ ಆಪ್ತವಾಗಿ ಕಟ್ಟಿಕೊಡಲಾಗಿದೆ. ಪ್ರತಿವಿಷಯದ ನಿರೂಪಣೆಯಲ್ಲಿ ಕ್ಷೇತ್ರಕಾರ್ಯದ ಅನುಭವ ಮತ್ತು ವಿಶೇಷ ಅಧ್ಯಯನದ ಶ್ರಮ ಎದ್ದುಕಾಣಿಸುತ್ತವೆ. ಜನಪದರ ಸೌಂದರ್ಯ ಪ್ರಜ್ಞೆ ಹಾಗೂ ಶೃಂಗಾರ ಸಾಧನಗಳನ್ನು ತಯಾರಿಸಿಕೊಳ್ಳುವ ಕುರಿತು ತಿಳಿಸುವ ಈ ಕೃತಿ ವೈಜ್ಞಾನಿಕವಾಗಿಯೂ ಗಮನಾರ್ಹವಾಗಿದೆ. ಮುಖದ ಕಾಂತಿಯನ್ನು ಹೆಚ್ಚಿಸಲು ಬಳಸುವ ಪರಿಕರಗಳು ಮತ್ತು ಅವುಗಳಲ್ಲಿರುವ ಮದ್ದಿನ ಗುಣಗಳನ್ನು ಜನಪದರು ತಿಳಿದುಕೊಂಡ ಪರಿ ಆಶ್ಚರ್ಯ ಹುಟ್ಟಿಸುವಂತಹದ್ದು. ಅವುಗಳ ಸಮರ್ಪಕ ಬಳಕೆಯ ಬಗೆಗೆ ಅವರಲ್ಲಿರುವ ವಿಶೇಷವಾಗಿ ಜ್ಞಾನ ಬೆರಗು ಮೂಡಿಸುತ್ತದೆ. ಇಂತಹ ಅಂಶಗಳನ್ನು ಅರಿಯಲು ಈ ಕೃತಿ ಅತ್ಯಂತ ಗಮನಾರ್ಹವಾಗಿದೆ.

೧೭. ಜನಪದ ಆರಾಧನಾ ಕಲೆಗಳು

ಜನಪದರ ಸಂಸ್ಕೃತಿಯ ಭಾಗವಾಗಿ ಕಲೆಗಳು ಅಸ್ತಿತ್ವದಲ್ಲಿವೆ. ಜನಪದ ಆರಾಧನಾ ಕಲೆಗಳು ಜನಪದರ ಅನನ್ಯತೆಯ ಕುರುಹಗಳು ಎಂದರೂ ಅತಿಶಯೋಕ್ತಿಯಾಗಲಾರದು. ಈ ಕೃತಿಯಲ್ಲಿ ಒಟ್ಟು ೨೧ ಅಧ್ಯಾಯಗಳಲ್ಲಿ ಆರಾಧನಾ ಕಲೆಗಳ ಪರಿಚಯ ಮಾಡಿಕೊಡಲಾಗಿದೆ. ಜನಪದರ ಆರಾಧನಾ ಕಲೆಗಳು ಎಂಬ ಅಧ್ಯಾಯದಲ್ಲಿ ಆರಾಧನಾ ಕಲೆಗಳ ಚರಿತ್ರೆಯನ್ನು ದಾಖಲಿಸಲಾಗಿದೆ. ನಂದಿಧ್ವಜ ಕುಣಿತ, ಡೊಳ್ಳುಕುಣಿತ, ಕರಗ ಕುಣಿತ, ಪಟಕುಣಿತ, ಬೀಸುಕಂಸಾಳೆ, ಸೋಮನ ಕುಣಿತ, ಪೂಜಾ ಕುಣಿತ, ಚೌಡಿಕೆ ಮೇಳ, ವೀರಭದ್ರನ ಕುಣಿತ, ಗೊರವರ ಕುಣಿತ, ಕಣ್ಣಿ ಕನ್ನಡಿ, ಮಜ್ಜಣ ಕುಣಿತ, ಬೊಳಕಾಟ್, ತೊಂಡಲದೇವರ ಕುಣಿತ, ಪಂಜಿನ ಕುಣಿತ, ಹರಿಗೆ ಕುಣಿತ, ಬಾಣದೇವರ ಕುಣಿತ, ಸಂತಾಮ ಕುಣಿತ, ಸಿಂಡೀರಣ್ಣನ ಕುಣಿತ, ಕಾಡೆಮ್ಮೆದೊಡ್ಡು ಕುಣಿತಗಳ ಕುರಿತು ವಿಷಯಗಳನ್ನು ಸಂಕ್ಷಿಪ್ತವಾಗಿ ಹಾಗೂ ಸಾಂದ್ರವಾಗಿ ಕಟ್ಟಿಕೊಡಲಾಗಿದೆ. ಕೆಲವೊಂದು ಕಲೆಗೆ ಸಂಬಂಧಿಸಿದಂತೆ ಛಾಯಾಚಿತ್ರಗಳನ್ನು ಕೊಡಲಾಗಿದೆ. ಜನಪದ ಜೀವನ ವೈವಿಧ್ಯಮಯ ಹಾಗೂ ಅರ್ಥಪೂರ್ಣವಾಗಿರುವಂತೆ ಕಲೆಗಳು ಕೂಡ ವೈವಿಧ್ಯಮಯ ಇರುವಂತೆ ಅಮೂಲ್ಯವಾದ ಸಾಂಸ್ಕೃತಿಕ ಸಂಗತಿಗಳನ್ನು ಹೊಳೆಯಿಸುತ್ತವೆ ಎಂಬುದನ್ನು ಈ ಕೃತಿ ಮನದಟ್ಟು ಮಾಡಿಕೊಡುತ್ತದೆ. ಕಲೆಗಳು

ಕೇವಲ ಆರಾಧನೆಗೆ ಸೀಮಿತವಾಗಿದ್ದರೂ ಅವುಗಳ ಸಾಂಸ್ಕೃತಿಕ ಅಸ್ಮಿತೆಯನ್ನು ತಿಳಿದುಕೊಳ್ಳಲು ಪ್ರೇರಣೆಯನ್ನೊದಗಿಸುತ್ತದೆ. ಜನಪದ ಕಲಾಸಕ್ತ ಸಂಶೋಧಕರಿಗೆ ಆಕರ ಮತ್ತು ಅಧ್ಯಯನಯೋಗ್ಯ ಕೃತಿ ಇದಾಗಿದೆ.

೧೮. ಮಾತಿನರಗಿಣಿ

ಇದೊಂದು ಜನಪದ ಕತೆಗಳ ಅಪೂರ್ವ ಸಂಕಲನ. ಗ್ರಾಮೀಣ ಸಂಸ್ಕೃತಿಯ ಅಂಶಗಳು ಅತ್ಯಂತ ಆಪ್ತವಾಗಿ ಮೂಡಿ ಬಂದಿವೆ. ಗ್ರಾಮ್ಯ ಮತ್ತು ಶಿಷ್ಟ ಸಂಸ್ಕೃತಿಗಳ ಸಂಘರ್ಷಾತ್ಮಕ ನೆಲೆಗಳನ್ನು ಇಲ್ಲಿ ಗುರುತಿಸಬಹುದಾಗಿದೆ. ಮನುಷ್ಯ ಬದುಕಿನ ಘಟನೆಗಳು ವಾಸ್ತವವನ್ನು ಕಣ್ಣಿಗೆ ರಾಚುವಂತೆ ಇಲ್ಲಿನ ಕತೆಗಳು ನಿರೂಪಿತಗೊಂಡಿವೆ. ಅದ್ಭುತ, ರಮ್ಯ ಸಾಹಸ, ವೀರ, ಮಾಂತ್ರಿಕ ಘಟನೆ ಇತ್ಯಾದಿ ವಿಚಾರಗಳು ಇಲ್ಲಿನ ಕಥಾಪಾತ್ರಗಳ ಮುಖಾಂತರ ಸುವ್ಯಕ್ತವಾಗಿವೆ. ಕಥೆಗಳು ಮನೋವೈಜ್ಞಾನಿಕ, ಸಮಾಜಶಾಸ್ತ್ರೀಯ, ಮಾನವಶಾಸ್ತ್ರೀಯ ನೆಲೆಯಿಂದ ನೋಡುವ ಸಾಧ್ಯತೆಗಳನ್ನು ಒಳಗೊಂಡಿವೆ. ಸಂಸ್ಕೃತಿಯ ದಾಖಲೆಗಳಾಗಿಯೂ ಇಲ್ಲಿನ ಕಥೆಗಳು ಮುಖ್ಯವೆನಿಸುತ್ತವೆ. ಕಥೆಗಾರ್ತಿ ನಿಂಗಮ್ಮ ಹೇಳಿರುವ ಕಥೆಗಳು ಇಲ್ಲಿ ದಾಖಲಾಗಿವೆ.

೧೯. ಕರ್ನಾಟಕದ ಜನಪದ ವೃತ್ತಿಗಾಯಕರು

ಕ್ಷೇತ್ರಕಾರ್ಯಾಧಾರಿತ ಕೃತಿ ಇದು. ಒಟ್ಟು ನಾಲ್ಕು ಅಧ್ಯಾಯಗಳಲ್ಲಿ ಹರಡಿಕೊಂಡಿರುವ ವಿಷಯ ಮುಖ್ಯವಾಗಿ ವೃತ್ತಿಗಾಯಕರ ಬಗೆಗೆ ವಿಸ್ತೃತವಾಗಿ ವಿಶ್ಲೇಷಣೆ ನಡೆಸಿದ್ದಾರೆ. ಪ್ರಧಾನವಾಗಿ ಎರಡು ಅಧ್ಯಾಯಗಳಲ್ಲಿ ವೃತ್ತಿಗಾಯಕರಲ್ಲಿ ಎರಡು ತೆರನಾದ ವಿಭಾಗಕ್ರಮವನ್ನು ಅನುಸರಿಸಿದ್ದಾರೆ. ದೇವರ ಆರಾಧನೆಯೇ ಮುಖ್ಯವೆಂದು ತಿಳಿದು, ದೇವರ ಕಥಾನಗಳನ್ನು ಸೂಕ್ತವಾದ್ಯಗಳೊಂದಿಗೆ ಪ್ರಚುರ ಪಡಿಸುವ ಗಾಯಕರನ್ನು ಧಾರ್ಮಿಕ ವೃತ್ತಿಗಾಯಕರೆಂದು ಹಾಗೂ ಜೀವನ ನಿರ್ವಹಣೆಗೋಸ್ಕರ ಕೆಲವೊಂದು ನಿರ್ದಿಷ್ಟ ವಾದ್ಯಗಳೊಂದಿಗೆ ಹಿಂದಿನಿಂದಲೂ ರೂಢಿಸಿಕೊಂಡು ಬಂದಿರುವ ಕಥನಗಳನ್ನು ಹೇಳುವ ಕಲಾವಿದರನ್ನು ಲೌಕಿಕ ವೃತ್ತಿಕಲಾವಿದರು ಎಂದು ಗುರುತಿಸಿ ವಿಶ್ಲೇಷಿಸಿದ್ದನ್ನು ಕಾಣಬಹುದು. ಮೊದಲನೆಯ ಅಧ್ಯಾಯದಲ್ಲಿ ನಾಡಿನಲ್ಲಿರುವ ವೃತ್ತಿಗಾಯಕರ ಬಗೆಗೆ ಶೋಧನೆ ನಡೆಸಿರುವುದು ಕಂಡುಬರುತ್ತದೆ. ಈವರೆಗಿನ ವೃತ್ತಿಗಾಯಕರ ಬಗೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ ನಡೆಸಿರುವುದು ಅತ್ಯಂತ ಉಪಯುಕ್ತಕಾರಿಯಾಗಿದೆ. ಜೊತೆಗೆ ಉಪವೃತ್ತಿಗಾಯಕರನ್ನು ಗುರುತಿಸುವ ಪ್ರಯತ್ನ ಮಾಡಿರುವುದು ಮೆಚ್ಚುವಂತಹ ಸಂಗತಿಯಾಗಿದೆ. ಕೊನೆಯ ಅಧ್ಯಾಯದಲ್ಲಿ ವೃತ್ತಿಗಾಯಕರು ತಮ್ಮ ಪರಂಪರೆಯನ್ನು

ಉಳಿಸಿಕೊಳ್ಳಲು ಅನುಸರಿಸಬೇಕಾದ ಮಾರ್ಗೋಪಾಯಗಳು ಹಾಗೂ ವೃತ್ತಿಗಾಯಕರು ಉಳಿಸಿಕೊಂಡ ಪರಂಪರಾಗತ ಕಲೆಯನ್ನು ಮುಂದಿನ ಪೀಳಿಗೆಗ ವರ್ಗಾಯಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗೆಗೆ ಮಹತ್ವದ ಸಲಹೆಗಳನ್ನು ಸೂಚಿಸಿದ್ದಾರೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದಿಂದ ಈ ಕೃತಿ ಪ್ರಕಟಗೊಂಡಿದೆ.

೨೦. ಜನಪದ ಜೋಕುಗಳು

ಜಾನಪದದ ಎಲ್ಲ ಪ್ರಕಾರಗಳ ಸಂಗ್ರಹಕಾರ್ಯದಲ್ಲಿ ಆಸಕ್ತಿ ವಹಿಸಿರುವ ಪಿಕೆಆರ್ ಅವರು ಸ್ನಾತಕೋತ್ತರ ವಿದ್ಯಾರ್ಥಿನಿಲಯದಲ್ಲಿರುವಾಗ ಗೆಳೆಯರು ವಿರಾಮದ ವೇಳೆಯಲ್ಲಿ ಹೇಳುತ್ತಿದ್ದ ಹಳ್ಳಿಯ ಹಾಸ್ಯಗಳ ಬಗೆಗೆ ಕುತೂಹಲಗೊಂಡು ಅವುಗಳನ್ನೆಲ್ಲ ಬರೆದಿಟ್ಟುಕೊಂಡರು. ಆದರೆ ಪ್ರಕಟಿಸಿರುವ ಧೈರ್ಯ ಮಾಡಿರಲಿಲ್ಲ. ಶೀಲ–ಅಶ್ಲೀಲ ಎನ್ನದೆ ಬುಡಕಟ್ಟು ಜನಾಂಗದ ಎಲ್ಲ ವಿಚಾರಗಳನ್ನು ಪ್ರಕಟಿಸಿದ್ದ ವೇರಿಯರ್ ಎಲ್ವಿನ್‌ರಿಂದ ಪ್ರೇರಿತರಾಗಿ ಪ್ರಕಟಿಸುವ ಸಾಹಸಕ್ಕೆ ಕೈಹಾಕಿ ಗೆಳೆಯ ಮೋಹನರಾಜ್‌ರಿಂದ ಹಸ್ತಪ್ರತಿ ತಯಾರಿಸಿ ನಾಡಿನ ಮಹಾನ್ ಜಾನಪದ ಚಿಂತಕ ಪ್ರೊ. ಹಿ.ಶಿ. ರಾಮಚಂದ್ರೇಗೌಡರಿಗೆ ಮುನ್ನುಡಿಯನ್ನು ಬರೆಯಲು ಕೊಟ್ಟರು. ಅವರು : "ಈ ಕೃತಿಯೊಂದು ಸವಾಲಿನ ಸಾಹಸ. ಬಹುಜನ ಮಡಿಯರನ್ನು ಎದುರಿಸಿ ನಿಲ್ಲುವುದು ಸುಲಭದ ಮಾತೇನಲ್ಲ. ಹಾಗೆ ಎದುರಿಸುವ ತಾಕತ್ತು ಸಾಂಸ್ಕೃತಿಕ ಬದ್ಧತೆ ಇದ್ದವರಿಗೆ ಮಾತ್ರ ಸಾಧ್ಯ. ಸಂಸ್ಕೃತಿಯ ಒಳಗೆ ಒಳಿತಿದ್ದರೆ ಸ್ವೀಕರಿಸುತ್ತ, ಕೆಡುಕಿದ್ದರೆ ನಿವಾರಿಸಿಕೊಳ್ಳುತ್ತ ಹೋಗಲು ಸನ್ನದ್ಧನಾದವನೆ ಸಮಾಜಶೀಲ, ಯಾವುದು ಶುದ್ಧ ಯಾವುದು ಅಲ್ಲ ಎಂದು ಹೇಳುವುದೂ ಸಾಂಸ್ಕೃತಿಕ ನಾಯಕಗುಣದ ವಿಶೇಷ. ಪಿ.ಕೆ. ರಾಜಶೇಖರ ಮತ್ತು ಮಿತ್ರರು ದಾರಿ ಮುಚ್ಚಿದ ಬಾಗಿಲನ್ನು ತೆರೆದುಕೊಟ್ಟಿದ್ದಾರೆ. ಸಾಹಸಿ ಮುನ್ನಡೆಯಲಿ. ಸೋತವನಿಗೆ ಹೇಳುವುದೇನಿದೆ?" ಎಂದಿದ್ದಾರೆ.

ಇದು ಜನಪದ ವಿನೋದಗಳನ್ನು ಪ್ರಕಟಿಸಲು ಧೈರ್ಯಮಾಡಿದ ಮೊತ್ತಮೊದಲ ಪ್ರಯತ್ನ. ಇದರಲ್ಲಿ ಜನಪದ ನಗೆಹನಿಗಳು, ಬೈಗುಳಗಳು, ಪ್ರಾಸಗಳು, ಕಗ್ಗಲಿ ಪದಗಳು, ಗೀತೆಗಳು, ಗಾದೆಗಳು, ಒಗಟುಗಳು ಮುಂತಾದ ಪ್ರಕಾರಗಳಲ್ಲಿ ಮೂಡಿರುವ ಹಾಸ್ಯವಿಶೇಷಗಳ ಸಂಗ್ರಹವಾಗಿದೆ.

ಇಲ್ಲಿಯ ಭಾಷೆ ಮತ್ತು ಸಾಹಿತ್ಯಾಭಿವ್ಯಕ್ತಿ ಎಷ್ಟು ಪವರಫುಲ್ ಆಗಿದೆ ಎಂದರೆ ಅದರ ಅನುಭವಕ್ಕೆ ನಾವು ತತ್ತರಿಸಿ ಹೋಗುತ್ತೇವೆ. ಮುಕ್ತತೆ ಮಾತ್ರವೆ ಸಾಹಿತ್ಯದ ಸಾರ್ವಭೌಮತೆ ಎಂಬುದು ಇದರಿಂದ ಮನವರಿಕೆಯಾಗುತ್ತದೆ.

ಸಾಧಕರ ಕಣ್ಣಲ್ಲಿ 'ಜಾನಪದ ಜೋಗಿ'

ಜಾನಪದವೇ ಅವರಿಗೆ ಭಗವಂತ, ರಾಜಶೇಖರ ಅವರು ಅದರ ಪರಮಭಕ್ತ. ಇದಕ್ಕಿಂತ ದೊಡ್ಡ ಮಾತನ್ನ ನಾನು ಇನ್ನೇನು ಹೇಳಲಾಗುತ್ತದೆ?. ಜನಪದ ಸಂಸ್ಕೃತಿಯ ಅಧಿಕೃತ ವಕ್ತಾರರೂ ಕೂಡ ಹೌದು. ಕನ್ನಡ ಜಾನಪದ ಕ್ಷೇತ್ರದ ಮೊನಾಲಿಸ. ಕನ್ನಡ ಜನಪದ ಕ್ಷೇತ್ರದ ಇಲಿಯಾಸ್ ಲೋನಲಾಟ್. ಮಿಸ್ಟರ್ ಫೋಕಲೋರ್

ಡಾ. ರಾಮೇಗೌಡ (ರಾಗೌ)

ಪಿಕೆಆರ್ ಭಾರತದಲ್ಲಿನ ಜನಪದ ಮಹಾಕಾವ್ಯ ಸಂಗ್ರಹದ ಮನ್ವಂತರವನ್ನು ಸ್ಥಾಪಿಸಿದವರು. ನಡೆದಾಡುವ ಜಾನಪದ ತಜ್ಞ, ಕಲಾವಿದ ತಜ್ಞ ಎಂದರೂ ಸಮಂಜಸವಾದೀತು.

ಪ್ರೊ. ಹಿ.ಶಿ. ರಾಮಚಂದ್ರೇಗೌಡ

ಜಾನಪದದಲ್ಲಿ ಪಿ.ಕೆ. ರಾಜಶೇಖರ ಅವರ ಹೆಸರು ಜಲಚಿಹ್ನೆ. ಜಾನಪದ ಆಚಾರ್ಯ.

ಪ್ರೊ. ಸೋಮಶೇಖರಗೌಡ

ಯಾರೂ ಕಣ್ಣು ಹಾಕದ ಕನ್ನೆ ನೆಲಕ್ಕೆ ಕೈಹಾಕುವುದು ಪಿ.ಕೆ ರಾಜಶೇಖರ ಅವರ ಸ್ವಭಾವವೆಂದೆ ತೋರುತ್ತದೆ.

ಡಾ.ಸಿ.ಕೆ ನಾವಲಗಿ

ಪಿ.ಕೆ. ರಾಜಶೇಖರ ಅವರು ಗ್ರಾಮೀಣ ಮೂಲ ನೆಲೆಗಳನ್ನು ಅರಸುವ ಸಲುವಾಗಿ ಹಾದಿಗಳಿಲ್ಲದ ಕಡೆ ಹಾದಿಗಳನ್ನು ಸೃಷ್ಟಿಸಿದ್ದಾರೆ. ಒಂದೊಂದು ಕತೆ ಕೇಳುವ ಸಲುವಾಗಿ, ಒಂದೊಂದು ಕಾವ್ಯವನ್ನು ಆಲಿಸುವ ಸಲುವಾಗಿ ಕಾಡು–ಮೇಡುಗಳನ್ನು ಅಲೆದು ದಾಟಿದ್ದಾರೆ ಮತ್ತು ಜಾನಪದೀಯ ಜೀವನಶೈಲಿಯನ್ನು ತಮ್ಮ ಬದುಕಿನ ತುಂಬೆಲ್ಲ ಅಳವಡಿಸಿಕೊಂಡು ತಾವೇ ಒಂದು ಜಾನಪದ ವಿಶ್ವಕೋಶವಾಗಿ ರೂಪುಗೊಂಡಿದ್ದಾರೆ.

ಕುಂ. ವೀರಭದ್ರಪ್ಪ

ರಾಜಶೇಖರ ಅವರು ಬಯಲ ಬೈರಾಗಿ, ಷರ್ಟುಪ್ಯಾಂಟು ಹೆಗಲ ಚೀಲವನ್ನು ಸದಾ ಧರಿಸಿ ನಡೆದಾಡುವ ಮಲೆಮಹದೇಶ್ವರ, ಚುಂಚನಗಿರಿ ಭೈರವ! ಇಂಥವರನ್ನು ಏನೆಂದು ಹೊಗಳುವುದು?.

ಡಾ. ನಂ. ತಪಸ್ವೀಕುಮಾರ್

ತಮ್ಮ ಮಾನವತೆಯ ಮಲ್ಲಿಗೆಯ ಕಂಪಿನಿಂದ, ಜನಪದ ಗೀತೆಗಳ ಸಂಗೀತದ ಇಂಪಿನಿಂದ, ಸಹೃದಯ ಸಂಪನ್ನತೆಯ ಬೆಳ್ದಿಂಗಳಿನ ತಂಪಿನಿಂದ, ಸಮಸ್ತರಿಗೂ ಬ್ರಹ್ಮಾನಂದದ ಜೊಂಪನ್ನುಂಟುಮಾಡುತ್ತಿರುವ ಹಸನ್ಮುಖಿ.

ಪ್ರೊ. ಎ.ವಿ. ಸೂರ್ಯನಾರಾಯಣಸ್ವಾಮಿ

ಮೂಲಮಟ್ಟುಗಳ ಪಟ್ಟುಬಿಡದ ಅಪ್ಪಟ ಗಾಯಕ.

ಡಾ. ಬಾನಂದೂರು ಕೆಂಪಯ್ಯ

ನಮ್ಮೊಡನೆ ಇರುವ ನಮ್ಮವರು. ಬೆಳವಣಿಗೆ ಅವರ ಪ್ರಕೃತಿ; ವಿಕಾಸ ಅವರ ಉಸಿರು. ಸದಾ 'ಆಗುವ ಆಗುತ್ತಿರುವ ಕ್ರಿಯಾಶೀಲ ವ್ಯಕ್ತಿತ್ವ ಅವರದು.

ಡಾ. ಬೋರೇಗೌಡ ಚಿಕ್ಕಮರಳಿ

ಪಂಪನೆಂದರೆ ಪ್ರಾಣಕ್ಕಿಂತ ಹೆಚ್ಚಾಗಿ ಕಾಣುವ, ಮಲೆಯ ಮಾದೇಶ್ವರನೆಂದರೆ ಭಕ್ತಿಪರವಶರಾಗಿ ಮೈಮರೆಯುವ, ಡಾ. ರಾಜಕುಮಾರ್ ಎಂದರೆ ಅಭಿಮಾನದಿಂದ ಉಬ್ಬುವ, ಕುವೆಂಪು ಎಂದರೆ ಕನ್ನಡದ ಪುಣ್ಯ ವಿಶೇಷ ಎನ್ನುವ ಇವರು ತಮ್ಮ ಜೋಳಿಗೆಯಲ್ಲಿ ಈ ಎಲ್ಲ ಸಂಪತ್ತನ್ನು ತುಂಬಿಕೊಂಡಿರುವ ಶ್ರೀಮಂತ ಸ್ನೇಹಜೀವಿ.

ಶ್ರೀ ಟಿ.ವಿ. ರೇವಣ್ಣ

ಡಾ. ಪಿ.ಕೆ. ರಾಜಶೇಖರ ಅವರನ್ನು ಉಪನ್ಯಾಸಕ ಪ್ರಾಧ್ಯಾಪಕನಾಗಿ ನೋಡುವುದಕ್ಕಿಂತ ಒಬ್ಬ ಅಪ್ಪಟ ಜನಪದ ಕಲಾವಿದ, ಜಾನಪದ ವಿದ್ವಾಂಸ ಅಥವಾ 'ಸಂಪೂರ್ಣ ಜಾನಪದ ಬದುಕು' ಎಂದು ನೋಡುವುದೇ ಅರ್ಥಪೂರ್ಣ.

ಶ್ರೀ ಅ.ಕೆ. ಪ್ರಕಾಶ್

ಅವರೊಬ್ಬ ಸಾಹಿತ್ಯ ಸಂಶೋಧಕರಿಗಿಂತಲೂ, ಹೆಚ್ಚಾಗಿ ಜಾನಪದ ಸಾಹಿತ್ಯದ ಬೇಟೆಗಾರರೆಂದೇ ಕಂಡುಬರುತ್ತಾರೆ.

ಪ್ರೊ. ಕೆ.ಪಿ. ಬಸವೇಗೌಡ

ಜಾನಪದ ಕ್ಷೇತ್ರದ ಜೊತೆಗೆ ಸೃಜನಶೀಲ ಸಾಹಿತ್ಯವನ್ನು ಬರೆದಿರುವ ಪಿ.ಕೆ.ಆರ್. ಉತ್ತಮ ಕವಿಗಳೂ ಆಗಿದ್ದಾರೆ. ಅವರ "ಮಾಯಾಜೋಳಿಗೆ'ಯಲ್ಲಿ ನೂರಾರು ಅಪೂರ್ವ ಜಾನಪದ ಕೃತಿಗಳಿವೆ.

ಡಾ. ಅರ್ಜುನಪುರಿ ಅಪ್ಪಾಜಿಗೌಡ

ಹಣವನ್ನೆಲ್ಲಾ ಪುಸ್ತಕಗಳಿಗೆ ಸುರಿದು, ತಮಗಾಗಿ ಒಂದು ಸ್ವಂತ ಮನೆಯನ್ನೂ ಮಾಡಿಕೊಳ್ಳದೆ, ಎಲ್ಲವನ್ನೂ ಜಾನಪದಕ್ಕೆ ಅರ್ಪಿಸಿ, ಬರಿಗೈಲಿ ವಿಶ್ವವಿದ್ಯಾನಿಲಯದಿಂದ ಹೊರಬಂದ ಕರ್ನಾಟಕದ ಏಕಮಾತ್ರ ವಿದ್ವಾಂಸರೆಂದರೇ ಪಿ.ಕೆ.ಆರ್. ಒಬ್ಬರೇ.

ಪ್ರೊ. ಹೆಚ್.ಆರ್. ತಿಮ್ಮೇಗೌಡ

ಪಿ.ಕೆ.ಆರ್ ಎಂದರೆ ನನಗೊಂದು ದಿವ್ಯ ವಿಸ್ಮಯ. ಅವರನ್ನು ನಾನು 'ರಾಣಿಜೇನು' ಎಂದು ಕರೆದಿದ್ದೇನೆ.

ಶ್ರೀ ಎನ್. ಯೋಗೇಶಕುಮಾರ್

ಇಡೀ ಬೆಟ್ಟವನ್ನೇ ಲೇಖನಿಯನ್ನಾಗಿ ಮಾಡಿ, ಇಡೀ ಸಪ್ತಸಾಗರಗಳನ್ನೇ ಮನೆಯನ್ನಾಗಿ ಮಾಡಿ, ಇಡೀ ಆಕಾಶವನ್ನೇ ಹಾಳೆಯನ್ನಾಗಿ ಮಾಡಿ ಬರೆದರೂ ಗುರುವಿನ ಗುಣಗಾನವನ್ನು ಮಾಡಲು ಸಾಧ್ಯವಿಲ್ಲ' ಎಂದು ಸಂತ ಕಬೀರದಾಸರು ಹೇಳಿರುವ ಮಾತು ಪಿಕೆಆರ್ ಅವರನ್ನೇ ಕುರಿತು ಹೇಳಿರುವಂತಿದೆ.

ಡಾ. ಸಿ.ಡಿ. ವೆಂಕಟೇಶ್

ಪಿಕೆಆರ್ ಅವರ ಜನಪದ ಸಾಹಿತ್ಯದ ಬಗ್ಗೆ ಹೇಳಬೇಕೆಂದರೆ ಇವರೊಬ್ಬ ಜಾನಪದ ಸಂತ. ಜೀವನದ ಪಾಠ ಹೇಳಿಕೊಟ್ಟ ಮಹಾಗುರು.

ಶ್ರೀ ಡಿ. ನಾಗರಾಜಪ್ಪ

ಪಿಕೆಆರ್ ಅವರು ವಿಶ್ವ ಜಾನಪದದ ಮುಖಕ್ಕೆ ಕೊಟ್ಟ ಕನ್ನಡದ ಕಣ್ಣೆರಡು!.

ಚಿಕ್ಕೋನಹಳ್ಳಿಪುರ ಎಚ್. ಕೃಷ್ಣಪ್ಪ

ವಾತ್ಸಲ್ಯದ ವಾರಿಧಿ, ಮಮತೆಯ ಮಡು, ಕಾರುಣ್ಯದ ಕಡಲು, ಉದಾರತೆಯ ಉತ್ತುಂಗ ಶಿಖರ, ಆತ್ಮೀಯತೆಯ ಆಗರ, ಒಲ್ಮೆಯ ನಲ್ಮೆಯ ಮೇಷ್ಟ್ರು, ಶಿಷ್ಯ ಸಂರಕ್ಷಕ ಗುರು.

ಶ್ರೀ ಮೈಸೂರು ಉಮೇಶ್

ಅವರು ಒಂದು ಬೃಹದಾಕಾರದ ಸಿಹಿ ಹಣ್ಣುಗಳನ್ನು ಕೊಡುವ 'ಜಾನಪದ ವೃಕ್ಷ.

ಶ್ರೀ ಲಕ್ಷ್ಮಣ ಹೊಸಕೋಟೆ

ಇನ್ನು ಜಾನಪದಕ್ಕೆ ಉಳಿಗಾಲವಿಲ್ಲ ಎಂದು ಬೊಬ್ಬೆ ಹೊಡೆಯುವ ಸಂದರ್ಭದಲ್ಲಿ ನಮಗೆ ನೆನಪು ಬರುವುದು ಡಾ. ಪಿ.ಕೆ. ರಾಜಶೇಖರರಂಥ ವಿದ್ವಾಂಸರು.

ಡಾ. ಮೈಲಹಳ್ಳಿ ರೇವಣ್ಣ

ಡಾ. ಪಿ.ಕೆ. ರಾಜಶೇಖರ ಅವರು ನಮ್ಮ ಜಾನಪದ ಕ್ಷೇತ್ರದ ಒಂಟಿ ಸಲಗ. ಅವರ ಪ್ರಸ್ತುತ ಜನಪದ ಮಹಾಭಾರತ ಅವರ ಕ್ಷೇತ್ರಕಾರ್ಯದ ಮಹಾಘನ

ಪ್ರೊ. ಎನ್.ಎಸ್. ತಾರಾನಾಥ್

ಪಿಕೆಆರ್ ಅವರು ನೆಲ ಹೊರಹೊಮ್ಮಿಸಿದ ಜನಪದ ಕಣಜ. ಅವರ ತುಂಬೆಲ್ಲ ಜನಪದ ಧನಧಾನ್ಯಗಳು ತುಂಬಿ ತುಂಬಿ ತುಳುಕುತ್ತಿವೆ. ಅವುಗಳನ್ನು ನಮ್ಮದಾಗಿಸಿಕೊಳ್ಳುವ ಹಂಬಲ ನಮ್ಮದಾಗಬೇಕಷ್ಟೆ.

ಡಾ. ವಿಜಯಲಕ್ಷ್ಮೀ ಮ.ನಾ.ಪುರ

ಗುರುಗಳೇ, ನಿಮ್ ಎದೆಯೊಳಗಿನ ಜನಪದ ಗೀತೆಗಳನ್ನು ನಮ್ ಎದೆಯೊಳಗೆ ಇಳಿಸುವುದನ್ನು ನಿಲ್ಲಿಸಬೇಡಿ'. 'ಮೂಡಲ ಮಲೆಯ ಮುದ್ದು ಮಾದೇವ ಸೋಲಿಸಬ್ಯಾಡ ಗೆಲಿಸಯ್ಯ ನಮ್ಮ ಡಾ. ಪಿ.ಕೆ. ರಾಜಶೇಖರರನ್ನು.

ಶ್ರೀ ಸುದೇಶ್ ದೊಡ್ಡಪಾಳ್ಯ

ನಗೆಯ ರಸಗುಳಿಗೆಯಿಂದ ಆರೋಗ್ಯವ ಹಸನು ಮಾಡುವ ನಿಜದ ಡಾಕ್ಟರ್.

ಶ್ರೀ ಕೆನ್ನಾಳು ಭಾಸ್ಕರ್

ಜಾನಪದ ವಿದ್ವಾಂಸರಾದ ಡಾ. ಪಿ.ಕೆ.ಆರ್. ಅವರು ಯಾವುದೇ ಪ್ರಚಾರಕ್ಕೆ ಆಸೆ ಪಡದೆ 'ಮೋಡದ ಮರೆಯ ಸೂರ್ಯನಂತೆ' ಜಾನಪದ ಕ್ಷೇತ್ರಕ್ಕೆ ಬೆಳಕನ್ನೂ ಜೀವಂತಿಕೆಯನ್ನೂ ತುಂಬಿ ಜಾನಪದ ಕ್ಷೇತ್ರವನ್ನು ಸಮೃದ್ಧಿಗೊಳಿಸಿದ್ದಾರೆ.

ಸೌಜನ್ಯ ಶರತ್‌ಚಂದ್ರ

ಪಿಕೆಆರ್ ಎಂದರೆ ಅವರು ಕರುಣೆಯ ಕಡಲು ಮಮತೆಯ ಮಡಿಲು.

ಡಾ. ಎ. ರಂಗಸ್ವಾಮಿ

ಅಷ್ಟಾಗಿ ಪ್ರೋತ್ಸಾಹವಿಲ್ಲದ ಗಮಕ ಕಲೆಯನ್ನು ಯುವ ಜನಾಂಗಕ್ಕೆ ಪರಿಚಯಿಸಿ, ಕಲೆಯು ಪುನರುತ್ಥಾನಗೊಳ್ಳಬೇಕೆಂಬ ಪಿಕೆಆರ್ ಅವರ ಕಳಕಳಿ, ಅದಕ್ಕಾಗಿ ಅವರು ನಡೆಸುವ ಪ್ರಯತ್ನಗಳು ಸ್ತುತ್ಯಾರ್ಹ.

ಗಮಕ ಕಲಾಕೌಸ್ತುಭ ಶ್ರೀ ಕೃ. ರಾಮಚಂದ್ರ

ಜಾತಿಮತಗಳು, ಮೇಲುಕೀಳುಗಳು, ಗೆಳೆಯರು, ವಿದ್ಯಾರ್ಥಿಗಳು, ದೊಡ್ಡವರು, ಚಿಕ್ಕವರು ಎಂಬ ಭೇದವನ್ನು ಮಾಡದೆ ಈ ಸಮಾನತೆಯ ಹರಿಕಾರನ್ನು 'ವಿಶ್ವಮಾನವ' ಎಂದರೆ ಅದು ಪಿಕೆಆರ್ ಅವರಿಗೆ ಸಲ್ಲುವ ಔಚಿತ್ಯಪೂರ್ಣ ಹೆಸರು

ಎಸ್. ದೇವರಾಜು

ವಿದ್ಯಾರ್ಥಿಗಳು ಓದುತ್ತ ತಮಗೇನಾದರೂ ಅಸ್ಪಷ್ಟವೆನಿಸಿದರೆ ಫೋನ್ ಮೂಲಕ ಕೇಳುತ್ತಾರೆ. ಆಗ ಇವರೇ ಅವರ ನಂಬರಿಗೆ ಫೋನ್ ಮಾಡಿ ಎಷ್ಟು ಹೊತ್ತಾಯಿತೆಂದು ಚಿಂತಿಸದೆ ಫೋನ್‌ನಲ್ಲೆ ಪಾಠ ಮಾಡುವ ವಿದ್ಯಾರ್ಥಿಪ್ರೇಮ ಇವರದು.

ಬ್ರಹ್ಮದೇವ, ದಡದಹಳ್ಳಿ

ಸಮಾರೋಪ

ಡಾ. ಪಿ.ಕೆ. ರಾಜಶೇಖರ ಅವರು ಕ್ಷೇತ್ರಕಾರ್ಯ, ಸಂಗ್ರಹ, ಸಂಪಾದನೆ, ಸಂಶೋಧನೆ, ಅಧ್ಯಯನ, ಅಧ್ಯಾಪನ ಮುಖ್ಯವಾಗಿ ಜನಪದ ಸಾಹಿತ್ಯವನ್ನು ಪ್ರಚುರಪಡಿಸುವ ಮೂಲಕ ಮಹಾನ್ ಗಾಯಕರಾಗಿ, ಸಂಘಟಕರಾಗಿ ಅಂತೆಯೇ ಸಾಂಸ್ಕೃತಿಕವಾಗಿ, ಜಾನಪದ ಕ್ಷೇತ್ರದ ಮೇರುಪ್ರತಿಭೆಯಾಗಿ ಗುರುತಿಸಿಕೊಂಡಂಥವರು.

ತಮ್ಮ ಬದುಕನ್ನು ಸಂಪೂರ್ಣವಾಗಿ ಜಾನಪದಕ್ಕೇ ಅರ್ಪಿಸಿಕೊಂಡಿರುವ ರಾಜಶೇಖರರು, ಜನಪದ ಹಾಡುಗಳಿಗೆ ಧ್ವನಿ ನೀಡುವುದು, ಮೂಲ ಸಾಹಿತ್ಯವನ್ನು ಪ್ರಸಾರ ಮಾಡುವುದು, ಅವುಗಳ ಮಹತ್ವವನ್ನು ಸಾರುವುದು ಹಾಗೂ ಕ್ಷೇತ್ರಕಾರ್ಯ ಮಾಡುವುದರ ಮುಖಾಂತರವೇ ತಮ್ಮ ವ್ಯಕ್ತಿತ್ವವನ್ನು ಕಟ್ಟಿಕೊಂಡವರು. ಆ ಮೂಲಕ ಜಾನಪದ ಮತ್ತು ತಮ್ಮ ಬದುಕು ಅಭಿನ್ನ ಎಂದು ತಾವು ಬದುಕುವ ರೀತಿಯಿಂದಲೇ ಸಾಧಿಸಿ ತೋರಿಸಿದವರು.

ಪಿಕೆಆರ್ ಅವರು ಪಿರಿಯಾಪಟ್ಟಣದಂಥ ಸಾಂಸ್ಕೃತಿಕ ಮಹತ್ವವನ್ನು ಹೊಂದಿದ ಪ್ರದೇಶದಲ್ಲಿ ಹುಟ್ಟಿ-ಬೆಳೆದು, ದೇಶ-ಹೊರದೇಶಗಳವರೆಗೂ ಜಾನಪದವನ್ನು ಹಬ್ಬಿಹರಡುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿದರು. ಜನಪದ ಹಾಡುಗಳ ಮೂಲಮಟ್ಟುಗಳನ್ನು ಬಿಟ್ಟುಕೊಡದೆ, ಜನಮನಕ್ಕೆ ಮುಟ್ಟಿಸಿದ ಅವರು, ನಾಡಿನ ಗಟ್ಟಿಗಾಯಕರೆನಿಸಿದರು. ಅವರ ಸಂಘಟನಾಶಕ್ತಿಗೆ, ಮೂಲ ಜನಪದ ಸಾಹಿತ್ಯದ ಬಗೆಗಿನ ಕಾಳಜಿಗೆ, ಅವುಗಳ ಪ್ರಸಾರದ ಗೀಳಿಗೆ 'ಹೊನ್ನಾರು ಜನಪದ ಗಾಯನ ವೃಂದ'ವನ್ನು ಹುಟ್ಟುಹಾಕಿ ನಾಡಿನ ಜಾನಪದ ಕ್ಷೇತ್ರದಲ್ಲಿ ಹೊಸ ಸಂಚಲನವನ್ನೇ ಮೂಡಿಸಿದರು. ಇದು ಅವರ ಕತೃತ್ವಶಕ್ತಿಯ ದ್ಯೋತಕವಾಗಿದೆ.

ಮಲೆಯ ಮಾದೇಶ್ವರ, ಜನಪದ ರಾಮಾಯಣ, ಜನಪದ ಮಹಾಭಾರತ ಸೇರಿದಂತೆ ಅತ್ಯಮೂಲ್ಯ ಕೃತಿರತ್ನಗಳನ್ನು ನಾಡಿನ ಜಾನಪದ ವಾಙ್ಮಯಕ್ಕೆ ನೀಡುವ ಮೂಲಕ ರಾಜಶೇಖರರು, ಅದ್ವಿತೀಯ ಸಾಧನೆ ಮಾಡಿದ್ದಾರೆ.

ಕಾವ್ಯ, ಭಾಷಾಶಾಸ್ತ್ರ, ಜೀವನ ಚರಿತ್ರೆ, ಅನುವಾದ ಮುಂತಾದ ಸೃಜನಶೀಲ ಮತ್ತು ಸೃಜನೇತರ ಸಾಹಿತ್ಯದಲ್ಲೂ ಅವರ ಕಾರ್ಯಗಳು ಜಾನಪದದಂತೆ ಅವಿನಾಶಿಯಾದವು. ಮೂಲ ಕಲಾವಿದರೇ ನಮ್ಮ ಸಂಸ್ಕೃತಿ, ಪರಂಪರೆಯ ಮುಖ್ಯ ಜೀವಾಳ ಎಂಬ ವಿನಯದಿಂದಲೇ ಅವರು ಅಪಾರವಾದ ಹಾಗೂ ವ್ಯಾಪಕವಾದ ಕ್ಷೇತ್ರಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಬೃಹತ್‌ಪ್ರಮಾಣದ ಗ್ರಂಥಗಳನ್ನು ಸಂಪಾದಿಸಿ, ಅಚ್ಚರಿ ಮೂಡಿಸಿದ್ದಾರೆ. ಬದುಕಿನ

ಬಹುತೇಕ ವರ್ಷಗಳನ್ನು ಕ್ಷೇತ್ರಕಾರ್ಯದಲ್ಲಿಯೇ ಕಳೆದ ಅವರು, ಜಾನಪದದ ಜೀವಂತಿಕೆಯ ಜೀವಸೆಲೆಯನ್ನು ಅವಿಚ್ಛಿನ್ನಗೊಳಿಸಿದರು. ಆ ಮೂಲಕ ಅನುಕರಣಶೀಲರಾದರು. ಮಾರ್ಗ ನಿರ್ಮಾತೃ ಎನಿಸಿದರು.

ರಾಜಶೇಖರರು ಬಾಲ್ಯದಲ್ಲಿ ತಮ್ಮ ಮನೆಯ ಸಾಂಸ್ಕೃತಿಕ ವಾತಾವರಣದಿಂದ ಜಾನಪದದ ಬಗೆಗೆ ಅರಿವನ್ನು ಪಡೆದುಕೊಂಡರಲ್ಲದೆ, ವಿದ್ಯಾರ್ಥಿದೆಸೆಯಿಂದಲೇ ಪ್ರೊ. ದೇಜಗೌ, ಡಾ. ಸಿ.ಪಿ.ಕೆ., ಪ್ರೊ. ಸುಜನಾ, ಡಾ. ರಾಗೌ ಅವರಂಥ ಅತಿರಥ ಮಹಾರಥರೆನಿಸಿದ ಗುರುಪರಂಪರೆಯ ಗರುಡಿಯಲ್ಲಿ ಪಳಗಿದರು. ಗುರುಗಳು ತೋರಿದ ದಾರಿಯಲ್ಲಿ ಕ್ರಮಿಸಿ, ತಾವೇ ಮುಂದೆ ಮಹಾದಾರಿಯನ್ನು ರೂಪಿಸಿಕೊಂಡರು. ಜೊತೆಗೆ ತಮ್ಮ ವಿದ್ಯಾರ್ಥಿಗಳಿಗೆ ಮುನ್ನಡೆಯಲು ಮಾರ್ಗ ನಿರ್ಮಿಸಿಕೊಟ್ಟರು. ಅವರೇ ದಾರಿದೀಪವಾದರು. ಅಂತಃಕರಣದ, ಸಹೃದಯ, ಸ್ನೇಹಶೀಲ, ಸಾತ್ವಿಕ ಸಂಪನ್ನರೆನಿಸಿಕೊಂಡ ರಾಜಶೇಖರರು ಅಪಾರ ಪ್ರಮಾಣದ ಶಿಷ್ಯಕೋಟಿಯನ್ನು ಹೊಂದಿದ್ದಾರೆ. ನೂರಾರು ವಿದ್ಯಾರ್ಥಿಗಳಿಗೆ ತಮ್ಮ ಕೈಲಾದಷ್ಟು ಮಟ್ಟಿಗೆ ಅರಿವು, ಅನ್ನ, ಆಶ್ರಯ ನೀಡಿ, ಪೋಷಿಸಿದ್ದಾರೆ. ಜೀವನದಲ್ಲಿ ಎಷ್ಟೇ ಕಷ್ಟ-ನಷ್ಟ, ತೊಂದರೆ-ತಾಪತ್ರಯಗಳು ಬಂದರೂ ಅವುಗಳಿಗೆ ಎದೆಗುಂದದೆ ಎದುರಿಸಿ, ಯಶಸ್ಸು ಕಂಡಿದ್ದಾರೆ. ತಮ್ಮ ಕಾರ್ಯಗಳ ಮೂಲಕವೇ ಒಂದು ಕಾಲಘಟ್ಟದ ನಾಡಿನ ಜಾನಪದ ಕ್ಷೇತ್ರವನ್ನು ಪ್ರಭಾವಿಸಿದವರು. ಆ ಮೂಲಕ ಜಾನಪದದಲ್ಲಿ ಕೆಲಸ ಮಾಡುವವವರಿಗೆ ಮೇಲ್ಪಂಕ್ತಿ ಹಾಕಿಕೊಟ್ಟರು. ನಾಡಿನ ವಿದ್ವತ್‌ಲೋಕಕ್ಕೆ ಅವರು ಕೊಟ್ಟು ಕೊಡುಗೆ ಗಣನೀಯ, ಮನನೀಯ.

ದುಡಿದದ್ದು-ದಣಿದದ್ದು, ತೇಯ್ದದ್ದು- ತೆತ್ತದ್ದು, ಕಳೆದುಕೊಂಡದ್ದು-ಪಡೆದುಕೊಂಡದ್ದು, ಬೇಡಿದ್ದು-ನೀಡಿದ್ದು, ಸಾಧ್ಯ-ಅಸಾಧ್ಯಗಳನ್ನು ಸಾಧ್ಯಮಾಡಿದ್ದು, ಸಿದ್ಧಿ-ಸಾಧನೆಗಳನ್ನು ಗೈದದ್ದು ಎಲ್ಲವೂ ಜಾನಪದದಲ್ಲಿಯೇ ಎಂಬುದನ್ನು ಗಮನಿಸಿದಾಗ ರಾಜಶೇಖರರ ವ್ಯಕ್ತಿತ್ವ ಹಾಗೂ ಅವರ ಇಡೀ ಬದುಕು ಆದರ್ಶಮಯವಾದುದು ಎಂಬುದು ನಿಸ್ಸಂದೇಹ. 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಜನಪದರ ಮಾತು ರಾಜಶೇಖರರ ಜೀವನಕ್ಕೆ ನೇರವಾಗಿ ಹೊಂದಿಕೆಯಾಗುತ್ತದೆ. ತಮ್ಮ ಬದುಕಿನಲ್ಲಿ 'ಜಾನಪದದ ಹೊನ್ನನ್ನೇ ಬಿತ್ತಿ ಹೊನ್ನನ್ನೇ ಬೆಳೆದಿದ್ದಾರೆ. 'ಆದಾವ ನಮ ಜೋಳ, ಉಳಿದಾವ ನಮ ಹಾಡ' ಎನ್ನುವಂತೆ ಅವರು ಮಾಡಿದ ಮಹತ್ವಾಕಾಂಕ್ಷೆಯ ಕಾರ್ಯಗಳು ಜನಪದರ ಹಾಡುಗಳಂತೆ ಸದಾ ಅನುರಣನೀಯ, ಸ್ಮರಣೀಯ. ಅಂತೆಯೆ ಅವು ಸರ್ವಕಾಲಕೂ ಮೆಲಕುಯೋಗ್ಯ. ಒಟ್ಟಾರೆ ಜಾನಪದ ಸೇರಿದಂತೆ ನಾಡಿನ ಸಾಂಸ್ಕೃತಿಕ ಲೋಕದ ಧೀಮಂತ ವ್ಯಕ್ತಿತ್ವದ ರಾಜಶೇಖರರು ಈ ಅರ್ಥದಲ್ಲಿ 'ಜಾನಪದ ಹೊನ್ನೇ' ಆಗಿದ್ದಾರೆ.

ಅನುಬಂಧ

ಹಾಡುಹಕ್ಕಿಯೊಂದಿಗೆ ದನಿಗೂಡಿ

ಡಾ. ಪಿ.ಕೆ. ರಾಜಶೇಖರ ಅವರೊಂದಿಗೆ ಮಾತುಕತೆಯನ್ನು ಆಡುವುದು ಎಂದರೆ ಒಂದು ಸುದೀರ್ಘ ಕಥಾನಕವನ್ನು ಎದುರುಗೊಳ್ಳುವುದು ಮತ್ತು ನಾವೇ ಅದರಲ್ಲಿ ಒಳಗಾಗುವುದು ಎಂದೇ ಅರ್ಥ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಮಾತುಕತೆ ಔಚಿತ್ಯಪೂರ್ಣವಾದುದು ಎಂದು ತಿಳಿದು, ಹಾಡುಹಕ್ಕಿ ಪಿಕೆಆರ್ ಅವರೊಂದಿಗೆ ದನಿಗೂಡಿಸುವ ಪ್ರಯತ್ನವನ್ನು ಮಾಡಲಾಗಿದೆ. ಇಲ್ಲಿ ಕೇಳಲಾದ ಪ್ರಶ್ನೆಗಳಿಗೆ ಅವರು ಉತ್ತರ ನೀಡಿದ್ದಾರೆ ಎನ್ನುವುದಕ್ಕಿಂತ ತಮ್ಮ ಜೀವನದ ಘಟನಾವಳಿಗಳನ್ನು ಮೆಲುಕು ಹಾಕಿದ್ದಾರೆ ಎನ್ನಬಹುದು. ಈ ಮೂಲಕ ಗತದೊಂದಿಗೆ ವರ್ತಮಾನದ ಅನುಸಂಧಾನ ಸಾಧ್ಯವಾಗಿದೆ. ಅವರೊಂದಿಗೆ ದನಿಗೂಡಿಸುವ ಈ ಪ್ರಕ್ರಿಯೆ ಧ್ವನಿಪೂರ್ಣವಾದುದಾಗಿದೆ.

೧. **ಅದೇ ತಾನೆ ಜಾನಪದ ವಿಷಯ ವೈಜ್ಞಾನಿಕವಾಗಿ ಅಧ್ಯಯನಕ್ಕೆ ಒಳಪಡುತ್ತಿದ್ದ ಕಾಲವದು. ಆ ಸಂದರ್ಭದಲ್ಲಿ ಮೈಸೂರು ಪರಿಸರವು ಜಾನಪದ ಕ್ಷೇತ್ರದಲ್ಲಿ ತಮ್ಮನ್ನು ತೊಡಗುವಂತೆ ಪ್ರೇರೇಪಿಸಿತು. ಅದು ಯಾವ ರೀತಿಯಲ್ಲಿ ಸ್ವಲ್ಪ ವಿವರವಾಗಿ ತಿಳಿಸ್ತೀರಾ ಸಾರ್?**

ನಾನು ಹೇಳಿ ಕೇಳಿ ಗ್ರಾಮೀಣ ಪರಿಸರದಿಂದ ಬಂದವನು. ನನ್ನ ತಂದೆಯ ತಾಯಿ ಹುಣಸೇಕುಪ್ಪೆಯಮ್ಮ ಬೀಸುವಾಗ, ಕುಟ್ಟುವಾಗ, ಮಕ್ಕಳನ್ನು ತೂಗುವಾಗೆಲ್ಲ ಹಾಡಿಕೊಂಡು ಕಾಯಕದಲ್ಲಿ ನಿರತರಾಗಿರುತ್ತಿದ್ದರು. ನನ್ನ ತಾಯಿಯವರ ಚಿಕ್ಕಮ್ಮನವರಾದ ನಿಂಗಮ್ಮ ಹಳ್ಳಿಯಕಥೆಗಳನ್ನು ಹೇಳುವುದರಲ್ಲಿ ಮಹಾನ್ ಕಲೆಗಾರ್ತಿ (ಇವರು ಹೇಳಿರುವ ಜನಪದ ಕಥೆಗಳು 'ಮಾತಿನರಗಿಣಿ' ಎಂಬ ಹೆಸರಿನ ಸಂಕಲನವಾಗಿ ಪ್ರಕಟವಾಗಿವೆ). ನಮ್ಮ ತಂದೆಯವರು ಸ್ವಾತಂತ್ರ್ಯ ಪೂರ್ವದಲ್ಲೆ ಮೈಸೂರಿನ ಮರಿಮಲ್ಲಪ್ಪ ಪ್ರೌಢ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ. ವರೆಗೂ ಓದಿದ್ದರು. ಆದರೂ ಅವರು ಜನಪದ ವೈದ್ಯ ಮಾಡುತ್ತಿದ್ದುದಲ್ಲದೆ ಜನಪದ ಪುರಾಣಗಳು ಐತಿಹ್ಯಗಳು ಹಬ್ಬಹರಿದಿನ, ಆಚಾರ ವಿಚಾರಗಳು ಶಾಸ್ತ್ರ ಸಂಬಂಧೀ ಅನೇಕ ವಿಚಾರಗಳಲ್ಲಿ ಪರಿಣತರಾಗಿದ್ದರು. ಅಲ್ಲದೆ ನಮ್ಮ ಬೀದಿಯಲ್ಲಿ ದೀಪಾವಳಿ

ತಿಂಗಳು ಪೂಜಿಸುತ್ತಿದ್ದ ಕುಂತಿಗುಡಿಯಲ್ಲಿ ಕೆಂಪೇಗೌಡಯ್ಯನವರ ಸೊಸೆ ಪುಟ್ಟಮ್ಮಣ್ಣಿ ಕೊಂತಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುತ್ತಿದ್ದರು. ಜವನೀಕುಪ್ಪೆ ಕುಳ್ಳಪ್ಪ ಕೈಯೆಣ್ಣೆ ದೀಪದ ಬೆಳಕಿನಲ್ಲಿ ಅರ್ಜುನ ಜೋಗಿ ಹಾಡನ್ನು ಓದುತ್ತಿದ್ದರು. ಅವರಿಗೆ ಸಿದ್ದೇಗೌಡರ ಮಗ ರಾಮಚಂದ್ರ, ಬೋರಪ್ಪನ ಮಗ ರಾಮು, ಪಾಪಯ್ಯನ ಮಗ ಶಿವಾ, ಉಪ್ಪಾರರ ಸಿರಿಯ, ಕಾಳಮ್ಮನ ಸಿದ್ದಯ್ಯನ ಮಕ್ಕಳಾದ ದೇವಲಿಂಗು ಮತ್ತು ಕಾಳರಸು ಸೊಲ್ಲು ಕೋಡುತ್ತಿದ್ದರು. ಇವರೆಲ್ಲರೂ ಮಂಟ್ಗಯ್ಯ ಎಂಬುವನ ನಾಯಕತ್ವದಲ್ಲಿ ಕೋಲಾಟವಾಡಿ ರಂಜಿಸುತ್ತಿದ್ದರು. ಇವರೊಡನೆ ನಾನೂ ಭಾಗಿಯಾಗುತ್ತಿದ್ದೆ. ಅಲ್ಲದೆ ನನ್ನಜ್ಜಿ ಹುಣಸೇಕುಪ್ಪೆಯಮ್ಮ (ಶ್ರೀಮತಿ ಸಣ್ಣಮ್ಮ) ನವರು ನಮ್ಮನ್ನೂ ತಮ್ಮ ಜೊತೆಯಲ್ಲಿ ಹುಣಸೇಕುಪ್ಪೆಗೆ ಕರೆದುಕೊಂಡು ಹೋಗುತ್ತಿದ್ದರು. ಆ ಕಾಲಕ್ಕೆ ಈ ಗ್ರಾಮ ಜಾನಪದ ಲೋಕವೇ ಇದೇನೋ ಎನ್ನುವಂತಿತ್ತು. ಈ ಜಾನಪದ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಪಡೆದು, ಬೆಳೆದ ನಾನು ಜಾನಪದದ ಅಭೇದ ಸಂಬಂಧಿಯಾಗಿದ್ದೆ.

ನಾನು ಕನ್ನಡ ಎಂ.ಎ. ತರಗತಿಯಲ್ಲಿ ಎಲೆಕ್ಟಿವ್ ಸಬ್ಜೆಕ್ಟ್ ಆಗಿ ಯಾವುದನ್ನು ತೆಗೆದುಕೊಳ್ಳಬೇಕೆಂಬ ಗೊಂದಲದಲ್ಲಿದ್ದಾಗ, ನನ್ನ ಪ್ರಿಯಗುರುಗಳಾದ ಪ್ರೊ. ರಾಗೌ ಅವರು 'ರಾಜಶೇಖರ್, ಈಗ ತಾನೆ ಪ್ರಾರಂಭವಾಗಿರುವ ಸಬ್ಜೆಕ್ಟ್ ಜಾನಪದ. ಅದನ್ನೇ ತೆಗೆದುಕೊಳ್ಳಿ' ಎಂದು ಸಲಹೆ ನೀಡಿದರು. ಅದರಂತೆ ನಾನು ಫೋಕ್‌ಲೋರ್ ಸಬ್ಜೆಕ್ಟ್‌ನ್ನು ಆಯ್ಕೆ ಮಾಡಿಕೊಂಡೆ. ಆಗಾಗಲೆ ಜಾನಪದ ಕ್ಷೇತ್ರದಲ್ಲಿ ಹೆಸರು ಮಾಡಿದ್ದ ಪ್ರಸಿದ್ಧ ವಿದ್ವಾಂಸರಾದ ಪ್ರೊ. ಜೀಶಂಪ, ಪ್ರೊ. ರಾಗೌ, ಪ್ರೊ. ಸುಧಾಕರ ಮುಂತಾದವರ ತರಗತಿಗಳು ನನ್ನನ್ನು ಆಕರ್ಷಿಸಿದವು. ಗ್ರಾಮೀಣ ಪ್ರದೇಶದಿಂದ ಬಂದ ನನಗೆ ನಮ್ಮ ಬದುಕನ್ನೇ ನಾವು ಅಧ್ಯಯನ ಮಾಡುತ್ತಿದ್ದೇವೆ ಅನ್ನಿಸಿತು. ನನಗೆ ಜಾನಪದ ತುಂಬ ಪ್ರಿಯವಾದ ವಿಷಯವಾಯಿತು. ನಾನು ಊರಿಗೆ ಹೋದರೆ ನನ್ನ ಸುತ್ತಮುತ್ತೆಲ್ಲ ಜಾನಪದ ರಾಶಿರಾಶಿಯಾಗಿ ಸುರಿದಿರುವುದು ಕಾಣುತ್ತಿತ್ತು. ಈ ಶ್ರೀಮಂತ ಕಣಜವನ್ನೆಲ್ಲ ದೋಚಿಕೊಳ್ಳುವ ಮಹದಾಕಾಂಕ್ಷೆ ನನ್ನದಾಯಿತು. ವಿದ್ಯಾರ್ಥಿಯಾಗಿದ್ದಾಗಲೆ ಜಾನಪದದ ವಿವಿಧ ಪ್ರಕಾರಗಳನ್ನೆಲ್ಲ ಸಂಗ್ರಹಿಸಲು ಪ್ರಾರಂಭಿಸಿದೆ. ಬರಗೆಟ್ಟ ದನಕ್ಕೆ ಹುಲುಸಾಗಿ ಬೆಳೆದ ಹಸುರು ಕಂಡಂತಾಗಿ ಸರಸರನೆ ಹೋಗಿ ಪರಪರನೆ ಕಿತ್ತು ಬಾಚಿಕೊಂಡೆ, ಸಿಕ್ಕಿದ್ದೆಲ್ಲವನ್ನು ದೋಚಿಕೊಂಡೆ. ಗ್ರಾಮೀಣ ಪ್ರದೇಶದವನೇ ಆಗಿದ್ದ ನನಗೆ ಗ್ರಾಮೀಣರ ಜೊತೆ ಬೆರೆಯುವುದು ಹಾಗೂ ಅವರಲ್ಲಿರುವ ಜಾನಪದ ಸಾಮಗ್ರಿಗಳನ್ನೆಲ್ಲ ಸಂಗ್ರಹಿಸಿಕೊಳ್ಳುವುದು ಕಷ್ಟವಾಗಿಲಿಲ್ಲ. ಎಂ.ಎ. ತರಗತಿಯಲ್ಲಿ ಜಾನಪದ

ವಿಷಯದಲ್ಲಿ ನನಗೆ ನಾಡೋಜ ದೇಜಗೌ ತಮ್ಮ ತಾಯಿ ತಂದೆಯರ ಹೆಸರಿನಲ್ಲಿ ಕೊಡಮಾಡುತ್ತಿದ್ದ ಮೊದಲಸಲದ ಚಿನ್ನದ ಪದಕ ನನಗೆ ಬಂತು. ನಾನು ಜಾನಪದ ಕ್ಷೇತ್ರದಲ್ಲಿ ತೋರಿಸುತ್ತಿದ್ದ ಆಸಕ್ತಿಯನ್ನು ಕಂಡ ನನ್ನ ಭಾವನವರಾದ ಪ್ರೊ. ಕೆ.ಬಿ. ಶಿವರುದ್ರಪ್ಪ ಮತ್ತು ನನ್ನ ಅಕ್ಕ ಶ್ರೀಮತಿ ಕಮಲ ಶಿವರುದ್ರಪ್ಪನವರು ಜಾನಪದ ಕ್ಷೇತ್ರದಲ್ಲೆ ಒಂದು ವಿಷಯವನ್ನು ಆಯ್ಕೆ ಮಾಡಿಕೊಂಡು ಸಂಶೋಧನೆ ಮಾಡಲು ಸಲಹೆ ನೀಡಿದರು. ಈ ಎಲ್ಲ ಕಾರಣಗಳಿಂದ ನಾನು ಸಂಶೋಧನಾ ವಿದ್ಯಾರ್ಥಿಯಾಗಿ ಸೇರಿಕೊಂಡೆ. ಆ ದಿನಗಳಲ್ಲಿ ಯಾರೂ ಸಂಶೋಧನೆಗೆ ಬರುತ್ತಿರಲಿಲ್ಲ. ಎಲ್ಲರೂ ತಾವು ಉಪನ್ಯಾಸಕರಾದರೆ ಸಾಕು ಎನ್ನುತ್ತಿದ್ದ ಕಾಲ. ಆ ಕಾಲದಲ್ಲಿ (೧೯೭೧) ಇಡೀ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಇದ್ದ ಏಕೈಕ ಸಂಶೋಧನಾ ವಿದ್ಯಾರ್ಥಿಯೆಂದರೆ ನಾನೇ.

). **ಭೌತಿಕ ಸಲಕರಣೆಗಳು/ಪರಿಕರಗಳು ಅಷ್ಟಾಗಿ ಬಳಕೆಯಿಲ್ಲದ ಕಾಲದಲ್ಲಿ ತಾವು ಅಪಾರವಾದ ಶ್ರಮದಿಂದ ಜಾನಪದ ಸಂಪತ್ತನ್ನು ಸಂಗ್ರಹಿಸಿದ್ದು ಸವಾಲಿನ ಸಂಗತಿಯೇ ಸರಿ! ಇಂತಹದೊಂದು ಅದ್ವಿತೀಯ ಕ್ಷೇತ್ರಕಾರ್ಯದ ಅನುಭವಗಳನ್ನೂ ತಾವು ಎದುರಿಸಿದ ಸವಾಲುಗಳನ್ನೂ ಮತ್ತು ಆ ಸಂದರ್ಭಗಳನ್ನು ನೆನಪಿಗೆ ತಂದುಕೊಂಡು ಸವಿವರವಾಗಿ ಹೇಳ್ತೀರಾ ಸಾರ್?**

ನನ್ನ ಕ್ಷೇತ್ರಕಾರ್ಯದ ಅನುಭವಗಳನ್ನು ಬರೆಯುತ್ತ ಹೋದರೆ ಅದೊಂದು ಬೃಹದ್ಗ್ರಂಥವಾಗುತ್ತದೆ; ಅದೊಂದು ಮುಗಿಯದ ಕಥೆ. ಆ ಕಾಲದಲ್ಲಿ ಟೇಪ್ ರೆಕಾರ್ಡರ್ ಇರಲಿಲ್ಲ; ಕ್ಯಾಮರಾ ಇರಲಿಲ್ಲ. ವಕ್ತೃ ಹೇಳಿದ್ದನ್ನು ಮೊದಲಿನಿಂದ ಕೊನೆಯವರೆಗೂ ಕುಳಿತು ಬರೆದುಕೊಳ್ಳಬೇಕಾಗುತ್ತಿತ್ತು. ಪರಿಚಿತರಿದ್ದ ಹಳ್ಳಿಗಳಿಗೆ ಹೋದಾಗ ಅವರ ಮನೆಗಳಲ್ಲಿ ಅಥವಾ ಕೊಟ್ಟಿಗೆಗಳಲ್ಲಿ ಅಥವಾ ಜಗುಲಿಗಳ ಮೇಲೆ ಕುಳಿತು ಬರೆದುಕೊಳ್ಳುತ್ತಿದ್ದೆ. ಪರಿಚಿತರಿದ್ದರೂ ಕೆಲವು ಕಡೆ ಅವರ ಮನೆಗಳಲ್ಲಿ ಕುಳಿತು ಬರೆದುಕೊಳ್ಳಲು ಬೇರೆ ಬೇರೆ ಕಾರಣಗಳಿಂದ ಸಾಧ್ಯವಾಗುತ್ತಿರಲಿಲ್ಲ. ಅಂಥ ಸಂದರ್ಭಗಳಲ್ಲಿ ಮಾರಿಗುಡಿ, ಬಸವನಗುಡಿ, ರಾಮಮಂದಿರಗಳಲ್ಲಿ ಕುಳಿತು ಬರೆದುಕೊಳ್ಳುತ್ತಿದ್ದೆ. ಆ ಕಾಲದಲ್ಲಿ ನಾನು ಕಂಡ ಕಲಾವಿದರೆಲ್ಲ ಸಾಮಾನ್ಯವಾಗಿ ನಿಷ್ಕಪಟಿಗಳು. ಆ ಕಲಾವಿದರಿಂದ ನನಗೆಂದೂ ತೊಂದರೆಗಳಾಗಿಲ್ಲ. ಆದರೆ ನಾನು ಬರೆದುಕೊಳ್ಳಲು ಕುಳಿತಿದ್ದ ಸ್ಥಳಕ್ಕೆ ಬರುತ್ತಿದ್ದವರಲ್ಲಿ ಕೆಲವರು 'ನೀವು ಇದುನ್ನೆಲ್ಲ ಯಾಕ್ ಬರ್ಕೊತೀರಿ?', 'ನಿಮಗೆ ಫಾಯ್ದೆ ಇಲ್ಲದೆ ಈ ಹಳ್ಳಿಹಳ್ಳಿ ಸುತ್ತಿ ಇಷ್ಟ್ ಕಷ್ಟ ಪಡುತ್ತಿದ್ರಾ?', 'ರೇಡಿಯೋಗೆ ಕೊಟ್ಟು ದುಡ್ ಮಾಡ್ಕೊತೀರಾ?',

'ಸಿನಿಮಾಕ್ಕೆ ಕೊಡ್ತೀರಾ?' ಹೀಗೆ ಹಲವಾರು ಪ್ರಶ್ನೆಗಳನು ಕೇಳುತ್ತ, 'ಲೋ ಮಾದ ಹಾಡ್ಬೇಡ ಕಲಾ. ಇವ್ರು ಇದ್ನೆಲ್ಲ ತಕೊಂಡೋಗಿ ಪುಸ್ತಕ ಮಾಡಿ ರೇಡಿಯೋ ಕೊಟ್ಟು ದುಡ್ ಮಾಡ್ಕೋತಾರೆ.' ಎಂದೆಲ್ಲ ಹೇಳಿ ಕಲಾವಿದರ ನಿರ್ಮಲ ಮನಸ್ಸನ್ನು ಒಡೆದು ಹಾಕುತ್ತಿದ್ದರು. ಇಂಥ ಸಮಯದಲ್ಲಿ ಕಲಾವಿದರ ಮನ ಒಲಿಸಿ ಅವರು ಬಯಸಿದ ಹಣ ಒಡವೆ ವಾಚು ಮುಂತಾದವುಗಳನ್ನು ಕೊಟ್ಟು ಕ್ಷೇತ್ರಕಾರ್ಯವನ್ನು ಮುಂದುವರಿಸಬೇಕಾಗುತ್ತಿತ್ತು.

ಕೆಲವೊಮ್ಮೆ ಕಲಾವಿದರ ಗುಡಿಸಲುಗಳಲ್ಲಿಯೇ ಕುಳಿತು ಬರೆದುಕೊಳ್ಳುತ್ತಿದ್ದೆ. ಇಂಥ ಸಂದರ್ಭದಲ್ಲೂ ಅನೇಕ ಸಮಸ್ಯೆಗಳೆದುರಾಗುತ್ತಿದ್ದವು. ಕಲಾವಿದನ ಹೆಂಡತಿ ಮಕ್ಕಳುಗಳ ಅಹವಾಲುಗಳನ್ನು ಕೇಳುತ್ತ ಕುಳಿತುಕೊಳ್ಳಬೇಕಾಗುತ್ತಿತ್ತು. ಅವರ ಕಷ್ಟನಷ್ಟಗಳಿಗೆ ಸ್ಪಂದಿಸಬೇಕಾಗುತ್ತಿತ್ತು. ಅವರ ಹೊಟ್ಟೆಪಾಡಿಗೆ ಬೇಕಾದ ಅಷ್ಟಿಷ್ಟಕ್ಕೆ ಹಣಕೊಡಬೇಕಾಗುತ್ತಿತ್ತು. ಕೆಲವೊಮ್ಮೆ ಕಲಾವಿದನ ಸಾಲಗಾರರು ಬಂದು ಜಗಳಕ್ಕೆ ನಿಲ್ಲುತ್ತಿದ್ದರು. ಸಣ್ಣಪುಟ್ಟ ಮೊತ್ತವಾದಾಗ ಅದನ್ನು ನಾನೇ ಕೊಟ್ಟು ಕಳಿಸುತ್ತಿದ್ದೆ. ಕಲಾವಿದನಿಗೆ ಮದ್ಯಪಾನದ ಚಟವಿದ್ದಾಗ 'ಹೊರಗೆ ಹೋಗಿ ಬರ್ತೀನಿ' ಎಂದು ಹೇಳಿ ಬಹಳ ತಡವಾಗಿ ಬರುತ್ತಿದ್ದರು; ಕೆಲವೊಮ್ಮೆ ಬರುತ್ತಿರಲೇ ಇಲ್ಲ. ಇಂಥ ಸಂದರ್ಭದಲ್ಲಿ ನಾನೇ ಅವರಿಗೆ ಬೇಕಾದ ಮದ್ಯಪಾನಗಳನ್ನು ಅವರೊಡನೆ ಹೋಗಿ ಕೊಂಡುತಂದು ಹಾಡುತ್ತ ಹಾಡುತ್ತ ಆಗಾಗ ಕುಡಿಯಲು ಕೊಡುತ್ತಿದ್ದೆ.

ಈ ಯಾವ ತಾಪತ್ರಯಗಳೂ ಬೇಡವೆಂದು ಕೆಲವೊಮ್ಮೆ ಕಲಾವಿದರನ್ನು ನಾನಿದ್ದ ಮಾನಸಗಂಗೋತ್ರಿಯ ಸ್ನಾತಕೋತ್ತರ ವಿಶ್ವವಿದ್ಯಾನಿಲಯಕ್ಕೆ ಕರೆದುಕೊಂಡು ಹತ್ತಾರು ದಿನಗಳು ಜೊತೆಯಲ್ಲಿಟ್ಟುಕೊಂಡು ಕ್ಷೇತ್ರಕಾರ್ಯದ ತರುವಾಯ ಅವರನ್ನು ಬೀಳ್ಕೊಡುತ್ತಿದ್ದೆ.

ನಾನು ಉಪನ್ಯಾಸಕನಾಗಿ ನೇಮಿತನಾದ ಮೇಲೆ ಕಲಾವಿದರು ನಾವಿರುವ ಮನೆಗೆ ಬಂದು ನನ್ನ ಜೊತೆಯಲ್ಲಿದ್ದು ದಿನಬೆಳಗೆಲ್ಲ ಹಾಡಿ ಬರೆದುಕೊಳ್ಳಲು ಸಹಕರಿಸುತ್ತಿದ್ದರು.

ನಾನು ಕಂಡ ನೂರಾರು ಕಲಾವಿದರಲ್ಲಿ ಒಂದೆರಡು ಮೂರು ಕಲಾವಿದರನ್ನು ಬಿಟ್ಟರೆ ಉಳಿದ ಕಲಾವಿದರು ಹೃದಯ ಸಂಪನ್ನರಾಗಿ ನಡೆದುಕೊಂಡಿದ್ದಾರೆ. ಅವರಿಂದ ನಾನು ೧೯೭೦ ರಿಂದ ೧೯೮೦ರ ಅಂತರದಲ್ಲಿ ಸಂಗ್ರಹಿಸಿದ ಜಾನಪದದ ವೈವಿಧ್ಯಮಯ ಮಾಹಿತಿಗಳನ್ನು ನನ್ನ ಜೀವನ ಪರ್ಯಂತ ಸಂಪಾದಿಸಿ ಪ್ರಕಟಿಸಿದರೂ ಅದು ಮುಗಿಯದ ಅಕ್ಷಯ ಭಂಡಾರ! ಇಂಥ ಕಲಾವಿದ ವಿಭೂತಿಗಳಿಗೆ ನಾನು ಜೀವನ ಪರ್ಯಂತ ಆಭಾರಿಯಾಗಿದ್ದೇನೆ. ಏಕೆಂದರೆ ಇವರು ನೀಡಿದ ಮಾಹಿತಿಗಳ ಸಂಪತ್ತಿನ ಮುಂದೆ ನಾನು

ಕ್ಷೇತ್ರಕಾರ್ಯ ಸಂದರ್ಭದಲ್ಲಿ ಅನುಭವಿಸಿದ ಕಷ್ಟನಷ್ಟಗಳ್ಯಾವುವೂ ದೊಡ್ಡದೆನಿಸಿಲ್ಲ. ಆದ್ದರಿಂದ ಕ್ಷೇತ್ರಕಾರ್ಯ ಸಂದರ್ಭದ ಮಾನಾಪಮಾನ ಅಥವಾ ಕಷ್ಟನಷ್ಟಗಳನ್ನು ವರ್ಣರಂಜಿತವಾಗಿ ಹೇಳುವುದು ನನಗೆ ಇಷ್ಟವಾಗುತ್ತಿಲ್ಲ.

೩. **ತಮ್ಮ ಜನಪದ ಮಾಹಾಕಾವ್ಯ ಸಂಪದನಾಕಾರ್ಯ ಇಡೀ ಜಾನಪದ ಕ್ಷೇತ್ರದಲ್ಲಿಯೇ ಮಹತ್ವದ್ದು ಮತ್ತು ಚಾರಿತ್ರಿಕವಾಗಿ ದಾಖಲಾರ್ಹವಾದದ್ದು. ಇಂಥ ಸಂಪಾದನಾಕಾರ್ಯದ ನಡುವೆ ತಮ್ಮೊಳಗೆ ಸೃಜನಶೀಲ ಬರಹಗಾರ ಕಳೆದುಹೋಗಿದ್ದಾನೆ ಎಂಬುದರ ಬಗೆಗೆ ತಮ್ಮ ಅಭಿಪ್ರಾಯ ಸಾರ್?**

ನಾನು ಕವಿತಾ ರಚನೆಯ ಮೂಲಕವೇ ಸಾಹಿತ್ಯಲೋಕವನ್ನು ಪ್ರವೇಶಿಸಿದವನು. ಬಿ.ಎ. ವಿದ್ಯಾರ್ಥಿಯಾಗಿದ್ದಾಗಲೆ 'ಮಾನಸದೀಪ್ತಿ' ಎಂಬ ಸ್ವತಂತ್ರ ಕವಿತೆಗಳನ್ನು ಹಾಗೂ 'ಪ್ರತಿಬಂಬ' ಎಂಬ ಇಂಗ್ಲೀಷ್ ಕವಿತೆಗಳ ಅನುವಾದ ಸಂಕಲನಗಳನ್ನು ಪ್ರಕಟಿಸಿದ್ದೆ.

ನಾನು ಕನ್ನಡ ಎಂ.ಎ. ವಿದ್ಯಾರ್ಥಿಯಾಗಿ ಬಂದಾಗ ಪ್ರೊ. ರಾಗೌ ಅವರ ಆದೇಶದಂತೆ ಜಾನಪದವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡೆ. ಜಾನಪದದ ಹಿನ್ನೆಲೆಯಲ್ಲಿ ಬೆಳೆದಿದ್ದ ನನಗೆ 'ನಮ್ಮನ್ನು ನಾವೇ ಹೀಗೆ ಅಧ್ಯಯನ ಮಾಡಬಹುದು' ಎಂಬ ಬೆರಗು ನನಗಾಯಿತು. ಆವರೆಗೆ ಕಥೆಗಾರನೂ ಆಗಿದ್ದ ನಾನು 'ದೀವಟಿಗ' 'ಅನುಮಾನ' 'ನೆತ್ತರ ಹನಿಗಳು' 'ರತ್ನಂ' 'ತಾಯಿದೇವರು' ಎಂಬ ಕಥೆಗಳನ್ನು ಬರೆದಿದ್ದೆ. ಇವು ಶಾಲಾಕಾಲೇಜು ಸಂಚಿಕೆಗಳಲ್ಲಿ ಪ್ರಕಟವಾಗಿದ್ದವು. ಆದರೆ ಜಾನಪದ ನನ್ನನ್ನು ಪರಿಪೂರ್ಣವಾಗಿ ಸೆಳೆದುಕೊಳ್ಳುತ್ತಿದೆ ಎನಿಸಿತು. ಮೊದಮೊದಲು ಸೃಜನಶೀಲ ಬರಹಗಳಿಂದ ದೂರವಾಗುತ್ತಿದ್ದೇನೆ ಎಂಬ ಆತಂಕ ತಲೆದೋರಿದರೂ ಇಂಥ ಸಾಹಿತ್ಯವನ್ನು ಯಾರು ಬೇಕಾದರೂ ಬರೆದಾರು. ಆದರೆ ಒಬ್ಬೊಬ್ಬ ಜನಪದ ಮಹಾನ್ ಗಾಯಕನನ್ನು ಕಳೆದುಕೊಂಡಾಗ ಅಂಥಾ ವಕ್ತೃಗಳು ಮತ್ತೆ ಹುಟ್ಟಿಬರಲು ಸಾಧ್ಯವೆ? ಎಂಬ ಪ್ರಶ್ನೆ ಹಿಮಾಲಯದೆತ್ತರ ಬೆಳೆದು ನಿಂತಿತು. ಆಗ ಜಾನಪದದ ಕಾರ್ಯವೇ ತುರ್ತಾಗಿ ಆಗಬೇಕಾದುದು ಎಂಬ ಅರಿವು ಮೂಡಿ ನನ್ನನ್ನು ಜಾನಪದಕ್ಕೆ ಪರಿಪೂರ್ಣವಾಗಿ ಅರ್ಪಿಸಿಕೊಂಡೆ. ಇವುಗಳನ್ನು ಸಂಗ್ರಹ ಮತ್ತು ಪ್ರಕಟಣೆಗಳಿಗೆ ನನ್ನ ವೇತನವನ್ನು ಮೀಸಲಿಟ್ಟೆ. ಈ ನಡುವೆಯೂ ಮಾನಸದೀಪ್ತಿ 'ಪ್ರತಿಬಿಂಬ' ಗಳಲ್ಲದೆ 'ಸ್ವಾತಿಮುತ್ತುಗಳು' (ಸಂಸ್ಕೃತ ಸುಭಾಷಿತಗಳ ಅನುವಾದ) 'ನಾನಲ್ಲದ ನಾನು' (ಸ್ವತಂತ್ರ ಕವಿತೆಗಳು) ಹಾಗೂ 'ಸುಪ್ರೀತಿ' (ಸಾನೆಟ್‌ಗಳ ಸಂಕಲನ)ಗಳನ್ನು ಪ್ರಕಟಿಸಿದೆ.

ಇಷ್ಟಾದರೂ ಜಾನಪದವೇ ನನಗೆ ಅತ್ಯಂತ ಪ್ರಿಯವಾದ ವಿಷಯವಾಯಿತು.

ಅದರಲ್ಲೂ ಜನಪದ ಮಹಾಕಾವ್ಯ ಪ್ರಕಾರವನ್ನು ಕ್ಷೇತ್ರ ಸಂಶೋಧನೆಯಿಂದ ಬೆಳಕಿಗೆ ತಂದ ಹೆಮ್ಮೆ ನನ್ನದಾಗಿದೆ. ಅದಕ್ಕೆ ಒದಗಿಬಂದ ಅವಕಾಶವನ್ನು ನಾನಿಲ್ಲಿ ಹೇಳಲೇಬೇಕು :

ಆಗಿನ್ನು ನಾನು ಎಂ.ಎ. ತರಗತಿಯ ವಿದ್ಯಾರ್ಥಿಯಗಿದ್ದೆ. ನಮ್ಮ ಪಠ್ಯಕ್ರಮದಲ್ಲಿ ಎಪಿಕ್ (ಮಹಾಕಾವ್ಯ) ಅಧ್ಯಯನದ 'ಸ್ಪೆಷಲ್ ಫಾರಂ' ಆಗಿತ್ತು. ಎಪಿಕ್ ಕುರಿತು ಪಾಠ ಮಾಡುವಾಗ ಪ್ರೊ. ಸಿ.ಪಿ.ಕೆ. ಯವರು ಫಿನ್ಲೆಂಡಿನ 'ಕಾಲೆವಾಲ'ದ ಬಗೆಗೆ ಮಾತಾಡುತ್ತ,

"ಕನ್ನಡದಲ್ಲಿ ಜನಪದ ಮಹಾಕಾವ್ಯಗಳಿವೆಯೆ? ಗೊತ್ತಿಲ್ಲ. ಬಹುಶಃ ವ್ಯಾಪಕವಾದ ಕ್ಷೇತ್ರಕಾರ್ಯದಿಂದ ಕಂಡುಕೊಳ್ಳಬೇಕಾಗಿದೆ. ಕನ್ನಡದಲ್ಲಿ ಜನಪದ ಮಹಾಕಾವ್ಯಗಳನ್ನು ಕ್ಷೇತ್ರಸಂಶೋಧನೆಯಿಂದ ಕಂಡು ಹಿಡಿದು ಸಂಗ್ರಹಿಸಿ ಪ್ರಕಟಿಸುವ ಸುಯೋಗ ಯಾರ ಪಾಲಿಗಿದೆಯೋ ಗೊತ್ತಿಲ್ಲ. ಕಾದು ನೋಡೋಣ" ಎಂದರು. ಈ ಮಾತು ನನ್ನ ಮನಸ್ಸನ್ನು ಸ್ಥಿರವಾಗಿ ನಾಟಿತು. ಅಂದು 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು' ಎಂಬ ವಿಷಯದ ಬಗೆಗೆ ಪಿಎಚ್.ಡಿ. ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದ ಪ್ರೊ. ಜೀಶಂಪ ಅವರ ಮಹಾಪ್ರಬಂಧವನ್ನು ಆಮೂಲಾಗ್ರವಾಗಿ ಓದಿದೆ. ಅದರಲ್ಲೆಲ್ಲೂ ಜನಪದ ಮಹಾಕಾವ್ಯದ ಪ್ರಸ್ತಾಪ ಇರಲಿಲ್ಲ. ಹೀಗಾಗಿ ನನ್ನ ಕುತೂಹಲದ ಹಸಿವು ಹೆಚ್ಚ ತೊಡಗಿತು.

ನಾನು ಎಂ.ಎ. ಮುಗಿಸಿ ಕನ್ನಡ ಅಧ್ಯಯನ ಸಂಸ್ಥೆಯಲ್ಲೇ ಸಂಶೋಧನಾ ವಿದ್ಯಾರ್ಥಿಯಾಗಿ ಸೇರಿದೆ. ನನ್ನ ಸಂಶೋಧನಾ ವಿಷಯ 'ದಕ್ಷಿಣ ಕರ್ನಾಟಕದ ಜನಪದ ಪುರಾಣಗಳು' ಎಂಬುದಾಗಿತ್ತು. ಈ ವಿಷಯಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಕಲೆಹಾಕಲು ಬೇರೆ ಬೇರೆ ಕಡೆಗೆ ಹೋಗುತ್ತಿದ್ದೆ. ಹೀಗೇ ಒಮ್ಮೆ ಮಾದೇಶ್ವರನ ಬೆಟ್ಟಕ್ಕೂ ಹೋದೆ. ಅದು ಅಮವಾಸ್ಯೆ ಜಾತ್ರೆ, ಎಲ್ಲೆಲ್ಲು ದೇವರ ಗುಡ್ಡರು, ಎಲ್ಲರ ಕೈಯಲ್ಲೂ ಕಂಸಾಳೆ, ಎಲ್ಲರ ಬಾಯಲ್ಲೂ ಮಾದಪ್ಪ! ನಾನು ಕುತೂಹಲದಿಂದ ಆ ಕಲಾವಿದರನ್ನೆಲ್ಲ ಗಮನಿಸುತ್ತ ಅವರ ಗಾಯನವನ್ನು ಕೇಳುತ್ತಿರುವಾಗ ಪ್ರೊ. ಜೀಶಂಪ ಅವರು ಮಾದೇಶ್ವರನ ಕಾವ್ಯದಲ್ಲಿ ಏಳು ಕಥಾಭಾಗಗಳಿವೆ ಎಂದು ಹೇಳಿದ್ದಕ್ಕಿಂತಲೂ ಹೆಚ್ಚು ಕಥಾಭಾಗಗಳಿವೆ ಎಂದು ತಿಳಿಯಿತು. ನಾನು ಅವುಗಳನ್ನು ಸಂಗ್ರಹಿಸಿಕೊಳ್ಳಬೇಕೆಂದು ನಿರ್ಧರಿಸಿದೆ. ದುಂಡಮ್ಮನ ಸಾಲು, ಪಂಚಲಿಂಗ ಮಾದಪ್ಪನ ಸಾಲು, ಕಾರಯ್ಯ ಬಿಲ್ಲಯರ ಸಾಲು, ನಾಗುಮಲೆಯಲಿ ನೆಲೆಗೊಂಡ ಸಾಲು, ಬುರ್ಗದ ಮಲ್ಲಮ್ಮನ ಸಾಲು – ಹೀಗೆ ಕಥೆ ಬೆಳೆಯುತ್ತ ಹೋಯಿತು. 'ಮಲೆಯ ಮಾದೇಶ್ವರ' ಮಹಾಕಾವ್ಯದಲ್ಲಿ ಆವರೆಗೆ ಭಾವಿಸಿದ್ದಂತೆ

ಏಳು ಕಥಾಭಾಗಗಳಲ್ಲ ಹದಿನಾಲ್ಕು ಕಥಾಭಾಗಗಳಿವೆ ಎಂಬುದು ತಿಳಿಯಿತು. ಹೀಗೆ ವ್ಯಾಪಕವಾದ ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಸರಕನ್ನೆಲ್ಲ ಮಾಸಿಕ ವರದಿಯ ಜೊತೆಗೆ ಸಂಸ್ಥೆಯ ನಿರ್ದೇಶಕರಾಗಿದ್ದ ಪ್ರೊ. ಹಾ.ಮಾ. ನಾಯಕ ಅವರಿಗೆ ತೋರಿಸಿದೆ. ಆ ದಪ್ಪಗಾತ್ರದ ಕಟ್ಟನ್ನು ಕಂಡು ಆಶ್ಚರ್ಯಚಕಿತರಾದ ಪ್ರೊ. ಹಾಮಾನಾ ಅವರು 'ಇದನ್ನು ಪ್ರಕಟಿಸಿ' ಎಂದು ಹೇಳಿದ್ದಲ್ಲದೆ ಸಿಂಡಿಕೇಟ್ ಬ್ಯಾಂಕಿನಿಂದ ಸಾಲವನ್ನು ಕೊಡಿಸಿದರು. ಹೀಗಾಗಿ ಕನ್ನಡದ ಮೊದಲ ಜನಪದ ಮಹಾಕಾವ್ಯ ಪ್ರೊ. ಹಾಮಾನಾ ಅವರ ಅಧ್ಯಕ್ಷತೆಯಲ್ಲಿ ಪ್ರೊ. ಎಸ್.ವಿ. ರಂಗಣ್ಣನವರಿಂದ ದಿನಾಂಕ: ೧೮.೦೬.೧೯೭೩ರಂದು ಪ್ರಕಟವಾಯಿತು. ಪ್ರೊ. ಹಾ.ಮಾ. ನಾಯಕರು ಈ ಮಹಾಕಾವ್ಯವನ್ನು ಕುರಿತು,

> "ಕನ್ನಡ ಜಾನಪದದಲ್ಲಿ ಇಷ್ಟುಗಾತ್ರದ ಪುಸ್ತಕವೊಂದು ಹೊರಬರುತ್ತಿರುವುದು ಇದೇ ಮೊದಲು. ಜಗತ್ತಿನ ಹೆಸರಾಂತ ಜನಪದ ಮಹಾಕಾವ್ಯ ಫಿನ್ಲೆಂಡಿನ 'ಕಾಲೇವಾಲ'ಕ್ಕೆ ಹೋಲಿಸಿಕೊಂಡರೆ ಇದು ಅದಕ್ಕಿಂತಲೂ ದೊಡ್ಡದಾಗುತ್ತದೆ. ಭಾರತದ ಯಾವುದೇ ಭಾಷೆಯಲ್ಲಿ ಈ ಬಗೆಯ ಕೃತಿ ಪ್ರಕಟವಾದಂತಿಲ್ಲ. ಸಮರ್ಪಕ ರೀತಿಯಲ್ಲಿ ಅತ್ಯಂತ ಸಮರ್ಥವಾಗಿ ಸಂಪಾದಿತವಾಗಿರುವ ಇದು ಜಾನಪದ ಕ್ಷೇತ್ರದಲ್ಲಿ ಒಂದು ಮಹತ್ವದ ಮೈಲಿಗಲ್ಲಾಗಿದೆ".

ಎಂದು ಬರೆದರು. ನಾನು ಸೃಜನಶೀಲ ಬರಹಗಾರನಾಗಿದ್ದರೂ ಈ ಎತ್ತರಕ್ಕೆ ಹೋಗುತ್ತಿರಲಿಲ್ಲ. 'ಮಲೆಯ ಮಾದೇಶ್ವರ' ಜನಪದ ಮಹಾಕಾವ್ಯದ ಪ್ರಕಟಣೆಯಿಂದ ಬೆಳಗಾಗುವುದರಲ್ಲಿ ನಾಡಿನ ತುಂಬ ಹೆಸರಾಗಿದ್ದೆ. ಇದರಿಂದ ನನ್ನ ಜಾನಪದ ಪ್ರೀತಿ ಮತ್ತೂ ಸ್ಥಿರವಾಯಿತು. ಇದರಿಂದ ಉತ್ತೇಜಿತನಾದ ನಾನು ಇದೇ ಪ್ರಮಾಣದ 'ಜನಪದ ಮಹಾಭಾರತ' 'ಜನಪದ ಶರಣ ಕಾವ್ಯಗಳು' ಜೊತೆಗೆ ಜಾನಪದದ ವೈವಿಧ್ಯಮಯ ವಿಷಯಗಳನ್ನೊಳಗೊಂಡ ಎಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದೇನೆ. ಇನ್ನೂ ಪ್ರಕಟವಾಗಬೇಕಿರುವ ಸಾಮಗ್ರಿ ಸಾಕಷ್ಟಿದೆ. ಸೃಜನಶೀಲ ಸಾಹಿತಿಯಾಗಿ ನಾನು ಕುವೆಂಪು, ಬೇಂದ್ರೆ, ಕಾರಂತರ ಎತ್ತರಕ್ಕೆ ಏರಲು ಖಂಡಿತ ಸಾಧ್ಯವಿರಲಿಲ್ಲ. ಆದರೆ ಜಾನಪದ ನನಗೆ ಹೆಸರು, ಕೀರ್ತಿ, ಪ್ರಶಸ್ತಿ, ಪ್ರತಿಷ್ಠೆ, ಸ್ಥಾನಮಾನ, ಗೌರವಾದರಗಳನ್ನು ತಂದುಕೊಟ್ಟಿದೆ. ಇವು ನನಗೆ ಸೃಜನಶೀಲ ಲೇಖಕನಾಗುವುದಕ್ಕಿಂತಲೂ ಹೆಚ್ಚಿನ ತೃಪ್ತಿಯನ್ನು ತಂದುಕೊಟ್ಟಿದೆ.

೪. **'ಹೊನ್ನಾರು ಜನಪದ ಗಾಯಕರು' ವೃಂದವನ್ನು ಕಟ್ಟಿ ತಾವು ನಾಡಿನ ತುಂಬ ಸಂಚರಿಸಿದಿರಿ. ಮೂಲಮಟ್ಟುಗಳನ್ನು ಉಳಿಸಿಕೊಂಡ ತಾವು ಹಾಡಲು ಪ್ರಾರಂಭಿಸಿದ್ದು ಗಮನಾರ್ಹ ಸಂಗತಿಯೆ! ಜಾನಪದ ಕೆಲಸಕಾರ್ಯಗಳ ವಿಸ್ತರಣೆಯಲ್ಲಿ ತಮ್ಮ ಪಾತ್ರದ ವಿಸ್ತರಣೆಯ ಕುರಿತು ಸಮಗ್ರ ಚಿತ್ರಣ ನೀಡಿರಿ ಸಾರ್.**

ಕನ್ನಡ ಜಾನಪದ ಕೆಲಸ-ಕಾರ್ಯಗಳ ವಿಸ್ತರಣೆಯಲ್ಲಿ ನನ್ನ ಪಾತ್ರವನ್ನು ನಾನೇ ಹೇಳಿಕೊಂಡಲ್ಲಿ ಅದು ಅಹಂಕಾರದ ಮಾತಾದೀತು. ನೀವು ಪ್ರಶ್ನೆ ಕೇಳಿರುವುದರಿಂದ ಕೆಲವು ಮಾತುಗಳನ್ನು ಅನಿವಾರ್ಯವಾಗಿ ಹೇಳಬೇಕಾಗಿದೆ. ನಾನು ೧೯೭೩ರಲ್ಲಿ ಜನಪದ ಮಹಾಕಾವ್ಯ 'ಮಲೆಯ ಮಾದೇಶ್ವರ'ವನ್ನು ಪ್ರಕಟಿಸುವವರೆಗೂ ಕನ್ನಡದಲ್ಲೂ ಜನಪದ ಮಾಹಾಕಾವ್ಯಗಳಿವೆ ಎಂಬ ಕಲ್ಪನೆ ಇರಲಿಲ್ಲ. 'ಮಲೆಯ ಮಾದೇಶ್ವರ' ಪ್ರಕಟಣೆಯ ನಂತರ ವಿದ್ವಾಂಸರುಗಳೆಲ್ಲ ಜನಪದ ಮಹಾಕಾವ್ಯಗಳ ಶೋಧದಲ್ಲಿ ತೊಡಗಿದುದರ ಫಲವಾಗಿ ಹತ್ತಾರು ಜನಪದ ಮಹಾಕಾವ್ಯಗಳು ಇಂದು ಪ್ರಕಟವಾಗಿವೆ. 'ಮಲೆಯ ಮಾದೇಶ್ವರ' ಪ್ರಕಟಣೆ ಜನಪದ ಮಹಾಕಾವ್ಯಗಳ ಪ್ರಕಟಣಾ ಸುಗ್ಗಿಗೆ ಕಾರಣವಾದುದು ನನಗೆ ಹೆಮ್ಮೆಯೆನಿಸಿದೆ. ೨೮ ಕಾವ್ಯಗಳಿರುವ 'ಜನಪದ ಶರಣಕಾವ್ಯಗಳು' ಮತ್ತು 'ಜನಪದ ಮಹಾಭಾರತಗಳನ್ನು ಅಜ್ಞಾತವಲಯದಿಂದ ಬೆಳಕಿಗೆ ತಂದುದು ಸಾಮಾನ್ಯ ವಿಚಾರವೆಂದು ನಾನು ಭಾವಿಸಿಲ್ಲ.

ಜನಪದ ಸಂಗೀತದ ಬಗೆಗೆ ಹೊನ್ನಾರು ಜನಪದ ಗಾಯನ ವೃಂದದ ಕಾರಣದಿಂದ ಒಂದೆರಡು ಮಾತು ಹೇಳುವ ಅಗತ್ಯವಿದೆ. ನಮಗೆ ಜಾನಪದ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದ ಪ್ರೊ. ಜೀಶಂಪ ಅವರು ಕ್ಷೇತ್ರಕಾರ್ಯದ ಬಗೆಗೆ ಹೇಳುವಾಗ ಮೂಲಭಾಷೆ ಮತ್ತು ಮೂಲ ಮಟ್ಟುಗಳ ಬಗೆಗೆ ಒತ್ತಿ ಒತ್ತಿ ಹೇಳುತ್ತಿದ್ದರು. ಅವರ ಮಾತುಗಳು ನನ್ನ ಮೇಲೆ ಗಾಢವಾದ ಪ್ರಭಾವ ಬೀರಿದವು. ಹಾಗಾಗಿ ಮೂಲಭಾಷೆ ಮತ್ತು ಮೂಲಮಟ್ಟುಗಳ ಬಗೆಗೆ ತೀವ್ರ ನಿಗಾ ವಹಿಸಿದೆ. ಪಿ. ಕಾಳಿಂಗರಾವ್, ಕರೀಂಖಾನ್ ಅವರ ಕಾಲದಿಂದ ಆವತ್ತಿನವರೆಗೂ ನಗರಗಳಲ್ಲಿ ಜನಪದ ಗೀತೆಗಳು ಕೃತಕ ಧಾಟಿಗಳಲ್ಲಿ ವಿಜೃಂಭಿಸುತ್ತಿದ್ದವು. ಅಲ್ಲದೆ ಆವರೆಗೆ ಯಾರೂ ವೃತ್ತಿಗಾಯಕರ ಹಾಡುಗಳನ್ನು ನಾಗರಿಕ ವೇದಿಕೆಯಲ್ಲಿ ಹಾಡಿರಲಿಲ್ಲ. ೧೯೭೦ರಲ್ಲಿ ವೃತ್ತಿಗಾಯಕರಾದ ದೇವರಗುಡ್ಡರು ಹಾಡುತ್ತಿದ್ದ 'ಬೆಟ್ಟದ ಚಾಮುಂಡಿ' ಕಾವ್ಯದಲ್ಲಿನ 'ಚಾಮುಂಡಿಯ ಪ್ರಣಯ ರಾಯಭಾರಿ ಉತ್ತನಳ್ಳಿ ಮಾರಿ' ಹಾಡುವ ಹಾಡು ಹಾಗೂ 'ಮಲೆಯ ಮಾದೇಶ್ವರ' ಮಹಾಕಾವ್ಯದ ಸತ್ಯಶರಣೆ ಸಂಕಮ್ಮನ 'ಬಲಗೈ

ಭಾಷೆ ಕವಟ್ಲು' ಹಾಡಿದಾಗ ಕೇಳಿದ ಸಹೃದಯರಿಂದ ಒಳ್ಳೆ ಪ್ರತಿಕ್ರಿಯೆ ಬಂದುದರಿಂದ ಜನಪದ ಸಾಹಿತ್ಯ ಮತ್ತು ಮೂಲಮಟ್ಟುಗಳ ಪ್ರಸಾರ ಮತ್ತು ಪ್ರಚಾರಕ್ಕಾಗಿ 'ಹೊನ್ನಾರು ಜನಪದ ಗಾಯಕರು' ಸಂಸ್ಥೆಯನ್ನು ನನ್ನ ಗೆಳೆಯರ ಜೊತೆಗೂಡಿ ಹುಟ್ಟುಹಾಕಿದೆ. ನಾಡಿನಾದ್ಯಂತ ಸಾವಿರಾರು ಕಾರ್ಯಕ್ರಮಗಳನ್ನು ನೀಡಿ ಮೂಲ ಸಾಹಿತ್ಯ ಮೂಲಮಟ್ಟುಗಳ ಬಗೆಗೆ ಜಾಗೃತಿ ಮೂಡಿಸಿದೆವು. ಆದಿಸಂಸ್ಕೃತಿಯ ನೆಲೆಯಂತಿರುವ ಅನಕ್ಷರಸ್ಥ ಗ್ರಾಮಗಳಿಂದ ಹಿಡಿದು ಆಧುನಿಕತೆಯ ಆರ್ಭಟವಿರುವ ಅಮೆರಿಕೆಯವರೆಗೂ ನಮ್ಮ ವೃಂದ ಹಾಡಿ ಹೆಮ್ಮೆ ಪಟ್ಟುಕೊಂಡಿತು.

ಈ ಹೊತ್ತು ಎಲ್ಲೆಲ್ಲೂ ವೃತ್ತಿಗಾಯಕರ ಹಾಡುಗಳು ಶಾಲಾ ಕಾಲೇಜಾದಿಯಾಗಿ ಎಲ್ಲ ಕಡೆಯೂ ಕೇಳಿಬರುತ್ತಿವೆ. ಇದು ಹೊನ್ನಾರು ಜನಪದ ಗಾಯಕರ ಸಾಧನೆ ಎಂದರೆ ಏನೇನೂ ತಪ್ಪಲ್ಲ.

ವೃತ್ತಿಗಾಯಕರ ಕಾವ್ಯಗಳನ್ನು ಬರೆದುಕೊಳ್ಳುವಲ್ಲಿ ಇದ್ದ ತೊಡಕೆಂದರೆ ಅದರಲ್ಲಿರುವ ಪದ್ಯಗಂಧಿ ವಚನ, ಈ ವಚನ, ಸೊಲ್ಲು (=ಶಿಷ್ಟ ಸಂಗೀತದಲ್ಲಿ ಪಲ್ಲವಿ) ನಡೆಸೊಲ್ಲು (=ಶಿಷ್ಟ ಸಂಗೀತದಲ್ಲಿ ಅನುಪಲ್ಲವಿ) ನಿಡುಸೊಲ್ಲು (=ಮುಂದುವರೆದ ಪಲ್ಲವಿ ಅಥವಾ ಮಹಾಪಲ್ಲವಿ) ಈ ಎಲ್ಲವನ್ನೂ ರೂಢಿಗೆ ತಂದು ತೊಡಕನ್ನು ಪರಿಹರಿಸಿಕೊಂಡೆ. ಅನಂತರ ಎಲ್ಲರೂ ಇದನ್ನು ಅನುಸರಿಸಿದರು.

ನನ್ನ ಪ್ರಕಟಣೆಗಳಲ್ಲಿರುವ ವೈವಿಧ್ಯಮಯ ವಿಷಯಗಳನ್ನು ತಾವು ಗಮನಿಸಬೇಕು.

ನಾನು ತಪ್ಪದೆ ಹೇಳಬೇಕಾದ ವಿಷಯ ಒಂದಿದೆ. ನಾನು ಚಿಕ್ಕಂದಿನಿಂದಲೂ ಅಷ್ಟಿಷ್ಟು ಹಾಡಿಕೊಳ್ಳುತ್ತಿದ್ದೆ. ಅದು ಜನಪದ ಗೀತೆಗಳನ್ನು ಹಾಡಲು ಹಾದಿ ತೋರಿಸಿತು. ಹೀಗೆ ಜನಪದ ಗೀತೆಗಳನ್ನು ಹಾಡುತ್ತಲೇ ನಾನು ನಾಡ ತುಂಬ ಹೆಸರಾದೆ. ಕೇವಲ ವಿದ್ವಾಂಸರುಗಳಿಗಿಲ್ಲದ ಈ ಒಂದು ಉಪಾಧಿಯೂ ನನ್ನ ಜನಪ್ರಿಯತೆಗೆ ಕಾರಣವಾಯಿತು.

ಅಲ್ಲದೆ ಹೊನ್ನಾರು ಜನಪದ ಗಾಯನ ವೃಂದ ೧೯೭೦ರಿಂದ ಇಂದಿನವರೆಗೂ ಮೂಲ ಮಟ್ಟುಗಳ ಬಗೆಗೆ ಅಸಿಧಾರಾವ್ರತಿಯಂತೆ ನಡೆದುಕೊಂಡು ಬಂದಿದೆ. ಹೀಗೆ ಜನಪದ ಮೂಲ ಸಾಹಿತ್ಯ ಮತ್ತು ಮೂಲ ಮಟ್ಟುಗಳನ್ನು ಉಳಿಸಿ ಬೆಳಸಿಕೊಂಡು ಬರುವ- ಅಂದರೆ- ವಿಸ್ತರಣೆ ಕಾರ್ಯವೂ ನಮ್ಮ ವೃಂದದಿಂದ ನಡೆದಿದೆ.

೫. **ಜಾನಪದ ಕ್ಷೇತ್ರದಲ್ಲಿ ತೊಡಗಿಕೊಂಡ ಯುವಕರಿಗೆ ಅನೇಕ ಸಮಸ್ಯೆ ಮತ್ತು ಸವಾಲುಗಳು ಇವೆ. ತಮ್ಮ ಅಪಾರವಾದ ಓದು, ಶ್ರದ್ಧೆ, ಕ್ಷೇತ್ರಕಾರ್ಯ ಒಟ್ಟಾರೆ ಅನುಭವದಿಂದ ತಾವು ಏನು ಹೇಳಲು ಇಷ್ಟ ಪಡುತ್ತೀರಿ?**

ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡಲು ಹೋದಾಗಲೂ ಸಮಸ್ಯೆಗಳು ಹಾಗೂ ಸವಾಲುಗಳು ಎಲ್ಲ ಕಾಲದಲ್ಲೂ ಇರುವಂಥವೆ. ಜಾನಪದಕ್ಕೆ ತನ್ನನ್ನು ಮನ:ಪೂರ್ವಕವಾಗಿ ಅರ್ಪಿಸಿಕೊಳ್ಳುವ ದಕ್ಷ ಯುವಕರಿಗೆ ಯಾವುದೇ ಸಮಸ್ಯೆಯಾಗಲಿ ಯಾವುದೇ ಸವಾಲಾಗಲಿ ಘೋರ ಎನಿಸುವುದಿಲ್ಲ. ಅಂಥವರು ಬಂದ ಸಮಸ್ಯೆಗಳನ್ನೂ ಸವಾಲುಗಳನ್ನೂ ಸಮಯ ಸಂದರ್ಭ ನೋಡಿ ಚಾಕಚಕ್ಯತೆಯಿಂದ ಪರಿಹರಿಸಿಕೊಳ್ಳಬೇಕಾಗುತ್ತದೆ.

ನಾನಂತೂ ಹಲವಾರು ಸಮಸ್ಯೆಗಳ ತೊಡಕಿಗೆ ಸಿಕ್ಕಿಕೊಂಡರೂ ಅವುಗಳನ್ನು ಸವಾಲಾಗಿ ಸ್ವೀಕರಿಸಿ ಧೈರ್ಯದಿಂದ ಎದುರಿಸಿದ್ದೇನೆ.

ಜನಪದ ಮಹಾಕಾವ್ಯ 'ಮಲೆಯ ಮಾದೇಶ್ವರ'ದ ಪ್ರಕಟಣೆಯ ಸಂದರ್ಭದಲ್ಲೆ ಆ ಕೃತಿಯನ್ನು ಪ್ರಕಟಿಸಲು ಪ್ರೊ. ಹಾ.ಮಾ. ನಾಯಕ ಅವರನ್ನು ಕಾರ್ಯಕ್ರಮಕ್ಕೆ ಬರದಂತೆ ತಡೆಯುವ ಪ್ರಯತ್ನ ನಡೆಯಿತು. ನ್ಯಾಯ ಪಕ್ಷಪಾತಿಗಳಾದ ಪ್ರೊ. ಹಾ.ಮಾ. ನಾಯಕರು ಔದಾರ್ಯಪೂರ್ಣ ಹೃದಯದಿಂದ ಆ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಇದರಿಂದ ಹತಾಶರಾದವರು ಮತೀಯ ಶಕ್ತಿಗಳನ್ನು ಎತ್ತಿಕಟ್ಟಿದರು. ಮಠವೊಂದು ನನ್ನ ಕೃತಿಯ ೨೦೦ ಪ್ರತಿಗಳನ್ನು ಕೊಳ್ಳುವುದಾಗಿ ಹೇಳಿತ್ತು. ಆದರೆ ಮತೀಯ ಶಕ್ತಿಗಳ ಕೈವಾಡದಿಂದ ಅವರು ಕೊಳ್ಳಲು ನಿರಾಕರಿಸಿ ಪುಸ್ತಕಗಳನ್ನು ಹಿಂದಿರುಗಿಸಿದರು.

ಈ ಸಮಯದಲ್ಲಿ ಕುಂತೂರಿನಲ್ಲಿರುವ ಕೆ.ಬಿ.ಕೆ.ಎಸ್. ರಾಯಭಾಗಕರ ಎಂಬುವರು ಮೈಸೂರಿನ ಅಡ್ವೋಕೇಟ್ ಎಂ.ಬಿ. ಸದಾಶಿವಮೂರ್ತಿಯವರ ಮೂಲಕ ಮಾದೇಶ್ವರನ ಬಗೆಗಿನ ಕೆಲವು ಅಭಿಪ್ರಾಯಗಳನ್ನು ವಿರೋಧಿಸಿ ದಿನಾಂಕ: ೦೩.೦೭.೧೯೭೪ರಂದು ನೋಟೀಸ್ ಜಾರಿ ಮಾಡಿದರು. ಈ ಸಂದರ್ಭದಲ್ಲಿ ಗುಣಪಕ್ಷಪಾತಿಗಳಾಗಿದ್ದ ಪ್ರೊ. ಹಾ.ಮಾ. ನಾಯಕರು ಅಡ್ವೋಕೇಟ್ ವಿ.ಎಚ್. ಗೌಡ ಅವರಲ್ಲಿಗೆ ಪ್ರೊ. ರಾಗೌ ಅವರೊಡನೆ ನನ್ನನ್ನೂ ಕಳಿಸಿ ಉತ್ತರಿಸಲು ತಿಳಿಸಿದರು. ವಿ.ಎಚ್. ಗೌಡ ಅವರು ಉತ್ತರಿಸಿದ ಮೇಲೆ ಅದು ಅಲ್ಲಿಗೇ ನಿಂತಂತಾಯಿತು.

ಆದರೆ ಹನೂರಿನ ವ್ಯಕ್ತಿಯೊಬ್ಬರು 'ಮಲೆಯ ಮಾದೇಶ್ವರ ಮಹಾಕಾವ್ಯದ ಮಿಥ್ಯಾರೋಪಗಳು' ಎಂಬ ಪುಸ್ತಕವನ್ನು ಪ್ರಕಟಿಸಿ ವಿನಾಕಾರಣ ನನ್ನನ್ನು ದೂರಿ ಅಪಪ್ರಚಾರ ಮಾಡಿದರು. ಆ ಹೊತ್ತಿಗೆ ಡಾ. ಎಚ್.ಎಸ್. ಶಿವಪ್ರಕಾಶ್ ಅವರು ಮಲೆಯ ಮಾದೇಶ್ವರನ ಬಗೆಗೆ ಒಂದು ನಾಟಕ ಬರೆದು ಪ್ರಕಟಿಸಿದ ಮೇಲೆ ವಿವಾದಕ್ಕೆ ಮಂಗಳ ಹಾಡಿದಂತಾಯಿತು.

ಈವರೆಗೂ ಮಾದೇಶ್ವರನ ಕಥೆಗಳು ಏಳು ಮಾತ್ರ ಎಂದು ಹೇಳಿಕೊಂಡು ಬಂದಿದ್ದವರಿಗೆ ಏಳಲ್ಲ-ಹದಿನಾಲ್ಕು ಎಂಬ ಹೇಳಿಕೆಯನ್ನು ಜೀರ್ಣಿಸಿಕೊಳ್ಳಲಾರದೆ ಅಪಪ್ರಚಾರಕ್ಕೆ ತೊಡಗಿದರು. ಏಳೇ ಕಥಾಭಾಗಗಳಾದರೆ ಉಳಿದ ಏಳು ಕಥಾಭಾಗಗಳನ್ನು ಹಾಡಿದ ಕಲಾವಿದರು ಜನಪದ ಕಲಾವಿದರಲ್ಲವೇ? ವ್ಯಾಪಕವಾದ ಕ್ಷೇತ್ರಕಾರ್ಯವನ್ನು ಮಾಡಿದವರು ನಗರದಲ್ಲಿ ಕುಳಿತು ಬಡಬಡಿಸಿದರೆ ಶ್ರಮಪಟ್ಟು ಕ್ಷೇತ್ರಕಾರ್ಯ ಮಾಡಿದ ವ್ಯಕ್ತಿಯ ಶ್ರಮಕ್ಕೆ ಬೆಲೆ ಏನು ಬಂತು? ಇದರ ಜೊತೆಗೆ ಮತ್ತೊಂದು ಅಪಪ್ರಚಾರವೂ ನಡೆಯಿತು. ಏನೆಂದರೆ ಸಮಗ್ರ ಪಾಠದ ನೆವದಲ್ಲಿ ಹಲವಾರು ಪಾಠಗಳನ್ನು ಒಂದರೊಡನೊಂದನ್ನು ಬೆರಸಿದ್ದಾರೆ ಎಂದು. ಕಾಲೇವಾಲವನ್ನು ಸಂಗ್ರಹಿಸಿದ ಲೋನ್‌ರಾಟ್ ಮಾಡಿದ್ದೂ ಹೀಗೆಯೇ ತಾನೆ? ಅದನ್ನೇಕೆ ಪ್ರಶ್ನಿಸುತ್ತಿಲ್ಲ?

ಮತ್ತೊಬ್ಬ ಮಹನೀಯರು 'ಮಲೆಯ ಮಾದೇಶ್ವರ'ದಲ್ಲಿರುವ 'ಉತ್ರಾಜಮ್ಮನ ಸತ್ವಪರೀಕ್ಷೆ ಕವಟ್ಲು' ಒಂದೇ ಪಾಠವನ್ನು ಅವಲಂಬಿಸಿದ್ದಾರೆ. ಹಲವಾರು ಪಾಠಗಳನ್ನು ಸಂಗ್ರಹಿಸಿಕೊಳ್ಳಬೇಕಿತ್ತು ಎಂದು ಹೇಳುತ್ತಾರೆ. ಮೂರು ವರ್ಷಗಳ ಕಾಲ ಪ್ರತಿ ಅಮವಾಸ್ಯೆಯಲ್ಲೂ ಮಾದೇಶ್ವರನ ಬೆಟ್ಟಕ್ಕೆ ಹೋಗಿ ಸಾವಿರಾರು ಕಲಾವಿದರನ್ನು ಕಂಡು ಕೇಳಬಂದ ನನಗೆ ಹೆಚ್ಚು ಪಾಠಗಳು ಸಿಕ್ಕಿದ್ದರೆ ಅವುಗಳನ್ನು ಸಂಗ್ರಹಿಸಲು ಸಾಧ್ಯವಾಗುತ್ತಿರಲಿಲ್ಲವೇ?

ಇದೇ ವಿದ್ವಾಂಸರು 'ಮಾದೇಶ್ವರ ಕಾವ್ಯದ ಶುದ್ಧಪಾಠ ರೂಪಿಸಲು ಮೈಸೂರು, ಮಂಡ್ಯ, ಬೆಂಗಳೂರು ಜಿಲ್ಲೆಗಳಲ್ಲಿ ಮಾತ್ರವಲ್ಲದೇ ಕರ್ನಾಟಕಾದ್ಯಂತ ವ್ಯಾಪಕವಾಗಿ ಕ್ಷೇತ್ರಕಾರ್ಯ ಕೈಗೊಂಡು ಎಲ್ಲ ಭಾಗಗಳ ಸಮಗ್ರ ಪಾಠವನ್ನು ದೊರಕಿಸಿಕೊಂಡು ಅವನ್ನು ಆಶಯಗಳಾಗಿ ವಿಭಜಿಸಿಕೊಂಡು ಅಧ್ಯಯನ ನಡೆಸುವುದು ಕ್ರಮಬದ್ಧವೆನಿಸುತ್ತಿತ್ತು' ಎನ್ನುತ್ತಾರೆ. ವಾಸ್ತವವಾಗಿ ಮಾದೇಶ್ವರನ ಕಾವ್ಯವನ್ನು ಹಾಡುವ ದೇವರಗುಡ್ಡರು ಮೈಸೂರು ಮಂಡ್ಯ, ಬೆಂಗಳೂರು ಜಿಲ್ಲೆಗಳಲ್ಲಿ ಮಾತ್ರ ಇದ್ದಾರೆ ಎಂಬ ಪ್ರಾಥಮಿಕ ಸಂಗತಿಯೂ ಇವರಿಗೆ ತಿಳಿಯದಿರುವುದು ಆಶ್ಚರ್ಯವೆನಿಸುತ್ತದೆ.

ಅಲ್ಲದೆ ಫಿನ್ಲೆಂಡಿನ ಕಾಲೇವಾಲವನ್ನು ದೊಡ್ಡ ದೊಡ್ಡ ವಿದ್ವಾಂಸರ ತಂಡ ಬಹು ಪರಿಶ್ರಮದಿಂದ ಕಲೆಹಾಕಿ ಸಂಪಾದಿಸಿತಂತೆ. ಆದರೆ ಮಲೆಯ ಮಾದೇಶ್ವರ ಮಹಾಕಾವ್ಯವನ್ನು ಒಂಟಿಯಾಗಿ ಸಂಗ್ರಹಿಸಿ ಸಂಪಾದಿಸಿದ್ದರಿಂದ ಅದರಲ್ಲಿ ಇತಿಮಿತಿ ಉಂಟಂತೆ, ಹಾಗಾದರೆ ಒಬ್ಬನಿಂದ ಇಂಥ ಕೆಲಸಗಳು ಅಸಾಧ್ಯವೇ? ವಾಸ್ತವವಾಗಿ ಇದೆಲ್ಲ 'ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು'.

ಮತ್ತೆ ಕೆಲವು ವಿದ್ವಾಂಸರು ಪೂರ್ವಾಪರ ಚಿಂತಿಸದೆ ಥಟ್ಟನೆ ತಮಗೆ

ತೋಚಿದ್ದನ್ನು ಗೀಚಿಬಿಡುತ್ತಾರೆ. ಅಂಥ ಒಂದು ನುಡಿಯನ್ನು ಉದಾಹರಿಸುತ್ತೇನೆ. ಕಾಲೇವಾಲವನ್ನು ಕುರಿತು ನನ್ನ ಲೇಖನದಲ್ಲಿರುವ ಮಾತುಗಳು ಇವು;

"ಲೋನ್‌ರಾಟ್ ಒಬ್ಬ ವಿದ್ವಾಂಸನೇ ಹೊರತು ಕವಿಯಲ್ಲ. ಅವನಿಗೆ ಗೀತೆ ರಚನೆಯ ಸಾಮರ್ಥ್ಯವಿರಲಿಲ್ಲ. ಹಾಗೇನಾದರೂ ಇದ್ದಿದ್ದರೆ ತಾನು ಸಂಗ್ರಹಿಸಿದ ಹಾಡುಗಳನ್ನು ತನಗೆ ಇಷ್ಟ ಬಂದಂತೆ ತಿದ್ದಿ ಅವುಗಳನ್ನು ಪ್ರಕಟಿಸುತ್ತಿದ್ದ" (ಪಿ.ಕೆ. ರಾಜಶೇಖರ, ಜಾನಪದ ಸಂಭ್ರಮ, ಪು.೧೦) ಈ ಹೇಳಿಕೆ ಕಾಲೇವಾಲಕ್ಕೆ ಪ್ರಸ್ತಾವನೆ ಬರೆದಿರುವ ಕಿರ್ಬಿ ಅವರ ಮಾತು. ಇದನ್ನು ನನ್ನ ಹೇಳಿಕೆಯೆಂದು ತಪ್ಪಾಗಿ ಗ್ರಹಿಸಿದ ಡಾ. ನಿಂಗಪ್ಪ ಮುದೇನೂರು ಅವರು

"ಒಂದು ಸಮುದಾಯ ಹಾಡಿಕೊಂಡಿದ್ದ ಈ ಕಾವ್ಯವನ್ನು ಲೋನ್‌ರಾಟ್ ಸಂಪಾದಿಸಿದ್ದಾನೆ. ಸ್ವತಃ ಕವಿಯಾಗಿ ಇದನ್ನು ಸಂಗ್ರಹಿಸಿದ್ದರೂ ಅದನ್ನು ತಿದ್ದರಲು ಅವನಿಗೆ ಹೇಗೆ ಸಾದ್ಯವಾಗುತ್ತಿತ್ತು? ಆ ತಿದ್ದುವ ಸ್ವಾತಂತ್ರ್ಯವನ್ನು ಪಡೆಯುವ ಇಲ್ಲವೆ ಯಥಾವತ್ತಾಗಿ ಸಂಗ್ರಹಿಸುವ ಹಕ್ಕನ್ನು ಅವನು ಹೇಗೆ ಪಡೆದ ಎನ್ನುವುದು ಇಲ್ಲಿ ಗೌಣ. ಮಹಾಕಾವ್ಯಗಳ ಸಂಪಾದನೆಗೆ ತಮ್ಮನ್ನು ಮುಡುಪಾಗಿಟ್ಟುಕೊಂಡಿರುವ ಡಾ. ಪಿ.ಕೆ.ಆರ್ ಅವರು ಯಾಕೆ ಈ ಮಾತನ್ನು ಹೇಳಿದರೋ" (ಡಾ. ನಿಂಗಪ್ಪ ಮುದೇನೂರು. ಜಾನಪದ ಕರ್ನಾಟಕ ಸಂಪುಟ:೨, ಸಂಚಿಕೆ:೧ ಡಿಸೆಂಬರ್ ೨೦೦೨ ಕ.ವಿ.ವಿ. ಹಂಪಿ) ಎಂದೆಲ್ಲ ಬರೆದು ಬಿಡುತ್ತಾರೆ. ಆದರೆ ವ್ಯವಧಾನದಿಂದ ಅದೇ ಪ್ಯಾರಾದ ಕೊನೆಯ ಸಾಲುಗಳನ್ನು ಅವರೇಕೆ ಓದಲಿಲ್ಲ? ಓದದೆ ಆತುರದ ನಿರ್ಧಾರವೆ? ಕೊನೆಯ ಸಾಲುಗಳು ಇವು.

"ಜಾನಪದ ತಜ್ಞ ಎ.ಆರ್. ನಿಯೆಮಿ (A.R. Niemi) ತಿಳಿಸುವಂತೆ ಕಲೆವಾಲ ಕಾವ್ಯದಲ್ಲಿ ಶೇಕಡಾ ಐದು–ಆರರಷ್ಟು ಪದ್ಯಸಾಲುಗಳು ಮಾತ್ರ ಜನಪದ ಗಾಯಕರ ತುಟಿಗಳಿಂದ ನೇರವಾಗಿ ತೆಗೆದುಕೊಂಡಿಲ್ಲ" (ಜಾನಪದ ಸಂಭ್ರಮ ಪು.೧೦) ಈ ಎಲ್ಲ ಹೇಳಿಕೆಗಳೂ ಕಿರ್ಬಿಯವೇ ಹೊರತು ನನ್ನವಲ್ಲ.

ಹೀಗೆ ಬರುವ ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳಬೇಕು. ಸವಾಲುಗಳನ್ನು ಧೈರ್ಯದಿಂದ ಎದುರಿಸಬೇಕು.

ಪ್ರಕಟಿತ ಲೇಖನಗಳು/ವರದಿಗಳು

ಡಾ. ಪಿ.ಕೆ. ರಾಜಶೇಖರ

ಮೈಸೂರಿನ ಸಾಂಸ್ಕೃತಿಕ ವಲಯದಲ್ಲಿ ಡಾ. ಪಿ.ಕೆ. ರಾಜಶೇಖರ ಅವರಿಗೆ ವಿಶಿಷ್ಟವಾದ ಸ್ಥಾನವಿದೆ. ಹಾಗೂ ಕನ್ನಡ ಜಾನಪದದ ಪ್ರಮುಖ ವಿದ್ವಾಂಸರಾಗಿ ಹೆಸರು ಮಾಡಿದ್ದಾರೆ. ನಗುತ್ತಾ ನಗಿಸುತ್ತಾ ಸರಸಪ್ರಿಯರಾಗಿ ಸಮರಸದಿಂದ ಬರೆಯುವ ಗುಣ ಅವರದು. ಹಿರಿಯ ಕಿರಿಯ ಎಂಬ ಭೇದ ಅವರಿಂದ ದೂರ. ಶಿಷ್ಯವತ್ಸಲ್ಯರು. ಆದ್ದರಿಂದಲೇ ಅವರು ಹೋದಡೆಯಲ್ಲೆಲ್ಲಾ ಅವರ ವಿದ್ಯಾರ್ಥಿಗಳೂ, ಅಭಿಮಾನಿಗಳೂ ಅವರನ್ನು ಮುತ್ತಿ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದಾಗ, 'ಏನಣ್ಣಾ, ಹ್ಯಾಗಿದ್ದೀಯಾ? ಊಟ ಆಯ್ತೇನಣ್ಣಾ?' ಎಂದು ಮೊದಲಾಗಿ ಮಾತನಾಡಿಸುತ್ತಾ, ಅವರ ಹೆಗಲ ಮೇಲೆ ಕೈ ಹಾಕಿ ಅವರೊಳಗೊಬ್ಬರಾಗಿ ಬೆರೆಯುವ ಅನೇಕ ಸಂದರ್ಭಗಳನ್ನು ನಾನು ಕಂಡಿದ್ದೇನೆ. ಸಾಧಾರಣ ಪ್ಯಾಂಟು, ತುಂಬುತೋಳಿನ ಷರ್ಟು ಹಾಗೂ ಹಣೆಯಲ್ಲಿ ಕುಂಕುಮವನ್ನಿರಿಸಿಕೊಂಡು ಅವರು ಜನಪದ ಗೀತೆಗಳನ್ನು ಹಾಡಲು ಕುಳಿತರೆ, ಕೇಳುಗರ ಕಿವಿಗಳು ನೆಟ್ಟಗಾಗುತ್ತವೆ. ಆ ಗೀತೆಗಳ ಜನಪದ ಸೊಗಡಿಗೆ ಮನಸ್ಸು ಮಾರುಹೋಗುತ್ತದೆ. ಜನಪದ ವಾದ್ಯಗಳನ್ನೇ ಬಳಸಿ, ಅದರ ಮೂಲಮಟ್ಟುಗಳಲ್ಲಿಯೇ ಹಾಡುವ ಕಲೆ ಅವರಿಗೆ ಸಿದ್ಧಿಸಿದೆ. ರಾಜಶೇಖರ ಅವರು ಜನಪ್ರಿಯ ಅಧ್ಯಾಪಕರು, ಸೃಜನಶೀಲ ಬರಹಗಾರರು. ಜಾನಪದ ಸಂಶೋಧನೆಯಲ್ಲಿ ಪ್ರಮುಖವಾಗಿ ತೊಡಗಿಸಿಕೊಂಡವರು. ಅಧ್ಯಾಪನ, ಸಂಶೋಧನೆ ಮತ್ತು ಹಾಡುಗಾರಿಕೆಯಿಂದ ಅವರದು ಜನಪ್ರಿಯವಾದ ಹೆಸರು.

ಬಾಲ್ಯದಲ್ಲಿಯೇ ಕುಡಿಯೊಡೆದ ಜಾನಪದದ ಗೀಳು

ಕೊಡಗಿನ ಸೆರಗಿಗಂಟಿಕೊಂಡು, ಬೆಟ್ಟಗುಡ್ಡಗಳ ದಟ್ಟರಣ್ಯದ ರಮಣೀಯತೆಯಿಂದ ಕೂಡಿ, ಪೌರಾಣಿಕವಾಗಿ ಮತ್ತು ಐತಿಹಾಸಿಕವಾಗಿ ಗಮನ ಸೆಳೆಯುವ ಬೆಡಗಿನ ಬೀಡು ಪಿರಿಯಾಪಟ್ಟಣ. ಅದು ಮೈಸೂರು ಜಿಲ್ಲೆಯ ತಾಲ್ಲೂಕು ಕೇಂದ್ರಗಳಲ್ಲಿ ಒಂದು. ಮೈಸೂರು–ಮಡಿಕೇರಿ ರಸ್ತೆಯಲ್ಲಿ ಹುಣಸೂರು ಕುಶಾಲನಗರಗಳ ನಡುವೆ, ಮೈಸೂರಿನಿಂದ ೭೨ ಕಿ.ಮೀ. ದೂರದಲ್ಲಿದೆ. ರಾಮಾಯಣ–ಮಹಾಭಾರತದ ಅನೇಕ ಐತಿಹ್ಯಗಳು, ಪುರಾಣ ಕಥೆಗಳು ಆ ಸುತ್ತಿನಲ್ಲಿ ಪ್ರಚಲಿತದಲ್ಲಿವೆ. ಪಿರಿಯಾಪಟ್ಟಣಕ್ಕೆ ಐತಿಹಾಸಿಕ ಮಹತ್ವವಿದ್ದು, ಆ ತಾಲ್ಲೂಕಿನಾದ್ಯಂತ ಹರಡಿಕೊಂಡಿರುವ ಅನೇಕ ದೇವಾಲಯಗಳು ಅದಕ್ಕೆ ಮೂಕಸಾಕ್ಷಿಯಾಗಿವೆ. ಪಿರಿಯಾಪಟ್ಟಣದ ಉಗಮಕ್ಕೆ ಸಂಬಂಧಿಸಿದಂತೆ ಒಂದು

ಕಥೆಯುಂಟು. ಪಿರಿಯಾಪಟ್ಟಣವನ್ನು ಆಳಿದ ರಾಜರಲ್ಲಿ ಚೆಂಗಾಳ್ವರಿಗೆ ಪ್ರಮುಖಸ್ಥಾನ. ಆ ವಂಶದ ನಂಜುಂಡನು ನಂಜರಾಜಪಟ್ಟಣದಿಂದ ಹನಗೋಡಿಗೆ ಹೋಗುತ್ತಿರುವಾಗ, ಆತನ ಕುದುರೆಯ ಗೊರಸನ್ನು ಒಂದು ಮೊಲವು ಕಚ್ಚಿ ಕುದುರೆಯನ್ನು ನಿಲ್ಲಿಸಿತಂತೆ! ಆಗ ನಂಜುಂಡನು ಆ ಸ್ಥಳವು ಗಂಡುಭೂಮಿಯೆಂದು ಮನಗಂಡು, ಅಲ್ಲೊಂದು ಮಣ್ಣಿನಕೋಟೆಯನ್ನು ಕಟ್ಟಿಸಿದನಂತೆ! ಮುಂದೆ ಅದೇ ವಂಶದ ಪಿರಿಯರಾಜ ಎಂಬುವನು ಆ ಮಣ್ಣಿನ ಕೋಟೆಯನ್ನು ಕಲ್ಲಿನಕೋಟೆಯನ್ನಾಗಿ ಪರಿವರ್ತಿಸಿದನು. ಆನಂತರ ಅದನ್ನು 'ಪಿರಿಯರಾಜಪಟ್ಟಣ' ಎಂದು ಕರೆದನು. ಚೆಂಗಾಳ್ವರ ಅವನತಿಯ ಕೊನೆಯ ದಿನಗಳಲ್ಲಿ ಪಿರಯಾಪಟ್ಟಣವು ಅವರ ರಾಜಧಾನಿಯಾಗಿತ್ತು.

ಪುರಾಣ, ಐತಿಹ್ಯ, ಇತಿಹಾಸಗಳನ್ನು ಮೈಗೂಡಿಸಿಕೊಂಡು ಬೆಳೆದ ಪಿರಿಯಾಪಟ್ಟಣ, ಜಾನಪದದ ಗಣಿಯೂ ಹೌದು. ಆ ಪಟ್ಟಣದ ಪಿ.ಡಿ. ಕೆಂಪೇಗೌಡ ಮತ್ತು ಶ್ರೀಮತಿ ಪುಟ್ಟಮ್ಮ ದಂಪತಿಗಳ ಪೂರ್ವಜರು ಜಾನಪದದ ಒಡನಾಟದಲ್ಲಿಯೇ ಬಂದವರು. ಕೆಂಪೇಗೌಡ ಅವರು ಒಬ್ಬ ಅನುಭವಿ ನಾಟಿ ವೈದ್ಯರಾಗಿದ್ದು, ಹಲವಾರು ಖಾಯಿಲೆಗಳಿಗೆ ಔಷಧೋಪಚಾರ ಮಾಡುತ್ತಿದ್ದರು. ಮುಖ್ಯವಾಗಿ ಹಾವುಕಡಿತಕ್ಕೆ ಔಷಧಿ ಕೊಡುವುದರಲ್ಲಿ ಹೆಸರಾಗಿದ್ದರು. ಬೇರೆ ಬೇರೆ ಜಾತಿಯ ಹಾವುಕಡಿತಕ್ಕೆ ಬೇರೆಬೇರೆಯಾದ ಔಷಧಗಳನ್ನೇ ನೀಡುತ್ತಿದ್ದು, ಅವರಿಂದ ಔಷಧಿ ಪಡೆದ ರೋಗಿಗಳೆಲ್ಲರೂ ಪ್ರಾಣಾಪಾಯದಿಂದ ಪಾರಾಗಿರುವುದು ಅವರ ವೈದ್ಯೋಪಚಾರದ ಹಿರಿಮೆ. ಒಮ್ಮೆ ಮಂಡಲದಹಾವು ಕಚ್ಚಿದ ವ್ಯಕ್ತಿಯೊಬ್ಬರು ಇತರೆಡೆಗೆ ಔಷಧೋಪಚಾರ ಮಾಡಿಸಿಕೊಂಡು, ಫಲಕಾರಿಯಾಗದೆ ಕಾಲು ಕೊಳೆಯುತ್ತಾ ಬಂದು, ಅದನ್ನು ಕತ್ತರಿಸಿ ಹಾಕಬೇಕಾದ ವಿಷಮ ಪರಿಸ್ಥಿತಿಯೊದಗಿತು. ಎಲ್ಲವೂ ಮುಗಿದ ಮೇಲೆ ಕೊನೆಯದಾಗಿ ಕೆಂಪೇಗೌಡರ ಔಷಧೋಪಚಾರಕ್ಕೆ ಒಳಗಾಗಿ ಎಲ್ಲರೂ ಆಶ್ಚರ್ಯಪಡುವಂತೆ ಗುಣಮುಖರಾಗಿ ಮೊದಲಿನಂತೆ ಆದುದು, ಕೆಂಪೇಗೌಡರ ಕೈಗುಣದ ಹಿರಿಮೆಯಲ್ಲದೆ ಮತ್ತೇನು?

ಕೆಂಪೇಗೌಡರು, ಜನಪದ ವೈದ್ಯರಾಗಿದ್ದರಲ್ಲದೆ, ಜನಪದ ಕಥೆಗಾರರೂ ಆಗಿದ್ದರು. ಅವರು ಲಕ್ಷ್ಮೀಶನ ಜೈಮಿನಿ ಭಾರತವನ್ನು ಅದ್ಭುತವಾಗಿ ವಾಚಿಸುತ್ತಿದ್ದರು. ಇಡೀ ಗ್ರಂಥವನ್ನು ಕಂಠಪಾಠ ಮಾಡಿ, ಗ್ರಂಥದ ಯಾವ ಭಾಗವನ್ನಾದರೂ ಥಟ್ಟನೆ ವಿವರಿಸುವ ವಿಶೇಷವಾದ ಸ್ಮರಣಶಕ್ತಿಯನ್ನು ಪಡೆದಿದ್ದರು. ಜೈಮಿನಿ ಭಾರತದ 'ಚಂದ್ರಹಾಸನಕಥೆ' ಅವರಿಗೆ ಅತ್ಯಂತ ಪ್ರಿಯವಾದದ್ದು. ಅವರು ಮೈಸೂರಿನ ಮರಿಮಲ್ಲಪ್ಪನವರ ಪ್ರೌಢಶಾಲೆಯಲ್ಲಿ ಹತ್ತನೇ ತರಗತಿಯಲ್ಲಿ ಓದುತ್ತಿದ್ದಾಗ, ಸ್ವದೇಶಿ ಚಳುವಳಿಯಿಂದ ಪ್ರಭಾವಿತರಾಗಿ ಸುಬ್ಬರಾಯನ ಕೆರೆಯಲ್ಲಿ ನಡೆದ ವಿದೇಶಿ ವಸ್ತ್ರದಹನ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದಾಗ, ಪೋಲಿಸರಿಂದ ಲಾಠಿ ಪ್ರಹಾರವಾಗಿ, ಅವರ ತೋಳಿಗೆ ಬಲವಾದ ಪೆಟ್ಟು ಬಿತ್ತು. ಆ ಸಮಯದಲ್ಲಿ

ಅವರು ಊರಿಗೆ ಹಿಂದಿರುಗಿದಾಗ, ಅವರ ಅಜ್ಜಿಯು ಅವರನ್ನು ಪುನಃ ಮೈಸೂರಿಗೆ ಕಳುಹಿಸಲಿಲ್ಲ.

ಹೀಗೆ ಜಾನಪದ, ಸಾಹಿತ್ಯ, ವೈದ್ಯಗಳನ್ನು ಮೈಗೂಡಿಸಿಕೊಂಡು ಬಂದ ಕೆಂಪೇಗೌಡ ಮತ್ತು ಶ್ರೀಮತಿ ಪುಟ್ಟಮ್ಮ ದಂಪತಿಗಳ ೯ ಮಕ್ಕಳಲ್ಲಿ ರಾಜಶೇಖರ ಅವರು ೪ನೆಯ ಮಗನಾಗಿ ಅಕ್ಟೋಬರ್ ೩, ೧೯೪೭ರಂದು ಜನಿಸಿದರು. ತಮ್ಮ ತಂದೆಯವರ ಮತ್ತು ಅಜ್ಜಿ ಜನಪದಕಥೆಗಾರ್ತಿ ಶಿವಶರಣೆ ನಿಂಗಮ್ಮನವರ ಪ್ರಭಾವ ರಾಜಶೇಖರ ಅವರ ಮೇಲೆ ಎಳೆಯ ವಯಸ್ಸಿನಲ್ಲಿಯೇ ಆಯಿತು. ಅವರು ಬಾಲಕರಾಗಿದ್ದಾಗ ಅಜ್ಜಿಯೊಡನೆ ಅವರ ಊರಾದ ಹುಣಸೆಕೊಪ್ಪ ಗ್ರಾಮಕ್ಕೆ ಆಗಾಗ ಹೋಗುತ್ತಿದ್ದರು. ಅಂತಹ ಸಮಯದಲ್ಲೊಮ್ಮೆ ಮುಂಜಾನೆಯ ಬೆಳಕು ಮೂಡುವ ಸಮಯ, ಅವರಿಗೆ ಥಟ್ಟನೆ ಎಚ್ಚರವಾಯಿತು. ತಂಗಾಳಿ ತೀಡುವ, ಮುಂಗೋಳಿ ಕೂಗುವ, ಹೊಂಗದಿರ ಬೆಳಕು ಸೂಸುವ ಆ ಸಮಯದಲ್ಲಿ ಬೀಸುವ ಕಲ್ಲಿನ ಶ್ರುತಿಗೆ ಹೊಂದಿಕೊಂಡು ಹೊರಹೊಮ್ಮುತ್ತಿದ್ದ ಮಾತೆಯೊಬ್ಬರ ಮಧುರಕಂಠದ ಗಾಯನ ಅವರನ್ನು ಮೈಮರೆಸಿತು. ಆಕೆಯ ಹೆಸರು ಚಾಮಿ ಎಂಬುದನ್ನು ತಿಳಿದುಕೊಂಡ ಬಾಲಕ ರಾಜಶೇಖರರು ಆಕೆಯ ಹಾಡುಗಳನ್ನು ಮತ್ತೆ ಮತ್ತೆ ಕೇಳುವ ಅವಕಾಶಗಳನ್ನು ಕಲ್ಪಿಸಿಕೊಂಡರು. ಅವರ ಜಾನಪದ ಕೃಷಿಯು ಹೊನ್ನಾರು, ಆ ಬೀಸುವ ಪದದ ಆಲಿಸುವಿಕೆಯಿಂದಲೇ ಪ್ರಾರಂಭವಾಯಿತು. ಅವರ ಜೀವನದಲ್ಲಿ ಆ ಅಮೃತಘಳಿಗೆ ದಾಖಲೆಯಾಗಿ ನಿಂತುಬಿಟ್ಟಿತು.

ರಾಜಶೇಖರ ಅವರು ಮಾಧ್ಯಮಿಕ ಶಾಲಾ ವಿದ್ಯಾರ್ಥಿಯಾಗಿದ್ದಾಗ, ಅವರ ಅಕ್ಕಂದಿರಾದ ಸರೋಜ ಹಾಗೂ ಕಮಲ ಆಕಾಶವಾಣಿಯಲ್ಲಿ ಪ್ರಸಾರವಾಗುತ್ತಿದ್ದ ಕಾಳಿಂಗರಾಯರು ಹಾಡಿದ ಜನಪದ ಗೀತೆಗಳನ್ನು ಕೇಳಲು ಕಾತರರಾಗಿ ಕುಳಿತಿರುತ್ತಿದ್ದರು. ಅವರೂ ಸಹ ಅಕ್ಕಂದಿರೊಡನೆ ಕುಳಿತು ಹಾಡುಗಳನ್ನು ಕೇಳಿ ಅನುಕರಿಸುತ್ತಿದ್ದರು. ಅವರ ಶಾಲೆಯ ಉಪಾಧ್ಯಾಯರಾಗಿದ್ದ ಅಹಮದ್ ಹಫೀಜ್ ಎಂಬುವರು ಜಾನಪದದ ಕರೀಂಖಾನರ ಹೆಸರನ್ನು ಆಗಾಗ ವಿದ್ಯಾರ್ಥಿಗಳಿಗೆ ತಿಳಿಸಿ, ಅವರು ಹಾಡುತ್ತಿದ್ದ ಹಾಡುಗಳನ್ನು ಅವರ ಎದುರು ಹಾಡಿ, ಕಲಿಸುತ್ತಿದ್ದರು. ರಾಜಶೇಖರ ಅವರು ಪ್ರೌಢ ಶಾಲೆಗೆ ಬಂದಾಗಲೂ ಸಾಕಷ್ಟು ಪ್ರಭಾವಿತರಾದರು. ಉಪ್ಪಾರಗೇರಿಯ ತಮ್ಮಯ್ಯ ಎಂಬ ವಿದ್ಯಾರ್ಥಿ 'ಜವರಾಯ ಬಂದಾರೆ ಬಗಿಗ್ಯೆಲಿ ಬರಲಿಲ್ಲ' ಹಾಡನ್ನು ಇಂಪಾಗಿ ಹಾಡುತ್ತಿದ್ದನು. ಆತನ ಪ್ರಭಾವವೂ ಇವರ ಮೇಲಾಯಿತು. ಅದೇ ವೇಳೆಯಲ್ಲಿ ಆಕಾಶವಾಣಿಯವರು ಪ್ರಸಾರ ಮಾಡುತ್ತಿದ್ದ ಶಾಲಾಪ್ರಸಾರ ಕಾರ್ಯಕ್ರಮಕ್ಕಾಗಿ ರಾಜಶೇಖರರ ಹಾಡುಗಳನ್ನು ಧ್ವನಿಮುದ್ರಿಸಿಕೊಂಡು ಪ್ರಸಾರ ಮಾಡಿದಾಗ, ಅಂದಿನಿಂದಲೇ ಜನಪದಗಾಯಕರಾಗಿ ಗುರ್ತಿಸಲ್ಪಟ್ಟರು. ಅಲ್ಲಿಯ ಮುಖ್ಯೋಪಾಧ್ಯಾಯರಾಗಿದ್ದ ಗೊರಹಳ್ಳಿ ಚೆಲುವಯ್ಯ ಮೇಸ್ಟ್ರು ಹಾಗೂ ಶಿವನಂಜದೇವರು ಎಂಬ ಅಧ್ಯಾಪಕರು ಅವರನ್ನು ವಿಶೇಷವಾಗಿ ಪ್ರೋತ್ಸಾಹಿಸಿದರು.

ವಿದ್ಯಾಭ್ಯಾಸ ಮತ್ತು ವೃತ್ತಿ

ರಾಜಶೇಖರ ಅವರು ತಮ್ಮ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಪಿರಿಯಾಪಟ್ಟಣದಲ್ಲಿ ಮುಗಿಸಿದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ., ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಎಂ.ಎ. ಪದವಿಗಳನ್ನು ಪಡೆದರು. 'ದಕ್ಷಿಣ ಕರ್ನಾಟಕದ ಜನಪದ ಪುರಾಣಗಳು' ಎಂಬ ವಿಷಯವನ್ನು ಕುರಿತು ಮಹಾಪ್ರಬಂಧವನ್ನು ಸಿದ್ಧಪಡಿಸಿ, ಮೈಸೂರು ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದರು.

೧೯೭೪ರಲ್ಲಿ ವೃತ್ತಿಜೀವನಕ್ಕೆ ಪಾದಾರ್ಪಣೆ ಮಾಡಿದ ರಾಜಶೇಖರರು ಪ್ರಥಮವಾಗಿ ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇರಿ, ಯುವರಾಜ ಕಾಲೇಜು ಮತ್ತು ಲಲಿತಕಲೆಗಳ ಕಾಲೇಜುಗಳಲ್ಲಿಯೂ ಸೇವೆ ಸಲ್ಲಿಸಿದರು. ಈಗ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಉಪಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ.

ಸಿರಿಕಂಠದ ಜನಪದಗಾಯಕ

ರಾಜಶೇಖರ ಅವರು, ಒಳ್ಳೆಯ ಜನಪದ ಹಾಡುಗಾರರು. ಆ ಗಾಯನ ಕಲೆಯನ್ನು ಮೂಲ ಸ್ವರೂಪದಲ್ಲಿ ಉಳಿಸಿ, ಬೆಳೆಸುವ ಕಾಳಜಿಯನ್ನಿರಿಸಿಕೊಂಡು ಒಂದು ಗಾಯನತಂಡವನ್ನೇ ಕಟ್ಟಿದರು. ಅದು 'ಹೊನ್ನಾರು ಜನಪದಗಾಯಕರು' ಎಂದು ಪ್ರಸಿದ್ಧವಾಗಿ ತನ್ನ ಬೆಳ್ಳಿಹಬ್ಬವನ್ನಾಚರಿಸಿಕೊಂಡು, ಸುವರ್ಣಹಬ್ಬದತ್ತ ಮುನ್ನಡೆಯುತ್ತಿದೆ. ಕನ್ನಡನಾಡಿನ ಶ್ರೀಮಂತ ಜಾನಪದ ಕ್ಷೇತ್ರಕ್ಕೆ, ಜನಪದ ಗಾಯಕರ ಕೊಡುಗೆ ಅಪಾರ. ಲೌಕಿಕ ಮತ್ತು ಧಾರ್ಮಿಕ ವೃತ್ತಿಗಾಯನದ ಎರಡು ಪ್ರಕಾರಗಳಲ್ಲಿ ಹರಡಿಕೊಂಡಿರುವ ಸುಮಾರು ೨೫ಕ್ಕೂ ಹೆಚ್ಚು ಗಾಯನ ಸಂಪ್ರದಾಯಗಳು ಕರ್ನಾಟಕದಲ್ಲಿ ಕಂಡುಬಂದಿವೆ. ಆ ಕಲಾವಿದರು ಹಾಡುವ ಸುದೀರ್ಘ ಕಥಾನಕಗಳು ಒಮ್ಮೆಲೆ ಬೆರಗು ಹುಟ್ಟಿಸುತ್ತವೆ. ಪಿರಿಯಾಪಟ್ಟಣದ ಕಾಳಗ, ಲಿಂಗರಾಜಮ್ಮನ ಕಥೆ, ಸಾರಂಗಧರನ ಕಥೆ, ನಂಜಯ್ಯ ಚಾಮುಂಡಿ, ನೀಲಗಾರರ ಮಂಟೇಸ್ವಾಮಿ ಕಥೆ, ದೇವರಗುಡ್ಡರ ಮಲೆಯ ಮಾದೇಶ್ವರ... ಇತ್ಯಾದಿಯಾಗಿ ಕಥನಗೀತೆಗಳ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ರಾಜಶೇಖರ ಮತ್ತವರ ಸ್ನೇಹಿತರು ಹಾಡುವ ಗೀತೆಗಳಲ್ಲಿ ಕಥನ ಗೀತೆಗಳೂ ಉಂಟು. ಮುಕ್ತಕಗಳೂ ಉಂಟು. ಪರಿವರ್ತನಾಶೀಲತೆಯ ಸುಳಿಯಲ್ಲಿ ಸಿಲುಕಿ, ಜನಪದಸಾಹಿತ್ಯ ಮತ್ತು ಗಾಯನ ತೀವ್ರ ಅವನತಿಯ ಮಾರ್ಗವನ್ನು ಹಿಡಿದಿರುವ ಈ ಸಮಯದಲ್ಲಿ 'ಹೊನ್ನಾರು ಜನಪದ ಗಾಯಕರು' ತಂಡದ ಪ್ರಯತ್ನ ಸ್ತುತ್ಯವಾದುದು. ಜನಪದ ಮೂಲ ಸಾಹಿತ್ಯ ಮತ್ತು ಮೂಲ ಮುಟ್ಟುಗಳಲ್ಲಿ ಹಾಡುವ ಅಂತಹ ಗಾಯನ ತಂಡ ಇನ್ನೊಂದಿಲ್ಲ ಎಂಬ ಹೆಗ್ಗಳಿಕೆಯೂ ಅದಕ್ಕಿದೆ. ಇದೀಗ ೪೪ ವಸಂತಗಳ ಸುದೀರ್ಘ ಹಾದಿಯನ್ನು ಕ್ರಮಿಸಿ ಮುನ್ನಡೆಯುತ್ತಿರುವ

ಗಾಯನತಂಡ ಕಾಲಾನುಕಾಲದ ಸ್ಥಿತ್ಯಂತರಗಳ ಸುಳಿಯಲ್ಲಿ ಸಿಲುಕಿಯೂ ತನ್ನ ಸ್ವಂತಿಕೆಯನ್ನು ಉಳಿಸಿಕೊಂಡು ಬಂದಿರುವುದು ಹೆಮ್ಮೆಯ ವಿಷಯ.

ರಾಜಶೇಖರ ಅವರು ಆ ತಂಡದ ನಿತ್ಯ ಚೇತನದ ರೂವಾರಿ. ಆ ತಂಡದ ಸುದೀರ್ಘ ಕಾಲದ ಗಟ್ಟಿ ನಿಲುವಿಗೆ ಅವರ ಇಚ್ಛಾಪ್ರವೃತ್ತಿಯೇ ಕಾರಣ. ಗಾಯನ ಕಲೆಯನ್ನು ಮುಂದಿನವರಿಗೆ ಅದರ ಮೂಲಸ್ವರೂಪದಲ್ಲಿಯೇ ಜೀವಂತವಾಗಿಡುವ ಹಂಬಲದ ಕ್ರಿಯಾಶೀಲತೆಯಿಂದ ತಂಡವು ನಿರಂತರವಾಗಿ ಸಾಗಿಬಂದಿತು.

ರಾಜಶೇಖರ ಅವರು, ಜನಪದಗಾಯನ ಮಟ್ಟುಗಳನ್ನು, ತಮ್ಮ ಗಾಯನದಲ್ಲಿ ಸಮರ್ಥವಾಗಿ ಅಳವಡಿಸಿಕೊಂಡರು. ಸಂಶೋಧನಾ ವಿದ್ಯಾರ್ಥಿಯಾಗಿ ಗಂಗೋತ್ರಿಯ ವಿದ್ಯಾರ್ಥಿನಿಲಯದಲ್ಲಿರುವಾಗಲೇ ಅವರ ಚಿಕ್ಕಂದಿನ ಪ್ರವೃತ್ತಿಗೆ ಒಂದು ನೆಲೆ ಸಿಕ್ಕಿ, ಗಾಯನಕಲೆ ವಿಕಸನದ ಹಾದಿಯನ್ನು ಹಿಡಿಯಿತು. ಅಲ್ಲಿ ತಮ್ಮ ಆತ್ಮತೃಪ್ತಿಗಾಗಿ, ಮೂಲ ಮಟ್ಟುಗಳೊಂದಿಗೆ ಹಾಡುಗಳನ್ನು ಗುನುಗುತ್ತಿದ್ದಾಗ, ಸ್ನೇಹಿತರ ಒಲವು, ಪ್ರೋತ್ಸಾಹಗಳು ಅವರ ಹಾಡುಗಾರಿಕೆಗೆ ಒಂದು ಆಯಾಮವನ್ನು ತಂದುಕೊಟ್ಟುವು. ಅನಂತರದ ದಿನಗಳಲ್ಲಿ ರಾಜಶೇಖರರು ಪೂರ್ಣಪ್ರಮಾಣದಲ್ಲಿ ಜನಪದಗಾಯಕರೆಂದು ಗುರುತಿಸಲ್ಪಟ್ಟು, ಸಭೆ ಸಮಾರಂಭಗಳಲ್ಲಿ ಹಾಡತೊಡಗಿದರು. ಗ್ರಾಮೀಣ ಪ್ರದೇಶಗಳ ಹಬ್ಬಹರಿದಿನಗಳಲ್ಲಿ ೨-೩ ಗಂಟೆಗಳಕಾಲ ಏಕಾಂಗಿಯಾಗಿ ಹಾಡುತ್ತಿದ್ದರು. ಆ ಸಮಯದಲ್ಲಿ ಯಾವುದೇ ವಾದ್ಯಗಳನ್ನು ಬಳಸದೇ ಇದ್ದರೂ, ಅವರ ಗಾಯನಕಲೆ ಜನಪ್ರಿಯವಾಯಿತು. ಮಂಡ್ಯಜಿಲ್ಲೆಯ ಜನತೆ ರಾಜಶೇಖರರನ್ನು ಜನಪದ ಗಾಯಕರನ್ನಾಗಿ ರೂಪಿಸುವಲ್ಲಿ ವಿಶೇಷವಾದ ಪಾತ್ರ ವಹಿಸಿತು. ಅಲ್ಲಿಯ ಸುಪ್ರಸಿದ್ಧ ರಾಜಕಾರಣಿ ಶ್ರೀ ಕೆ.ವಿ. ಶಂಕರಗೌಡರು, ಯಾವುದೇ ಕಾರ್ಯಕ್ರಮಕ್ಕೆ ರಾಜಶೇಖರ ಅವರನ್ನು ಕರೆಸಿ ಎನ್ನುತ್ತಿದ್ದರಂತೆ! ಇಲ್ಲಿಯವರೆಗೆ ಮಂಡ್ಯ ಜಿಲ್ಲೆ ಒಂದರಲ್ಲಿಯೇ ಸುಮಾರು ೧೦೦೦ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನೀಡಿದ ಹೆಮ್ಮೆ ರಾಜಶೇಖರರದು.

ರಾಜಶೇಖರ ಅವರ ಗಾಯನಕಲೆ ಜನಪ್ರಿಯವಾದಂತೆ ಸಹಗಾಯಕರ ಸೇರ್ಪಡೆ ಅನಿವಾರ್ಯವಾಯಿತು. ಪಡುವಾರಹಳ್ಳಿಯ ಚಿಕ್ಕಣ್ಣದಾಸರು, ದಾಸನಕೊಪ್ಪಲು ವೆಂಕಟೇಶ್, ಚಿಕ್ಕೊನಹಳ್ಳಿಪುರದ ಪುಟ್ಟರಾಜು ಮೊದಲಾದವರು. ಪ್ರಾರಂಭಿಕ ಹಾಡುಗಾರರಾಗಿ ಸೇರ್ಪಡೆಯಾದರು. ಕ್ರಮೇಣ ತಂಡವು ಪ್ರಾರಂಭದ ಸ್ಥಿತಿಯನ್ನು ಉತ್ತಮಪಡಿಸಿಕೊಂಡಿತು. ಕೋಲು, ದಮ್ಮಡಿ, ಕಂಸಾಳೆ, ತಾಳ ಮತ್ತು ಗೆಜ್ಜೆಗಳ ಪ್ರವೇಶವಾಯಿತು. ಗಾಯನ ಮಾಧುರ್ಯಕ್ಕೆ ವಾದ್ಯಗಳ ಇಂಪು ಸೇರಿ, ತಂಡದ ಜನಪ್ರಿಯತೆ ದ್ವಿಗುಣಗೊಂಡಿತು. ಆಕಾಶವಾಣಿಯಲ್ಲಿಯೂ, ಆ ತಂಡದ ಗಾಯನ ಪ್ರಸಾರವಾಯಿತು. ಆ ತಂಡದ ಧ್ವನಿ ಸುರುಗಳಿಗಳು ಜನಪ್ರಿಯವಾದುವು. ಅಂತಹ ಸಂದರ್ಭದಲ್ಲಿ ವ್ಯಾಪಾರಿ ದೃಷ್ಟಿಯಿಂದ ಕೆಲವು

ಶಿಷ್ಟವಾದ್ಯಗಳನ್ನು ಬಳಸಿಕೊಳ್ಳಬೇಕಾಗಿ ಬಂದರೂ, ಶೇಕಡ ೮೦ ಭಾಗದಷ್ಟು ಮೂಲಮಟ್ಟುಗಳನ್ನು ಉಳಿಸಿಕೊಂಡ ಸಮಾಧಾನ ರಾಜಶೇಖರರಿಗಿದೆ.

ವೃತ್ತಿಗಾಯಕರ ಕಥನಗೀತೆಗಳು ತಂಡದ ಹಾಡುಗಾರಿಕೆಯ ಮೂಲ ಸಾಮಗ್ರಿಗಳು. ವಿವಿಧ ಮಟ್ಟುಗಳಲ್ಲಿ ಹಾಡುವ ಕುಶಲತೆ ವಿಶಿಷ್ಟವಾದುದು. ಸುಮಾರು ೧೫೦ ಕ್ಕೂ ಹೆಚ್ಚು ವಿವಿಧ ಮಟ್ಟುಗಳನ್ನು ಈಗಾಗಲೇ ಧ್ವನಿ ಸುರಳಿಯಲ್ಲಿ ಸಮರ್ಥವಾಗಿ ಬಳಸಿಕೊಳ್ಳಲಾಗಿದೆ. ಜನಪದಗೀತ ಸಾಹಿತ್ಯದ ವಿಫುಲತೆಯೂ ತಂಡದ ಜನಪ್ರಿಯತೆಗೆ ಸಹಕಾರಿಯಾಗಿದೆ. ಸಾಹಿತ್ಯ ಮತ್ತು ಗೀತಲಯದ ವೈವಿಧ್ಯತೆಗಳು ಸಹೃದಯ ಮನೋರಂಜಕವಾಗಿ ಪರಿಣಮಿಸಿವೆ. ಆ ಸಾಹಿತ್ಯ ಭಂಡಾರವನ್ನು ರಾಜಶೇಖರ ಮತ್ತವರ ತಂಡ ಸಮರ್ಥವಾಗಿ ಬಳಸಿಕೊಂಡಿದೆ.

ಮೈಸೂರು ಅರಮನೆಯ ದರ್ಬಾರ್ ಹಾಲಿನಲ್ಲಿ ಯಾವಾಗಲೂ ಶಾಸ್ತ್ರೀಯಸಂಗೀತ ಕಛೇರಿಗಳಿಗೆ ಮಾತ್ರ ಅವಕಾಶವಿರುತ್ತಿತ್ತು. ೧೯೯೫ರಲ್ಲಿ ಪ್ರಥಮ ಭಾರಿಗೆ, ಆ ವೇದಿಕೆಯಲ್ಲಿ ಜನಪದ ಗೀತಗಾಯನ ಕಾರ್ಯಕ್ರಮವನ್ನು ನಡೆಸಿಕೊಟ್ಟ ಕೀರ್ತಿ ಆ ಗಾಯನವೃಂದಕ್ಕೆ ಸಂದಿದೆ.

'ಹೊನ್ನಾರು ಜನಪದ ಗಾಯಕರು' ತಂಡದ ಸಾಂಸ್ಥಿಕ ರಚನೆಯಲ್ಲಿ ವಿಶೇಷವಾದ ವ್ಯವಸ್ಥೆಯನ್ನು ಕಾಣಬಹುದು. ಇಂದಿನ ಯಾಂತ್ರಿಕ ಜೀವನದ ಅವ್ಯವಸ್ಥೆಯಲ್ಲಿ ಮೂಲಗಾಯಕ ಒಂದು ತಂಡದಲ್ಲಿ ಸ್ಥಾಯಿಯಾಗಿ ನಿಲ್ಲುವುದು ಕಷ್ಟಸಾಧ್ಯವಾದ ಸಂಗತಿ. ಆದ್ದರಿಂದಲೇ ಸ್ಥಾಯಿಗಾಯಕರು ಆ ತಂಡದಲ್ಲಿಲ್ಲ. ಆ ಕೊರತೆಯನ್ನು ನೀಗಿಸಿರುವ ರಾಜಶೇಖರರ ದೂರದೃಷ್ಟಿ ಅನನ್ಯ. ಆ ಗಾಯನ ತಂಡದ ಕಮ್ಮಟದಲ್ಲಿ ಆಸಕ್ತರು ಶಿಲ್ಪಗೊಂಡು, ಕೆಲ ಸಮಯದ ಅನಂತರ ಹೊರಬೀಳುವರು. ಮತ್ತೆ ಬೇರೆ ಗಾಯಕರು ಹೊಸದಾಗಿ ಸೇರ್ಪಡೆಯಾಗುವರು. ಆ ತಂಡದ ಗಾಯಕರೆಂದರೆ, ಅವರ ವಿದ್ಯಾರ್ಥಿಗಳೇ! ಹಿರಿಯ ವಿದ್ಯಾರ್ಥಿಗಳು ಹಾಡುಗಾರರಾಗಿ ರೂಪುಗೊಂಡರೆ, ಕಿರಿಯ ವಿದ್ಯಾರ್ಥಿಗಳು ಅವರ ಸಹಗಾಯಕರಾಗಿ ಹಾಡುವರು. ವಿದ್ಯಾಭ್ಯಾಸವನ್ನು ಪೂರೈಸಿದ ಹಿರಿಯ ಗಾಯಕರು, ತಮ್ಮ ಜೀವನಮಾರ್ಗವನ್ನು ಹಿಡಿದು ಹೊರಟರೆ ಅತ್ತ ಕಿರಿಯ ವಿದ್ಯಾರ್ಥಿಗಳು ಹಾಡುಗಾರರಾಗಿ ರೂಪುಗೊಂಡಿರುತ್ತಾರೆ. ಅಂತಹ ಅಪೂರ್ವ ಅವಕಾಶ ಅಲ್ಲಿ ಮಾತ್ರವೇ ಇದ್ದು, ಅದೊಂದು ಅಪೂರ್ವ ಸಹೃದಯ ಗಾಯನತಂಡ.

ತಂಡದಲ್ಲಿ, ಆರ್ಥಿಕ ದೃಷ್ಟಿ ಗೌಣ, ಸಂಸ್ಕೃತಿಯ ಪ್ರಸಾರದ ಆತ್ಮ ಸಂತೃಪ್ತಿಯೇ ಅಲ್ಲಿ ಪ್ರಧಾನ! ಇಂದಿನ ದಿನಗಳಲ್ಲಿ ಹಣವೂ ಯಶಸ್ಸಿನ ಒಂದಂಶವಾಗಿ ಬರುವುದು ಅನಿವಾರ್ಯ. ಆದ್ದರಿಂದ ರಾಜಶೇಖರರು ತಮ್ಮ ಕಾರ್ಯಕ್ರಮಗಳಿಗಾಗಿ ಅಲ್ಪ ಸಂಭಾವನೆಯನ್ನು ಮಾತ್ರ ಪಡೆಯುವರು ಅಥವಾ ವ್ಯಸ್ಥಾಪಕರ ಇಚ್ಛೆಗೇ ಬಿಟ್ಟು ಬಿಡುವರು. ಅವರು ನೀಡುವ ಸಂಭಾವನೆಯನ್ನು ಬಡವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸುವರು.

ಸಾಹಿತ್ಯಕೃಷಿ

ಜಾನಪದಸಾಹಿತ್ಯ ಕೃಷಿಯಲ್ಲಿ ರಾಜಶೇಖರರ ಹೆಸರು ಅಗ್ರ ಸ್ಥಾನದಲ್ಲಿದೆ. ಅವರು ಸಂಶೋಧನಾ ವಿದ್ಯಾರ್ಥಿಯಾಗಿದ್ದಾಗಲೇ ೧೫೦೦ ಪುಟಗಳ ಬೃಹದ್ಕೃತಿ 'ಮಲೆಯಮಾದೇಶ್ವರ' ಗ್ರಂಥವನ್ನು ಪ್ರಕಟಿಸಿ, ಕನ್ನಡ ಜಾನಪದವನ್ನು ವಿಶ್ವ ಜಾನಪದದ ಎತ್ತರಕ್ಕೆ ಏರಿಸಿದರು. ಅದು ರಾಜಶೇಖರರ ಆಚಾರ್ಯ ಕೃತಿಯೂ ಹೌದು. ಹಾಗೂ ಆ ಮಹಾಕಾವ್ಯವು ಜಾನಪದದ ಒಂದು ಮೈಲಿಗಲ್ಲು. ಅದರ ಸಂಪಾದನೆ, ಸಂಗ್ರಹ, ವಿಶ್ಲೇಷಣೆಗಳಲ್ಲಿ ರಾಜಶೇಖರರ ಶ್ರದ್ಧಾನಿಷ್ಠೆಗಳು ಮಡುಗಟ್ಟಿವೆ. ಅವರು ತಮ್ಮ ಜಾನಪದಪಾಂಡಿತ್ಯ ಪರಿಶ್ರಮಗಳಿಂದ ಜಾನಪದದ ಶ್ರೇಷ್ಠಕೃತಿಯೊಂದನ್ನು ಹೊರತಂದು ಜಾನಪದ ವಿದ್ವಾಂಸರನ್ನು ಒಮ್ಮೆಲೆ ಬೆರಗುಗೊಳಿಸಿದ್ದಾರೆ. "ಕನ್ನಡ ಜಾನಪದದಲ್ಲಿ ಇಷ್ಟುಗಾತ್ರದ ಪುಸ್ತಕವೊಂದು ಹೊರಬರುತ್ತಿರುವುದು ಇದೇ ಮೊದಲು, ಭಾರತದ ಯಾವುದೇ ಭಾಷೆಯಲ್ಲಿ ಈ ಬಗೆಯ ಕೃತಿ ಪ್ರಕಟವಾದಂತಿಲ್ಲ. ಸಮರ್ಪಕ ರೀತಿಯಲ್ಲಿ ಅತ್ಯಂತ ಸಮರ್ಥವಾಗಿ ಸಂಪಾದಿಸಿರುವ ಈ ಕೃತಿ ಜಾನಪದ ಕ್ಷೇತ್ರದಲ್ಲಿ ಒಂದು ಮಹತ್ವದ ಮೈಲಿಗಲ್ಲು" ಎಂದು ಜಾನಪದದ ಪ್ರಸಿದ್ಧ ವಿದ್ವಾಂಸ ಡಾ. ಹಾ.ಮಾ. ನಾಯಕರ ಪ್ರಶಸ್ತ ನುಡಿಗಳಿವು. ಹೀಗೆ ರಾಜಶೇಖರರು ಮಲೆಯಮಾದೇಶ್ವರ ಮೂಲಕ ಒಂದು ಹೊಸ ಇತಿಹಾಸವನ್ನೇ ನಿರ್ಮಿಸಿದರು. ಅದು ಕನ್ನಡ ಜಾನಪದ ಕ್ಷೇತ್ರದಲ್ಲಿ ಪ್ರಕಟವಾದ ಮೊಟ್ಟಮೊದಲ ಮಹಾಕಾವ್ಯ. ಅದಕ್ಕೆ ೧೯೭೩ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಲಭಿಸಿತು.

ಅವರ ಮತ್ತೊಂದು ಕೃತಿ ಬೆಟ್ಟದ ಚಾಮುಂಡಿ. ೧೯೭೧ರಲ್ಲಿ ಪ್ರಕಟವಾಯಿತು. ಅವರು ಕನ್ನಡ ಎಂ.ಎ. ಐಚ್ಛಿಕ ಜಾನಪದದ ವಿದ್ಯಾರ್ಥಿಗಳಿಗೆ ಪಠ್ಯವೂ ಆಯಿತು. ಅದೇ ಕೃತಿಯನ್ನು ಮೈಸೂರು ಆಕಾಶವಾಣಿಯಲ್ಲಿ ರೂಪಕವನ್ನಾಗಿ ಪರಿವರ್ತಿಸಿ ಪ್ರಸಾರ ಮಾಡಲಾಯಿತು. ಅದರ ಹಿನ್ನೆಲೆ ಸಂತಗೀತವನ್ನು ರಾಜಶೇಖರ ಮತ್ತವರ ತಂಡ ನಿರ್ವಹಿಸಿತು. ಅದೇ ಕೃತಿಯ ಪರಿಷ್ಕೃತ ಗದ್ಯಾನುವಾದದ 'ಚಾಮುಂಡಿ ಸಿರಿಚಾಮುಂಡಿ' ೧೯೯೪ರಲ್ಲಿ ಪ್ರಕಟವಾಯಿತು.

ಜನಪದದ ವೀರಕಾವ್ಯ 'ಪಿರಿಯಾಪಟ್ಟಣದ ಕಾಳಗ' ೧೯೯೦ರಲ್ಲಿ ಪ್ರಕಟವಾಯಿತು. ವಿವಿಧ ಸಂಪ್ರದಾಯಗಳಿಗೆ ಸೇರಿದ ೮ ಪಾಠಗಳನ್ನಿಟ್ಟುಕೊಂಡು, ಸಮರ್ಥವಾಗಿ ಸಂಪಾದಿಸಿರುವುದು ಅದರ ವಿಶೇಷ. ೩೫೦ಕ್ಕೂ ಹೆಚ್ಚು ಪುಟಗಳಲ್ಲಿ ಹರಡಿಕೊಂಡಿರುವ ಅದರ ಕಥನರಮ್ಯತೆ ಅಭಿವ್ಯಕ್ತಿ, ಸೊಗಸು ಮತ್ತು ಲಯಮಾಧುರ್ಯಗಳಿಂದ ಆ ಕೃತಿಗೆ ವಿಶೇಷ ಮಹತ್ವವಿದೆ. ಆ ಕೃತಿಗೆ ೧೯೯೦ರ ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿ ಲಭಿಸಿತು. ರಾಜಶೇಖರ ಅವರ ಅಜ್ಜಿ ಶಿವಶರಣೆ ನಿಂಗಮ್ಮನವರು ಜನಪದ ಕಥೆಗಳ ಭಂಡಾರ. ಸ್ಥಳಮಹಿಮೆಯ ಕಥೆಗಳನ್ನು ಹೇಳುವುದರಲ್ಲಿ ಅವರು ಸಿದ್ಧಹಸ್ತರು.

ಅವರು ಹೇಳಿದ ಕಥೆಗಳನ್ನು ಸಂಪಾದಿಸಿ, 'ಮಾತಿನರಗಿಣಿ' ಕೃತಿಯನ್ನು ಪ್ರಕಟಿಸಿದರು. ಅದಕ್ಕೆ ೧೯೯೮ರ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿಯು ಲಭಿಸಿತು.

ಅವರ ಮತ್ತೊಂದು ಕೃತಿ, 'ಕರಪಾಲ ಬಸವ ಪುರಾಣ'ವು, ೧೯೯೬ರ ಕರ್ನಾಟಕ ರಾಜ್ಯ ಜಾನಪದ ಮತ್ತುಯಕ್ಷಗಾನ ಅಕಾಡೆಮಿ ಪ್ರಶಸ್ತಿ'ಗೆ ಪಾತ್ರವಾಯಿತು. ಅವರ ಇನ್ನೊಂದು ಕೃತಿ 'ಪದವಿವರಣಕೋಶ'(ಇತರರೊಂದಿಗೆ) ವು ೧೯೯೩ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉತ್ತೇಜನ ಬಹುಮಾನಕ್ಕೆ ಪಾತ್ರವಾಯಿತು. ರಾಜಶೇಖರ ಅವರು, ಜಾನಪದಕ್ಕೆ ಸಂಬಂಧಿಸಿದಂತೆ ಇನ್ನೂ ೫೦ಕ್ಕೂ ಹೆಚ್ಚು ಕೃತಿಗಳನ್ನು ಕನ್ನಡ ಜಾನಪದ ಸಾಹಿತ್ಯಕ್ಕೆ ನೀಡಿದ್ದಾರೆ. ಚಿನ್ನದ ತುಪ್ಪಳು, ಅಭಿನವಕಾಳಿದಾಸ, ದಲಿತ ಭಾರತ ಮತ್ತು ವಿದ್ಯಾವಿಶಾರದೆ ಕಂತಿ ಕೃತಿಗಳನ್ನು ಮಕ್ಕಳಿಗಾಗಿ ಬರೆದಿದ್ದಾರೆ. ಮಹಾಪುರಾಣಗಳು, ಮಾಳವಿಕಾಗ್ನಿಮಿತ್ರ ನಾಟಕದ ಕಥೆ, ಅಭಿಜ್ಞಾನಶಾಕುಂತಲ ನಾಟಕದ ಕಥೆಗಳನ್ನು ಇತರರೊಡನೆ ಸೇರಿ ಪ್ರಕಟಿಸಿದ್ದಾರೆ. ಮಾನಸದೀಪ್ತಿ, ಪ್ರತಿಬಿಂಬ ಮತ್ತು ಸ್ವಾತಿಮುತ್ತುಗಳು ಅವರ ಕವನ ಸಂಕಲನತ್ರಯಗಳು. ಹಾಗೂ ಅವರ ೨೫ಕ್ಕೂ ಹೆಚ್ಚು ಸಂಶೋಧನಾ ಲೇಖನಗಳು ಪ್ರಕಟವಾಗಿವೆ.

ಇಂತಹ ಉತ್ಸಾಹಿ ರಾಜಶೇಖರ ಅವರ ಜಾನಪದದ ಕೊಡುಗೆಯನ್ನು ಗಮನಿಸಿದ 'ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯವರು ಅವರಿಗೆ ೧೯೯೬ರ 'ಜಾನಪದ ತಜ್ಞ' ಪ್ರಶಸ್ತಿಯನ್ನಿತ್ತು ಗೌರವಿಸಿತು. ವಿವಿಧ ಸಂಘ ಸಂಸ್ಥೆಗಳು ಅವರ ಪರಿಶ್ರಮವನ್ನು ಗೌರವಿಸಿ, ಜಾನಪದಸಾಹಿತ್ಯ ವಿಭೂಷಣ, ಜನಪದಗಾಯಕರತ್ನ, ಜಾನಪದ ಕಲಾನಿಧಿ, ಕನಶ್ರೀ ಮುಂತಾದ ಪ್ರಶಸ್ತಿಗಳನ್ನಿತ್ತು ಗೌರವಿಸಿದೆ.

ಸುಮಾರು ೩೪ ವರ್ಷಗಳ ಬೋಧನಾನುಭವವಿರುವ ಡಾ. ಪಿ.ಕೆ. ರಾಜಶೇಖರ ಅವರು ಬೋಧಿಸಿದ ವಿಷಯಗಳು ಹಲವಾರು. ಆಳವಾದ ಸಂಶೋಧನಾನುಭವವನ್ನು ಹೊಂದಿ ಭಾಗವಹಿಸಿದ ಸಮ್ಮೇಳನ ಮತ್ತು ವಿಚಾರಗೋಷ್ಠಿಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಜಾನಪದವನ್ನು ವೃತ್ತಿ-ಪ್ರವೃತ್ತಿ ಎರಡರಲ್ಲಿಯೂ ಒಡನಾಟವನ್ನಾಗಿಸಿಕೊಂಡು ಅವರು ಆ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರ, ಅವರಿಗೆ ತಮ್ಮ ಅಭಿಮಾನಿಗಳಿಂದ ಬಂದ ಅಭಿಮಾನದ ಪ್ರಶಸ್ತಿ ಕರ್ನಾಟಕದ ಎಲ್ಯಾಸ್ ಲೋನ್‌ರಾಟ್.

ಕೃತಿ : ಸಹೃದಯ ದೀಪಿಕೆ
ಲೇಖಕರು : ಶ್ರೀ ರಂಗಧಾಮಯ್ಯ
ಪ್ರಕಾಶನ : ಶ್ರೀರಂಗ ಪ್ರಕಾಶನ, ಮೈಸೂರು

ಪಿ.ಕೆ. ರಾಜಶೇಖರ

ಕನ್ನಡ ಜಾನಪದ ಕ್ಷೇತ್ರದಲ್ಲಿ ಡಾ. ಪಿ.ಕೆ. ರಾಜಶೇಖರ ಅವರದು ಮಹತ್ವದ ಹೆಸರು. ಅವರ ಹಾಗೆ ಕನ್ನಡ ಜಾನಪದ ಸಂಗ್ರಹ ಮತ್ತು ಸಂಶೋಧನ ಕಾರ್ಯಗಳಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡವರು ವಿರಳ. ಅವರು ಈ ಕೆಲಸವನ್ನು ತುಂಬು ಶ್ರದ್ಧೆ ಮತ್ತು ಪರಿಶ್ರಮದಿಂದ ನಡೆಸಿಕೊಂಡು ಬಂದಿದ್ದಾರೆ. ಅವರು ಜನಪದ ಗಾಯಕರೂ ಕೂಡ; ಇದನ್ನು ಜನಪದ ಗೀತೆಗಳ ಮೂಲ ಮುಟ್ಟುಗಳನ್ನು ಪ್ರಚುರಗೊಳಿಸಲು ಅವರು ಬಳಸಿಕೊಂಡಿದ್ದಾರೆ. ಡಾ. ರಾಜಶೇಖರ ಅವರು ಜನಪ್ರಿಯ ಅಧ್ಯಾಪಕರು; ವಿದ್ಯಾರ್ಥಿಗಳಿಗೆ ಮೆಚ್ಚಿನ ಮೇಷ್ಟ್ರು. ಅವರು ಸರಳರು, ಸುಮನಸರು; ಶಿಷ್ಯವತ್ಸಲರು; ಸ್ನೇಹಮಯಿ. ಜೊತೆಗೆ ಭಾಷಾಂತರಕಾರರೂ ಸೃಜನಶೀಲ ಬರಹಗಾರರೂ ಆಗಿರುವುದು ಇನ್ನೊಂದು ವಿಶೇಷ.

ಡಾ. ರಾಜಶೇಖರ ಅವರು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ರೈತ ಕುಟುಂಬವೊಂದರಲ್ಲಿ ೧೯೪೬ ಅಕ್ಟೋಬರ್ ೩ರಲ್ಲಿ ಜನಿಸಿದರು. ತಾಯಿ ಶ್ರೀಮತಿ ಪುಟ್ಟಮ್ಮನವರು, ತಂದೆ ಶ್ರೀ ಪಿ.ಡಿ. ಕೆಂಪೇಗೌಡರು. ಪ್ರೌಢ ಶಾಲೆಯವರೆಗೆ ತಮ್ಮ ಹುಟ್ಟೂರಲ್ಲೆ ವಿದ್ಯಾಭ್ಯಾಸ ಮಾಡಿದ ಅವರು, ಪದವಿ ಮತ್ತು ಸ್ನಾತಕೋತ್ತರ ಶಿಕ್ಷಣವನ್ನು ಕ್ರಮವಾಗಿ ಮೈಸೂರು ಮಹಾರಾಜಾ ಕಾಲೇಜು ಮತ್ತು ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪೂರೈಸಿದರು. ಅವರು ಸಿದ್ಧಪಡಿಸಿದ **ದಕ್ಷಿಣ ಕರ್ನಾಟಕದ ಜನಪದ ಪುರಾಣಗಳು** ಎಂಬ ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ. (೧೯೮೧) ಪದವಿ ದೊರೆತಿದೆ. ಡಾ. ರಾಜಶೇಖರ ಅವರು ೧೯೭೪ ರಿಂದ ೧೯೯೯ರವರೆಗೆ ಮಹಾರಾಜಾ ಕಾಲೇಜು, ಲಲಿತಕಲೆಗಳ ಕಾಲೇಜು ಮತ್ತು ಯುವರಾಜಾ ಕಾಲೇಜುಗಳಲ್ಲಿ ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಪ್ರಸ್ತುತ ೧೯೯೯ರ ಜೂನ್ ೨೦ರಿಂದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಪ್ರವಾಚಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಡಾ. ರಾಜಶೇಖರ ಅವರದು ಬಹುಮುಖ ಪ್ರತಿಭೆ. ಅವರು ಪಿಎಚ್.ಡಿ.ಗಾಗಿ ಸಂಶೋಧನೆ ಕೈಗೊಂಡಿದ್ದಲ್ಲದೆ, ಯುಜಿಸಿ ನೆರವಿನಿಂದ **ದೊಂಬಿದಾಸರ ಕಾವ್ಯಗಳು ಮತ್ತು ಅವರ ಜೀವನ ವಿಧಾನ** ಎಂಬ ಸಂಶೋಧನಾ ಪ್ರಬಂಧವನ್ನು ಸಿದ್ಧಪಡಿಸಿದ್ದಾರೆ. ಅವರು ಜಾನಪದ ಕ್ಷೇತ್ರ ಕಾರ್ಯದ ಜೊತೆ

ಜೊತೆಗೆ ಅನೇಕ ಸಮ್ಮೇಳನ ಹಾಗೂ ವಿಚಾರಗೋಷ್ಠಿಗಳಲ್ಲಿ ಭಾಗವಹಿಸಿ ಜಾನಪದ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅಮೂಲ್ಯ ಪ್ರಬಂಧಗಳನ್ನು ಮಂಡಿಸಿದ್ದಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ರಾಜ್ಯ ಕ್ರೀಡಾ ಇಲಾಖೆಯ ಮತ್ತು ಯುವಜನ ಸೇವಾ ಇಲಾಖೆಯ ಆಶ್ರಯದಲ್ಲಿ ಕಮ್ಮಟ ಶಿಬಿರದ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಅಮೆರಿಕೆಯ ಪ್ರವಾಸಾನುಭವ ಕೂಡ ಅವರಿಗಿದೆ. ಪಿರಿಯಾಪಟ್ಟಣದ ಕನ್ನಡ ಕುಲಬಂಧು ಹಿರಿಯ ವಿದ್ಯಾರ್ಥಿ ಸಂಘದ ಮತ್ತು ಹೊನ್ನಾರು ಜನಪದ ಗಾಯಕರು ವೃಂದದ ಸಂಸ್ಥಾಪಕರಾಗಿ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಈಗ ಡಾ. ರಾಜಶೇಖರ ಅವರು ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿದ್ದಾರೆ. ಅವರು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಪಾತ್ರರಾಗಿದ್ದಾರೆ. ಜನಪದ ಮಹಾಕಾವ್ಯ 'ಮಲೆಯ ಮಾದೇಶ್ವರ' ಕ್ಕೆ ೧೯೭೩ರ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ ದೊರೆತಿದೆ. ಅವರ 'ಪಿರಿಯಾಪಟ್ಟಣದ ಕಾಳಗ', 'ಕರಪಾಲ ಬಸವಪುರಾಣ' ಮತ್ತು 'ಮಾತಿನರಗಿಣಿ' ಗಳಿಗೆ ಕ್ರಮವಾಗಿ ೧೯೯೦, ೧೯೯೬ ಮತ್ತು ೧೯೯೮ರ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪುಸ್ತಕ ಬಹುಮಾನಗಳು ದೊರೆತಿವೆ. ಎಲ್ಲಕ್ಕೂ ಮಿಗಿಲಾಗಿ ೧೯೯೭ರಲ್ಲಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ 'ಜಾನಪದ ತಜ್ಞ' ಪ್ರಶಸ್ತಿ ಪಡೆದಿರುವುದು ವಿಶೇಷವಾಗಿದೆ.

ಜಾನಪದದ ಆಸಕ್ತಿ ಡಾ. ರಾಜಶೇಖರ ಅವರಿಗೆ ಹುಟ್ಟಿನಿಂದಲೇ ಬಂದಂತೆ ಕಾಣುತ್ತದೆ. ಒಂದು ರೀತಿಯಲ್ಲಿ ಅವರ ಕುಟುಂಬವೇ ಜಾನಪದಮಯವಾಗಿತ್ತೆಂದು ಅವರು ಹೇಳುತ್ತಾರೆ. ಅವರ ತಂದೆ ಜನಪದ ವೈದ್ಯರಾಗಿದ್ದರು. ಅವರ ಮನೆಯಲ್ಲೇ ಇದ್ದ ನಿಂಗಜ್ಜಿ ಹೇಳುತ್ತಿದ್ದ ಕಥೆಗಳು ಮತ್ತು ಅಜ್ಜಿ ಹುಣಸೇಕುಪ್ಪೆಯಮ್ಮನ ಜನಪದ ಗೀತೆಗಳು ಅವರಲ್ಲಿ ಸಾಕಷ್ಟು ಕುತೂಹಲವನ್ನು ಕೆರಳಿಸಿದುವು. ಅದು ಕಾರಣ ಅವರು ಬಾಲ್ಯದಲ್ಲೆ ಜನಪದ ಸಾಹಿತ್ಯದ ಸೊಗಸಿಗೆ ಮಾರುಹೋದುದರಲ್ಲಿ ಆಶ್ಚರ್ಯವಿಲ್ಲ. ಮುಂದೆ ಉನ್ನತ ಶಿಕ್ಷಣಕ್ಕಾಗಿ ಮೈಸೂರಿಗೆ ಬಂದಾಗ ಗಂಭೀರ ಅಧ್ಯಯನದತ್ತ ಹೆಜ್ಜೆ ಇಡುತ್ತಿದ್ದ ಜಾನಪದ ಅವರ ಪ್ರಧಾನ ಆಸಕ್ತಿಯಾಗಿ ರೂಪುಗೊಂಡದ್ದು ಸಹಜವೇ ಆಗಿತ್ತು. ಆ ಕಾಲಕ್ಕೆ ದೇಜಗೌ, ಹಾಮಾನಾ ಅವರಂಥ ಹಿರಿಯರ ನೇತೃತ್ವದಲ್ಲಿ ನಡೆಯುತ್ತಿದ್ದ ಜಾನಪದ ಚಟುವಟಿಕೆಗಳಿಂದ ಪ್ರಚೋದಿತರಾಗಿದ್ದರು. ಕನ್ನಡ ಜನಪದ ಸಾಹಿತ್ಯದಲ್ಲಿ ದೊರೆಯುವ ಎಲ್ಲವನ್ನೂ ಸಂಗ್ರಹಿಸಿ ಪ್ರಕಟಿಸಬೇಕೆನ್ನುವ 'ಗೀಳ'ನ್ನು ಹತ್ತಿಸಿಕೊಂಡ ರಾಜಶೇಖರ ಅವರು ವಾಸ್ತವವಾಗಿಯೂ ಮಹತ್ತಾದುದನ್ನೆ ಸಾಧಿಸಿದ್ದಾರೆ.

ಡಾ. ರಾಜಶೇಖರ ಅವರು ಬಾಲ್ಯದಿಂದಲೇ ಜನಪದ ಗಾಯಕರಾಗಿಯೂ ತಮ್ಮನ್ನು ರೂಪಿಸಿಕೊಂಡದ್ದು ಅವರ ಸಾಧನೆಯ ಇನ್ನೊಂದು ಮುಖ. ಕ್ಷೇತ್ರಕಾರ್ಯ

ಸಂದರ್ಭದಲ್ಲಿ ಜನಪದ ಸಾಹಿತ್ಯ ಸಾಮಗ್ರಿಯನ್ನಲ್ಲದೆ, ಸಂಗೀತ ಸಾಮಗ್ರಿಯನ್ನೂ ಸಂಗ್ರಹಿಸಿಕೊಂಡರು. ಹಾಡುವ ಸಾಮರ್ಥ್ಯ ಅವರಿಗೆ ಹುಟ್ಟುಗುಣವಾಗಿಯೇ ಬಂದದ್ದು. ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಯಾಗಿದ್ದಾಗಲೆ ಅವರು ಹಾಡುತ್ತಿದ್ದರಂತೆ. ಅದಕ್ಕೆ ಅವರ ಆಗಿನ ಗುರುಗಳಾಗಿದ್ದ ಶಂಕರ ಮೇಷ್ಟ್ರು, ಕಾಳಪ್ಪ ಮೇಷ್ಟ್ರು ಮತ್ತು ಅಹ್ಮದ್ ಹಫೀಜ್ ಅವರ ಪ್ರೋತ್ಸಾಹ ದೊರೆತಿದ್ದನ್ನು ಅವರು ಸ್ಮರಿಸಿಕೊಳ್ಳುತ್ತಾರೆ. ಪ್ರೌಢಶಾಲೆಯಲ್ಲೂ ಇದು ಮುಂದುವರಿಯಿತೆಂದೂ, ಅಲ್ಲಿನ ಗೊರಳ್ಳಿ ಚಲುವಯ್ಯನವರೂ ಶಿವನಂಜದೇವರೂ ಉತ್ತೇಜನ ನೀಡದರೆಂದೂ ರಜಶೇಖರ್ ನೆನಪಿಸಿಕೊಳ್ಳುತ್ತಾರೆ.

ಜನಪದ ಗೀತೆಗಳನ್ನು ಮೂಲ ಮಟ್ಟುಗಳಲ್ಲಿ ಹಾಡಿ ಪ್ರಚುರಪಡಿಸುವ ಉದ್ದೇಶ ಅವರದು. ಇದೇ ಉದ್ದೇಶಕ್ಕಾಗಿ ಅವರು 'ಹೊನ್ನಾರು ಜನಪದ ಗಾಯಕರ ವೃಂದ' ಎಂಬ ಗಾಯನ ಸಂಸ್ಥೆಯನ್ನು ಕಟ್ಟಿ ಬೆಳೆಸಿದರು. ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನೆಯ ಸಂದರ್ಭಗಳಲ್ಲಿ ಡಾ. ರಾಜಶೇಖರ ಅವರು ವಿವಿಧ ವೇದಿಕೆಗಳಲ್ಲಿ ಹಾಡಿದ ಉದಾಹರಣೆಗಳು ಇವೆ. ಅವರೇ ಸಂಪಾದಿಸಿ ಪ್ರಕಟಿಸಿದ ಬೆಟ್ಟದ ಚಾಮುಂಡಿ, ಮಂಟೇಸ್ವಾಮಿ, ಮಾದೇಶ್ವರ ಕಾವ್ಯಗಳಿಂದ ಆಯ್ದ ಭಾಗಗಳನ್ನು ಹಾಡಿ ಮೆಚ್ಚುಗೆಗೆ ಪಾತ್ರರಾಗಿದ್ದರು. ದಿನಕಳೆದಂತೆ ತಮಗರಿವಿಲ್ಲದೆಯೇ ರಾಜಶೇಖರ ಅವರು ಶ್ರೇಷ್ಠ ಜನಪದ ಗಾಯಕರಾಗಿ ರೂಪುಗೊಂಡರು. ಒಂಟಿಯಾಗಿ ಹಾಡುತ್ತಿದ್ದ ರಾಜಶೇಖರ ಅವರು ಮುಂದೆ ವೃಂದದೊಡನೆ ಹಾಡಲು ಆರಂಭಿಸಿದರು.

ಜಾನಪದ ಕ್ಷೇತ್ರದಲ್ಲಿ ಡಾ. ರಾಜಶೇಖರ ಅವರು ಅನೇಕ ವರ್ಷಗಳಿಂದ ಕೃಷಿ ಮಾಡುತ್ತಾ ಬಂದವರು. ಈ ಅವಧಿಯಲ್ಲಿ ಅವರು ಬೆಟ್ಟದ ಚಾಮುಂಡಿ (೧೯೭೨), ಮಲೆಯ ಮಾದೇಶ್ವರ (೧೯೭೩), ಮಾಗಡಿ ಕೆಂಪೇಗೌಡ (೧೯೭೫), ಜನಪದ ಬಸವ ಪುರಾಣ (೧೯೮೧), ಪಿರಿಯಾಪಟ್ಟಣದ ಕಾಳಗ (೧೯೯೦), ಭೂಮಿ ತೂಕದ ಮಾತು (೧೯೯೧), ಕರಪಾಲ ಬಸವ ಪುರಾಣ (೧೯೯೫), ಮುತ್ತಿನ ಕಣಜ (೨೦೦೦), ಮಾತಿನರಗಿಣಿ (೧೯೯೮), ಜಾನಪದ ಸಂಭ್ರಮ (೨೦೦೩) ಮೊದಲಾದ ಮಹತ್ವದ ಕೃತಿಗಳನ್ನು ಪ್ರಕಟಿಸಿದ್ದಾರೆ; ಆ ಮೂಲಕ ಅಧ್ಯಯನದ ಹೊಸ ಸಾಧ್ಯತೆಗಳನ್ನು ತೆರೆದಿದ್ದಾರೆ. ದಕ್ಷಿಣ ಕರ್ನಾಟಕದಲ್ಲಿ ಹೆಚ್ಚು ಪ್ರಚುರದಲ್ಲಿರುವ ಒಂದು ರೋಚಕ ಕಥೆ 'ಬೆಟ್ಟದ ಚಾಮುಂಡಿ', ಕರ್ನಾಟಕದ ಪ್ರಮುಖ ದೀರ್ಘ ಲಾವಣಿಗಳಲ್ಲಿಯೂ ಇದು ಒಂದಾಗಿದೆ. ಕಂಸಾಳೆ ಸಂಪ್ರದಾಯದ ಈ ಕಥನಗೀತೆ ಹಲವು ವೈಶಿಷ್ಟ್ಯಗಳಿಂದ ಕೂಡಿದ್ದು, ಜನಪದ ಪುರಾಣವನ್ನು ಸಾಕಷ್ಟು ಸಮರ್ಪಕವಾಗಿ ಒದಗಿಸುತ್ತದೆ. ಚಾಮುಂಡಿ ಬಗೆಗೆ ಹಲವಾರು ಪಾಠಗಳು ದೊರೆತಿವೆಯಾದರೂ, ಸಮಗ್ರ ರೂಪ ದೊರೆಯುತ್ತಿರುವುದು ಇದರಲ್ಲಿಯೇ.

'ಬೆಟ್ಟದ ಚಾಮುಂಡಿ' ಒಂದು ಉತ್ತಮ ಸಾಹಿತ್ಯ ಕೃತಿ ಕೂಡ. ವಿದ್ವತ್ಪೂರ್ಣವಾದ ಪ್ರಸ್ತಾವನೆ ಇದರ ಮಹತ್ವವನ್ನು ಹೆಚ್ಚಿಸಿದೆ. ಆವರೆಗೆ ದೊರೆತಿದ್ದ ಚಾಮುಂಡಿ ಪುರಾಣದ ಕಥಾ ಭಾಗಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿರುವುದು ಉಲ್ಲೇಖನಾರ್ಹ. ಜನಪದ ಸಂಗೀತವನ್ನು ಮೊಟ್ಟಮೊದಲಿಗೆ ಶಾಸ್ತ್ರೀಯವಾಗಿ ಇಲ್ಲಿ ಪ್ರಸ್ತಾಪಿಸಲಾಗಿದೆ. ಶಿಷ್ಟ ಸಂಗೀತದ ರಾಗಗಳನ್ನು, ಸ್ವರ ವಿನ್ಯಾಸಗಳನ್ನೂ ಜನಪದ ಸಂಗೀತಕ್ಕೆ ಅನ್ವಯಿಸಿ ನೋಡುವ ಪ್ರಯತ್ನವನ್ನು ರಾಜಶೇಖರ ಇಲ್ಲಿ ಮಾಡಿದ್ದಾರೆ. ಜನಪದದ ಏಳು ಜನ ಮಾರಿಯರು, ನಂದಕಾಸುರ, ಉರಿಕಾತಿ, ಐಸಾಸುರರು ಶಿಷ್ಟ ಪುರಾಣದ ಸಪ್ತ ಮಾತೃಕೆಯರು, ಅಂಧಕಾಸುರ, ಚಂಡಿ, ರಕ್ತ ಬೀಜಾಸುರರನ್ನು ಹೋಲುತ್ತಾರೆಂಬ ಆಕರ್ಷಕ ಸಂಶೋಧನ ವಿಷಯಗಳು ಇಲ್ಲಿವೆ. ಈ 'ಬೆಟ್ಟದ ಚಾಮುಂಡಿ'ಯ ಮೂಲಕ ಡಾ. ರಾಜಶೇಖರ ಅವರು ಜಾನಪದ ಕ್ಷೇತ್ರಕ್ಕೆ ಪ್ರವೇಶಿಸಿದವರು. ಶಾಸ್ತ್ರೀಯವಾಗಿ ಸಂಪಾದಿಸಿ ಕೊಟ್ಟಿರುವ ಈ ಕೃತಿ ಒಂದು ಅಮೂಲ್ಯ ಕೊಡುಗೆಯಾಗಿದೆ.

ಕನ್ನಡ ಜಾನಪದ ಇತಿಹಾಸದಲ್ಲಿ ಡಾ. ರಾಜಶೇಖರ ಅವರ 'ಮಲೆಯ ಮಾದೇಶ್ವರ' ಮಹಾಕಾವ್ಯದ ಪ್ರಕಟಣೆ ಒಂದು ಮಹತ್ವದ ಘಟನೆ. ಅವರನ್ನು ಬಲ್ಲವರಲ್ಲಿ ಇದೊಂದು ಮಹಾ ಸಾಹಸದ ಕಥೆಯಾಗಿದೆ. ಇದರ ಸಂಗ್ರಹ, ಸಂಪಾದನೆ, ವಿಶ್ಲೇಷಣೆಗಳಲ್ಲಿ ಅವರು ತೋರಿದ ಉತ್ಸಾಹ, ವಹಿಸಿದ ಆಸಕ್ತಿ, ಪಟ್ಟ ಕಷ್ಟಪರಂಪರೆ, ಖರ್ಚು ಮಾಡಿದ ಹಣ ಇವು ಒಂದೊಂದು ಕನ್ನಡ ಜಾನಪದ ಕ್ಷೇತ್ರಕಾರ್ಯದ ರೋಮಾಂಚಕ ಇತಿಹಾಸವನ್ನೆ ಹೇಳುತ್ತದೆ. ಇಷ್ಟು ಶ್ರದ್ಧೆಯ, ತಾಳ್ಮೆಯ, ಸಹಿಷ್ಣತೆಯ, ತಾದಾತ್ಮ್ಯದ ಸಂಗ್ರಹಕಾರರು ಸಿಕ್ಕುವುದು ಅಪರೂಪ. ತಾವೇ ಜಾನಪದ ಎನ್ನುವಷ್ಟು ಜಾನಪದದಲ್ಲಿ ಬೆರತಹೋಗಿರುವ ರಾಜಶೇಖರ ಅವರು, ತಮ್ಮ ಈ ಮಹಾಕಾವ್ಯದ ಪ್ರಕಟಣೆಯಿಂದ ಕನ್ನಡ ಜನಪದ ಕಾವ್ಯ ಸಾಹಿತ್ಯವನ್ನು ಉನ್ನತಿಗೆ ಒಯ್ದಿದ್ದಾರೆ.

'ಬೆಟ್ಟದ ಚಾಮುಂಡಿ' ಪ್ರಕಟವಾದ ತರುಣದಲ್ಲಿಯೇ ಈ ಮಹಾಕಾವ್ಯವನ್ನು ಪ್ರಕಟಿಸಿ ಮಹತ್ತಾದ ಪ್ರಥಮವನ್ನು ರಾಜಶೇಖರ್ ಸಾಧಿಸಿದರು. ಜನಪದ ಕಾವ್ಯ ಸಂಗ್ರಹ ಇದರಿಂದ ಒಂದು ನಿಲುಗಡೆಯನ್ನು ಮುಟ್ಟಿತಲ್ಲದೆ, ಇದುವರೆಗಿನ ಪ್ರಕಟಿತ ಜಾನಪದ ಕೃತಿಗಳಲ್ಲಿ ಇದು ಆಚಾರ್ಯ ಕೃತಿಯಾಗಿದೆ. ಕನ್ನಡ ಜಾನಪದ ವಿದ್ವತ್ತನ್ನು ಸ್ಮಾರಕಗೊಳಿಸಿದ ಇದು, ಆ ದಿಶೆಯಲ್ಲಿ ಹೊಸ ದಿಗಂತವನ್ನೇ ತೆರೆಯಿತು. ಇದು ಜನಪದ ನಾಯಕನೊಬ್ಬನ ಸುವಿಸ್ತಾರ ಸಾಂಸ್ಕೃತಿಕ ಅಧ್ಯಯನವಾಗಿದ್ದು, ಮಾದೇಶ್ವರನನ್ನು ಕುರಿತಂತೆ ಅನೇಕ ರೀತಿಯ ಸಂಶೋಧನಾತ್ಮಕ ಹೊಳಹುಗಳಿಗೆ ಕಾರಣವಾಗಿದೆ. ಮೊದಲ ಭಾರಿಗೆ ವಿನೂತನ ವೈಜ್ಞಾನಿಕ ಸಂಪಾದನಾ ವಿಧಾನದಿಂದ ಸಮರ್ಥವೂ ಸಮಗ್ರವೂ ಆದ ಮಹಾಕಾವ್ಯವವನ್ನು ಸಂಪಾದಿಸಿಕೊಟ್ಟ ಕೀರ್ತಿ

ರಾಜಶೇಖರ ಅವರದಾಯಿತು. ಸಾವಿರದ್ಯೆನೂರು ಪುಟಗಳ ಎರಡು ಸಂಪುಟಗಳನ್ನ ಈ ಮಹಾಕಾವ್ಯ ಒಮ್ಮೆಗೇ ಬೆರಗನ್ನೂ ಗೌರವವನ್ನೂ ಮೂಡಿಸುತ್ತದೆ. ಇದರ ಪ್ರಕಟಣೆಯೊಡನೆ ಆ ಕಾಲದಲ್ಲಿ ವಯಸ್ಸಿಗೂ ಮೀರಿದ ಕೀರ್ತಿಗೆ ಭಾಜನರಾದುದಲ್ಲದೆ, ಕನ್ನಡ ಜಾನಪದದಲ್ಲಿ ಕೆಲಸ ಮಾಡುತ್ತಿರುವವರ ಅಗ್ರಪಂಕ್ತಿಗೆ ಸೇರಿದವರಾದರು.

ಜಾನಪದ ಅಧ್ಯಯನ ವೈಜ್ಞಾನಿಕ ತಳಹದಿಯ ಮೇಲೆ ರೂಪುಗೊಳ್ಳುತ್ತಿದ್ದ ಆರಂಭದ ದಿನಗಳಲ್ಲಿ ಪ್ರಕಟವಾದ ಇವರ ಇನ್ನೊಂದು ಕಾವ್ಯಕೃತಿ 'ಮಾಗಡಿ ಕೆಂಪೇಗೌಡ'. ಕೆಂಪೇಗೌಡನ ಬಗ್ಗೆ ಪ್ರಚಲಿತವಿರುವ ಕಾವ್ಯವನ್ನು ಅವರು ತಮ್ಮ ಮಿತ್ರರೊಡನೆ ಇಲ್ಲಿ ಸಂಪಾದಿಸಿಕೊಟ್ಟಿದ್ದಾರೆ. ವಿವಿಧ ಸಂಪ್ರದಾಯಗಳ ಭಿನ್ನಪಾಠಗಳಿಂದ ಪರಿಷ್ಕೃತವಾಗಿರುವ ಈ ಕೃತಿ ಶಾಸ್ತ್ರೀಯ ಸಂಪಾದನೆಗೆ ಒಂದು ಉತ್ತಮ ಮಾದರಿ. ಕೆಂಪೇಗೌಡನ ಬಗೆಗಿನ ಜನಪದ ಕಾವ್ಯವನ್ನು ಸಮಗ್ರವಾಗಿ ಮತ್ತು ಸಮರ್ಥವಾಗಿ ಸಂಪಾದಿಸಿಕೊಟ್ಟಿರುವುದು ಇದೇ ಮೊದಲು. ಇದು ಕೆಂಪೇಗೌಡನ ಜೀವನ ವೃತ್ತಾಂತವನ್ನು ಜನಪ್ರಿಯ ರೀತಿಯಲ್ಲಿ ಹೇಳುತ್ತದೆ. ಹನ್ನೊಂದು ಭಾಗಗಳಲ್ಲಿ ಹರಡಿಕೊಂಡಿರುವ ಈ ಕಥೆ ಕುತೂಹಲಕಾರಿ ಘಟನಾ ಪರಂಪರೆಯಿಂದ ರಂಜಿಸಿದೆ. ಕೆಂಪೇಗೌಡನ ವೀರ ಜೀವನವನ್ನು ಕುರಿತಂತೆ ಜನಪದ ಸ್ಮರಣಶಕ್ತಿ ಉಳಿಸಿಕೊಂಡು ಬಂದಿರುವ ಚಾರಿತ್ರಿಕ ಪುರಾವೆಯ ದೃಷ್ಟಿಯಿಂದಲೂ ಈ ಕೃತಿ ಮಹತ್ವದ್ದು. ಈ ಕಾರಣದಿಮದಾಗಿ ಇದನ್ನು ಐತಿಹಾಸಿಕ ವೀರಕಾವ್ಯವೆನ್ನಬಹುದು. ಇಲ್ಲಿನ ಅಭಿಜಾತ ಕಥನಕಲೆ, ಭಾಷೆಯ ಸ್ವೋಪಜ್ಞತೆ ಹಾಗೂ ಸಾಹಿತ್ಯಿಕ ಸೊಗಸುಗಳು ಕೃತಿಯನ್ನು ದೊಡ್ಡದಾಗಿಸಲು ಕಾರಣವಾಗಿದೆ. ಆ ಕಾಲದ ಧಾರ್ಮಿಕ ಚಾರಿತ್ರಿಕ ಮತ್ತು ಸಾಮಾಜಿಕ ಅಧ್ಯಯನಕ್ಕೆ ವಸ್ತುವಾಗುವ ಈ ಕೃತಿ ಕನ್ನಡ ಜಾನಪದ ಅಧ್ಯಯನಕ್ಕೆ ಸಂದ ಒಂದು ಗಮನಾರ್ಹ ಕಾಣಿಕೆ ಎನ್ನುವುದು ನಿಶ್ಚಯ.

ಜಾನಪದ ಸಂಶೋಧನ ಜಗತ್ತಿಗೆ ಡಾ. ರಾಜಶೇಖರ ಅವರು ನೀಡಿರುವ ಇನ್ನೊಂದು ಮಹತ್ವದ ಕೊಡುಗೆ 'ಪಿರಿಯಾಪಟ್ಟಣದ ಕಾಳಗ' ಹಲವು ವೈಶಿಷ್ಟ್ಯಗಳ ಮಹಾಕೃತಿ ಇದು. ಸಾಹಿತ್ಯ ಮತ್ತು ಇತಿಹಾಸಗಳೆರಡರ ದೃಷ್ಟಿಯಿಂದಲೂ ಇದೊಂದು ಅಪೂರ್ವ ಉಪಾದೇಯ ಕೃತಿ. ವಿವಿಧ ಸಂಪ್ರದಾಯಗಳಿಗೆ ಸೇರಿದ ಎಂಟು ಪಾಠಗಳನ್ನಿಟ್ಟುಕೊಂಡು ಸಮರ್ಥರೀತಿಯಲ್ಲಿ ಸಂಪಾದಿಸಿ ಕೊಟ್ಟಿರುವುದು ಇದರ ಮೊದಲ ಆಕರ್ಷಣೆ. ಮೈಸೂರು ಚರಿತ್ರೆಯ ಮೇಲೆ ಬೆಳಕನ್ನು ಚೆಲ್ಲುವ ಹಲವಾರು ಅಂಶಗಳನ್ನು ಹೊಂದಿರುವುದು ಕೃತಿಯ ಇನ್ನೊಂದು ಶ್ಲಾಘ್ಯ ಮುಖ. ಕಥಾರೂಪದ ಐತಿಹ್ಯದಿಂದ ಸತ್ಯಾಂಶವನ್ನು ಪ್ರತ್ಯೇಕಿಸಿದರೆ, ಇತಿಹಾಸದ ರಚನೆಗೆ ಇದೊಂದು ಅಮೂಲ್ಯ ಆಕರ. ಕಥನ ರಮ್ಯತೆ, ಅಭಿವ್ಯಕ್ತಿಯ ಸೊಗಸು ಮತ್ತು ಲಯ ಮಾಧುರ್ಯಗಳಿಂದ ಕೃತಿಗೆ ವಿಶೇಷ ಮಹತ್ವ ಲಭ್ಯವಾಗಿದೆ. ಮುನ್ನೂರಕ್ಕೂ ಮಿಕ್ಕ

ಪುಟಗಳಲ್ಲಿ ಮೂರು ಸಾಲುಗಳಂತೆ ಹರಡಿಕೊಂಡಿರುವ ಈ ಕಾವ್ಯ ವಾಚಕನಿಗೊಂದು ವಿಶೇಷ ಅನುಭವ. ಇಷ್ಟೊಂದು ವೈವಿಧ್ಯ ಪೂರ್ಣವಾಗಿ, ದೀರ್ಘವಾಗಿ, ಸಂಕೀರ್ಣವಾಗಿ ಬಿಚ್ಚಿಕೊಳ್ಳುವ ಇನ್ನೊಂದು ಜನಪದ ವೀರಕಾವ್ಯವಿಲ್ಲ. ಕೃತಿಯ ಸಾಮಾಜಿಕ ಸಾಂಸ್ಕೃತಿಕ ಮುಖವೂ ಲಾಭಕರ. 'ಪ್ರಸ್ತಾವನೆ'ಯಲ್ಲಿನ ಹಲವು ವಿಷಯಗಳ ಉಪಯುಕ್ತ ಚರ್ಚೆ ಕಾವ್ಯಕ್ಕೆ ಉತ್ತಮ 'ಪ್ರವೇಶ'ವನ್ನು ಒದಗಿಸಿದೆ.

ಡಾ. ರಾಜಶೇಖರ ಅವರು ಸಂಪಾದಿಸಿಕೊಟ್ಟಿರುವ ಮತ್ತೆರಡು ಮಹತ್ವದ ಕೃತಿಗಳೆಂದರೆ 'ಜನಪದ ಬಸವ ಪುರಾಣ' ಮತ್ತು 'ಕರಪಾಲ ಬಸವ ಪುರಾಣ'ಗಳು. ವೃತ್ತಿಗಾಯಕ ಪರಂಪರೆಯ ಈ ಕಾವ್ಯಗಳು ಬಸವಣ್ಣನವರ ಜೀವನ ಮತ್ತು ವ್ಯಕ್ತಿತ್ವವನ್ನು ಇತಿಹಾಸ ಹಾಗೂ ಪುರಾಣಗಳ ಮೂಲಕ ಅತ್ಯಂತ ಸೊಗಸಾಗಿ ಕಟ್ಟಿಕೊಡುತ್ತವೆ. 'ಜನಪದ ಬಸವ ಪುರಾಣ'ದಲ್ಲಿ ಹತ್ತು ಕಾವ್ಯಗಳಿವೆ. ಮೊದಲ 'ಆದಿ ಬಸವೇಶ್ವರ' ತಂಬೂರಿ ಸಂಪ್ರದಾಯಕ್ಕೆ ಸಂಬಂಧಿಸಿದ್ದರೆ, ಉಳಿದ ಒಂಬತ್ತು ಕಾವ್ಯಗಳು ನೀಲಗಾರ ಮತ್ತು ದೇವರಗುಡ್ಡ ವೃತ್ತಿಗಾಯಕ ಪರಂಪರೆಗೆ ಸೇರಿದವಾಗಿವೆ. ಪ್ರಸ್ತಾವನೆಯಲ್ಲಿ ಈ ಕಾವ್ಯಗಳ ವಸ್ತುವನ್ನು ಸ್ಥೂಲವಾಗಿ ಪರಿಚಯಿಸಲಾಗಿದೆ. ಸಹಜವಾಗಿಯೇ ಈ ಕಾವ್ಯಗಳ ಭಾಷಾಶೈಲಿಗಳಲ್ಲಿ ವ್ಯತ್ಯಾಸ ಕಂಡುಬಂದಿದೆ. ಐತಿಹಾಸಿಕ ಅಂಶಗಳಿಗಿಂತ ಪುರಾಣ ದೃಷ್ಟಿಯೇ ವಿಶೇಷವಾಗಿರುವುದನ್ನು ಸಂಪಾದಕರು ಗಮನಿಸಿದ್ದಾರೆ. ಇದನ್ನು ಮಹಾಕಾವ್ಯವೆಂದು ಗುರುತಿಸಲು ಲೇಖಕರು ಪ್ರಯತ್ನಿಸಿದ್ದರೂ, ಅವುಗಳ ನಡುವೆ ಏಕಸೂತ್ರತೆಯ ಕೊರತೆ ಇರುವುದರಿಂದ ಹೀಗೆ ಕರೆಯಲು ಬರುವುದಿಲ್ಲ. 'ಕರಪಾಲ ಬಸವ ಪುರಾಣ' ಲೌಕಿಕ ವೃತ್ತಿಗಾಯಕ ವರ್ಗಕ್ಕೆ ಸೇರಿದ್ದು. ಕರಪಾಲದ ಕಥೆಗಳು ಸುಖಾಂತವಾಗಿ ಮುಗಿಯುವುದನ್ನು ಸಂಪಾದಕರು ಉಲ್ಲೇಖಿಸಿರುವರು. ಕರಪಾಲ ಮೇಳ ಬಯಲಾಟದ ಮಟ್ಟುಗಳನ್ನು ಅನುಸರಿಸಿರುವ ವಿಚಾರವನ್ನು ಅವರು ಪ್ರಸ್ತಾಪಿಸಿದ್ದಾರೆ. ಕರಪಾಲ ಬಸವ ಪುರಾಣ ಶಿಷ್ಟ ಬಸವಪುರಾಣದ ಪರಿವರ್ತಿತ ರೂಪ ಎನ್ನುವುದರಲ್ಲಿ ಸತ್ಯಾಂಶವಿದೆ. ಹಾಡು, ನೃತ್ಯ ಮತ್ತು ನಿರೂಪಣೆಗಳಿಂದ ಕೂಡಿದ ಈ ಕಾವ್ಯ ಕರಪಾಲ ಕಾವ್ಯಗಳಲ್ಲಿಯೇ 'ಅಪೂರ್ವ ರತ್ನ' ವೆಂಬ ಸಂಪಾದಕರ ಮಾತನ್ನು ಒಪ್ಪೋಣ.

ಗಾದೆಗಳ ಕ್ಷೇತ್ರದಲ್ಲೂ ಕೆಲಸ ಮಾಡಿರುವ ಡಾ. ರಾಜಶೇಖರ ಅವರು ಈವರೆಗೆ 'ಭೂಮಿ ತೂಕದ ಮಾತು' ಮತ್ತು 'ಮುತ್ತಿನ ಕಣಜ' ಎಂಬ ಎರಡು ಸಂಕಲನಗಳನ್ನು ಪ್ರಕಟಿಸಿದ್ದಾರೆ. ಮೊದಲನೆಯದರಲ್ಲಿ ೧೫೦೧ ಗಾದೆಗಳಿದ್ದು ಅವನ್ನು ಅವರು ನರಸಿಂಹೇಗೌಡ ನಾರಣಾಪುರ ಅವರೊಡನೆ ಸಂಪಾದಿಸಿಕೊಟ್ಟಿದ್ದಾರೆ. ಎರಡನೆಯ ಸಂಕಲನದಲ್ಲಿ ೧೨೩೦ ಗಾದೆಗಳಿದ್ದು, ಮೊದಲನೆಯ ಸಂಕಲನಕ್ಕೆ ಆಯ್ದುಕೊಂಡು ಉಳಿದಿದ್ದ ಗಾದೆಗಳಲ್ಲಿ ಈ ಸಂಕಲನವನ್ನು ಸಿದ್ಧಪಡಿಸಿರುವುದಾಗಿ ಸಂಪಾದಕರು ಹೇಳಿದ್ದಾರೆ. ಗಾದೆಗಳ ಕಥೆಗಳನ್ನು ಕೊಟ್ಟಿರುವುದು

ಈ ಸಂಕಲನದ ಮತ್ತೊಂದು ವೈಶಿಷ್ಟ್ಯವಾಗಿದೆ. ಹಿಂದಿನ ಸಂಕಲನದಲ್ಲಿರುವ ಗಾದೆಗಳನ್ನು ಬಿಟ್ಟು ಹೊಸವನ್ನು ಇಲ್ಲಿ ಸೇರಿಸಲಾಗಿದೆಯೆಂದೂ, ಭಿನ್ನಪಾಠಗಳಿದ್ದಾಗ ಮಾತ್ರ ಹಿಂದೆ ಬಂದಿದ್ದಾದರೂ ಉಳಿಸಿಕೊಳ್ಳಲಾಗಿದೆಯೆಂದೂ ಸಂಪಾದಕರು ವಿವರಣೆ ನೀಡಿದ್ದಾರೆ. ಇಲ್ಲಿನ ಬಹುತೇಕ ಗಾದೆಗಳು ಪ್ರಾದೇಶಿಕ ಸ್ವರೂಪದವು. ಗ್ರಾಮೀಣ ಮೂಲ ಸೊಗಡು ಮತ್ತು ಅನುಭವ ದಟ್ಟವಾಗಿರುವ ಈ ಕೃತಿಗಳು ಗಾದೆಗಳ ಸಾಹಿತ್ಯಕ್ಕೆ ಪ್ರಮುಖ ಕೊಡುಗೆಗಳಾಗಿವೆ. ಜನಪದ ಸಂಸ್ಕೃತಿಯ ಪುನಾರಚನೆಗೆ ಉಪಯುಕ್ತ ಮಾಹಿತಿಯನ್ನು ಇವು ಒದಗಿಸುತ್ತವೆ.

ಡಾ. ರಾಜಶೇಖರ ಅವರು ಜಾನಪದ ಕ್ಷೇತ್ರವನ್ನು ವಿಸ್ತರಿಸುತ್ತಲೇ ಬಂದಿದ್ದಾರೆ ಎನ್ನುವುದಕ್ಕೆ ಅವರ 'ಮಾತಿನರಗಿಣಿ' ಜನಪದ ಕಥಾಸಂಕಲನವು ಒಂದು ಉದಾಹರಣೆ. ಜನಪದ ಕಥಾಕ್ಷೇತ್ರಕ್ಕೆ ಇದೊಂದು ಅಪೂರ್ವ ಕೊಡುಗೆ. ಇದಕ್ಕೆ ಇಲ್ಲಿನ ಬಹುತೇಕ ಕಥೆಗಳು ಮೊದಲಿಗೆ ಪ್ರಕಟವಾಗುತ್ತಿರುವುದು ಒಂದು ಕಾರಣ; ವಿಶಿಷ್ಟ ಕಥೆಗಾರಿಕೆ ಇನ್ನೊಂದು ಕಾರಣ. ಇಲ್ಲಿನ ಕಥೆಗಳನ್ನು ಹೇಳಿರುವ ನಿಂಗಮ್ಮ ಗ್ರಾಮೀಣ ಸಂಸ್ಕೃತಿಯ ಅಪಾರ ಅನುಭವದ ಜೊತೆಗೆ ಶಿಷ್ಟವಲಯದ ಪ್ರಭಾವಕ್ಕೂ ಒಳಗಾಗಿರುವುದು ಒಂದು ವಿಶೇಷ ಸಂಗತಿ. ಶಿಷ್ಟ ಮತ್ತು ಅಶಿಷ್ಟ ಸಂಸ್ಕೃತಿಯ ಪಾರಸ್ಪರಿಕ ಸಂಘರ್ಷವನ್ನು ಕಥೆಗಳಲ್ಲಿ ಕಾಣುತ್ತೇವೆ. ರಾಜಶೇಖರ ಅವರು ಅಪರೂಪದ ಕ್ಷೇತ್ರ ಸಂಶೋಧಕರೆನ್ನುವುದನ್ನು ಪ್ರಸ್ತುತ ಕೃತಿಯೂ ಸ್ಪಷ್ಟಪಡಿಸುತ್ತದೆ. ಮೂಲ ಕಥಾ ನಿರೂಪಕರ ಭಾಷಿಕ ವ್ಯಂಗ್ಯ ಮತ್ತು ನಿರೂಪಣಾ ನೈಪುಣ್ಯವನ್ನು ಸಂಪಾದಕರು ತಮ್ಮ ಯಾವುದೇ ಅಭಿನಿವೇಶನವಿಲ್ಲದೆ ಯಥಾವತ್ತಾಗಿ ಉಳಿಸಿಕೊಳ್ಳುವಲ್ಲಿ ಸಮರ್ಥರಾಗಿದ್ದಾರೆ. ಈ ಕಥಾ ಕೃತಿ ವಸ್ತು ಮತ್ತು ಅಭಿವ್ಯಕ್ತಿ ಸಂಬಂಧವಾದ ಚರ್ಚೆಯನ್ನು ತೀವ್ರಗೊಳಿಸಬಹುದು.

ದಕ್ಷಿಣ ಕರ್ನಾಟಕದ ಜನಪದ ಪುರಾಣಗಳನ್ನು ಕುರಿತು ಪಿಎಚ್.ಡಿ. ಪದವಿಗಾಗಿ ಅಧ್ಯಯನ ನಡೆಸುವುದರ ಮೂಲಕ ರಾಜಶೇಖರ್ ತಮಗಿರುವ ಸಂಶೋಧನ ಸಾಮರ್ಥ್ಯವನ್ನು ತೋರ್ಪಡಿಸಿದ್ದರು. ಆಮೇಲೆ ಕ್ಷೇತ್ರಾಧಾರಿತ ತಮ್ಮ ಮಹತ್ವದ ಕೃತಿಗಳಿಗೆ ಬರೆದ ಪೀಠಿಕೆಗಳಲ್ಲಿ ಹಾಗೂ ಬೇರೆ ಬೇರೆಯ ಲೇಖನಗಳಲ್ಲಿ ಈ ಸಂಶೋಧನೆಯನ್ನು ಅವರು ಮುಂದುವರಿಸಿದರು. ಜಾನಪದ ವೈಜ್ಞಾನಿಕ ಅಧ್ಯಯನದ ಸಂಭ್ರಮದ ದಿನಗಳಲ್ಲಿ ಬರೆದ ಲೇಖನಗಳು ಮತ್ತು ಇತ್ತೀಚಿನ ಲೇಖನಗಳನ್ನೂ ಒಳಗೊಂಡು ಪ್ರಕಟವಾಗಿರುವ ಅವರ 'ಜಾನಪದ ಸಂಭ್ರಮ' ಒಂದು ಮಹತ್ವದ ಹಾಗೂ ಅಧ್ಯಯನ ಪೂರ್ಣ ಕೃತಿಯಾಗಿದೆ. 'ಜಾನಪದ ವಿವಿಧ' ಮತ್ತು 'ವೃತ್ತಿ ಗಾಯಕರು' ಎಂಬ ಎರಡು ಭಾಗಗಳಲಿ ಸಂಕಲಿತವಾಗಿರುವ ಇಲ್ಲಿಯ ಲೇಖನಗಳು ವೈವಿಧ್ಯಪೂರ್ಣವಾಗಿದ್ದು, ವಿಶಿಷ್ಟವೂ ಆಗಿವೆ. ಡಾ. ರಾಜಶೇಖರ ಅವರಿಗೆ ಸಂಶೋಧನೆಯ ಮೇಲಿರುವ ಹಿಡಿತವನ್ನೂ,

ವಿಶ್ಲೇಷಣೆಯ ಪರಿಣತಿಯನ್ನು ಇಲ್ಲಿಯ ಲೇಖನಗಳು ಮತ್ತೊಮ್ಮೆ ಸ್ಪಷ್ಟಪಡಿಸಿವೆ. ಮೊದಲ ಭಾಗದಲ್ಲಿ ಜನಪದ ಉಗ್ರ ಆಚರಣೆ, ಗಣಿತ ಪ್ರಪಂಚ, ಗೃಹವಿಜ್ಞಾನ, ಛಂದಸ್ಸು, ಗ್ರಂಥ ಸಂಪಾದನೆ ಮೊದಲಾದ ವಿಚಾರಗಳು ಮೊದಲ ಬಾರಿಗೆ ಯಥೋಚಿತವಾಗಿ ಪ್ರಸ್ತಾಪಿತವಾಗಿವೆ. ಕರ್ನಾಟಕದಲ್ಲಿ ಪ್ರಚಲಿತವಿರುವ ಎಲ್ಲ ಜನಪದ ವೃತ್ತಿಗಾಯಕರ ಬಗೆಗೆ ವಿವರವಾದ ಮಾಹಿತಿ ದೊರೆಯುವುದು ಈ ಪುಸ್ತಕದ ವಿಶೇಷವೆನಿಸಿದೆ. ಹೀಗಾಗಿ ಪ್ರಸ್ತುತ ಗ್ರಂಥ ಜಾನಪದ ವಿಷಯಿಕವಾದ ಸಮರ್ಥ ಪರಾಮರ್ಶನ ಕೃತಿಯಾಗಿದೆ; ಆಕರಗ್ರಂಥವಾಗಿದೆ.

ಜಾನಪದಕ್ಕೆ ಸಂಬಂಧಿಸಿದಂತೆ ಇನ್ನೂ ಹಲವು ಗ್ರಂಥಗಳನ್ನು ರಾಜಶೇಖರ್ ಪ್ರಕಟಿಸಿದ್ದಾರೆ. ಜಾನಪದ ಗಣಿತ ಪ್ರಕಾರಕ್ಕೆ ಸೇರುವ 'ಜನಪದ ಚಮತ್ಕಾರ ಗಣಿತ' (೧೯೭೫), ಆಯ್ದ ಜನಪದ ಲೆಕ್ಕಗಳು' (೧೯೭೬) ಮತ್ತು 'ಜನಪದ ಗಣಿತ ಪ್ರಪಂಚ' (೧೯೯೯) ಎಂಬ ಕೃತಿಗಳು ಹೊರಬಂದಿವೆ. ಬಹಳ ಕಾಲದ ಅಜ್ಞಾತ ಪ್ರಕಾರವೊಂದನ್ನು ಉದ್ಘಾಟಿಸಿದ ಕೀರ್ತಿ ಅವರದು. ಇಲ್ಲಿನ ಬಹುತೇಕ ಲೆಕ್ಕಗಳು ಗದ್ಯದಲ್ಲಿವೆ; ಕೆಲವು ಪದ್ಯದಲ್ಲೂ ಇವೆ. ಜನಪದರ ವ್ಯಾವಹಾರಿಕತೆ ಮತ್ತು ಬುದ್ಧಿ, ಚಮತ್ಕಾರಗಳಿಗೆ ಇವು ಸಮರ್ಥವಾಗಿ ಕನ್ನಡಿ ಹಿಡಿಯುತ್ತವೆ. ಜನಪದ ವಿನೋದ ಸಾಮಗ್ರಿಯಾಗಿಯೂ ಬಿಂಬಿತವಾಗಿವೆ. ಮೊದಲ ಎರಡು ಕೃತಿಗಳನ್ನು ಸಣ್ಣ ನಂಜೇಗೌಡ, ದೊಡ್ಡ ಲಿಂಗೇಗೌಡ ಮತ್ತು ಗೋಪಾಲಕೃಷ್ಣ ಅವರ ನೆರವಿನೊಡನೆ ಸಂಪಾದಿಸಿ ಕೊಟ್ಟಿದ್ದಾರೆ. ಮೂರನೆಯ ಕೃತಿಯಲ್ಲಿ ಜನಪದ ಗಣಿತದ ಸ್ವರೂಪ, ಇತಿಹಾಸ ಕುರಿತಾದ ಪೀಠಿಕೆ ಇರುವುದು ವಿಶೇಷವಾಗಿದೆ.

ಜಾನಪದ ಕ್ಷೇತ್ರದಲ್ಲಿ ಡಾ. ರಾಜಶೇಖರ ಅವರು ಬಹು ಆಯಾಮಗಳಲ್ಲಿ ಕೆಲಸ ಮಾಡಿದವರು. ಕ್ಷೇತ್ರಕಾರ್ಯ ಮತ್ತು ಕೃತಿ ಪ್ರಕಟನಾ ಕಾರ್ಯಗಳನ್ನು ನಿರಂತರವಾಗಿ ನಡೆಸಿಕೊಂಡು ಬಂದವರು. ಶಿಷ್ಟರಿಗೂ ಜನಪದರಿಗೂ, ಪಂಡಿತರಿಗೂ ಪಾಮರರಿಗೂ ಅನುಕೂಲವಾಗುವಂತೆ ಅವರ ಪ್ರಕಟಣೆಗಳಿವೆ. ಹೀಗಾಗಿ ವೈವಿಧ್ಯಪೂರ್ಣವಾದ ಅವರ ಕೃತಿರಾಶಿ ನಮ್ಮ ಮುಂದಿದೆ. ಇದಕ್ಕೆ ಉದಾಹರಣೆಗಳಾಗಿ ಈವರೆಗೆ ಚರ್ಚಿಸಿರುವ ಕೃತಿಗಳಿವೆ; ಹಾಗೆಯೇ ಇನ್ನೂ ಕೆಲವು ಕೃತಿಗಳು ಇದಕ್ಕೆ ಸೇರ್ಪಡೆಯಾಗುತ್ತವೆ. ಇಂಥವುಗಳಲ್ಲಿ 'ಮುದ್ದು ಮಾದೇವನ ನೆನೆದೇವು' (೧೯೭೪) ಕೃತಿಯೂ ಒಂದು. ರಾಜಶೇಖರ ಅವರದೇ ಆದ 'ಮಲೆಯ ಮಾದೇಶ್ವರ' ಮಹಾಕಾವ್ಯದ 'ಮಂಗಳಾರ್ತಿ ಮಾದೇವನಿಗೆ' ಅಧ್ಯಾಯದಿಂದ ಸಿದ್ಧಪಡಿಸಿದ ಜನಪ್ರಿಯ ಆವೃತ್ತಿ ಇದು. ಮಾದೇಶ್ವರ ಮಹಾಕಾವ್ಯವನ್ನು ಓದಲಾಗದವರಿಗಾಗಿ ಇದನ್ನು ಪ್ರಕಟಿಸಿದ್ದಾಗಿ ಸಂಪಾದಕರು ಹೇಳಿಕೊಂಡಿದ್ದಾರೆ. ಇಡೀ ಕೃತಿ ತ್ರಿಪದಿಗಳಿಂದ ಕೂಡಿರುವುದು ಮತ್ತು ಹಲವು ಗಾಯಕರು ಇವುಗಳನ್ನು ಹಾಡಿರುವುದು ವಿಶೇಷವಾಗಿದೆ. 'ಚುಂಚನಗಿರಿ ಭೈರವೇಶ್ವರ' (೧೯೮೩) ಕಾವ್ಯ ಸಂಕಲನ ಮತ್ತು

ಚುಂಚನಗಿರಿ ಭೇರವೇಶ್ವರ ಮತ್ತು 'ಆದಿಚುಂಚನಗಿರಿ ಅರ್ಜುನಸ್ವಾಮಿ' ಎಂಬ ಎರಡು ಪೌರಾಣಿಕ ಲಾವಣಿಗಳನ್ನು ಹೊಂದಿದೆ. ಮೊದಲನೆಯದನ್ನು ಹೆಳವರೂ, ಎರಡನೆಯದನು ದೇವರ ಗುಡ್ಡರೂ ಹಾಡಿದ್ದಾರೆ. ಇವೆರಡೂ ಒಂದು ರೀತಿಯಲ್ಲಿ ಅನನ್ಯ ಕಥಾನಕಗಳಾಗಿವೆ; ಅಧ್ಯಯನಕ್ಕೆ ಹೊಸ ಸಮಗ್ರಿಯನ್ನು ಒದಗಿಸುತ್ತವೆ: 'ಆಲಂಬಾಡಿಯ ಘನಶರಣ' (೧೯೯೧) ಮಾದೇಶ್ವರ ಮಹಾಕಾವ್ಯದಲ್ಲಿ ಬರುವ 'ಆಲಂಬಾಡಿ ಜುಂಜೇಗೌಡನ ಸಾಲು' ಎಂಬ ಕಥಾ ಕಾವ್ಯದ ಗದ್ಯಾನುವಾದ. ಮೂಲದ ಪದ್ಯಕಥನವನ್ನು ಅರ್ಥಮಾಡಿಕೊಳ್ಳಲಾರದವರಿಗೆ ಗದ್ಯದಲ್ಲಿ ಪರಿಚಯಿಸುವ ಪ್ರಯತ್ನವಾಗಿ ಈ ಕೃತಿ ರೂಪತಳೆದಿದೆ. ಇದನ್ನು ಎಂಟು ಅಧ್ಯಾಯಗಳಲ್ಲಿ ಮೂಲ ಪದ್ಯಗಳ ನಿದರ್ಶನಗಳೊಡನೆ ಸುಲಭ ಗದ್ಯದಲ್ಲಿ ರಚಿಸಲಾಗಿದೆ. ಇಂಥದೇ ಇನ್ನೊಂದು ಪ್ರಯತ್ನ 'ಚಾಮುಂಡಿ ಸಿರಿ ಚಾಮುಂಡಿ' (೧೯೯೪). ಅವರದೇ ಕೃತಿ 'ಬೆಟ್ಟದ ಚಾಮುಂಡಿ' ಕಾವ್ಯದ ವಚನರೂಪವೇ ಇದು. ಇದರ ಮೊದಲ ಭಾಗದಲ್ಲಿ ಮೈಸೂರು ಚಾಮುಂಡಿ, ಅರಸರ ಆಳ್ವಿಕೆ, ವಿಜಯದಶಮಿ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಚಾರಿತ್ರಿಕ ವಿವರಗಳಿವೆ. ಆ ಮೇಲೆ ಕ್ರಮವಾಗಿ ಮಹಿಷಾಸುರ ಮರ್ದಿನಿ ಮತ್ತು ನಂಜುಂಡ ಚಾಮುಂಡಿಯರ ಪ್ರಣಯ ಸನ್ನಿವೇಶಗಳನ್ನು ಪರಿಚಯಿಸಲಾಗಿದೆ. ಇದೇ ಮಾರ್ಗವನ್ನು 'ಸಿರಿ ಚುಂಚನಗಿರಿ' (೧೯೯೫) ಕೃತಿಯೂ ಅನುಸರಿಸಿದೆ. ಈ ಹಿಂದೆ ತಿಳಿಸಿದ 'ಚುಂಚನಗಿರಿ ಭೈರವೇಶ್ವರ' ಜನಪದ ಕಾವ್ಯದ ಗದ್ಯರೂಪವಾಗಿ ಇದಿದೆ. ಅದು ಪ್ರಕಟವಾದ ನಂತರ ಕೆಲವು ಹೊಸ ವಿಷಯಗಳೂ ಇಲ್ಲಿ ಉಪಯುಕ್ತವಾಗಿ ಸೇರ್ಪಡೆಯಾಗಿವೆ. ಮೊದಲಿಗೆ ಚುಂಚನಗಿರಿಗೆ ಇದ್ದ ರಾಜಾಶ್ರಯ, ಗುರುಪರಂಪರೆ, ಜೋಗಿ ದೀಕ್ಷೆ ಮೊದಲಾದ ಮಹತ್ವದ ಸಂಗತಿಗಳನ್ನು ಈ ಸಂಬಂಧವಾಗಿ ಸೇರಿಸಲಾಗಿದೆ; ಆಮೇಲೆ ಭೈರವೇಶ್ವರ ಮತ್ತು ಅರ್ಜುನ ಸ್ವಾಮಿಯ ನಿರೂಪಣೆ ಇದೆ. ಸುಪ್ರಸಿದ್ಧ ಜನಪದ ಕಾವ್ಯಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಉದ್ದೇಶ ಹೊತ್ತ ಸರಳ ಸಂವಹನ ಸಾಧನಗಳಾಗಿ ಈ ಎಲ್ಲ ಪ್ರಯತ್ನಗಳಿವೆ.

ಜನಪದ ವಾದ್ಯದ ಕ್ಷೇತ್ರಕ್ಕೂ ರಾಜಶೇಖರ್ ಪ್ರವೇಶಿಸಿದ್ದಾರೆ. ಅವರು 'ನಮ್ಮ ಜನಪದ ವಾದ್ಯಗಳು'(೧೯೮೪) ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಇದು ಮಕ್ಕಳಿಗಾಗಿ ಬರೆದ ಪುಸ್ತಕವಾದರೂ, ವಾದ್ಯಗಳ ಬಗೆಗೆ ಸಾಕಷ್ಟು ಮಾಹಿತಿ ನೀಡುತ್ತದೆ. ವಾದ್ಯಗಳ ಕಲ್ಪನೆ, ವರ್ಗೀಕರಣ ಸಹಿತವಾಗಿ ಹಲವಾರು ವಾದ್ಯಗಳನ್ನು ಚಿತ್ರಗಳ ಸಮೇತ ಪರಿಚಯಿಸಲಾಗಿದೆ. ಇಂತಹ ವಿಸ್ತೃತ ಅಧ್ಯಯನದ ಕಡೆಗೆ ಇದು ಗಮನ ಸೆಳೆಯುತ್ತದೆ.

ಜಾನಪದೇತರ ಕ್ಷೇತ್ರಗಳಲ್ಲೂ ಡಾ. ರಾಜಶೇಖರ ಅವರು ಕೃಷಿ ಮಾಡಿದ್ದಾರೆ. ಅವರು ಶಾಸ್ತ್ರಕಾರರೂ, ಸೃಜನಶೀಲ ಬರಹಗಾರರೂ ಆಗಿದ್ದಾರೆ. 'ಪದವಿವರಣ

ಕೋಶ' (೧೯೯೩) ಒಂದು ಶಾಸ್ತ್ರಕೃತಿ. ಇದೊಂದು ಪದ ನಿಷ್ಪತ್ತಿಕೋಶ; ಉಪಯುಕ್ತ ಕೈಪಿಡಿ. ಪದಗಳ ಸ್ವರೂಪ ಮತ್ತು ಅರ್ಥ ವಿಶ್ಲೇಷಣೆಗೆ ಸಂಬಂಧಿಸಿದ ಕೃತಿ ಇದು. ಪದ ಸಂಸ್ಕೃತಿಯ ದೃಷ್ಟಿಯಿಂದ ಇದೊಂದು ಉಪಾದೇಯ ಕೃತಿಯಾಗಿದೆ. ಬಿಡುವಿಲ್ಲದ ಜಾನಪದ ಚಟುವಟಿಕೆಗಳ ನಡುವೆ ಸೃಜನಶೀಲ ಚಟುವಟಿಕೆಯನ್ನೂ ರಾಜಶೇಖರ ಅವರು ಕಾಪಾಡಿಕೊಂಡು ಬಂದುದು ವಿಶೇಷ ಸಂಗತಿ. ಅವರು ಈವರೆಗೆ 'ಮಾನಸದೀಪ್ತಿ' (೧೯೬೬), 'ಪ್ರತಿಬಿಂಬ' (೧೯೬೯), 'ಸ್ವಾತಿಮುತ್ತುಗಳು' (೧೯೯೪) ಮತ್ತು 'ನಾನಲ್ಲದ ನಾನು' (೨೦೦೧) ಎಂಬ ನಾಲ್ಕು ಕವನ ಸಂಕಲನಗಳನ್ನು ಹೊರತಂದಿದ್ದಾರೆ. ಮಧ್ಯದ ಎರಡು ಕೃತಿಗಳು ಭಾಷಾಂತರ ಕವನ ಸಂಕಲನಗಳು. ಇಂಗ್ಲಿಷಿನಿಂದ ಅನುವಾದಿತ ಕವನಗಳು 'ಪ್ರತಿಬಿಂಬ'ದಲ್ಲಿದ್ದರೆ, ಸಂಸ್ಕೃತದಿಂದ ರೂಪಾಂತರಗೊಂಡ ಕವನಗಳು 'ಸ್ವಾತಿಮುತ್ತುಗಳು' ಸಂಕಲನದಲ್ಲಿವೆ. ಪದ್ಯಗಳನ್ನು ಅನುವಾದಿಸುವುದಷ್ಟೇ ಕಷ್ಟ ಅಂಥದರಲ್ಲಿ ಎರಡೂ ಸಂಕಲನಗಳಲ್ಲಿಯೂ ಭರ್ತಿ ಅನುವಾದಿತ ಕವಿತೆಗಳನ್ನು ಕೊಟ್ಟಿರುವುದು ಸಾಹಸವೇ ಸರಿ.

ಜಾನಪದವಾಗಲಿ, ಸಾಹಿತ್ಯವಾಗಲಿ ಕ್ಷೇತ್ರ ಯಾವುದಾದರೂ ರಾಜಶೇಖರ ಅವರು ತಮ್ಮನ್ನು ಅದರಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವುದು ಈವರೆಗಿನ ವಿವೇಚನೆಯಿಂದ ತಿಳಿಯುವುದು. ಅವರೀಗ ಮತ್ತೊಂದು ಜನಪದ ಮಹಾಕಾವ್ಯದ ಪ್ರಕಟಣೆಯ ಸಂಭ್ರಮದಲ್ಲಿದ್ದಾರೆ. 'ಜನಪದ ಮಹಾಭಾರತ' ಕಾವ್ಯ ಇನ್ನೇನು ಹೊರಬರಲಿದ್ದು, ಮಾದೇಶ್ವರ ಮಹಾಕಾವ್ಯದ ಹಾಗೆ ಮತ್ತೊಂದು ಮೈಲಿಗಲ್ಲನ್ನು ನಿರ್ಮಿಸಲಿದ್ದಾರೆ. ಮಹಾಭಾರತ ಕುರಿತ ಜನಪದ ಮಹಾಕಾವ್ಯವೊಂದು ಪ್ರಕಟವಾಗುತ್ತಿರುವುದು ಇದೇ ಮೊದಲು. ಅವರು ಮತ್ತು ನಾನು ಜೊತೆಗೂಡಿ ಸಂಪಾದಿಸಿರುವ ಮಂಟೇಸ್ವಾಮಿ ಮಹಾಕಾವ್ಯವೊಂದು ಇನ್ನೂ ಪ್ರಕಟವಾಗಬೇಕಿದೆ.

ಡಾ. ರಾಜಶೇಖರ ಅವರು ತಾವು ನಂಬಿದ ಜಾನಪದ ಕ್ಷೇತ್ರವನ್ನು ಸದಾ ವಿಸ್ತರಿಸುತ್ತಲೇ ಬಂದಿದ್ದಾರೆ. ಅವರ ಬಗೆ ಬಗೆಯ ಪುಸ್ತಕಗಳು ಇದಕ್ಕೆ ನಿದರ್ಶನವಾಗಿವೆ. ಈ ಎಲ್ಲ ಕೃತಿಗಳಲ್ಲಿಯೂ ಅವರು ಶಾಸ್ತ್ರೀಯ ಸಂಗ್ರಹ ಮತ್ತು ಸಂಪಾದನೆಯ ಮಾದರಿಗಳನ್ನು ಒದಗಿಸಿದ್ದಾರೆ. ವಿವಿಧ ಸಂಪ್ರದಾಯಗಳಿಗೆ ಸೇರಿದ ಪಾಠಗಳ ಮೂಲಕ ಸಂಪಾದಿಸುವ ಅವಶ್ಯಕತೆಯನ್ನು ಅವರಿಲ್ಲಿ ತೋರಿಸಿಕೊಟ್ಟಿದ್ದಾರೆ. ಪ್ರಾಮಾಣಿಕ ಸಂಗ್ರಹ ಕಾರ್ಯ ಮತ್ತು ದಕ್ಷ ಸಂಪಾದನ ಕಾರ್ಯಗಳೆರಡೂ ಇವುಗಳಲ್ಲಿ ಮೇಳವಿಸಿವೆ. ಜಾನಪದ ಸಾಮಗ್ರಿಯನ್ನು ವೈಜ್ಞಾನಿಕವಾಗಿ ಚಿಂತಿಸುವುದರಲ್ಲಿಯೂ ಅವರು ನಮ್ಮ ಪ್ರಮುಖರಲ್ಲಿ ಒಬ್ಬರಾಗಿದ್ದಾರೆ. ವ್ಯಾಪಕ ಅನುಭವ, ಸತತ ದುಡಿಮೆ ಈ ಎಲ್ಲ ಕೃತಿಗಳ ಹಿನ್ನೆಲೆಯಲ್ಲಿ ಕೆಲಸಮಾಡಿವೆ.

ಕ್ಷೇತ್ರಕಾರ್ಯವೆಂದರೆ ಕೇವಲ ಸಂಗ್ರಹಕಾರ್ಯವೆಂದು ಭಾವಿಸಬೇಕಾದ್ದಲ್ಲ; ಅದೊಂದು ಸಂಶೋಧನ ಕಾರ್ಯವೆಂದು ತಿಳಿಯಬೇಕು. ರಾಜಶೇಖರ ಅವರು

ಕೇವಲ ಸಂಗ್ರಾಹಕರಲ್ಲ; ಅವರೊಬ್ಬ ಸ್ವೋಪಜ್ಞ ಸಂಶೋಧಕರು ಮತ್ತು ವಿದ್ವಾಂಸರು. ನಮ್ಮಲ್ಲಿ ಕೆಲವರು ಕ್ಷೇತ್ರ ಕಾರ್ಯಕರ್ತರಾಗಿ ಮಾತ್ರ ಉಳಿದವರಿದ್ದಾರೆ; ಇನ್ನು ಕೆಲವರು ಕ್ಷೇತ್ರದ ಅನುಭವವೇ ಇಲ್ಲದೆ ವಿಮರ್ಶಕರೂ ವಿಶ್ಲೇಷಕರೂ ಆಗಿದ್ದಾರೆ. ಇವೆರಡನ್ನೂ ಒಂದು ಸಾಮರಸ್ಯದ ಸ್ತರದಲ್ಲಿ ಸೇರಿಸಿ ಅಧ್ಯಯನ ಮಾಡುತ್ತಿರುವ ಜಾನಪದ ಲೇಖಕರಲ್ಲಿ ಡಾ. ರಾಜಶೇಖರ ಅವರು ಮುಖ್ಯರಾಗಿದ್ದಾರೆ. ಅವರು ಸಾಮಗ್ರಿಯನ್ನು ಸಂಗ್ರಹಿಸುವ ಹಾಗೆಯೇ, ಅದನ್ನು ಅರ್ಥೈಸುವ ಮತ್ತು ವಿಶ್ಲೇಷಿಸುವ ಸಾಮರ್ಥ್ಯವನ್ನು ಹೊಂದಿದ್ದಾರೆ. ಜನಪದ ಸಂಸ್ಕೃತಿಯ ಪುನಾರಚನೆಯಲಿ ಅವರು ತೊಡಗಿಸಿಕೊಂಡಿರುವ ರೀತಿ ಮತ್ತು ತೋರಿಸುವ ಆಸಕ್ತಿ ಯಾವೊತ್ತು ಆದರಣೀಯವಾದುದು.

ಜಾನಪದ ಸಂಬಂಧವಾದ ಡಾ. ರಾಜಶೇಖರ ಅವರ ಕೆಲಸಗಳನ್ನು ಪರಿಶೀಲಿಸುತ್ತಾ ಬಂದರೆ, ಅವರು ಯಾವೊತ್ತು ಉತ್ತಮವಾದುದನ್ನೆ ಕೊಟ್ಟಿರುವುದು ಸ್ಪಷ್ಟವಾಗುತ್ತದೆ. 'ಬೆಟ್ಟದ ಚಾಮುಂಡಿ'ಯಿಂದ ಹಿಡಿದು 'ಜನಪದ ಮಹಾಭಾರತ'ದವರೆಗೆ ಎಲ್ಲವೂ ದಾಖಲೆಗಳನ್ನು ನಿರ್ಮಿಸಿವೆ. ಇದು ಸಾಧಿತವಾಗಿರುವುದು ಅವರ ಕಾರ್ಯತತ್ಪರತೆಯ ಗುಣದಿಂದ. ಅವರು ಇಷ್ಟು ವರ್ಷಗಳೂ ಈ ಕಾರ್ಯವನ್ನು ಸದ್ದಿಲ್ಲದೆ ನಡೆಸುತ್ತಾ ಬಂದಿದ್ದಾರೆ. ಜಾನಪದದಿಂದ ರಾಜಶೇಖರ ಅವರನ್ನು ಪ್ರತ್ಯೇಕಿಸಲಾರದಷ್ಟು ಅವರು ಅದರಲ್ಲಿ ಸೇರಿಹೋಗಿದ್ದಾರೆ. ಈ ದೃಷ್ಟಿಯಿಂದ ಅವರನ್ನು 'ಮಿಸ್ಟರ್ ಫೋಕಲೋರ್' ಎಂದು ಕರೆಯಬೇಕೆನಿಸುತ್ತದೆ. ಅಷ್ಟರಮಟ್ಟಿಗೆ ಅವರು ಜಾನಪದ ಕ್ಷೇತ್ರವನ್ನು ಗಟ್ಟಿಯಾಗಿ ನಂಬಿ ಅದರ ವಿವಿಧ ಆಯಾಮಗಳಲ್ಲಿ ದುಡಿದವರು. ಅವರ 'ಜಾನಪದ ಜೋಳಿಗೆ'ಯಲ್ಲಿ ಇನ್ನೂ ಹಲವಾರು ಕೃತಿಗಳು ಹೊರಬರಲು ತವಕಿಸುತ್ತಿವೆ. ಅವೆಲ್ಲ ಪ್ರಕಟಗೊಂಡಾಗ ಅವರ ಕ್ಷೇತ್ರಕಾರ್ಯದ ಇತಿಹಾಸ ಅಸೀಮವಾದ 'ಸಾಹಸ ಗಾಥಾ" ಸಂದೇಹವಿರಲಾರದು.

ಕೃತಿ : ಜಾನಪದ ತಲೆಮಾರು-೩
ಲೇಖಕರು : ಡಾ. ರಾಗೌ
ಪ್ರಕಾಶಕರು : ಕರ್ನಾಟಕ ಜಾನಪದ
ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ಪತ್ರಿಕಾ ವರದಿ

ಆಧುನಿಕತೆಯ ಭರಾಟೆಯಲ್ಲಿ ಮಸುಕಾಗುತ್ತಿರುವ ಮೂಲ ಜಾನಪದ ಸಾಹಿತ್ಯ : ಡಾ.ಪಿ.ಕೆ. ರಾಜಶೇಖರ ಅಭಿಮತ

ಗೊಟಗೋಡಿ/ ಶಿಗ್ಗಾವಿ : ಆಧುನಿಕತೆಯ ಅಬ್ಬರದಲ್ಲಿ ಮೂಲ ಜಾನಪದ ಸಾಹಿತ್ಯ ಗೊಬ್ಬರವಾಗುತ್ತಿದೆ ಎಂದು ಜಾನಪದ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರು ಹಾಗೂ ಪಿರಿಯಾಪಟ್ಟಣದ ಖ್ಯಾತ ಜಾನಪದ ಗಾಯಕರೂ ಆದ ಡಾ. ಪಿ.ಕೆ. ರಾಜಶೇಖರ ಅವರು ವಿಷಾದ ವ್ಯಕ್ತಪಡಿಸಿದರು.

ಕರ್ನಾಟಕ ಜಾನಪದ ವಿಶ್ವವಿದ್ಯಾಲಯುದಲ್ಲಿ ಗುರುವಾರ ಆಯೋಜಿಸಲಾಗಿದ್ದ ತಿಂಗಳ ಅತಿಥಿಯೊಂದಿಗೆ ಪಟ್ಟಾಂಗ–೬ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು, ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಜಾನಪದ ಸಾಹಿತ್ಯದ ಮೂಲವನ್ನು ತಿರುಚಿ, ಆಧುನೀಕರಣ ಗೊಳಿಸುವುದರಿಂದ ಮೂಲದಲ್ಲಿರುವ ಸತ್ವ ಮತ್ತು ಸ್ವಾದ ಮರಿಚಿಕೆಯಾಗುತ್ತದೆ ಎಂದು ತಿಳಿಸಿದ ಅವರು, ಮಾರುಕಟ್ಟೆ ಲಾಭಕ್ಕಾಗಿ ಮೂಲ ಜಾನಪದ ಸಾಹಿತ್ಯವನ್ನು ಬಳಸಿಕೊಳ್ಳುವುದರಿಂದ ಜಾನಪದ ಕ್ಷೇತ್ರಕ್ಕೆ ತುಂಬಲಾರದ ನಷ್ಟವುಂಟಾಗುತ್ತದೆ. ಅಷ್ಟೇ ಅಲ್ಲ, ದೊಡ್ಡ ಅಪಾಯ ಎದುರಾಗುತ್ತದೆ ಎಂದು ಹೇಳಿದರು. ಮೂಲ ಜಾನಪದವನ್ನು ತಿಳಿದಿರುವ ಗಾಯಕರು ಮತ್ತು ಸಂಶೋಧಕರು ಅದರ ಮೂಲಕ್ಕೆ ಧಕ್ಕೆಯಾಗದಂತೆ ಕಾಪಾಡಿಕೊಳ್ಳುವುದು ಅಗತ್ಯವಾಗಿದೆ ಎಂದು ಅವರು ಪ್ರತಿಪಾದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಾನ್ಯ ಕುಲಪತಿಗಳಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರು, ನಾಡಿನ ಜಾನಪದ ಕ್ಷೇತ್ರಕ್ಕೆ ಪಿ.ಕೆ. ರಾಜಶೇಖರ ಅವರ ಕೊಡುಗೆ ವಿಶಿಷ್ಟ ಮತ್ತು ಅನನ್ಯವಾದುದು ಎಂದು ತಿಳಿಸಿದರು. ಕಲಾವಿದರಿಗೆ ಅವರ ಕಲಾ ಪ್ರದರ್ಶನಕ್ಕೆ ಸೂಕ್ತ ವೇದಿಕೆಗಳನ್ನು ಕಲ್ಪಿಸುವ ಮೂಲಕ ವಿಶ್ವವಿದ್ಯಾಲಯವು ಕಲಾವಿದರ ಸ್ಥಿತಿಗತಿಗಳಿಗೆ ನಿರಂತರವಾಗಿ ಸ್ಪಂದಿಸಲಿದೆ ಎಂದು ಹೇಳಿದರು.

ಪಿ.ಕೆ. ರಾಜಶೇಖರ ಹಾಗೂ ಹೊನ್ನಾರು ತಂಡದ ಸದಸ್ಯರಾದ ಶ್ರೀ ಮೈಸೂರು ಉಮೇಶ, ಶ್ರೀ ಚಿಕ್ಕಮಳಲಿ ಆರ್. ಮಹದೇವ, ಶ್ರೀ ರವಿ ಕೊಳಘಟ್ಟ ಅವರು ಜಾನಪದ ಹಾಡುಗಳನ್ನು ಹಾಡಿ ರಂಜಿಸಿದರು. ಇದೇ ಸಂದರ್ಭದಲ್ಲಿ

ವಿಶ್ವವಿದ್ಯಾಲಯದ ವತಿಯಿಂದ ಪಿ.ಕೆ. ರಾಜಶೇಖರ ಅವರನ್ನು ಶಾಲು ಹೊದಿಸಿ, ಫಲಪುಷ್ಪ ಹಾಗೂ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರಾದ ಪ್ರೊ. ಸ.ಚಿ. ರಮೇಶ್ ಅವರು ಸಮಾರೋಪ ನುಡಿಗಳನ್ನು ಆಡಿದರು. ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಉಪನಿರ್ದೇಶಕರಾದ ಡಾ. ಎಂ.ಎನ್. ವೆಂಕಟೇಶ ಪ್ರಾಸ್ತಾವಿಕವಾಗಿ ಮಾತನಾಡಿದರು. ಮೋಹನಕುಮಾರ್ ಪ್ರಾರ್ಥಿಸಿದರು. ಸಂದರ್ಶಕ ಪ್ರಾಧ್ಯಾಪಕರಾದ ಡಾ. ಕೆ. ಕಮಲಾಕ್ಷ ವಂದಿಸಿದರು.

ವಿಶ್ವವಿದ್ಯಾಲಯದ ಹಿರಿಯ ಸಂಶೋಧನಾಧಿಕಾರಿಗಳಾದ ಡಾ. ಕೆ. ಪ್ರೇಮಕುಮಾರ, ಡಾ. ಅಶೋಕಕುಮಾರ ರೆಂಜೇರೆ, ಡಾ.ಸಿ.ಟಿ. ಗುರುಪ್ರಸಾದ, ಡಾ. ಆರ್. ಸುನಂದಮ್ಮ, ಸಂಶೋಧನಾ ವಿದ್ಯಾರ್ಥಿಗಳು ಹಾಜರಿದ್ದರು.

ಪ್ರಜಾವಾಣಿ
ಹಾವೇರಿ

ಪ್ರಕಟಿತ ಕೃತಿರಾಶಿ

೧. ಬೆಟ್ಟದ ಚಾಮುಂಡಿ (೧೯೭೨)

೨. ಜನಪದ ರಾಮಾಯಣ (೧೯೭೩)

೩. ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ ಸಂಪುಟ – ೧ (೧೯೭೩)

೪. ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ ಸಂಪುಟ – ೨ (೧೯೭೩)

೫. ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ (ಸಂಯುಕ್ತ ಸಂಪುಟ) (೧೯೭೩)

೬ ಮಾಗಡಿ ಕೆಂಪೇಗೌಡ (೧೯೭೩)

೭ ಮುದ್ದು ಮಾದೇವನ ನೆನದೇವು (೧೯೭೪)

೮. ಜನಪದ ಚಮತ್ಕಾರ ಗಣಿತ (೧೯೭೫)

೯. ಜನಪದ ಆಯ್ದ ಲೆಕ್ಕಗಳು (೧೯೭೯)

೧೦. ಹಾಡೋ ಮುತ್ತಿನರಗಿಣಿ (೧೯೭೯)

೧೧. ಮೂರು ಪ್ರಾಣಿಯ ಕಥೆಗಳು (೧೯೭೯)

೧೨. ಅವ್ವ ನಿನದನಿ ಅಪರಂಜಿ (೧೯೮೧)

೧೩. ನಮ್ಮ ಜನಪದ ವಾದ್ಯಗಳು (೧೯೮೦)

೧೪. ಜನಪದ ಬಸವ ಪುರಾಣ (೧೯೮೧)

೧೫. ಊರ ಹೆಸರಿನ ಕತೆಗಳು (೧೯೮೦)

೧೬. ಚುಂಚನಗಿರಿ ಭೈರವೇಶ್ವರ (೧೯೮೩)

೧೭. ಜನಪದ ವೀರಕಾವ್ಯ ಪಿರಿಯಾಪಟ್ಟಣದ ಕಾಳಗ (೧೯೯೦)

೧೮. ಭೂಮಿ ತೂಕದ ಮಾತು (೧೯೯೦)

೧೯. ಆಲಂಬಾಡಿಯ ಘನಶರಣ (೧೯೯೯)

೨೦. ಹೆಸರಿಗೊಂದು ಕಥೆ (೧೯೯೪)

೨೧. ಬುದ್ಧಿ ಪರೀಕ್ಷೆ (೧೯೯೨)

೨೨. ಚಾಮುಂಡಿ ಸಿರಿ ಚಾಮುಂಡಿ (೧೯೯೪)

೨೩. ಸಿರಿ ಚುಂಚನಗಿರಿ (೧೯೯೫)

೨೪. ಕರಪಾಲ ಬಸವಪುರಾಣ (೧೯೯೫)

೨೫. ನಂಜಯ್ಯ ಚಾಮುಂಡಿ (೧೯೯೫)

೨೬. ಮಾತಿನರಗಿಣಿ (೧೯೯೮)

೨೭. ಜನಪದ ಗಣಿತ ಪ್ರಪಂಚ (೧೯೯೯)

೨೮. ಮುತ್ತಿನ ಕಣಜ (೨೦೦೦)

೨೯. ಪುರುಷನಪುಣ್ಯ ನಾರೀ ಭಾಗ್ಯ (೨೦೦೦)

೩೦. ಬಂತು ಬಂತು ಬಿಳಿಯಾನೆ (೨೦೦೧)

೩೧. ಕದ್ದವರೆಲ್ಲ ಕಳ್ಳರಲ್ಲ (೨೦೦೧)

೩೨. ಮಾನವನ ಬುದ್ಧಿ (೨೦೦೧)

೩೩. ಜಾನಪದ ಸಂಭ್ರಮ (೨೦೦೩)

೩೪. ಜನಪದ ಮಹಾಭಾರತ (೨೦೦೪)

೩೫. ಪಾರ್ಥನ ಜೋಗಿ ಹಾಡು (೨೦೦೪)

೩೬. ಕೋಗಿಲಾಗಿ ಕೂಗುತಿಯಲ್ಲೊ (೨೦೦೪)

೩೭. ನಾನು ಸುಳ್ಳು ಹೇಳುವುದಿಲ್ಲ (೨೦೦೫)

೩೮. ಸಿಕ್ಕಿಕೊಳ್ಳದವರು (೨೦೦೫)

೩೯. ಮರ ನೀಡಿದ ವರ (೨೦೦೫)

೪೦. ತಿಳಿದು ಮಾಡಿದ್ದು ತಿಳಿಯದೆ ಮಾಡಿದ್ದು (೨೦೦೫)

೪೧. ಅಪೂರ್ವ ರತ್ನ (೨೦೦೫)

೪೨. ದುಡಿದವನ ದುಡ್ಡಿನ ಬೆಲೆ (೨೦೦೫)

೪೩. ದೊಡ್ಡವರ ಮಾತಿಗೆ ದುಡ್ಡು ಯಾವ ಲೆಕ್ಕ (೨೦೦೫)

೪೪. ಗಂಧಾದ ಗವುಲೆದ್ದವೋ (೨೦೦೭)

೪೫. ಸೋಜುಗಾದ ಸೂಜಿ ಮಲ್ಲಿಗೆ (೨೦೦೭)

೪೬. ಜನಪದ ಶರಣ ಕಾವ್ಯಗಳು (೨೦೧೦)

೪೭. ಜನಪದ ಸಿಂಗಾರ ಸಾಧನಗಳು (೨೦೧೨)

೪೮. ಕಗ್ಗುಂಡಿ ಪರಂಜ್ಯೋತಿ ಹರಳಯ್ಯಸ್ವಾಮಿ

೪೯. ಜನಪದ ಆರಾಧನಾ ಕಲೆಗಳು (೨೦೧೦)

೫೦. ಪಿರಿಯಾಪಟ್ಟಣದ ಕಾಳಗ ಕಥಾಧಾರೆ (೨೦೧೦)

೫೧. ಜನಪದ ವೃತ್ತಿ ಗಾಯಕರು (೨೦೧೧)

೫೨. ಮುತ್ತು ಕೇರಾಕೆ ಮೊರವಾದೆ (೨೦೧೨)

೫೩. ಮೊಗ್ಗಾಗಿ ಬಾರೊ ತುರುಬೀಗೆ (೨೦೧೨)

೫೪. ಜಾನಪದ ವೀರಭದ್ರ (೨೦೧೨)

೫೫. ಪಿರಿಯಾಪಟ್ಟಣದ ಶ್ರೀ ಮಸಣೀಕಮ್ಮ (೨೦೧೩)

೫೬. ಜನಪದ ಜೋಕುಗಳು (೨೦೦೮)

೫೭. ಪಿ.ಸಿ. ವೀರಯ್ಯನವರ 'ಪಿರಿಯಾಪಟ್ಟಣದ ಕದನ ಮತ್ತು ಇತರ ಕೃತಿಗಳು

೫೮. ಜನಪದ ವ್ಯಾಸ ಬೆಟ್ಟದಬೀಡು ಸಿದ್ಧಶೆಟ್ಟರು (೨೦೧೦)

ಕವಿತೆ

೧. ಪ್ರತಿಬಿಂಬ (೧೯೬೮)
೨. ಸ್ವಾತಿಮುತ್ತುಗಳು (೧೯೯೮)
೩. ಮಾನಸದೀಪ್ತಿ (೧೯೬೬)
೪. ನಾನಲ್ಲದ ನಾನು (೨೦೦೧)

ಭಾಷಾಶಾಸ್ತ್ರ

೧. ಪದವಿವರಣ ಕೋಶ (೧೯೯೩)
೨. ಪದಸಂಪದ (೨೦೦೫)

ಮಕ್ಕಳ ಸಾಹಿತ್ಯ

೧. ಚಿನ್ನದ ತುಪ್ಪಳು (೧೯೯೨)
೨. ಅಭಿನವ ಕಾಳಿದಾಸ (೧೯೯೨)
೩. ದಲಿತ ಭಾರತ (೧೯೯೨)
೪. ವಿದ್ಯಾವಿಶಾರದೆ ಕಂತಿ (೧೯೯೩)

ಸಂಪಾದಿತ ಕೃತಿಗಳು

೧. ಶಿವಸಂಪದ (೨೦೦೧)
೨. ರಜತಶ್ರೀ (೧೯೯೯)
೩. ಸಂಜೀವಿನಿ (೨೦೦೩)
೪. ಮಣ್ಣಿನ ಹಣತೆ (೨೦೦೬)
೫. ಬೆಟ್ಟದಪುರದಲ್ಲಿ ಬಸವಶಿಲ್ಪ (೨೦೦೮)

ಜೀವನ ಚರಿತ್ರೆ

೧. ಸಮಾಜ ಸೇವಾರತ್ನ (ಕಂ.ರಾ. ಗೋಪಾಲ ಅವರೊಡನೆ) (೨೦೦೦)
೨. ವೀರಯೋಧ ಬೆಳ್ಳಿಯಪ್ಪ (ಕಂ.ರಾ. ಗೋಪಾಲ ಅವರೊಡನೆ) (೨೦೦೦)

ನಾಟಕ

೧. ಚಾಮುಂಡಿ ಸಿರಿ ಚಾಮುಂಡಿ

ಇತರೆ

೧. ಅಭಿಜ್ಞಾನ ಶಾಕುಂತಲ ನಾಟಕದ ಕಥೆ (೧೯೯೧, ೧೯೯೩, ೧೯೯೪)

೨. ಮಾಳವಿಕಾಗ್ನಿಮಿತ್ರ ನಾಟಕದ ಕಥೆ (೨೦೦೮)

ದನಿಮಾಡಿದ ಧ್ವನಿಸುರಳಿಗಳು

೧. ಮಲೆಯ ಮಾದೇಶ್ವರ

೨. ಹಾಡೋ ಮುತ್ತಿನರಗಿಣಿ

೩. ಕೋಗಿಲಾಗಿ ಕೂಗತೀಯಲ್ಲೋ

೪. ಶರಣು ಶರಣು ಮಾದೇಶ್ವರಗೆ

೫. ಎದ್ದು ಬಾರೊ ಮುದ್ದು ಭೈರುವ

೬. ನಕ್ಕರೆ ನಗಲೇಳು

ಸಿ.ಡಿ : ೧. ಸೋಜುಗಾದ ಸೂಜುಮಲ್ಲಿಗೆ

೨. ಸಿರಿಚುಂಚನಗಿರಿ

ಗಾಯಕನಿಗೊಲಿದ ಗೌರವ ಪುರಸ್ಕಾರಗಳು

೧. ಜನಪದ ಮಹಾಕಾವ್ಯ 'ಮಲೆಯ ಮಾದೇಶ್ವರ'ಕ್ಕೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ –೧೯೭೩

೨. ಜನಪದ ವೀರಕಾವ್ಯ 'ಪಿರಿಯಾಪಟ್ಟಣದ ಕಾಳಗ' ಕ್ಕೆ ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ –೧೯೯೦

೩. 'ಕರಪಾಲ ಬಸವ ಪುರಾಣ'ಕ್ಕೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ –೧೯೯೬

೪. 'ಪದವವಿರಣ ಕೋಶ'ಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉತ್ತೇಜಕ ಬಹುಮಾನ –೧೯೯೩

೫. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ 'ಜಾನಪದ ತಜ್ಞ' ಪ್ರಶಸ್ತಿ –೧೯೯೮

೬. ಕರ್ನಾಟಕ ಸರ್ಕಾರದ ಸುವರ್ಣ 'ಕರ್ನಾಟಕ ರಾಜ್ಯೋತ್ಸವ' ಪ್ರಶಸ್ತಿ – ೨೦೦೫

೭. 'ಜನಪದ ಮಹಾಭಾರತ'ಕ್ಕೆ ಮಂಡ್ಯದ ದಿ. ಪಿ.ಎನ್ ಜವರಪ್ಪಗೌಡ ಪ್ರತಿಷ್ಠಾನದ 'ಸಮಾಜಮುಖಿ' ಪ್ರಶಸ್ತಿ –೨೦೦೫

೮. 'ಜನಪದ ಮಹಾಭಾರತ'ಕ್ಕೆ ದಕ್ಷಿಣ ವಲಯ ಲಯನ್ಸ್ ಕ್ಲಬ್ ಕೊಡಮಾಡುವ 'ದಕ್ಷಿಣ ಸಾಹಿತ್ಯ ಕೇಸರಿ' ಪ್ರಶಸ್ತಿ

೯. ಬೊಪ್ಪಗೌಡನಪುರದ ಮಂಟೇಸ್ವಾಮಿ ಮಠದ 'ಶ್ರೇಷ್ಠ ಬರಹಗಾರ' ಪ್ರಶಸ್ತಿ –೨೦೦೪

೧೦. 'ಕನಕಶ್ರೀ' ಪ್ರಶಸ್ತಿ ಗೆಳೆಯರ ಬಳಗ ತರಿಕೆರೆ –೧೯೯೭

೧೧. ಜಾನಪದ ಮಹಾಭಾರತ ರೂಪಕಕ್ಕೆ ಪ್ರಸಾರ ಭಾರತಿ ಪ್ರಶಸ್ತಿ – ೨೦೦೬

೧೨. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ 'ರಜತ ಮಹೋತ್ಸವ' ಪ್ರಶಸ್ತಿ ೨೦೦೮

೧೩. ಕರ್ನಾಟಕ ಸಾಹಿತ್ಯ ಅಕಾಡೆಮಿ ೨೦೦೮ ನೆಯ ಸಾಲಿನ ಗೌರವ ಪ್ರಶಸ್ತಿ –೨೦೧೦

೧೪. ಮೈಸೂರು ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ (ಕೆಎಸ್‌ಜಿಎಸ್)ದ ಗೌರವ ಪ್ರಶಸ್ತಿ

೧೫. 'ಜನಪದ ಶರಣಕಾವ್ಯಗಳು' ಕೃತಿಗೆ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿನಿಧಿ ಪ್ರಶಸ್ತಿ (೨೦೧೧)

ಜೀವನದ ಪ್ರಮುಖ ವಿವರಗಳು

ಹೆಸರು	:	ಡಾ. ಪಿ.ಕೆ. ರಾಜಶೇಖರ
ಹುಟ್ಟಿದ ಊರು	:	ಪಿರಿಯಾಪಟ್ಟಣ, ಮೈಸೂರು ಜಿಲ್ಲೆ
ತಾಯಿ ಮತ್ತು ತಂದೆ	:	ಶ್ರೀಮತಿ ಪುಟ್ಟಮ್ಮ, ಶ್ರೀ ಪಿ.ಡಿ. ಕೆಂಪೇಗೌಡ
ಹುಟ್ಟಿದ ದಿನಾಂಕ	:	ಅಕ್ಟೋಬರ್ ೦೩, ೧೯೪೬
ವಿದ್ಯಾರ್ಹತೆ	:	ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣ ಪರಿಯಾಪಟ್ಟಣದಲ್ಲಿ ಪಿಯುಸಿ, ಬಿ.ಎ. ಮಹಾರಾಜ ಕಾಲೇಜು ಮೈಸೂರು ವಿಶ್ವವಿದ್ಯಾನಿಲಯ ೧೯೭೦: ಎಂ.ಎ., ಕನ್ನಡ ವಿಷಯ, ಮೈಸೂರು ವಿಶ್ವವಿದ್ಯಾನಿಲಯ. ೧೯೮೧: ಪಿಎಚ್.ಡಿ., ಮೈಸೂರು ವಿಶ್ವವಿದ್ಯಾನಿಲಯ (ಅಧ್ಯಯನದ ವಿಷಯ: ದಕ್ಷಿಣ ಕರ್ನಾಟಕದ ಜನಪದ ಪುರಾಣಗಳು)
ಐಚ್ಛಿಕ ವಿಷಯ	:	ಜಾನಪದ (ಸ್ವರ್ಣಪದಕ ಸಹಿತ) ೧೯೭೦, ಮೈಸೂರು ವಿಶ್ವವಿದ್ಯಾನಿಲಯ
ಹುದ್ದೆ	:	ಕನ್ನಡ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.
ಬೋಧನಾನುಭವ	:	ಅ. ಮೈಸೂರು ವಿಶ್ವವಿದ್ಯಾಲನಿಯದ ಮಹಾರಾಜ, ಲಲಿತಕಲಾ, ಯುವರಾಜ ಪದವಿ ಕಾಲೇಜುಗಳಲ್ಲಿ ೧೯೭೪ ರಿಂದ ೧೯೯೯ ರವರೆಗೆ ಉಪನ್ಯಾಸಕ, ಆಯ್ಕೆ ಶ್ರೇಣಿ ಉಪನ್ಯಾಸಕ, ಪ್ರವಾಚಕ ಮತ್ತು ಪ್ರಾಧ್ಯಾಪಕ = ೨೮ ವರ್ಷ ಸೇವೆ.

		ಆ. ಸ್ನಾತಕೋತ್ತರ ಪದವಿ ತರಗತಿಗಳಿಗೆ (ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ,ಮೈಸೂರು)

೧೯೯೯ ಜೂನ್ ೩೦ರಿಂದ ಕನ್ನಡ ಪ್ರಾಧ್ಯಾಪಕರಾಗಿ ೨೦೦೭ರವರೆಗೆ ಸೇವೆ.

ಬೋಧಿಸಿದ ವಿಷಯಗಳು	:	ಜಾನಪದ, ಕನ್ನಡ ಭಾಷೆ, ಸಾಹಿತ್ಯ, ಛಂದಸ್ಸು, ಕಾವ್ಯಮೀಮಾಂಸೆ, ವ್ಯಾಕರಣ ಮತ್ತು ಭಾಷಾ ಚರಿತ್ರೆ ಹಾಗೂ ಹಳಗನ್ನಡ ಕಾವ್ಯ ಬೋಧನೆ
ವಿವಾಹ	:	೧೯೮೦
ಹೆಣ್ಣು ಮಗುವಿನ ತಂದೆ	:	೧೯೮೨
ವಿದೇಶ ಪ್ರವಾಸ	:	೧೯೯೯ ಮತ್ತು ೨೦೦೮ರಲ್ಲಿ ಅಮೇರಿಕಾ ಪ್ರವಾಸ.
ನಿವೃತ್ತಿ	:	೨೦೦೬
ವಿಳಾಸ – ಕಛೇರಿ	:	ಡಾ. ಪಿ.ಕೆ. ರಾಜಶೇಖರ ನಿವೃತ್ತ ಕನ್ನಡ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು –೫೭೦೦೦೬ ದೂರವಾಣಿ–೦೮೨೧–೨೪೧೯೨೪೯
ಮನೆ	:	ಡಾ. ಪಿ.ಕೆ. ರಾಜಶೇಖರ ಹೊನ್ನಾರು ಜನಪದ ಗಾಯಕರು, ನಂ.೨೪೯, ೨ನೆಯ ಮುಖ್ಯರಸ್ತೆ, ೩ನೆಯ ಹಂತ, 'ಡಿ' ಬ್ಲಾಕ್, ವಿಜಯನಗರ, ಮೈಸೂರು–೫೭೦೦೧೭ ದೂರವಾಣಿ : ಸ್ಥಿರ : ೦೮೨೧– ೨೫೧೭೬೫೭ ಚರ : ೯೪೪೮೯೩೮೫೬೩ ೯೯೬೦೦೩೬೪೦೦

ಪರಾಮರ್ಶನ ಗ್ರಂಥಗಳು

೧. ಜಾನಪದ ಜೋಗಿ (ಅಭಿನಂದನಾ ಗ್ರಂಥ) : ಪ್ರ. ಸಂ : ಡಾ. ಬಿ.ಎಸ್. ತಲ್ವಾಡಿ, ಪ್ರೊ. ಮೈಸೂರು ಕೃಷ್ಣಮೂರ್ತಿ, ಶ್ರೀ ಕಿತ್ತೂರು ಡಿ. ಸತೀಶ್. ಪ್ರ: ಡಾ. ಪಿ.ಕೆ. ರಾಜಶೇಖರ ಅಭಿನಂದನಾ ಸಮಿತಿ, ಬೆಂಗಳೂರು

೨. **ಜಾನಪದ ಜೋಗಿ ಡಾ. ಪಿ.ಕೆ ರಾಜಶೇಖರ** : ಡಾ. ಬಿ.ಎಸ್. ತಲ್ವಾಡಿ. ಪ್ರ : ಅನ್ನದಾನಿ ಭೈರವ, ಬೆಂಗಳೂರು

೩. **ಮಿಸ್ಟರ್ ಫೋಕಲೋರ್ ಡಾ. ಪಿ.ಕೆ. ರಾಜಶೇಖರ** : ಪ್ರೊ. ಮೈಸೂರು ಕೃಷ್ಣಮೂರ್ತಿ. ಪ್ರ : ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.

೪. **ಮೊಗ್ಗಾಗಿ ಬಾರೊ ತುರುಬೀಗೆ** : ಪ್ರ. ಸಂ : ಡಾ. ಪಿ.ಕೆ. ರಾಜಶೇಖರ. ಪ್ರ : ಕ್ಷೀರಸಾಗರ, ಕೀಲಾರ, ಮಂಡ್ಯ

೫. **ಜಾನಪದ ವರ್ಷ– ೨೦೧೧** : ಸಂ. ಡಾ. ಎಸ್.ಪಿ. ಪದ್ಮಪ್ರಸಾದ್. ಪ್ರ : ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ.

೬ **ಹೊನ್ನಾರು ಜನಪದ ಗೀತೆಗಳು** : ಪ್ರ.ಸಂ: ಡಾ.ಪಿ.ಕೆ. ರಾಜಶೇಖರ, ಪ್ರೊ. ಮೈಸೂರು ಕೃಷ್ಣಮೂರ್ತಿ. ಪ್ರ : ಹೊನ್ನಾರು ಜನಪದ ಗಾಯಕರು, ಮೈಸೂರು.


ಜೀವನ ಸಾಧನೆಗೆ ಸುವರ್ಣ ಚೌಕಟ್ಟು



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಡಾ. ಪಿ.ಕೆ. ರಾಜಶೇಖರ ನೇತೃತ್ವದ ಹೊನ್ನಾರು ಗಾಯನ ವೃಂದ




ಜಾನಪದ ವಿದ್ವಾಂಸರಾದ ಡಾ. ಹಾಮಾನಾ ಅವರೊಂದಿಗೆ ಡಾ. ರಾಜಶೇಖರ



ರಾಷ್ಟ್ರಕವಿ ಕುವೆಂಪು ಅವರೊಂದಿಗೆ ಡಾ. ಪಿಕೆಆರ್



ಕನ್ನಡದ ಮೇರುನಟ ಡಾ. ರಾಜಕುಮಾರ್ ಅವರೊಡನೆ



ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ 'ಪಟ್ಟಾಂಗ'
ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸುತ್ತಿರುವ ಪಿಕೆಆರ್




ಮೈಸೂರಿನ ಮಹಾರಾಜಾ ಕಾಲೇಜಿನ ಶತಮಾನೋತ್ಸವ
ಭವನದಲ್ಲಿ ಪಿಕೆಆರ್ ಹಾಗೂ ಸಹ ಕಲಾವಿದರಿಂದ
ಕಾರ್ಯಕ್ರಮ



ಮಾಜಿ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಎಚ್.ಡಿ. ಕುಮಾರಸ್ವಾಮಿ
ಅವರು ಪಿಕೆಆರ್ ಅವರಿಗೆ ಚಿನ್ನದ ಹಾರ ತೊಡಿಸಿ
ಸನ್ಮಾನಿಸುತ್ತಿರುವುದು



ದಕ್ಷಿಣ ಭಾರತದ ಗಾನಕೋಗಿಲೆ ಎಸ್. ಜಾನಕಿಯವರೊಡನೆ
ಪಿಕೆಆರ್



ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ
'ಜಾನಪದ ತಜ್ಞ' ಪ್ರಶಸ್ತಿ ಸ್ವೀಕಾರ




ಹಿರಿಯ ಯಕ್ಷಗಾನ ಕಲಾವಿದರಾದ ಶ್ರೀ ಕೆರೆಮನೆ ಶಂಭುಹೆಗಡೆ
ಅವರೊಂದಿಗೆ ಪಿಕೆಆರ್



ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ ಅವರೊಂದಿಗೆ
ಡಾ. ರಾಜಶೇಖರ



ಕನಾಟಕ ಜಾನಪದ ಪರಿಷತ್ತಿನಿಂದ ಗೌರವ ಪುರಸ್ಕಾರ




ನಿಘಂಟು ತಜ್ಞ ಡಾ. ಜಿ. ವೆಂಕಟಸುಬ್ಬಯ್ಯ ಅವರೊಂದಿಗೆ
ಗಾನಕೋಗಿಲೆ ಪಿಕೆಆರ್



ಶ್ರೀ ಕುವೆಂಪು ಟ್ರಸ್ಟ್‌ನಲ್ಲಿ ನಾಡೋಜ ಡಾ. ದೇಜಗೌ ಅವರಿಂದ
ಗೌರವ ಸನ್ಮಾನ





ಪಿಕೆಆರ್ ಅವರಿಗೆ ಸಂದಿರುವ ಗೌರವ ಕಾಣಿಕೆಗಳು




ವಾಷಿಂಗ್ಟನ್‌ನ ಲಿಂಕನ್ ಸ್ಮಾರಕಭವನದ ಎದುರು ಡಾ. ಪಿಕೆಆರ್

ಪ್ರಶಸ್ತಿ ಪತ್ರಗಳು


ವಾರ್ಷಿಕ ಪ್ರಶಸ್ತಿ
2012
ಪ್ರಶಸ್ತಿ ಪತ್ರ


ಪ್ರಶಸ್ತಿ ಪತ್ರ
ಜನಪದ ಮಹಾಭಾರತ
ರಚನೆ : ಡಾ. ಪಿ.ಕೆ. ರಾಜಶೇಖರ್


ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು
ಪುಸ್ತಕ ಬಹುಮಾನ-೨೦೦೨



ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಬೆಂಗಳೂರು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಬೆಂಗಳೂರು

ಬೆಳ್ಳಿಹಬ್ಬದ ಪ್ರಯುಕ್ತ ಗೌರವ ಸನ್ಮಾನ



ಡಾ॥ ಪಿ.ಕೆ. ರಾಜಶೇಖರ

ಜಾನಪದ ಕ್ಷೇತ್ರದಲ್ಲಿ ಸಲ್ಲಿಸಿರುವ ಗಣನೀಯ ಸೇವೆಗಾಗಿ


ನೀಡಿದ ಸನ್ಮಾನ ಪತ್ರ

ಮನು ಬಳಿಗಾರ್	ಕೆರೆಮನೆ ಶಂಭು ಹೆಗಡೆ	ಬಿ.ಎಸ್. ಪರಡ್ಡಿ
ನಿರ್ದೇಶಕರು	ಅಧ್ಯಕ್ಷರು	ರಿಜಿಸ್ಟ್ರಾರ್

ದಿನಾಂಕ ೨೬, ೨೭-೨-೨೦೦೮

ಸ್ಥಳ : ರವೀಂದ್ರ ಕಲಾಕ್ಷೇತ್ರ
ಬೆಂಗಳೂರು




ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು

ಪುಸ್ತಕ ಬಹುಮಾನ ೧೯೯೮

ಡಾ. ಪಿ.ಕೆ. ರಾಜಶೇಖರ ಅವರ [illegible]

ಜಾನಪದ ಕೃತಿಯನ್ನು ಅಕಾಡೆಮಿಯ ಪುಸ್ತಕ ಬಹುಮಾನಕ್ಕಾಗಿ

ಅವರಿಗೆ ಗೌರವಪೂರ್ವಕವಾಗಿ ನೀಡಿದ ಪ್ರಶಸ್ತಿ ಪತ್ರ

ರಿಜಿಸ್ಟ್ರಾರ್

ಪ್ರೊ. ಕಾಳೇಗೌಡ ನಾಗವಾರ
ಅಧ್ಯಕ್ಷರು

[illegible]-೨೦೦೦ ಬೆಂಗಳೂರು

ಚಿನ್ನದ ಹಬ್ಬದ ವರ್ಷ

ಕರ್ನಾಟಕ ಸಾಹಿತ್ಯ ಅಕಾಡೆಮಿ

ಬೆಂಗಳೂರು

ಗೌರವ ಪ್ರಶಸ್ತಿ ೨೦೦೯


(ಪ್ರಶಸ್ತಿ ಪತ್ರ)

ಡಾ|| ಪಿ.ಕೆ. ರಾಜಶೇಖರ ಅವರು
ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿರುವ
ಅಮೂಲ್ಯ ಸೇವೆಗಾಗಿ
ಕರ್ನಾಟಕ ಸಾಹಿತ್ಯ ಅಕಾಡೆಮಿಯು
೨೦೦೯ನೇ ಸಾಲಿನ ಗೌರವ ಪ್ರಶಸ್ತಿ ಸಮರ್ಪಿಸುತ್ತಿದೆ.

ವಿ. ಎನ್. ಮಲ್ಲಿಕಾರ್ಜುನಸ್ವಾಮಿ
ರಿಜಿಸ್ಟ್ರಾರ್

ಪ್ರೊ. ಎಂ.ಎಚ್. ಕೃಷ್ಣಯ್ಯ
ಅಧ್ಯಕ್ಷರು

೧೧ ಜುಲೈ ೨೦೧೦, ಉಡುಪಿ



ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ನೃಪತುಂಗ ರಸ್ತೆ : : ಬೆಂಗಳೂರು – ೫೬೦ ೦೦೨

ಪುಸ್ತಕ ಬಹುಮಾನ

ಶ್ರೀ / ಶ್ರೀಮತಿ ಡಾ. ಪಿ. ಕೆ. ರಾಜಶೇಖರ ಅವರು 1995ನೇ ಸಾಲಿನಲ್ಲಿ ರಚಿಸಿದ ಕೆರೆಗಾಲ ಬಸವ ಪುರಾಣ ಗ್ರಂಥಕ್ಕೆ ಕಾವ್ಯ ವಿಭಾಗದಲ್ಲಿ ಅಕಾಡೆಮಿಯು ಬಹುಮಾನ ನೀಡಲಾಗಿದೆ.

ಬೆಂಗಳೂರು

ದಿನಾಂಕ [illegible] 1997

ಅಧ್ಯಕ್ಷ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು-೨

ಡಾ|| ಪಿ.ಕೆ. ರಾಜಶೇಖರ ಅವರ ಸಂಪಾದಿತ ಜನಪದ ಕಾವ್ಯ ಪ್ರಕಾರದಲ್ಲಿ ಪ್ರಕಟಗೊಂಡ ಪಿರಿಯಾಪಟ್ಟಣದ ಕಾಳಗ ಜಾನಪದ ಕೃತಿಯನ್ನು ೧೯೯೦ ನೇ ವರ್ಷದ ಉತ್ತಮ ಕೃತಿಯೆಂದು ಪರಿಗಣಿಸಿ ಬಹುಮಾನವನ್ನು ನೀಡಿ ಪುರಸ್ಕರಿಸಲಾಗಿದೆ.

ಅಧ್ಯಕ್ಷರು

ದಿನಾಂಕ: ೨೩-೭-೧೯೯೨

ಸ್ಥಳ: ಬೆಂಗಳೂರು

ASSOCIATION OF KANNADA KOOTAS OF AMERICA
AND
VIDYARANYA KANNADA KUTA

5th World Kannada Conference, Aug 29-31, 2008, Chicago USA

Certificate Of Participation

PRESENTED TO

SRI/SMT/KUM Dr. P. K. Rajashekhara

FOR

Janapada Geethegalu

VASANTHI GOWDA, CONVENER — MOKSHAGUNDAM JAYARAM, CONVENER — SHIVAMURTHY KEDARA, CONVENER — CHAIR

ನಮ್ಮ ಪ್ರಕಟಣೆಗಳು

ಕ್ರಸಂ.	ಕೃತಿಯ ಹೆಸರು	ಲೇಖಕ/ ಸಂಪಾದಕರ ಹೆಸರು	ಬೆಲೆ
೧.	ಇಂದಿನ ಕನಸು ನಾಳಿನ ನನಸು	ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ	೧೦೦.೦೦
೨.	ಜಾನಪದ ವರ್ಷ–೨೦೧೧	ಸಂ : ಡಾ. ಎಸ್.ಪಿ. ಪದ್ಮಪ್ರಸಾದ್	೧೦೦.೦೦
೩.	ಜಾನಪದ ವಸ್ತುಕೋಶ	ಸಂ : ಪ್ರೊ. ಸ.ಚಿ. ರಮೇಶ	೧೪೦.೦೦
೪.	ಕೇರಳದ ಜನಪದವೀರ ತಚ್ಚೋಳಿ ಒದೇನನ್	ಸಂ : ಡಾ. ಕೆ. ಕಮಲಾಕ್ಷ	೧೪೦.೦೦
೫.	ಕಾಡುಗೊಲ್ಲರ ಕೋಲಾಟದ ಪದಗಳು	ಸಂ : ಮೋಹನಕುಮಾರ ಎನ್.	೮೦.೦೦
೬.	ತುಳುನಾಡಿನ ಜನಪದ ಕತೆಗಳು	ಸಂ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್	೧೦೦.೦೦
೭.	ಕರ್ನಾಟಕ ಸಂಶೋಧನ ಜಾನಪದ	ಸಂ : ಪ್ರೊ.ಎ.ವಿ. ನಾವಡ	೯೫೦.೦೦
೮.	ಮಲೆನಾಡ ನುಡಿಕೋಶ	ಸಂ : ವೇಣಾಕ್ಷಿ ಎಸ್.ಡಿ.	೧೫೦.೦೦
೯.	ಬುರ್ರಕಥಾ ಜಯಮ್ಮ	ಸಂ : ಡಾ. ಕೆ. ಪ್ರೇಮಕುಮಾರ	೪೦.೦೦
೧೦.	ಗೊಂಬೇಗೌಡರ ರಾಮನಗೌಡರು	ಸಂ : ಡಾ. ಚಂದ್ರಪ್ಪ ಸೊಬಟಿ	೮೦.೦೦
೧೧.	ನಮ್ಮ ಪರಿಸರದ ಲಂಬಾಣಿಗರು	ಸಂ : ಡಾ. ಮಲ್ಲಿಕಾರ್ಜುನ ಕುಂಬಾರ	೬೦.೦೦
೧೨.	ಕಾಡುಗೊಲ್ಲರ ಬೆಡಗಿನ ಪದಗಳು	ಸಂ : ಎಂ.ಬಿ. ಶ್ವೇತಾ, ಎನ್. ಮೋಹನ್‌ಕುಮಾರ್	೮೦.೦೦
೧೩.	ಹುಮಾಯೂನ್ ಹರಲಾಪುರ	ಸಂ : ಡಾ. ವೃಷಭಕುಮಾರ	೮೦.೦೦
೧೪.	ಅಪ್ಪಗೆರೆ ತಿಮ್ಮರಾಜು	ಸಂ : ಶ್ವೇತಾ ಎಂ.ಬಿ.	೮೦.೦೦
೧೫.	ಡಾ. ಪಿ.ಕೆ. ರಾಜಶೇಖರ	ಸಂ : ಸಂಗಮೇಶ ಎಸ್. ಗಣಿ	೧೨೦.೦೦
೧೬.	ನಮ್ಮ ಗಿಡಮರ ಬಳ್ಳಿಗಳು	ಸಂ : ಶಾಂತಿ ನಾಯಕ	೭೦.೦೦
೧೭.	ದೇಶೀಯ ಕೃಷಿ ಹತೋಟಿ ಮತ್ತು ಸಂರಕ್ಷಣಾ ಕ್ರಮಗಳು	ಸಂ : ಪ್ರೊ. ಪ್ರಕಾಶ ಕಮ್ಮರಡಿ	೧೦೦.೦೦
೧೮.	ಜಾನಪದ ವರ್ಷ–೨೦೧೨	ಸಂ : ಡಾ. ಕೆ.ವಿ. ಮುದ್ದವೀರಪ್ಪ	೧೨೦.೦೦
೧೯.	ದಕ್ಷಿಣ ಭಾರತೀಯ ದೇಸೀ ಕೃಷಿವಿಜ್ಞಾನ ಕೋಶ (ಎರಡು ಸಂಪುಟಗಳು)	ಪ್ರಸಂ : ಪ್ರೊ. ಅಂಬಳಿಕೆ ಹಿರಿಯಣ್ಣ ಕಾ.ನಿ.ಸಂ : ಪ್ರೊ. ಆರ್ಬಿಯಸ್ ಸುಂದರಂ ಸಂ : ಪ್ರೊ. ಸ.ಚಿ. ರಮೇಶ	(ಎರಡು ಸಂಪುಟ ಸೇರಿ) ೧೦೦೦.೦೦
೨೦.	ಜಾನಪದ ಜಗಲಿ (ಸಂಶೋಧನಾ ಅರ್ಧವಾರ್ಷಿಕ ಪತ್ರಿಕೆ) ಸಂಚಿಕೆ–೧, ೨, ೩ & ೪		ಬಿಡಿ ಪ್ರತಿಗೆ ೫೦.೦೦

ಜಾಗತೀಕರಣ, ಆಧುನೀಕರಣಗಳ ಪ್ರಕ್ರಿಯೆ ಜಾನಪದಕ್ಕೆ ಅನೇಕ ರೀತಿಯ ಸವಾಲುಗಳನ್ನು ತಂದೊಡ್ಡಿದೆ. ಜೊತೆಗೆ ಅಪಾಯವನ್ನೂ ಉಂಟುಮಾಡಿದೆ. ಪಶ್ಚಿಮದ ಪ್ರಭಾವ ಎಲ್ಲವನ್ನೂ ತನ್ನ ತೆಕ್ಕೆಗೆ ಒಳಗು ಮಾಡಿಕೊಳ್ಳುತ್ತಿರುವ ಸಂದಿಗ್ಧತೆಯಲ್ಲಿ ನಮ್ಮತನದ ಅಸ್ಮಿತೆಯ ಕುರುಹುಗಳು ಕಣ್ಮರೆಯಾಗುತ್ತಿವೆ. ಅನ್ಯ ಸಂಸ್ಕೃತಿಗಳ ಧಾಳಿಯಿಂದ ತಪ್ಪಿಸಿಕೊಳ್ಳುವ ಉಪಾಯವಾಗಿಯೂ ದೇಸೀ ಇಲ್ಲವೆ ಜಾನಪದವೇ ನಮ್ಮ ಮುಂದಿರುವ ಬಹುದೊಡ್ಡ ಉಪಾಯ. ನಿರಕ್ಷರಿಗಳಿಂದ ಹುಟ್ಟು ಪಡೆದುಕೊಂಡು ವಾಕ್ಪರಂಪರೆಯಲ್ಲಿ ಸಾಗಿಬಂದಿರುವ ಸಾಹಿತ್ಯವನ್ನು 'ಜನಪದ ಸಾಹಿತ್ಯ' ಎಂದು ಪರಿಗಣಿಸಲಾಗಿದೆ. ಅದನ್ನು ಪಾರಂಪರಿಕವಾಗಿ ಉಳಿಸಿ-ಬೆಳೆಸಿಕೊಂಡು ಬರುತ್ತಿರುವವರಲ್ಲಿ ನಿರಕ್ಷರಿಗಳ ಪ್ರಮಾಣ ದೊಡ್ಡದಾಗಿದೆಯಾದರೂ, ಅಕ್ಷರಸ್ಥರದ್ದೂ ಪ್ರಮುಖ ಪಾತ್ರವಿದೆ ಎಂಬುದು ಗಮನಾರ್ಹ ಸಂಗತಿ. ಯಾವ ಪ್ರಭಾವ-ಪ್ರೇರಣೆಗಳಿಗೂ ಪಕ್ಕಾಗದೆ ಮೂಲ ಜನಪದ ಸಂಸ್ಕೃತಿಯನ್ನು ಯಥಾವತ್ತಾಗಿ ಉಳಿಸಿಕೊಳ್ಳುವ ಹಂಬಲದ ವಿರಳ ವ್ಯಕ್ತಿತ್ವಗಳಲ್ಲಿ ಡಾ. ಪಿ.ಕೆ. ರಾಜಶೇಖರ ಅವರದು ಪ್ರಮುಖವಾಗಿ ಕೇಳಿಬರುವ ಹೆಸರು. ವಿದ್ವತ್ತು ಮತ್ತು ವಿನಯಗಳ ಸಾಕಾರ ಮೂರ್ತಿಯಂತಿರುವ ರಾಜಶೇಖರ ಅವರು ಜನಪದ ಸಾಹಿತ್ಯ ಸಂಗ್ರಹಕಾರರಾಗಿ, ಜಾನಪದ ವಿದ್ವಾಂಸರಾಗಿ, ನೆಲಮೂಲ ಸಂಸ್ಕೃತಿಯ ಪರಿಚಾರಕರಾಗಿ ಮಾಡಿರುವ ಸಾಧನೆ ಅದ್ವಿತೀಯವಾದುದು. ಅನನ್ಯವೂ ಅಪರೂಪವೂ ಆದ ಜನಪದ ಮಹಾಕಾವ್ಯಗಳನ್ನು ಸಂಗ್ರಹಿಸಿರುವುದಲ್ಲದೆ, ಜನಪದ ಹಾಡುಗಳನ್ನು ಮೂಲಮಟ್ಟುಗಳಲ್ಲಿಯೇ ಹಾಡುವ ಮೂಲಕ ಇಂದಿನ ಪೀಳಿಗೆಯವರಿಗೆ ಮೂಲಮಟ್ಟಿನಲ್ಲಿ ಹಾಡಲು ಪ್ರೇರಣೆ ಒದಗಿಸುತ್ತಿದ್ದಾರೆ. ಜಾನಪದಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿರಿಸಿಕೊಂಡಿರುವ ಪಿಕೆಆರ್ ಅವರ ಕಲಾ ಬದುಕಿನ ಯಶೋಗಾಥೆಯನ್ನು ಸಂಗಮೇಶ ಎಸ್. ಗಣಿ ಅವರು 'ಡಾ. ಪಿ.ಕೆ. ರಾಜಶೇಖರ' ಕೃತಿಯಲ್ಲಿ ಅತ್ಯಂತ ಸಮರ್ಥವಾಗಿ ಮತ್ತು ಸಾರ್ಥಕವಾಗಿ ಕಟ್ಟಿಕೊಟ್ಟಿದ್ದಾರೆ. ಜಾನಪದ ಕ್ಷೇತ್ರದ ಒಂದು ಕಾಲಘಟ್ಟದ ಅಧ್ಯಯನದ ಆಕರವಾಗಿಯೂ ಮತ್ತು ಪಿಕೆಆರ್ ಅವರ ಬದುಕಿನ ಬಹುಆಯಾಮಗಳನ್ನು ಅರಿಯುವಲ್ಲಿ ಈ ಕೃತಿ ಮುಖ್ಯ ಆಕರವಾಗಬಲ್ಲದು. ಇಂತಹ ಅಮೂಲ್ಯವಾದ ಕೃತಿಯನ್ನು ರಚಿಸಿಕೊಟ್ಟ ಶ್ರೀ ಸಂಗಮೇಶ ಎಸ್. ಗಣಿ ಅವರಿಗೆ ವಿಶ್ವವಿದ್ಯಾಲಯದ ಅಭಿನಂದನೆಗಳು ಸಲ್ಲುತ್ತವೆ.



ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ISBN 978-93-83149-16-2

₹ ೧೨೦/-

Printed at : Raja Printers, Bangalore-27, Ph.: 22234066